


ಜಾನಪದ ವರ್ಷ ಜಾನಪದ ವರ್ಷ ಜಾನಪದ ವರ್ಷ ಜಾನಪದ ವರ್ಷ ಜಾನಪದ ವರ್ಷ

ಜಾನಪದ ವರ್ಷ ೨೦೧೧

ಸಂಪಾದಕ

ಡಾ. ಎಸ್.ಪಿ. ಪದ್ಮಪ್ರಸಾದ್

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
KARNATAKA FOLKLORE UNIVERSITY

ಜಾನಪದ ವರ್ಷ
೨೦೧೧

೨೦೧೧ರಲ್ಲಿ ಪ್ರಕಟವಾದ ಜಾನಪದ ಕೃತಿಗಳ ಸಮೀಕ್ಷೆ

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕ

ಡಾ. ಎಸ್.ಪಿ. ಪದ್ಮಪ್ರಸಾದ್

ವಿಸ್ತರಣೆ ಮತ್ತು ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ ೫೮೧ ೨೦೫, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ

JANAPADA VARSHA 2011

Reviews on Folklore Books Published in 2011

Edited by

Dr. S.P. Padmaprasad
'Trupthi', 2nd Cross
Kanakambara Road, Gokul Extn.
TUMKUR - 572 104

Pages : viii+192, Price : Rs. 100/-

First Impression : 2012

Design by : K L R

Published by

Prof. S.C. Ramesh
Director, Centre for Extension and Consultancy
Karnataka Janapada Vishwavidyala
Gotagodi - 581 205, Shiggavi Taluk
Haveri Dist. Karnataka.
kajavivi@gmail.com
0836 2255180

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

ಕುಲಪತಿಯವರ ಮಾತು

ಜಾನಪದ ಒಂದು ಕಲಿಕೆಯ ವಿಷಯವಾಗಿ ಪರಿಗಣನೆಗೊಳ್ಳುವ ಪೂರ್ವದಲ್ಲಿ ಹಾಗೂ ಅನಂತರ ಅದು ಒಂದು ಅಧ್ಯಯನ ಶಿಸ್ತಾಗಿ ರೂಪುಗೊಂಡ ಮೇಲೂ ಕನ್ನಡದಲ್ಲಿ ಜಾನಪದ ಸಂಬಂಧೀ ಕೃತಿಗಳು ದೊಡ್ಡ ಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಾ ಬಂದಿವೆ. ಆರಂಭಿಕ ದಶಕಗಳಿಗಿಂತ ಈಗ ಗ್ರಂಥಗಳ ಪ್ರಕಟಣೆ ವಾರ್ಷಿಕ ಲೆಕ್ಕದಲ್ಲಿ ಮೂರು ಪಟ್ಟು ಹೆಚ್ಚಾಗಿರುವುದು ಗಮನಾರ್ಹ. ಹೀಗೆ ಆರಂಭದಿಂದ ಜಾನಪದ ವಿಷಯವಾಗಿ ಪ್ರಕಟಗೊಳ್ಳುತ್ತ ಬಂದಿರುವ ಕೃತಿಗಳ ಶೀರ್ಷಿಕೆ ಹಾಗೂ ಕುರಿತಿರುವ ವಸ್ತು ವಿಷಯದ ಸ್ಥೂಲ ಪರಿಚಯದ ಅಗತ್ಯ ಆಸಕ್ತರಿಗಂತೂ ಇದ್ದೇ ಇದೆ. ಇಂಥದೊಂದು ಪ್ರಯತ್ನವನ್ನು ಮೊಟ್ಟ ಮೊದಲು ಮಾಡಿದವರು ಹಾ.ಮಾ.ನಾಯಕ ಅವರು. ಆರಂಭದಿಂದ ೧೯೭೪ರ ವರೆಗಿನ ಜಾನಪದ ಕೃತಿಗಳನ್ನು ಸುಸಂಬದ್ಧ ವರ್ಗೀಕರಣದೊಡನೆ ಸಾಂದರ್ಭಿಕ ವಿವರಗಳ ಸಮೇತ ಗಂಭೀರವಾಗಿ ಪರಿಚಯಿಸಿದವರು ಅವರು. ಕನ್ನಡ ವಿಶ್ವವಿದ್ಯಾಲಯ ಈ ಪರಂಪರೆಯನ್ನು ಬೆಳೆಸುವ ಇಚ್ಛೆ ತೋರಿದರೂ ಏಕೋ ಏನೋ ಆ ಪ್ರಯತ್ನ ಯಶಸ್ವಿಯಾಗಿ ಮುಂದುವರಿದಂತೆ ಕಾಣುವುದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯ ಹೊರಬಂದ ಜಾನಪದ ಕೃತಿಗಳನ್ನು ವಿಮರ್ಶಾತ್ಮಕವಾಗಿ ಸಮೀಕ್ಷಿಸುವ ಕೆಲಸ ಮಾಡಿದ್ದುಂಟು. ಅದು ಕೂಡ ಸದ್ಯ ಸ್ಥಗಿತಗೊಂಡಿರುವುದು ವಿಷಾದನೀಯ ಸಂಗತಿ. ಈ ಹಿನ್ನೆಲೆಯಲ್ಲಿ ನೂತನ ಜಾನಪದ ವಿಶ್ವವಿದ್ಯಾನಿಲಯ ಈ ಕಾರ್ಯದ ಮಹತ್ವವನ್ನು ಮನಗಂಡು ಪ್ರಕೃತ ಯೋಜನೆಗೆ ಮರುಜೀವ ಕೊಡುವ ಯತ್ನವಾಗಿ 'ಜಾನಪದ ವರ್ಷ ೨೦೧೧' ಕೃತಿಯನ್ನು ಹೊರತರಲು ನಿರ್ಧರಿಸಿತು. ಜಾನಪದಕ್ಕೆ ಸಂಬಂಧಿಸಿದಂತೆ ಒಂದು ವರ್ಷದ ಅವಧಿಯಲ್ಲಿ ಪ್ರಕಟಗೊಂಡಿರುವ ಕೃತಿಗಳನ್ನು ಒಂದು ಕಡೆ ಪರಿಚಯಿಸುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾಸಕ್ತರಿಗೆ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

೨೦೧೧ರಲ್ಲಿ ಪ್ರಕಟಗೊಂಡಿರುವ ಜಾನಪದ ಕೃತಿಗಳ ಸ್ಥೂಲ ಸಮೀಕ್ಷೆ ಮತ್ತು ಪರಿಚಯ ಕಾರ್ಯವನ್ನು ಹಿರಿಯ ಜಾನಪದ ತಜ್ಞ ಡಾ. ಎಸ್.ಪಿ. ಪದ್ಮಪ್ರಸಾದ್

ತಾವು ಸಂತೋಷದಿಂದ ನಿರ್ವಹಿಸುವುದಾಗಿ ಒಪ್ಪಿ ನಿಗದಿತ ಗಡುವಿನಲ್ಲಿ ಸಮರ್ಪಕವಾಗಿ ಮಾಡಿಕೊಟ್ಟಿದ್ದಾರೆ. ಒಂದು ಅಂದಾಜಿನಂತೆ ೨೦೧೧ರಲ್ಲಿ ಪ್ರಕಟಗೊಂಡಿರುವ ಜಾನಪದ ಸಂಬಂಧಿತ ಎಲ್ಲಾ ೧೨೦ ಕೃತಿಗಳನ್ನು ದೊರಕಿಸಿಕೊಳ್ಳಲು ಆಗದಿದ್ದರೂ ಲಭ್ಯವಿದ್ದ ೮೦ ಕೃತಿಗಳನ್ನೂ ಸಮೀಕ್ಷೆ ಮಾಡಿರುವುದಾಗಿಯೂ ಹಲವು ಕೃತಿಗಳು ಸಮೀಕ್ಷೆಗೆ ದೊರಕಲಿಲ್ಲ ಎಂಬ ಕೊರಗಿನೊಂದಿಗೆ ಕಾರ್ಯವನ್ನು ಮುಗಿಸಿಕೊಡುವ ಪ್ರಯತ್ನ ಮಾಡಿರುವುದಾಗಿಯೂ ತಿಳಿಸಿರುತ್ತಾರೆ. ತಮ್ಮ ಸಮೀಕ್ಷೆಗೆ ದೊರಕದ ಕೃತಿಗಳ ಒಂದು ಪಟ್ಟಿಯನ್ನಾದರೂ ದೊರಕಿಸಿಕೊಡಲು ಅವರು ಯತ್ನಿಸಿರುವುದು ಸಮಾಧಾನದ ಸಂಗತಿಯಾಗಿದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ವಿಸ್ತರಣ ಮತ್ತು ಸಲಹಾ ಕೇಂದ್ರದ ಚೊಚ್ಚಲ ಕೃತಿಯಾಗಿ 'ಜಾನಪದ ವರ್ಷ ೨೦೧೧' ಪ್ರಕಟವಾಗುತ್ತಿದೆ. ಈ ಕೃತಿಯ ಪ್ರಕಟಣ ಕಾರ್ಯದಲ್ಲಿ ನೇರವಾಗಿ ಬರಹ ಮತ್ತು ಸಂಪಾದನಾ ಕಾರ್ಯದೊಡನೆ ಸಹಕರಿಸಿದ ಲೇಖಕ ಡಾ. ಎಸ್.ಪಿ. ಪದ್ಮಪ್ರಸಾದ್ ಅವರಿಗೆ ಹಾಗೂ ಈ ಕೃತಿಯ ಪ್ರಕಣೆಗೆ ಶ್ರಮಿಸಿದ ವಿಸ್ತರಣ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು ಹಾಗೂ ಉಪನಿರ್ದೇಶಕರಿಗೂ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಅಂಬಳಿಕೆ ಹಿರಿಯಣ್ಣ

ಸಂಪಾದಕರ ನುಡಿ

'ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ'ದ ಸ್ಥಾಪನೆ ನಮ್ಮಂಥ ಹಲವರ ಕನಸಾಗಿತ್ತು. ಅದೀಗ ಸಾಕಾರಗೊಂಡಿದೆ. ಅದು ಎಳವೆಯಲ್ಲೇ ಗಟ್ಟಿ ಹೆಜ್ಜೆಗಳನ್ನಿಟ್ಟು ನಿಲ್ಲುತ್ತಿರುವುದು ಸಂತೋಷದ ಸಂಗತಿ.

ಇದರ ಪ್ರಥಮ ಕುಲಪತಿಯಾದ ಸರಳ, ಸುಶೀಲ ವ್ಯಕ್ತಿ ಡಾ. ಅಂಬಳಿಕೆ ಹಿರಿಯಣ್ಣನವರೊಂದಿಗೆ ಒಮ್ಮೆ ಮಾತನಾಡುತ್ತಾ ವಿಶ್ವವಿದ್ಯಾಲಯವು ಒಂದು ವರ್ಷದಲ್ಲಿ ಪ್ರಕಟವಾದ ಜಾನಪದ ಸಂಬಂಧಿ ಕೃತಿಗಳನ್ನಾದರೂ ಸಮೀಕ್ಷಿಸಿ ಪ್ರಕಟಿಸುವ ಕೆಲಸ ಮಾಡಿದರೆ ಒಳಿತೆಂದು ಸೂಚಿಸಿದೆ. ತಕ್ಷಣವೇ ಅದನ್ನು ಒಪ್ಪಿಕೊಂಡ ಅವರು ೨೦೧೧ನೇ ವರ್ಷದ ಕೃತಿಗಳನ್ನು ಹಾಗೆ ಸಮೀಕ್ಷಿಸಿ ಒಂದು ಹೊತ್ತಗೆ ಸಿದ್ಧಪಡಿಸಿಕೊಡುವಂತೆ ಕೇಳಿದರು. ಎರಡೇ ದಿನದಲ್ಲಿ ಅದಕ್ಕೆ ಸಂಬಂಧಿಸಿದಂತೆ ಅಧಿಕೃತ ಪತ್ರವನ್ನು ಕಳಿಸಿಕೊಟ್ಟರು. ಇದು ನಡೆದದ್ದು ೨೦೧೧ರ ಡಿಸೆಂಬರಿನಲ್ಲಿ.

ಅಲ್ಲಿಂದೀಚೆಗೆ ಆ ವರ್ಷದಲ್ಲಿ ಪ್ರಕಟವಾದ ಕೃತಿಗಳ ಪಟ್ಟಿ ತಯಾರಿಸುವುದು, ಪುಸ್ತಕ ಮಳಿಗೆಗಳಿಗೆ ಭೇಟಿಕೊಟ್ಟು, ಲೇಖಕ, ಪ್ರಕಾಶಕರಿಗೆ ಪತ್ರ ಬರೆದು ಪುಸ್ತಕ ತರಿಸಿಕೊಳ್ಳುವುದು, ಅವುಗಳನ್ನು ಓದಿ ವಿಮರ್ಶೆ ಬರೆಯುವುದು–ಇವೆಲ್ಲ ಸಾಕಷ್ಟು ಕಾಲ ಮತ್ತು ಶ್ರಮಗಳನ್ನು ತೆಗೆದುಕೊಂಡಿತು. ಕೆಲವು ಪುಸ್ತಕಗಳಿಗೆ ವಿಮರ್ಶೆ ಬರೆಯಲು ವಿಮರ್ಶಕ ಮಿತ್ರರಿಗೆ ಕೇಳಿಕೊಂಡೆ. ಜಾನಪದ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಹಲವು ಲೇಖಕರು ತಮ್ಮ ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದರಿಂದ, ಅಗತ್ಯ ಪುಸ್ತಕಗಳನ್ನು ಕೊಳ್ಳಲು ವಿಶ್ವವಿದ್ಯಾಲಯ ಅನುಮತಿ ನೀಡಿದ್ದರಿಂದ ಕೆಲಸ ಸ್ವಲ್ಪ ಹಗುರಾಯಿತು.

ನನ್ನೊಂದಿಗೆ ಸಹಕರಿಸಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾಲಯ ಅಧಿಕಾರಿಗಳಿಗೆ ನಾನು ಋಣಿ.

ಹಲವು ಪುಸ್ತಕಗಳು ಸಮೀಕ್ಷೆಗೆ ನಮಗೆ ದೊರೆಯಲಿಲ್ಲ ಎಂಬ ಬಗ್ಗೆ ನಮಗೆ ಬೇಸರವಿದೆ. ಪ್ರಾಮಾಣಿಕ ಪ್ರಯತ್ನದ ಹೊರತಾಗಿಯೂ ಉಳಿದುಕೊಂಡ ಕೊರತೆಯದು.

ದೊರೆಯದ ಅಂಥ ಪುಸ್ತಕಗಳ ಒಂದು ಪಟ್ಟಿಯನ್ನಾದರೂ ಕೊಡಲು ಸಾಧ್ಯವಾಯಿತೆಂಬುದೇ ಒಂದು ಸಮಾಧಾನ.

ಲೇಖಕ/ಸಂಪಾದಕರು/ಪ್ರಕಾಶಕರು ತಮ್ಮ ಕೃತಿಗಳ ಒಂದೊಂದು ಪ್ರತಿಯನ್ನಾದರೂ ಜಾನಪದ ವಿಶ್ವವಿದ್ಯಾಲಯಕ್ಕೆ ಕಳಿಸಿದರೆ ಇಲ್ಲಿಂದ ಮುಂದೆ ಇಂಥ ಕೆಲಸ ಸುಲಭವಾದೀತು.

ನನ್ನೊಂದಿಗೆ ಸಹಕರಿಸಿದ ವಿಮರ್ಶಕರಿಗೂ ನಾನು ಕೃತಜ್ಞ.

ಈ ಕೃತಿಯಲ್ಲಿ ವಿವಿಧ ಜಾನಪದ ಗ್ರಂಥಗಳ ಬಗ್ಗೆ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಯೇ ವಿನಃ ಅದು ಜಾನಪದ ವಿಶ್ವವಿದ್ಯಾಲಯದ ಅಭಿಪ್ರಾಯವಲ್ಲ ಎಂಬುದನ್ನು ಸ್ಪಷ್ಟಪಡಿಸಲು ಬಯಸುವೆ.

ಎಸ್.ಪಿ. ಪದ್ಮಪ್ರಸಾದ್

ಪರಿವಿಡಿ

ಅಧ್ಯಾಯ – ೧

ಪ್ರಸ್ತಾವನೆ

ಸಮೃದ್ಧ ಜಾನಪದ ಫಸಲು ಕೊಟ್ಟ – ೨೦೧೧

ಒಂದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ವರ್ಷದಲ್ಲಿ ಪ್ರಕಟವಾಗಿರುವ ಗ್ರಂಥಗಳನ್ನು ಒಂದು ಕಡೆ ಗಂಭೀರವಾಗಿ ಪರಿಚಯಿಸುವುದರಿಂದ ತುಂಬ ಪ್ರಯೋಜನವಿರುವುದಾದರೂ ಅದರಲ್ಲಿ ಕೆಲವು ಕಷ್ಟಗಳೂ ಇವೆ. ಆದರೆ ಅಂಥ ಕಷ್ಟಗಳ ನಡುವೆಯೂ ಈ ಕೆಲಸ ನಡೆಸುವುದರಿಂದ ಅಧ್ಯಯನಾಸಕ್ತರಿಗೆ ಭವಿಷ್ಯದಲ್ಲಿ ಆಗುವ ಪ್ರಯೋಜನ ದೊಡ್ಡದು.

೨೦೧೧ರಲ್ಲಿ ಕನ್ನಡದಲ್ಲಿ ಪ್ರಕಟವಾಗಿರುವ ಜಾನಪದ ಕೃತಿಗಳ ಸಂಖ್ಯೆ ೧೨೦ ಎಂದು ಪ್ರಸ್ತುತ ಕೃತಿಯ ಸಂಪಾದನೆಯ ಸಂದರ್ಭದಲ್ಲಿ ಕಂಡುಬಂದಿದೆ. ಆದರೆ ಈ ಪೈಕಿ ಖಚಿತವಾಗಿ ನೋಡಲು ದೊರೆತಿದ್ದು ೮೦ ಕೃತಿಗಳು ಮಾತ್ರ. ೧೯೯೫ರಲ್ಲಿ ಸುಮಾರು ನಲವತ್ತೈದು ಕೃತಿಗಳು ಪ್ರಕಟವಾಗಿದ್ದವೆಂದು ಆಗ ಜಾನಪದ ಅಕಾಡೆಮಿ ಪ್ರಕಟಿಸಿದ್ದ 'ಜಾನಪದ ವರ್ಷ ೧೯೯೫' ರಿಂದ ತಿಳಿಯುತ್ತದೆ. ಅದರ ಹಿಂದಿನ ವರ್ಷದಲ್ಲಿ (೧೯೯೪) ಕೇವಲ ೩೫ ಕೃತಿಗಳು ಪ್ರಕಟವಾಗಿದ್ದವು. ಈ ಹದಿನಾರು ವರ್ಷಗಳಲ್ಲಿ ಜಾನಪದ ಗ್ರಂಥಗಳ ಪ್ರಕಟಣೆ ವಾರ್ಷಿಕ ಲೆಕ್ಕದಲ್ಲಿ ಸುಮಾರು ಮೂರು ಪಟ್ಟು ಹೆಚ್ಚಿರುವುದು ಸಂತೋಷದ ವಿಷಯವೇ. ಇದಕ್ಕೆ ಈ ವರ್ಷ ಒದಗಿ ಬಂದ ಕೆಲವು ವಿಶೇಷ ಕಾರಣಗಳೂ ಸಹಕಾರಿಯಾಗಿವೆ. ಅವೆಂದರೆ

೧. ಕನ್ನಡಕ್ಕೆ 'ಶಾಸ್ತ್ರೀಯ ಭಾಷಾ ಸ್ಥಾನಮಾನ' ಸಿಕ್ಕ ಸಂದರ್ಭದಲ್ಲಿ ರಾಜ್ಯಸರ್ಕಾರ ಕೆಲ ವಿಶ್ವವಿದ್ಯಾಲಯಗಳಿಗೆ ತಲಾ ಒಂದು ಕೋಟಿ ರೂಪಾಯಿಯಂತೆ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗಾಗಿ ನೀಡಿದ್ದು, ಇದನ್ನು ಬಳಸಿಕೊಂಡು ಕೆಲ ವಿ.ವಿ.ಗಳು ಅನೇಕ ಜಾನಪದ ಕೃತಿಗಳನ್ನು ಪ್ರಕಟಿಸಿದ್ದು. ತುಮಕೂರು ವಿ.ವಿ., ಮೈ.ವಿ.ವಿ. , ಕ.ರಾ. ಮುಕ್ತ ವಿ.ವಿ. ಹೀಗೆ ಸುಮಾರು ೨೨ ಜಾನಪದ ಕೃತಿಗಳು ಪ್ರಕಟವಾದವು. ಹಂಪಿಯ ಕನ್ನಡ ವಿ.ವಿ.ಯ 'ಜಾನಪದ ವಿಶ್ವಕೋಶ'ದ ಎರಡು ಸಂಪುಟಗಳು ಪ್ರತ್ಯೇಕವಾಗಿ ಹೆಸರಿಸಬೇಕಾದವು.

೨. ಎಷ್ಟೋ ಮಂದಿ ಲೇಖಕರು ತಮ್ಮ ಕೃತಿಗಳನ್ನು ಈ ವರ್ಷವೂ ಸ್ವಂತವಾಗಿ ಪ್ರಕಟಿಸಿದ್ದಾರೆ. ಗ್ರಂಥಾಲಯ ಇಲಾಖೆಯಿಂದ ಸಗಟು ಕೊಳ್ಳುವಿಕೆ ಪುನಃ ಆರಂಭವಾಗಿರುವುದು ಇವರಿಗೆ ಧೈರ್ಯ ತುಂಬಿರಬಹುದು.

೩. ಸಂಕ್ಷಿಪ್ತ ಪರಿಚಯ ಪುಸ್ತಕಗಳ ರೂಪದಲ್ಲಿ ಕೆಲವು ಜಾನಪದ ತಜ್ಞರು/ ಕಲಾವಿದರನ್ನು ಕುರಿತು ಒಂಭತ್ತು ಕಿರು ಹೊತ್ತಗೆಗಳು ಪ್ರಕಟವಾಗಿದ್ದು ಇವುಗಳಲ್ಲಿ ಒಂದು ಮಾತ್ರ ಖಾಸಗಿ ಪ್ರಕಟಣೆಯಾಗಿದ್ದು ಉಳಿದಂತೆ ಕರ್ನಾಟಕ ಜಾನಪದ ಪರಿಷತ್ತಿನಿಂದ ನಾಲ್ಕು, ಕಾಂತಾವರದ ಕನ್ನಡ ಸಂಘದಿಂದ ಮೂರು ಹಾಗೂ ಕ.ರಾ.ಮು.ವಿ. ಯಿಂದ ಮತ್ತು ಮೈ.ವಿ.ವಿ. ಯಿಂದ ತಲಾ ಒಂದರಂತೆ ಕೃತಿಗಳು ಪ್ರಕಟವಾಗಿವೆ.

೨೦೧೧ರಲ್ಲಿ ಪ್ರಕಟವಾದ ಕೃತಿಗಳನ್ನು ಪರಿಶೀಲಿಸಿದಾಗ ಎರಡು ಸಮಾಧಾನಕರ ಅಂಶಗಳು ಕಂಡುಬರುತ್ತವೆ. ಅವೆಂದರೆ –

೧. ಜಾನಪದ ಅಧ್ಯಯನವು ಸೂಕ್ಷ್ಮಮಟ್ಟಕ್ಕೆ (microlevel) ಇಳಿದಿದ್ದು ಅಂಥ ಹಲವು ಕೃತಿಗಳು ಪ್ರಕಟವಾಗುತ್ತಿರುವುದು. ಕನ್ನಡ ವಿ.ವಿ.ಯ ಮಂಟಪ ಮಾಲೆಯಲ್ಲಿ ಪ್ರಕಟವಾಗಿರುವ 'ಪಾಂಚಾಳರ ಬದುಕು ಮತ್ತು ಸಂಸ್ಕೃತಿ', 'ಬಲೀಂದ್ರ', ಇತ್ಯಾದಿ ನಾಲ್ಕು ಕೃತಿಗಳೂ ಸಹ ಸಣ್ಣ ವ್ಯಾಪ್ತಿಯ ವಿಷಯವೊಂದರಲ್ಲಿ ಗಂಭೀರ ಅಧ್ಯಯನ ನಡೆಸಿರುವ ಚಿಕ್ಕ ಕೃತಿಗಳಾಗಿವೆ. ಅದೇ ರೀತಿ ಎಂ. ಸೋಮೇಶ ಅವರ 'ಡಣಾಯಕನ ಕೆರೆ' ಕೂಡ ಒಂದು ಕೆರೆಗೆ ಸಂಬಂಧಿಸಿದ ಆಳವಾದ ಜಾನಪದೀಯ ಅಧ್ಯಯನ. ಇಂಥ ಅಧ್ಯಯನಗಳನ್ನು ನಡೆಸುವವರ ಸಂಖ್ಯೆ ಹೆಚ್ಚಬೇಕಿದೆ. ಜಾನಪದ ಅಧ್ಯಯನ ಸರ್ವಾಂಗ ಸುಪುಷ್ಟವಾಗಿ ಬೆಳೆಯಬೇಕಾದರೆ ಇಂಥ ಅಧ್ಯಯನಗಳನ್ನು ಪ್ರೋತ್ಸಾಹಿಸಬೇಕು. ಜಾನಪದ ವಿಶ್ವವಿದ್ಯಾಲಯವು ೨೦೧೨ರಲ್ಲಿ ಇಂಥ ಸಂಶೋಧನೆಗೆ ಸಹಾಯಧನ ಕೊಡುವ ಯೋಜನೆಯನ್ನು ಜಾರಿಗೊಳಿಸಿದೆ. ಇದರಿಂದ ಸಕಾರಾತ್ಮಕ ಪರಿಣಾಮವನ್ನು ನಿರೀಕ್ಷಿಸಬಹುದು.

೨. ಸಂಶೋಧನ ಮಹಾಪ್ರಬಂಧಗಳು ಈ ವರ್ಷ ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾಗಿದ್ದು ಇವು ಗುಣಮಟ್ಟದಲ್ಲೂ ಸಹ ಉತ್ತಮವೇ ಆಗಿವೆ. ಪರಿಶೀಲನಾ ವರ್ಷದಲ್ಲಿ ಪ್ರಕಟವಾಗಿರುವ ಪಿಹೆಚ್.ಡಿ. ನಿಬಂಧಗಳು ಇವು–

೧) ಕನ್ನಡದಲ್ಲಿ ಐತಿಹಾಸಿಕ ಜನಪದ ಲಾವಣಿಗಳು – ಡಾ॥ ಜಯಲಕ್ಷ್ಮೀ ಸೀತಾಪುರ

೨) ಜಾನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು – ಕುರುವ ಬಸವರಾಜ್

೩) ತುಮಕೂರು ಜಿಲ್ಲಾ ಜಾನಪದೀಯ ನೆಲೆಗಳು – ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

೪) ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು– ಕೆ.ವಿ. ಮುದ್ದವೀರಪ್ಪ

೫) ಕನ್ನಡ ಜನಪದ ಕಥೆಗಳಲ್ಲಿ ಸ್ತ್ರೀ–ಎಸ್. ಅನಸೂಯ.

೬) ಬುರ್‍ರಕಥಾ ಈರಮ್ಮ – ಸಾರಿಕಾದೇವಿ ಎಲ್. ಕಾಳಗಿ

೭) ನೆಲಮಂಗಲ ದರ್ಶನ–ಜಾನಪದ ನೋಟ– ತೋಟನಹಳ್ಳಿ ಚೌಡಯ್ಯ

೮) ಗುಂಡ್ಲುಪೇಟೆ ತಾಲ್ಲೂಕು – ಒಂದು ಸಾಂಸ್ಕೃತಿಕ ಅಧ್ಯಯನ –ಪಳನಿಸ್ವಾಮಿ

೯) ತುಂಗೆಯ ಮಡಿಲ ಜಾನಪದ – ಬಿ.ವಿ. ಗೀತಾ

ಹೀಗೆ ಒಂಭತ್ತು ಜಾನಪದ ಮಹಾಪ್ರಬಂಧಗಳು ಒಂದೇ ವರ್ಷದಲ್ಲಿ ಪ್ರಕಟವಾಗಿರುವುದು ಅಪರೂಪ. ಇವುಗಳ ಪೈಕಿ ಐದು ಕೃತಿಗಳನ್ನು ಈ ಸಮೀಕ್ಷೆಯ ಸಂದರ್ಭದಲ್ಲಿ ಖುದ್ದಾಗಿ ನೋಡಲು ಸಾಧ್ಯವಾಗಿದೆ. (೫ ರಿಂದ ೮ನೇ ಕ್ರಮ ಸಂಖ್ಯೆಯವು ನೋಡಲು ಸಿಗಲಿಲ್ಲ). ಈ ಐದೂ ಕೂಡ ತುಂಬ ಉತ್ತಮವಾಗಿಯೇ ರಚಿತವಾಗಿವೆ. ಸ್ವಂತಿಕೆಯಿಂದ, ಒಳ್ಳೆಯ ಒಳನೋಟಗಳಿಂದ ಕೂಡಿವೆ. ನೋಡಲು ದೊರೆಯದಿರುವ ನಾಲ್ಕರ ಪೈಕಿ ಎರಡಾದರೂ ಉತ್ತಮವಾಗಿರಬಹುದೆಂದು ಆಶಿಸಬಹುದು. ಜಾನಪದ ಅಧ್ಯಯನ ಹೀಗೆ ಉತ್ತಮ ಗುಣಮಟ್ಟದತ್ತ ಸಾಗುತ್ತಿರುವುದು ಖಂಡಿತಾ ಸಮಾಧಾನದ ಅಂಶ.

–೨–

೨೦೧೧ರ ಜಾನಪದ ಫಸಲಿನಲ್ಲಿ ವಿಷಯ ವೈವಿಧ್ಯತೆ ಎದ್ದು ಕಾಣುವಂತಿದೆ. ಚಿಕ್ಕದೊಂದು ಪ್ರದೇಶ (ಉದಾ: ಬೀದರ್‌ನಗರದ ಹೊರ ವಲಯದಲ್ಲಿರುವ – 'ಧರಿ'), ನಿರ್ದಿಷ್ಟ ಜನಪದ ದೈವ (ಉದಾ: ಕಾಂತಾಬಾರೆ–ಬೂದಬಾರೆ, ಭಂಟಮಾರಿನ ಬ್ರಹ್ಮಜೆಟ್ಟಿ ಇತ್ಯಾದಿ), ನಿರ್ದಿಷ್ಟ ಆಚರಣೆ (ಉದಾ : ಕಂಬಳ ಕೋರಿ ನೇಮ)ದಂಥ ವಿಷಯಗಳಿಂದ ಹಿಡಿದು ದೊಡ್ಡ ಜನಾಂಗ (ಉದಾ: ಕುರುಬರು, ಬುಡ್ಗ ಜಂಗಮರು), ಪ್ರಸಿದ್ಧ ಕ್ಷೇತ್ರ (ಉದಾ–ಶಿವಗಂಗಾ ದರ್ಶನ), ಆಟಗಳು (ಉದಾ. ಜಾನಪದ ಕ್ರೀಡೆಗಳು, ರಾಮನಗರ ಜಿಲ್ಲೆಯ ಜ. ಆಟಗಳು), ಆಡುನುಡಿ ವೈವಿಧ್ಯ (ಸೊಲ್ಲಾಪುರ ಕನ್ನಡ, ಬಯಲು ಸೀಮೆಯ ಭಾಷಾ ವೈವಿಧ್ಯ), ಗ್ರಾಮದೇವತೆಗಳು (ಬರಗೂರು ವೀರಮ್ಮ, ದಿಬ್ಬದ ವೀರಬೊಮ್ಮಣ್ಣ) ಇಂಥ ವಿಷಯಗಳ ಕುರಿತಾದ ಕೃತಿಗಳು ಹೊರಬಂದಿರುವುದಲ್ಲದೆ ಗಂಭೀರ ಶಾಸ್ತ್ರ

ವಿವೇಚನೆಯನ್ನು ಒದಗಿಸುವ 'ಸ್ಥಳನಾಮ ವ್ಯಾಸಂಗ' (ದೇಜಗೌ)ದಂಥ ಕೃತಿಗಳೂ ೨೦೧೧ರಲ್ಲಿ ಪ್ರಕಟವಾಗಿವೆ. ವೈದ್ಯಕ್ಕೆ ಸಂಬಂಧಿಸಿದಂತೆ ಮೂರು ಕೃತಿಗಳು ಬಂದಿವೆ.

ಆದ್ದರಿಂದ ಈ ವರ್ಷವು ಜಾನಪದ ಕೃತಿಗಳು ಸಂಖ್ಯೆಯಲ್ಲಷ್ಟೇ ಅಲ್ಲ, ವೈವಿಧ್ಯತೆ ಮತ್ತು ಗುಣಪ್ರಮಾಣದಲ್ಲೂ ಹೆಚ್ಚಳವನ್ನು ಕಂಡವರ್ಷ ಎನ್ನಬಹುದು.

ಸಮೀಕ್ಷಾ ವರ್ಷದಲ್ಲಿ ಪ್ರಕಟವಾದ ಜಾನಪದ ಕೃತಿಗಳ ಬಗ್ಗೆ ಸಮಾಧಾನ ಪಟ್ಟುಕೊಳ್ಳಬೇಕಾದ ಇನ್ನೂ ಒಂದು ಅಂಶವಿದೆ. ಅದೆಂದರೆ – ಈ ವಿಶಾಲ ಕನ್ನಡ ನಾಡಿನ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ ಜಾನಪದ ಸಂಗ್ರಹಗಳು ಮತ್ತು ಅಧ್ಯಯನಗಳು ಪ್ರಕಟವಾಗಿರುವುದು. ತುಳುನಾಡಿಗೆ ಸಂಬಂಧಿಸಿದಂತೆ ಹನ್ನೊಂದು ಕೃತಿಗಳು (ನಾಲ್ಕು–ಜೀವನ ಪರಿಚಯದ ಕೃತಿಗಳು, ಉಳಿದವು ಸಂಗ್ರಹ/ಅಧ್ಯಯನಗಳು) ಪ್ರಕಟವಾಗಿದ್ದರೆ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆಯೂ ಹತ್ತು ಕೃತಿಗಳು ಪ್ರಕಟವಾಗಿದ್ದು, ಅವುಗಳಲ್ಲಿ ತೀರಾ ಅಶಾಸ್ತ್ರೀಯವಾಗಿರುವ ಎರಡು–ಮೂರನ್ನು ಬಿಟ್ಟರೂ ಸಹ ಏಳು ಕೃತಿಗಳಾದರೂ ಉಪಯುಕ್ತವಾದವುಗಳಾಗಿದ್ದು ಎರಡನೇ ಸ್ಥಾನದಲ್ಲಿದೆ. ಉತ್ತರ ಕನ್ನಡ, ಬೀದರ್, ಗುಲಬರ್ಗಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ಎರಡೆರಡು ಕೃತಿಗಳು ಹೊರಬಂದಿವೆ. ಶಿವಮೊಗ್ಗ, ಧಾರವಾಡ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ಒಂದೊಂದರಂತೆಯಾದರೂ ಕೃತಿಗಳು ಪ್ರಕಟವಾಗಿವೆ. ಇನ್ನು ಕೇವಲ ಒಂದೆರಡು ಜಿಲ್ಲೆಗಳಿಗೆ ಸೀಮಿತಗೊಳಿಸಲಾಗದಂಥ– ಜನಾಂಗೀಯ ಅಧ್ಯಯನಗಳು, ಕಾವ್ಯನಿರ್ಮಾಣದ ನೆಲೆಗಳನ್ನು ಕುರಿತ, ಗೀತ ಪ್ರಕಾರಗಳನ್ನು ಕುರಿತ ಅಧ್ಯಯನಗಳೂ ಬಂದಿದ್ದು ಅವುಗಳಲ್ಲಿ ರಾಜ್ಯದ ವಿವಿಧೆಡೆಯಿಂದ ಉದಾಹರಣೆಗಳನ್ನು ಬಳಸಿಕೊಳ್ಳಲಾಗಿದೆ. ಮೈಸೂರು ಸೀಮೆಗೆ ಸಂಬಂಧಿಸಿದಂತೆ ಕನಿಷ್ಠ ಐದು ಕೃತಿಗಳು ಪ್ರಕಟವಾಗಿರುವ ಸಾಧ್ಯತೆ ಇದೆ.

ಹಿಂದೆಲ್ಲಾ – ಒಂದು ವರ್ಷದಲ್ಲಿ ಪ್ರಕಟವಾದ ಜಾನಪದ ಕೃತಿಗಳ ಪಟ್ಟಿ ಮಾಡಿದರೆ ಅದರಲ್ಲಿ ಕತೆ/ಗೀತೆ/ಗಾದೆ/ಒಗಟುಗಳ ಸಂಗ್ರಹವೇ ದೊಡ್ಡ ಭಾಗವಾಗಿರುತ್ತಿತ್ತು. ಆದರೆ ಆ ಜಾಡು ಬದಲಾಗಿ ಹತ್ತಿರ ಹತ್ತಿರ ಇಪ್ಪತ್ತು ವರ್ಷಗಳೇ ಕಳೆದವೇನೋ. ೧೯೯೫ರಲ್ಲಿ ಗಮನಕ್ಕೆ ಬಂದ ೪೫ಕೃತಿಗಳ ಪೈಕಿ ಆರು ಮಾತ್ರ ಅಂಥ ಸಂಗ್ರಹಗಳಾಗಿದ್ದವು. ಈಗ ೨೦೧೧ರಲ್ಲಿ ೧೨೦ರ ಪೈಕಿ ೨೧ಅಂಥ ಸಂಗ್ರಹಗಳಾಗಿವೆ. ಮೂಲ ಸಾಮಗ್ರಿಯ ಸಂಗ್ರಹ ಪ್ರಕಟವಾಗುವುದು ಹಿಂದೆ ಬಿದ್ದಿರುವುದು ಒಳ್ಳೆಯ ಸೂಚನೆ ಏನೂ ಅಲ್ಲ. ಅಂಥವುಗಳ ಪ್ರಕಟಣೆಗೆ ಸೂಕ್ತ ವಾತಾವರಣ ನಿರ್ಮಿಸಬೇಕಾಗಿದೆ. ಆದರೆ ಗಂಭೀರ ಕೃತಿಗಳ ರಚನೆಯಲ್ಲಿ ನಮ್ಮ ಲೇಖಕರು ಹೆಚ್ಚು ತೊಡಗಿಸಿಕೊಂಡಿರುವುದು ಸಮಾಧಾನದ ವಿಷಯವೇ ಆಗಿದೆ.

ಅಂತರ್‌ಶಿಸ್ತೀಯ ಅಧ್ಯಯನದ ದೃಷ್ಟಿಯಿಂದ ಈಗಲೂ ನಮ್ಮ ಜಾನಪದ ಅಧ್ಯಯನ ಕ್ಷೇತ್ರ ಬಡವಾಗಿಯೇ ಇದೆ ಎನಿಸುತ್ತದೆ. ಸಂಸ್ಕೃತಿ, ಜನಾಂಗ, ಜಾತ್ರೆ- ಇಂಥವುಗಳನ್ನು ಕುರಿತ ಕೃತಿಗಳು ಹೊರಬಂದಿದ್ದರೂ - ಮಾನವಶಾಸ್ತ್ರ, ಸಮಾಜ ಶಾಸ್ತ್ರ, ಮನಃಶಾಸ್ತ್ರ, ವಿಜ್ಞಾನ- ಇಂಥ ಶಿಸ್ತುಗಳ ದೃಷ್ಟಿಕೋನದಿಂದ ಸೈದ್ಧಾಂತಿಕವಾಗಿ ಪರಿಶೀಲಿಸಿ ನೋಡುವ ಶ್ರಮವನ್ನು ನಮ್ಮ ಲೇಖಕರು ತೆಗೆದುಕೊಂಡಿಲ್ಲ ಎನಿಸುತ್ತದೆ. ಅಂಥ ಶ್ರಮವನ್ನು ನಮ್ಮ ಅಧ್ಯಯನಕಾರರು ತೆಗೆದುಕೊಂಡಾಗ ಕನ್ನಡದ ಜಾನಪದ ಕೃತಿಗಳು ಅಂತಾರಾಷ್ಟ್ರೀಯ ಮಟ್ಟದ ಕೃತಿಗಳಾಗಿ ಉಳಿಯಬಲ್ಲವು. ಡಾ.ಎಂ. ಚಿದಾನಂದಮೂರ್ತಿಯವರು ಸುಮಾರು ಮೂವತ್ತು ವರ್ಷಗಳ ಹಿಂದೆ 'ಕಬ್ಬಿಣ' ವನ್ನು ಕುರಿತು ಜಾನಪದೀಯ, ಪುರಾತತ್ವ ಹಾಗೂ ವಿಜ್ಞಾನ ದೃಷ್ಟಿಯಿಂದ ವಿವೇಚಿಸಿ ಕಬ್ಬಿಣದ ಬಗೆಗಿನ ಜನಪದ ನಂಬಿಕೆಗಳಿಗೆ ಇರಬಹುದಾದ ಕಾರಣಗಳನ್ನು ವಿಜ್ಞಾನ ಹಾಗೂ ಇತರ ಜ್ಞಾನಶಾಖೆಗಳ ನೆರವಿನಿಂದ ಹೇಗೆ ಪತ್ತೆ ಹಚ್ಚಬಹುದು ಎಂಬುದನ್ನು ಕುರಿತು ಒಂದ ಸಂಪ್ರಬಂಧ ಪ್ರಕಟಿಸಿದ್ದರು. ಆ ಮಾದರಿಯ ಬರಹಗಳು ನಮ್ಮ ಯುವ ವಿದ್ವಾಂಸರಿಂದ ಇನ್ನೂ ಬರಬೇಕಾಗಿವೆ ಎನಿಸುತ್ತದೆ. ಈ ವರ್ಷ ಪ್ರಕಟವಾಗಿರುವ ಎರಡು ಕೃತಿಗಳು (ಜನಪದ ಮಹಾಕಾವ್ಯ ನಿರ್ಮಾಣದ ನೆಲೆಗಳು/ ಡಾ. ಕುರುವ ಬಸವರಾಜ್ ಹಾಗೂ 'ಹರದೇಶಿ-ನಾಗೇಶಿ ಕಲಾವಿದರ ಕಲೆ ಮತ್ತು ಬದುಕು/ ಡಾ. ಶೈಲಜಾ ಹಿರೇಮಠ) ಅಲ್ಲಲ್ಲಿ ಅಂತರ ಶಿಸ್ತೀಯ ಅಧ್ಯಯನದ ಝಳಕುಗಳನ್ನು ತೋರಿಸುತ್ತವೆಯಾದರೂ ಪೂರ್ಣಮಟ್ಟದಲ್ಲಿ ಆ ಉದ್ದೇಶವನ್ನು ಅವು ಇಟ್ಟುಕೊಂಡಂತೆ ಕಾಣುವುದಿಲ್ಲ. ಡಾ. ಕುರುವ ಅವರ ನಿಬಂಧದ ಉದ್ದೇಶವೇ ಬೇರೆ ಇದ್ದದ್ದರಿಂದ ಹಾಗೆ ದೊಡ್ಡ ಮಟ್ಟದ ಸಾಮಾಜಿಕ, ಮನೋವೈಜ್ಞಾನಿಕ ಸಿದ್ಧಾಂತಗಳ ನೆರವು ಪಡೆಯುವ ಕೆಲಸ ಅವರು ಮಾಡಬೇಕಿತ್ತೆಂದು ನಿರೀಕ್ಷಿಸಲಾಗದು. ಆದರೆ ಡಾ. ಶೈಲಜಾ ಹಿರೇಮಠ ಅವರ ಅಧ್ಯಯನದ ಗುರಿಯೇ ಆ ಕಲಾವಿದರ ಬಗ್ಗೆ ಸಮಾಜ ಹೇಗೆ ಲಿಂಗ ಸಂಬಂಧಿ ತಾರತಮ್ಯ ಮಾಡುತ್ತಿದೆ ಎಂಬುದನ್ನು ತಿಳಿದು ವಿಶ್ಲೇಷಿಸುವುದಾಗಿತ್ತು. ಅಂಥದ್ದರ ಬಗ್ಗೆ ಅವರು ವಿವರಗಳನ್ನು ಕಲೆಹಾಕಿ ತಮಗೆ ಕಂಡಂತೆ ವಿಶ್ಲೇಷಿಸಿದ್ದಾರೆ. ಇಂಥ ತಾರತಮ್ಯ ಕನಿಷ್ಠ ಏಷ್ಯಾ ಉಪಖಂಡದಾದ್ಯಂತ ಬಹುಕಾಲದಿಂದ ನಡೆದಿರುವಂಥದು. ಈಗಷ್ಟೇ ಇದು ನಮ್ಮಲ್ಲಿ ಕಳಚಿಕೊಳ್ಳುತ್ತಿದೆ. ಇದಕ್ಕೆ ಕಾರಣವಾದ ಮನಃಪ್ರವೃತ್ತಿಗಳ ಬಗ್ಗೆ ಮನಃಶಾಸ್ತ್ರಜ್ಞರು, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಸಮಾಜಶಾಸ್ತ್ರಜ್ಞರು ಅಧ್ಯಯನ ನಡೆಸಿ ಸಿದ್ಧಾಂತಗಳನ್ನು ಮಂಡಿಸಿರಬಹುದು. ಅದರ ಉಪಯೋಗವನ್ನು ಮಾಡಿಕೊಳ್ಳುವತ್ತ ಡಾ. ಶೈಲಜಾ ಅವರು ಗಮನಹರಿಸಬಹುದಿತ್ತು.

ಒಂದು ವರ್ಷ ಪ್ರಕಟವಾದ ಕನ್ನಡ ಕೃತಿಗಳ ಸಮೀಕ್ಷೆ ಹಾಗೂ ತಾಂತ್ರಿಕ ವಿವರಗಳು ಒಂದೆಡೆ ಲಭ್ಯವಾಗುವಂಥ ಯೋಜನೆಯನ್ನು ನಮ್ಮ ರಾಜ್ಯದ ಯಾವ ವಿಶ್ವವಿದ್ಯಾನಿಲಯ, ಅಕಾಡೆಮಿ ಅಥವಾ ಕನ್ನಡ–ಸಂಸ್ಕೃತಿ ಇಲಾಖೆ ರೂಪಿಸಿಕೊಂಡು ಬದ್ಧತೆಯಿಂದ ನಡೆಸಿಕೊಂಡು ಬಾರದಿರುವುದು ನಮ್ಮ ಅಕಾಡೆಮಿಕ್ ಸೋಮಾರಿತನಕ್ಕೊಂದು ಸಾಕ್ಷಿಯಂತಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರವು 'ಸಾಹಿತ್ಯ ವಾರ್ಷಿಕ' ಯೋಜನೆಯನ್ನು ರೂಪಿಸಿ ನಾಲ್ಕಾರು ವರ್ಷ ನಡೆಸಿತು. ಆಗ ಪ್ರಕಟವಾದ ಆ ಸಂಪುಟಗಳು ಇಂದಿಗೂ ಪ್ರಯೋಜನಕಾರಿಯಾಗಿವೆ. ಅದು ನಿಂತು ಹೋಯಿತು. ಡಾ. ಎಚ್.ಜೆ. ಲಕ್ಕಪ್ಪಗೌಡರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಜಾನಪದ ಕೃತಿಗಳಿಗೆ ಸಂಬಂಧಿಸಿದಂತೆ ಅಂಥ ಕೃತಿ ಪ್ರಕಟಣೆಯ ಯೋಜನೆ ಹಾಕಿಕೊಂಡು 'ಜಾನಪದ ವರ್ಷ–೧೯೯೪, ೯೫, ೯೬' ಕೃತಿಗಳನ್ನು ಪ್ರಕಟಿಸಿದರು. ಕನ್ನಡ ವಿಶ್ವವಿದ್ಯಾನಿಲಯವು ಈ ರಾಜ್ಯದಲ್ಲಿ ಪ್ರತಿವರ್ಷವೂ ನಡೆದ ಮುಖ್ಯ ಘಟನೆಗಳು ಹಾಗೂ ಪ್ರಕಟಿತ ಕೃತಿಗಳ ಸಮೀಕ್ಷೆಯನ್ನೊಳಗೊಂಡ 'ಕನ್ನಡ ವರ್ಷ' ಎಂಬ ಹೆಸರಿನ ಸಂಪುಟಗಳನ್ನು ಕೆಲವರ್ಷ ಪ್ರಕಟಿಸಿತು. ಈಗ ಅದೂ ಕೂಡ ನಿಂತಿರುವಂತೆ ಕಾಣುತ್ತದೆ.

ಇಂಥ ಸಂದರ್ಭದಲ್ಲಿ ನವೋದಿತ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಜಾನಪದಕ್ಕೆ ಸಂಬಂಧಿಸಿದಂತೆ ಒಂದು ವರ್ಷದಲ್ಲಿ ಪ್ರಕಟವಾದ ಕೃತಿಗಳ ಸಮೀಕ್ಷೆಯನ್ನು ಒಂದೆಡೆ ಒದಗಿಸಿಕೊಡುವ ಕೆಲಸವನ್ನು ಕೈಗೆತ್ತಿಕೊಂಡಿದೆ. ಇದರ ಅಗತ್ಯವನ್ನು ಮನಗಂಡು ವಿಶ್ವವಿದ್ಯಾಲಯದ ಕುಲಪತಿಯವರು ಈ ಯೋಜನೆಗೆ ಅನುಮತಿಸಿ ಬೆಂಬಲಿಸಿದ್ದಾರೆ. ಅವರಿಗೆ ನಾನು ಋಣಿ.

ಇಂಥ ಕೆಲಸದಲ್ಲಿ ಬಹುದೊಡ್ಡ ಅಡ್ಡಿ ಎಂದರೆ ಪುಸ್ತಕಗಳ ಸಂಗ್ರಹಣೆ. ಪುಸ್ತಕಗಳು ಪ್ರಕಟವಾದ ಬಗ್ಗೆ ಮಾಹಿತಿ ಲಭ್ಯವಾಗುವುದೇ ಕಷ್ಟ. ಪತ್ರ ಬರೆದರೂ ಪುಸ್ತಕಗಳು ಬಾರದಿರುವುದೂ ಇದೆ. ಸಮೀಕ್ಷಾ ವರ್ಷದಲ್ಲಿ ಪ್ರಕಟವಾದ ಪುಸ್ತಕಗಳ ಪೈಕಿ ಮೂರನೇ ಒಂದು ಭಾಗದಷ್ಟು ನಮ್ಮ ಕೈಗೆ ದೊರೆಯದಿರುವುದು ದೊಡ್ಡ ಕೊರತೆ ಎಂಬ ನೋವು ನಮಗಿದೆ. ಅದು–ಪ್ರಾಮಾಣಿಕ ಪ್ರಯತ್ನದ ಹೊರತಾಗಿಯೂ ಉಳಿದುಕೊಂಡ ಕೊರತೆ. ಆದರೆ ಕೈಗೆ ಸಿಕ್ಕ ದೊಡ್ಡ ಸಂಖ್ಯೆಯ ಕೃತಿಗಳ ಬಗ್ಗೆಯಾದರೂ ಸಾಕಷ್ಟು ಮಾಹಿತಿಗಳನ್ನು 'ಜಾನಪದ ವರ್ಷ–೨೦೧೧' ಒದಗಿಸುತ್ತದೆ ಎಂಬುದೇ ಒಂದು ಸಮಾಧಾನ.

ಎಸ್.ಪಿ. ಪದ್ಮಪ್ರಸಾದ್
ಸಂಪಾದಕ

ಅಧ್ಯಾಯ ೨

ಜೀವನ ಪರಿಚಯ ಕೃತಿಗಳು

* **ಸುಕ್ರಿ ಬೊಮ್ಮಗೌಡ:** ಲೇ. ಶಾಂತಿನಾಯಕ, ಪು.೪೦, ಬೆಲೆ ರೂ. ೧೫/–
* **ಪ್ರೊ॥ ಡಿ.ಕೆ. ರಾಜೇಂದ್ರ:** ಲೇ. ಎಂ.ಬಿ. ಸುರೇಶ್, ಪು.೪೦, ಬೆಲೆ ರೂ. ೧೫/–
* **ಜನಪದ ವ್ಯಾಸ ಬೆಟ್ಟದಬೀಡು ಸಿದ್ಧಶೆಟ್ಟರು**
  ಲೇ. ಡಾ॥ ಪಿ.ಕೆ. ರಾಜಶೇಖರ, ಪು.೪೦, ಬೆಲೆ ರೂ. ೧೫/–
* **ಮಿಸ್ಟರ್ ಫೋಕ್‌ಲೋರ್, ಡಾ॥ ಪಿ.ಕೆ. ರಾಜಶೇಖರ**
  ಲೇ. ಪ್ರೊ॥ ಮೈಸೂರು ಕೃಷ್ಣಮೂರ್ತಿ, ಪು. ೪೦, ಬೆಲೆ ರೂ. ೨೦/–

ಈ ನಾಲ್ಕು ಪುಸ್ತಕಗಳ ಪ್ರಕಾಶಕರು – ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – ೫೪

ಸುಕ್ರಿ ಬೊಮ್ಮಗೌಡ

ಕರ್ನಾಟಕ ಜಾನಪದ ಪರಿಷತ್ತು ಪ್ರಕಟಿಸಿರುವ ೪೫ ಪುಟಗಳ ಈ ಸುಕ್ರಿಬೊಮ್ಮಗೌಡ ಕೃತಿಯಲ್ಲಿ ಲೇಖಕಿ ಶಾಂತಿ ನಾಯಕ ಅವರು ಅಪ್ಪಟ ಜಾನಪದ ತಾಯಿ ಅಂಕೋಲಾ ತಾಲ್ಲೂಕಿನ ಬಡಗೇರಿಯ ಸುಕ್ರಿಬೊಮ್ಮಗೌಡರ ಜೀವನ ವೃತ್ತಾಂತವನ್ನು ಅಕ್ಷರ ರೂಪಕ್ಕಿಳಿಸಿ ಸಾಕಾರಗೊಳಿಸಿದ್ದಾರೆ. ಸುಕ್ರಿ ಬೊಮ್ಮಗೌಡ ಹಾಲಕ್ಕಿ ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಎಂದು ಹೇಳಲು ಹೊರಟ ಲೇಖಕಿ ಒಕ್ಕಲಿಗ ಸಮುದಾಯದ ಹುಟ್ಟು, ಬೆಳವಣಿಗೆ, ವೃತ್ತಿ ಮತ್ತು ಅದರಲ್ಲಿನ ಒಳಪಂಗಡಗಳ ಕುರಿತಾಗಿ ಒಂದಷ್ಟು ಮಹತ್ವದ ಮಾಹಿತಿಯನ್ನು ನೀಡಿದ್ದಾರೆ. ಸುಕ್ರಿಯವರನ್ನು ಪರಿಚಯಿಸಲು ಬೇರೆ ಗ್ರಂಥಗಳೇ ಬೇಕಿಲ್ಲ, ಅವರೇ ಆಕರ ಗ್ರಂಥವಾಗಿದ್ದಾರೆ ಎಂದು ಇಲ್ಲಿ ಲೇಖಕಿ ಅಭಿಮಾನದಿಂದ ಹೇಳುತ್ತಾರೆ. ಕಾರವಾರ ಆಸುಪಾಸಿನ ಗುಡ್ಡಗಳಲ್ಲಿ ಒಕ್ಕಲ ಪರಂಪರೆಗೆ ಸೇರಿದ 'ಬಳಿ' ಕುಲನಾಮಗಳಿಗೆ ಸಂಬಂಧಪಟ್ಟ ಅನೇಕ ಕುಲ ದೇವಾಲಯಗಳಿವೆಯೆಂದು ಸುಕ್ರಿಬೊಮ್ಮಗೌಡ ಕೊಟ್ಟ ಮಾಹಿತಿಯ ವಿವರಗಳನ್ನು ಇಲ್ಲಿ ಕಾಣಬಹುದು. ಸುಕ್ರಿಯವರು ಮಾಹಿತಿಗಳನ್ನು ಹಾಡು ಹೇಳುತ್ತಾ ನೀಡಿರುವುದರಿಂದ ಅವರೊಬ್ಬ ಜನಪದ ಗಾಯಕಿಯೂ ಹೌದು ಎಂದು ಲೇಖಕಿ ಹೊಗಳುತ್ತಾರೆ. ಮದುವೆ, ಚೊಳಂಗಿ, ಬಸುರಿಬಾಣಂತಿಹಾಡು– ಹೀಗೆ ಜನಪದ ಗೀತ ಕಣಜವೆ ಸುಕ್ರಿಯಲ್ಲಿದೆ ಎಂದು ಲೇಖಕಿ ಬಣ್ಣಿಸುತ್ತಾರೆ. ಸುಕ್ರಿಯ ಪೂರ್ವಜರು ಬೇಸಾಯಗಾರರಾಗಿದ್ದರು, ಭೂ ಮಾಲೀಕರ ಹತ್ತಿರ ಕೂಲಿ

ಕಾರ್ಮಿಕರಾಗಿಯೂ ಸಹ ದುಡಿಯುತ್ತಿದ್ದರು ಎಂದು ತಿಳಿದುಬರುತ್ತದೆ. ಅವರ ಪೂರ್ವಜರ ಬದುಕು ಬವಣೆ ಕುರಿತಾಗಿಯೂ ಲೇಖಕಿ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದಾರೆ.

ಸುಕ್ರಿಯು ಹೆತ್ತವರಾದ ಸುಬ್ಬ ಮತ್ತು ದೇವಿ ಸಹ ಜನಪದ ಕಲಾವಿದರಾಗಿದ್ದರು. ಗದ್ದೆ ಬಯಲನ್ನೇ ಆಟದ ಮೈದಾನವಾಗಿಸಿಕೊಂಡಿದ್ದ ಸುಕ್ರಿ ಜನಪದ ಆಟಗಳ ಬಗ್ಗೆ ನೀಡಿದ ಎಲ್ಲ ವಿವರಣೆ ಇಲ್ಲಿದೆ. ಹಾಲಕ್ಕಿ ಒಕ್ಕಲು ಕುಲ ಸೂಚಕವಾದ ಬಳಿ ಪದ್ಧತಿಯ ಕುರಿತಾಗಿ ಮಹತ್ವದ ಮಾಹಿತಿಯನ್ನು ಇವರಿಂದ ತಿಳಿಯಬಹುದು. ಹಾಲಕ್ಕಿ ಒಕ್ಕಲಲ್ಲಿ ಇದ್ದ ಬೇಟೆ ಜ್ಞಾನದ ಪೂರ್ಣ ವಿವರಣೆ ಮಹತ್ವದ್ದಾಗಿದೆ. ಸುಕ್ರಿಯವರು ನೀಡಿದ ಚಿರಕಲ, ಪೆಠೆ, ಸಗಡೆ, ಕುಚುಮಾಲೆ, ಏಕನಾಯಕ ಮುಂತಾದ ಸಸ್ಯಗಳ ಪರಿಚಯ ಸುಕ್ರಿಯವರಿಗಿದ್ದ ಸಸ್ಯ ಜ್ಞಾನವನ್ನು ತಿಳಿಸುತ್ತದೆ. ಸಂಶೋಧಕರಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗುವುದಂತೂ ಖಂಡಿತ. ಜೊತೆಗೆ ಉರುವಲು ಕಟ್ಟಿಗೆ ಜಾನಪದದ ಅರಿವೂ ಅವರಿಗೆ ಸಾಕಷ್ಟು ಇತ್ತು. ಕಾಡಿನ ಆಹಾರದ ಬಗ್ಗೆ ಸುಕ್ರಿಗಿರುವ ಜ್ಞಾನ ಅಚ್ಚರಿ ಮೂಡಿಸುತ್ತದೆ, ಸುಕ್ರಿ ಒಬ್ಬ ಜನಪದ ವೈದ್ಯೆಯೂ ಹೌದು. ಆಕೆಗೆ ಇರುವ ಔಷಧಿ ಜ್ಞಾನ ವೈದ್ಯಕೀಯ ಕ್ಷೇತ್ರಕ್ಕೆ ಉಪಯೋಗಕ್ಕೆ ಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಸುಕ್ರಿಯವರ ಬಾಯಲ್ಲಿ ಬರುವ ರಾಮಾಯಣ ಮತ್ತು ಮಹಾಭಾರತದ ವಿಷಯ ವಸ್ತು ತೀರ ಭಿನ್ನ ಮತ್ತು ವಿಶಿಷ್ಟವಾಗಿದೆಯೆಂದು ಲೇಖಕಿ ಶಾಂತಿ ನಾಯಕರು ಒದಗಿಸಿರುವ ಅನೇಕ ಸನ್ನಿವೇಶ ಸಂದರ್ಭಗಳು ಗಮನಾರ್ಹವಾಗಿದೆ. ಹಾಲಕ್ಕಿ ಒಕ್ಕಲ ಹೆಂಗಸರಲ್ಲಿ ರೂಢಿಯಲ್ಲಿರುವ ಪರಂಪರಾಗತ ತಾರ್ಲೆ ಕುಣಿತದ ವಿವರಗಳು ಮನಸೆಳೆಯುತ್ತವೆ. ಸುಕ್ರಿಯವರು ರೈತ ಚಳವಳಿ, ಮದ್ಯಪಾನ ವಿರೋಧಿ ಚಳವಳಿಗಳಲ್ಲೂ ಪಾಲ್ಗೊಂಡ ವಿಷಯಗಳೂ ಅವರಿಗಿರುವ ಸಾಮಾಜಿಕ ಕಳಕಳಿಯನ್ನು ಎತ್ತಿ ಹಿಡಿಯುತ್ತವೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಅನೇಕ ಬಾರಿ ವಿದ್ಯಾರ್ಥಿಗಳಿಗೆ ಸುಗ್ಗಿ ಕುಣಿತ ಮತ್ತು ಗುಮಟೆ ಕಲಾ ತರಬೇತಿ ನೀಡಿರುವ ಬಗ್ಗೆ ಲೇಖಕಿ ಅವರಿಗಿರುವ ಸಾಮರ್ಥ್ಯವನ್ನು ಬಣ್ಣಿಸಿದ್ದಾರೆ. ನಾಡೋಜ ಪ್ರಶಸ್ತಿ ಸೇರಿದಂತೆ ಅವರಿಗೆ ಲಭಿಸಿರುವ ಪ್ರತಿಷ್ಠಿತ ಪ್ರಶಸ್ತಿಗಳ ಪಟ್ಟಿಯನ್ನೇ ಒದಗಿಸಿದ್ದಾರೆ.

ಸಿರಿಕುಳಿಯ ಹನ್ನೆರಡು ವರ್ಷದ ಸುಕ್ರಿ ಬಡಗೇರಿಯ ನಲವತ್ತು ವರ್ಷದ ಬೊಮ್ಮಗೌಡರನ್ನು ಮದುವೆಯಾಗಿ ಪಟ್ಟ ಕಷ್ಟ, ಉಂಡ ಸುಖ ಎಲ್ಲದರ ಬಗ್ಗೆ ಸಂಕ್ಷಿಪ್ತವಾಗಿ ಈ ಕೃತಿಯಲ್ಲಿ ಕಾಣಬಹುದು. ಕೆಲ ವಿದ್ವಾಂಸರು ಈ ಜನಪದ ಸಾಹಿತ್ಯ ಆದಿ ಮಾನವನಿಂದಲೇ ಹುಟ್ಟಿತು ಮತ್ತು ಎಲ್ಲ ಸಾಹಿತ್ಯಕ್ಕೂ ಜನಪದ ಸಾಹಿತ್ಯವೇ ಮೂಲ ಎನ್ನುತ್ತಾರೆ. ಇದನ್ನೆಲ್ಲ ಗಮನಿಸಿದಾಗ ಜಾನಪದ ತಾಯಿ, ಜಾನಪದ ರಾಣಿ

ಸುಕ್ರಿಬೊಮ್ಮಗೌಡನಂತಹವರು ಎದುರಿಗೆ ಕಾಣಿಸುತ್ತಾರೆ. ಈ ಕೃತಿಯನ್ನು ಓದಿದಾಗ ಕ್ಷೇತ್ರಕಾರ್ಯಕ್ಕೆ ತೊಡಗುವವರು ಜಾನಪದ ಗಣಿ ಸುಕ್ರಿಯವರನ್ನು ಭೇಟಿ ಮಾಡಿದರೆ ಸಾಕಷ್ಟು ಮಾಹಿತಿ ಸಂಗ್ರಹಿಸಬಹುದು ಎನಿಸುತ್ತದೆ. ಈ ಕೃತಿ ಜಾನಪದ ಲೋಕಕ್ಕೆ ಒಳ್ಳೆಯ ಕೊಡುಗೆಯಾಗಿದೆ. ಸರಳ ನಿರೂಪಣೆಯಲ್ಲಿ ಸಾಮಾನ್ಯ ಜನರನ್ನೂ ತಲುಪುವ ಈ ಕೃತಿ ಉತ್ತಮವಾಗಿದೆ.

ಪ್ರೊ. ಡಿ.ಕೆ. ರಾಜೇಂದ್ರ

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿಕೊಂಡ, ಅದರಲ್ಲೂ ವಿಶೇಷವಾಗಿ ಜಾನಪದದ ಶ್ರೇಷ್ಠ ವಿದ್ವಾಂಸರಲ್ಲೊಬ್ಬರಾದ ಪ್ರೊ. ಡಿ.ಕೆ. ರಾಜೇಂದ್ರರ ಬದುಕು ಮತ್ತು ಸಾಧನೆಯನ್ನು ಲೇಖಕರಾದ ಎಂ.ಬಿ. ಸುರೇಶ್‌ರವರು ೪೦ ಪುಟಗಳಲ್ಲಿ ಸೆರೆ ಹಿಡಿದಿದ್ದಾರೆ.ಇಲ್ಲಿ ಕೆಲವು ಅಂಶಗಳನ್ನು ಗಮನಿಸಬಹುದು. ಮೊದಲಿಗೆ ಇವರ ಜನನ, ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ, ಗ್ರಾಮೀಣ ಪರಿಸರ ಇವುಗಳ ಕುರಿತ ವಿವರಣೆ ಇದೆ. ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕೆಂಪಲಿಂಗೇಗೌಡ ಮತ್ತು ಗೌರಮ್ಮರ ಸುಪುತ್ರರಾಗಿ ೧೩-೦೪-೧೯೪೨ರಲ್ಲಿ ಇವರು ಜನಿಸಿದರು. ಎಂಟು ಮಕ್ಕಳಲ್ಲಿ ಕೊನೆಯವರಾದ ಇವರು ಏಳನೆಯ ವಯಸ್ಸಿನಲ್ಲೇ ತಂದೆಯವರನ್ನು ಕಳೆದುಕೊಂಡು ಅಪ್ಪನ ಪ್ರೀತಿಯಿಂದ ವಂಚಿತರಾದರು. ದೊಡ್ಡಭಾವ ಹೆಚ್.ಬೊಮ್ಮಯ್ಯನವರ ನೆರವಿನಿಂದ ಭವಿಷ್ಯ ರೂಪಿಸಿಕೊಂಡರು. ಇವರು ಗ್ರಾಮೀಣ ಪ್ರದೇಶದಲ್ಲೇ ವಿದ್ಯೆ ಕಲಿತಿದ್ದರಿಂದ ಜನಪದ ಸಾಹಿತ್ಯದಲ್ಲಿ ಸಾಧನೆಗೈಯಲು ಅನುಕೂಲವಾಯಿತು. ಜನಪದ ಸಾಹಿತ್ಯ ಮತ್ತು ಪ್ರಬಂಧ ಪ್ರಕಾರಗಳಲ್ಲಿ ಅವರ ಕೊಡುಗೆ ದೊಡ್ಡದು ಎಂದು ಲೇಖಕರು ಅವರ ಬಹುಮುಖೀ ಚಿಂತನೆಗಳಿಂದ ಹೊರಬಂದ ಕೃತಿಗಳ ವಿವರಣೆ ನೀಡಿದ್ದಾರೆ. ಅವರ ಒಂಭತ್ತು ಜನಪದ ವಿಮರ್ಶಾ ಕೃತಿಗಳ, ನಾಲ್ಕು ಸಂಪಾದಿತ ಕೃತಿಗಳ ಜೊತೆಗೆ ಅವರ ಪಿಎಚ್.ಡಿ. ಪ್ರಬಂಧ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ'ಯ ವೈಶಿಷ್ಟತೆಯನ್ನು, ಅವು ಜಾನಪದ ಲೋಕವನ್ನು ಶ್ರೀಮಂತಗೊಳಿಸಿದ ಬಗೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಇವರ ಪಿಎಚ್.ಡಿ. ಪ್ರಬಂಧ ಅದುವರೆಗೂ ಕಡೆಗಣಿಸಲ್ಪಟ್ಟ ದ.ಕ.ದ ಮೂಡಲಪಾಯ ಯಕ್ಷಗಾನಕ್ಕೊಂದು ಹೊಸ ಆಯಾಮ ನೀಡಿದೆ. ಜೊತೆಗೆ ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟಗಳ ಅಧ್ಯಯನವನ್ನು ಆಳವಾಗಿ ಮಾಡಿದ್ದಾರೆ. ಇವರ ವ್ಯಾಪಕವಾದ ಕ್ಷೇತ್ರಕಾರ್ಯ ಸಫಲಗೊಂಡಿದೆ.

ಇವರ ಕೃತಿಗಳಿಂದ ಜನಪದ ಸಾಹಿತ್ಯ, ಸಂಸ್ಕೃತಿ, ಕಲೆಗಳ ಮಹತ್ವವನ್ನು ಅರಿಯಬಹುದು. ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಗೋವರ್, ಜೆ.ಎಫ್. ಫ್ಲೀಟ್

ಕಿಟ್ಟೆಲ್‌ರ ಕೊಡುಗೆಗಳನ್ನು ಕೊಂಡಾಡಿದ್ದಾರೆ. ಜನಪದ ತ್ರಿಪದಿಗಳನ್ನು ಸಂಗ್ರಹಿಸಿ ಜನಪದ ಸಂಸ್ಕೃತಿಯನ್ನು ವಿಭಿನ್ನ ರೀತಿಯಲ್ಲಿ ಅರ್ಥೈಸಿದ್ದಾರೆ. 'ಹಾಸನ ಜಿಲ್ಲೆಯ ಜನಪದ ಕಲೆಗಳು' ಲೇಖನದಲ್ಲಿ ಆ ಜಿಲ್ಲೆಯ ಜನಪದ ಕಲೆಗಳೆಲ್ಲವನ್ನೂ ಹುಡುಕಿ ಸಂಶೋಧಿಸಿ ಜನಪದ ಸಿರಿಯನ್ನು ಇಮ್ಮಡಿಗೊಳಿಡಿದ್ದಾರೆ. ಇದು ಇಂದಿಗೂ ಇತರ ಜಿಲ್ಲೆಗಳ ಜನಪದ ಅಧ್ಯಯನಕ್ಕೆ ಸಹಕಾರಿಯಾಗಿದೆ. ಮರೆಯಾಗುತ್ತಿರುವ ಗ್ರಾಮೀಣ ಆಟಗಳನ್ನು ಗಮನಿಸಿ ಅಭ್ಯಸಿಸಿ ದಾಖಲಿಸಿದ್ದಾರೆ. 'ದಕ್ಷಿಣ ಕರ್ನಾಟಕದ ವೃತ್ತಿ ಗಾಯಕರು' ಲೇಖನದಲ್ಲಿ ಎಲ್ಲ ಸಂಪ್ರದಾಯದ ಗಾಯಕರನ್ನು ವಿಂಗಡಿಸಿ ಅವರ ವೇಷಭೂಷಣ, ವಾದ್ಯಪರಿಕರಗಳ ವಿವರವನ್ನು ನೀಡಿರುವುದು ಅವರ ಆಳವಾದ ಅಧ್ಯಯನಕ್ಕೆ, ಜಾನಪದದ ಅನನ್ಯತೆಗೆ ಸಾಕ್ಷಿಯಾಗಿದೆ. 'ಜಾನಪದ-ಶಿಷ್ಟಪದ' ಕೃತಿಯಲ್ಲಿ ಡಾ. ರಾಜೇಂದ್ರರು, 'ಜಾನಪದ ಮೈಗೆ ಹೊಕ್ಕಿದ್ದಾದರೆ ಶಿಷ್ಟಪದ ಕಲಿಕೆಯಿಂದ ಮನ ಹೊಕ್ಕಿದ್ದು' 'ಎನ್ನುತ್ತಾ ಎಷ್ಟೇ ದೊಡ್ಡ ಕವಿಯಾದರೂ ಕಾಲು ನೆಲದಮೇಲೆ ಇರಬೇಕಲ್ಲವೆ?' ಎನ್ನುವುದು ಅವರ ಜಾನಪದ ಶ್ರೀಮಂತ ಮನಸ್ಸನ್ನು ತೋರುತ್ತದೆ.

ಡಾ. ರಾಜೇಂದ್ರರವರು ಸೃಜನಶೀಲ ಲೇಖಕರೂ ಹೌದು ಎಂದು ಈ ಕೃತಿಯ ಲೇಖಕರಾದ ಸುರೇಶ್‌ರವರು ಅವರು ಹೊರತಂದ ಪ್ರಬಂಧ ಸಂಕಲನಗಳ, ಗ್ರಂಥ ಸಂಪಾದನೆಗಳ, ಮಕ್ಕಳ ಪುಸ್ತಕಗಳ, ಸಾಹಿತ್ಯ, ವಿಮರ್ಶೆಗಳ ಪಟ್ಟಿಯನ್ನೇ ಒದಗಿಸಿದ್ದಾರೆ.ಶಿಷ್ಟ ಮತ್ತು ಜಾನಪದ ಸಾಹಿತ್ಯಗಳೆರಡರಲ್ಲೂ ಸಾಧನೆಗೈದ ಇವರಿಗೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ ಲಭಿಸಿದ್ದು ಇವರ ಶ್ರಮಕ್ಕೆ ಸಂದ ಗೌರವವಾಗಿದೆ. ಹಲವಾರು ಪ್ರಶಸ್ತಿಗಳು ಇವರನ್ನು ಅರಸಿ ಬಂದಿದೆ. ಮೇರು ವ್ಯಕ್ತಿತ್ವದ ಮೃದು ಸ್ವಭಾವದ ಸಜ್ಜನ ಡಾ. ರಾಜೇಂದ್ರರು ಕನ್ನಡನಾಡು ನುಡಿಗೆ ನೀಡಿದ ಕೊಡುಗೆ ಅಪಾರವಾದುದು ಎಂದು ಈ ಕೃತಿಯನ್ನು ಓದಿದಾಗ ಮನವರಿಕೆಯಾಗುತ್ತದೆ.

ಜನಪದ ವ್ಯಾಸ: ಬೆಟ್ಟದಬೀಡು ಸಿದ್ಧಶೆಟ್ಟರು

'ಜನಪದ ಮಹಾಭಾರತ' ವನ್ನು ಹಾಡಿ ಈ ಜನಪದ ಮಹಾಕಾವ್ಯದ ಮಹತ್ವಕ್ಕೆ ಇನ್ನಷ್ಟು ಮೆರಗು ನೀಡಿದ 'ಜನಪದ ವ್ಯಾಸ'ರೆಂದೇ ಕೀರ್ತಿ ಹೊಂದಿದ ಬೆಟ್ಟದ ಬೀಡು ಸಿದ್ಧಶೆಟ್ಟರ ಬದುಕು ಮತ್ತು ಜಾನಪದ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರರವರು 40 ಪುಟಗಳ ಈ ಕೃತಿಯಲ್ಲಿ ಅಡಕಗೊಳಿಸಿದ್ದಾರೆ. ಜನಪದ ಗಾಯಕ ಸಿದ್ಧಶೆಟ್ಟರನ್ನು ಲೇಖಕರು ಮಹರ್ಷಿಯೆಂದೇ ಕರೆದಿದ್ದಾರೆ. ಸಿದ್ಧಶೆಟ್ಟರ ಹೆತ್ತವರು ಚಿಕ್ಕಪಲಗೂರು ಸಿದ್ಧಪ್ಪಾಜಿಗೆ ಹರಕೆ ಹೊತ್ತ ಮೇಲೆ ಇವರು ಹುಟ್ಟಿದ್ದರಿಂದ ಇವರು ವರಪುತ್ರರು, ಹಾಗಾಗಿ ಅವರಿಗೆ ಸಿದ್ಧಪ್ಪಾಜಿಯ

ಹೆಸರನ್ನೇ ಸಿದ್ಧಶೆಟ್ಟಿ ಎಂದು ಇಡಲಾಗಿದೆಯೆಂದು ಬಣ್ಣಿಸಿದ್ದಾರೆ. ಹುಟ್ಟಿ ಐದು ತಿಂಗಳಿಗೇ ತಂದೆಯನ್ನು ಕಳೆದುಕೊಂಡ ಇವರ ಬಾಲ್ಯ ಕಷ್ಟಗಳಿಂದಲೇ ತುಂಬಿತ್ತು ಎಂದು ಇವರ ಹುಟ್ಟು, ಬಾಲ್ಯ, ಬೆಳವಣಿಗೆ ಮತ್ತು ಕೌಟುಂಬಿಕ ಹಿನ್ನೆಲೆಯನ್ನು ಓದಿದಾಗ ತಿಳಿಯುತ್ತದೆ.

ಸಿದ್ಧಶೆಟ್ಟರ ತಂದೆ ಗುಂಡುಮಾದಯ್ಯನವರೂ, ದೊಡ್ಡಪ್ಪ ದೊಡ್ಡಮಾದಯ್ಯನವರೂ ಸಹ ಜಾನಪದ ಕಲಾವಿದರಾಗಿದ್ದರೆಂದು ಈ ಕೃತಿಯಲ್ಲಿ ಕಂಡುಬರುತ್ತದೆ. ಹಾಗಾಗಿ ಕಲೆಯೆಂಬುದು ಸಿದ್ಧಶೆಟ್ಟರಿಗೆ ಜನ್ಮಜಾತವಾಗಿ ಬಂದದ್ದು ಎನ್ನಲಡ್ಡಿಯಿಲ್ಲ. ಒಮ್ಮೆ ಸಿದ್ಧಶೆಟ್ಟರ ಹಾಡಿನ ಮೋಡಿಗೆ ಮರುಳಾದ ಉದ್ದೂರಿನ ದೇವರಗುಡ್ಡ ಮಾದಪ್ಪಶೆಟ್ಟರು ಇವರನ್ನು ತಮ್ಮ ಜೊತೆಗೆ ಕಥೆ ಮಾಡುವಾಗಲೆಲ್ಲ ಕರೆಸಿಕೊಂಡು ಶಿಷ್ಯರನ್ನಾಗಿ ಸ್ವೀಕರಿಸಿದರು. ಸಿದ್ಧಶೆಟ್ಟರ ತಾಯಿ ಸಿದ್ಧಮ್ಮ ತಾಗುಬಾಗಿನಲ್ಲಿ ನೀಲಗಾರ ದೀಕ್ಷೆಯನ್ನು ಕೊಡಿಸಿದರು. ನೀಲಗಾರರಾದ ಸಿದ್ಧಶೆಟ್ಟಿ ಮಾದೇಶ್ವರನ ದೇವರಗುಡ್ಡರ ಸಂಪ್ರದಾಯವನ್ನೂ ಸಹ ಬಿಡಲಿಲ್ಲ, ಉಭಯ ಸಂಪ್ರದಾಯಗಳನ್ನು ಅರಿತು ಕಲಿತು ಮಂಟೇಸ್ವಾಮಿ ವಚನ ಮತ್ತು ಮಾದೇಶ್ವರ ಕಥೆಗಳೆರಡರಲ್ಲೂ ಪಳಗಿ ಜನಮನ್ನಣೆಗೆ ಪಾತ್ರರಾಗಿದ್ದರು ಎಂದು ಲೇಖಕರು ಮನತುಂಬಿ ಹೊಗಳುತ್ತಾರೆ. ಮಾದಪ್ಪಶೆಟ್ಟರ ಕಾಲಾನಂತರ ಮಧೂನಹಳ್ಳಿ ನಂಜಪ್ಪಶೆಟ್ಟರಿಂದ ಗಾದೆ, ಒಗಟು, ತತ್ವಪದ, ಜನಪದ ಲೆಕ್ಕಗಳನ್ನೆಲ್ಲ ಕಲಿತು ತಮ್ಮ ಭಂಡಾರವನ್ನು ಇನ್ನಷ್ಟು ತುಂಬಿಸಿಕೊಂಡರು ಎಂದು ಬಣ್ಣಿಸುತ್ತಾರೆ. ಪಟೇಲ್ ನೀಲೇಗೌಡರ ಅಭಿಲಾಷೆಯಂತೆ ಇವರು ಸುಬ್ಬಮ್ಮನನ್ನು ಮದುವೆಯಾಗಿ 5 ಮಕ್ಕಳ ತಂದೆಯಾದರೆಂಬ ಅವರ ಸಾಂಸಾರಿಕ ಜೀವನದ ಚಿತ್ರಣ ಈ ಕೃತಿಯಲ್ಲಿದೆ. ಊರೂರು ತಿರುಗಿ ಶಿಷ್ಯರನ್ನು ತಯಾರು ಮಾಡಿ ಜಾನಪದ ಕಲೆಯನ್ನು ಉಳಿಸಿ ಬೆಳೆಸಿದ ಸರಳ ಸೌಮ್ಯ ಮುಗ್ಧ ಮಹಾನ್ ಗಾಯಕ ಸಿದ್ಧಶೆಟ್ಟರನ್ನು ಲೇಖಕರು ಅಕ್ಷರ ರೂಪದಲ್ಲಿ ಉಳಿಸಿ ಉಪಕಾರ ಮಾಡಿದ್ದಾರೆ. ಸಿದ್ಧಶೆಟ್ಟರು ಮತ್ತು ಲೇಖಕರ ನಡುವಿನ ಭಾವಬಂಧನ ರಕ್ತಸಂಬಂಧವನ್ನೂ ಮೀರಿದ್ದು. ಅವರೊಂದಿಗೆ ಒಡನಾಡಿದ, ಕಳೆದ ದಿನಗಳನ್ನು ಅವರ ಮೇಲಿದ್ದ ಅಭಿಮಾನ ಪ್ರೀತಿಯನ್ನು ಈ ಕೃತಿಯ ಪ್ರತಿ ಅಕ್ಷರವು ಸಾರುತ್ತದೆ. ಜನರ ಬಾಯಿಂದ ಬಾಯಿಗೆ ಹರಿದು ಬಂದ ಜ್ಞಾನಗಂಗೆಯನ್ನು ಸಂಗ್ರಹಿಸುವುದರ ಜೊತೆಗೆ ಜನಪದ ಕಲಾವಿದರನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಒದಗಿಸಿ ಕೊಟ್ಟವರಲ್ಲಿ ಪಿ.ಕೆ.ಆರ್. ಸಹ ಒಬ್ಬರು. ಸಿದ್ಧಶೆಟ್ಟರಂತಹ ಇನ್ನೂ ಅನೇಕಾನೇಕ ಪ್ರತಿಭೆಗಳನ್ನು ಗುರುತಿಸಿ ಬೆಳಕಿಗೆ ತರಬೇಕಾದ ಜವಾಬ್ದಾರಿ ಇದೆ ಎಂಬುದನ್ನು ಈ ಕೃತಿ ಸೂಚಿಸುತ್ತದೆ. ಈ ಪುಸ್ತಕದ ಕೊನೆಯಲ್ಲಿ ಸಿದ್ಧಶೆಟ್ಟರು ಹಾಡಿದ ಜನಪದ ಮಹಾಭಾರತದ ಕೆಲವು ಸಾಲುಗಳು ಆಕರ್ಷಣೆಯನ್ನು ಇನ್ನಷ್ಟು ಹೆಚ್ಚಿಸಿವೆ.

ಡಾ. ಪಿ.ಕೆ. ರಾಜಶೇಖರ, 'ಮಿಸ್ಟರ್ ಫೋಕ್‌ಲೋರ್'

ಮಾನವನ ಹುಟ್ಟಿನೊಂದಿಗೇ ಜನಪದ ಸಾಹಿತ್ಯ ಹುಟ್ಟಿತು ಎಂಬುದು ಹಲವು ವಿದ್ವಾಂಸರ ಅಭಿಪ್ರಾಯ ಮತ್ತು ನಂಬಿಕೆ. ಹಳ್ಳಿ ಬದುಕಿನ ನಿತ್ಯದ ಅನುಭವಗಳು ಸಹಜ ಸಾಹಿತ್ಯವಾಗಿ ಹರಿದು ಬಂದವು. ಅವು ವ್ಯಕ್ತಿಯ ಕೃತಿಯಾಗದೆ ಸಮಷ್ಟಿ ಮನಸ್ಸುಗಳ ಪ್ರತಿಬಿಂಬಗಳಾದವು. ಹಾಗೆಯೇ ಬಾಯಿಂದ ಬಾಯಿಗೆ (ಮೌಖಿಕವಾಗಿ) ಹರಿದು ಬಂದವು. ಅವು ಗ್ರಂಥಸ್ಥವಾಗಲಿಲ್ಲ, ಜನರ ಅಂತಃಸತ್ವಗಳಾದವು. ಇದನ್ನೇ ಈಗ 'ಜನಪದ ಸಾಹಿತ್ಯ' ಎಂದು ಶ್ರೀಮಂತ ಗೊಳಿಸಲಾಯಿತು. ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೇಷ್ಠ ಲೇಖಕರಲ್ಲಿ ಅಗ್ರಪಂಕ್ತಿಯಲ್ಲಿರುವವರು ಡಾ.ಪಿ.ಕೆ. ರಾಜಶೇಖರ್ ಎಂದು ಪ್ರೊ. ಕೃಷ್ಣಮೂರ್ತಿಯವರು ಐವತ್ತೆರಡು ಪುಟಗಳ ಈ 'ಡಾ. ಪಿ.ಕೆ. ರಾಜಶೇಖರ, ಮಿಸ್ಟರ್ ಫೋಕ್ ಲೋರ್' ಕೃತಿಯಲ್ಲಿ ಹೇಳಿ ಅವರ ಜಾನಪದ ಕ್ಷೇತ್ರದಲ್ಲಿನ ಸಾಧನೆಗಳ, ಮಹತ್ಕಾರ್ಯಗಳ ಪಟ್ಟಿಯನ್ನೇ ನೀಡಿ ಅಚ್ಚರಿಗೊಳಿಸಿದ್ದಾರೆ.

ಪುಸ್ತಕದಲ್ಲಿ ಮೊದಲಿಗೆ ಅವರ ಬಾಲ್ಯ ವಿದ್ಯಾಭ್ಯಾಸದ ಕುರಿತಾಗಿ ಮಾಹಿತಿ ಇದೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ಶ್ರೀ ಪಿ.ಡಿ. ಕೆಂಪೇಗೌಡ ಮತ್ತು ಶ್ರೀಮತಿ ಪುಟ್ಟಮ್ಮ ಇವರ ಮಾತಾಪಿತೃಗಳು. 13/10/1946ರಲ್ಲಿ ಜನಿಸಿದ ಇವರಿಗೆ ತಾಯಿತಂದೆಯೇ ಮೊದಲ ಜಾನಪದ ಗುರುಗಳು. ಹುಟ್ಟೂರಿನಲ್ಲಿಯೇ ಓದಿ ಉನ್ನತ ಶಿಕ್ಷಣವನ್ನು ಮೈಸೂರಿನಲ್ಲಿ ಅವರ ಭಾವ ಪ್ರೊ. ಕೆ.ಟಿ. ಶಿವರುದ್ರಪ್ಪನವರ ನೆರವಿನಿಂದ ಮುಂದುವರೆಸಿದರು. ಡಾ. ಪಿ.ಕೆ.ಆರ್. ಅವರು ಜಾನಪದವನ್ನು ಕೇವಲ ಓದಿಗಾಗಿ ಮೀಸಲಿಡದೆ ವಿದ್ಯಾರ್ಥಿ ದೆಸೆಯಲ್ಲಿಯೇ ಜಾನಪದ ಸಾಗರದಲ್ಲಿ ಈಜಲು ಹೊರಟು ದಡ ಸೇರಿದವರು. ಜನಪದ ಕಾವ್ಯ ಮಹಾಕಾವ್ಯಗಳ ಸಂಶೋಧನೆಯಲ್ಲಿ ತೊಡಗಿ 'ಬೆಟ್ಟದ ಚಾಮುಂಡಿ' ಮತ್ತು 'ಕನ್ನಡ ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ' ಪ್ರಕಟಿಸಿ ಜಾನಪದ ರಂಗದಲ್ಲಿ ಶೋಭಾಯಮಾನರಾದರು. ವಿದ್ಯಾರ್ಥಿ ಜೀವನದ ಈ ಸಾಧನೆ ವಿಶ್ವದಂಗಳದಲ್ಲಿ ಕನ್ನಡ ಜಾನಪದ ಜ್ಯೋತಿಯನ್ನು ಬೆಳಗಿಸಿದ ವರ್ಣನೆಯನ್ನು ಓದಲು ಹೆಮ್ಮೆ ಎನಿಸುತ್ತದೆ. ಜನಪದ ಕಾವ್ಯ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆಗಳ ಫಲವಾಗಿ ಜನಪದ ವೀರಕಾವ್ಯ, ಪಿರಿಯಾಪಟ್ಟಣದ ಕಾಳಗ, ಜನಪದ ರಾಮಾಯಣ, ಮಾಗಡಿ ಕೆಂಪೇಗೌಡ, ಜನಪದ ಬಸವ ಪುರಾಣ, ಕರಪಾಲ ಬಸವಪುರಾಣ, ಜನಪದ ಮಹಾಭಾರತ, ಪಾರ್ಥನ ಜೋಗಿ ಹಾಡು, ಮುಂತಾದ ಜನಪದ ಕಾವ್ಯಗಳು ಜಾನಪದ ಜಗತ್ತಿನಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿದವು ಎಂದು ಲೇಖಕರು ಬಣ್ಣಿಸಿದ್ದಾರೆ. ಈ ಕೃತಿಯಲ್ಲಿ ಮೇಲಿನ ಎಲ್ಲ ಕಾವ್ಯಗಳ ಸತ್ವ ಮತ್ತು ಶಕ್ತಿಯನ್ನು ಲೇಖಕರು ನಿರೂಪಿಸಿದ್ದಾರೆ. ಹಾಗೆಯೇ ಜನಪದ ವಿಜ್ಞಾನದಲ್ಲಿ ಇವರು ಮಾಡಿದ ಚಮತ್ಕಾರ ಗಣಿತದ ಕೃಷಿ ಜಾನಪದಕ್ಕೆ ಹೊಸತನ ನೀಡಿದೆ ಎಂದು ಲೇಖಕರು ಅವರು ಪ್ರಕಟಿಸಿದ ಕೃತಿಗಳ

ಸಂಕ್ಷಿಪ್ತ ಪರಿಚಯವನ್ನು ಸಹ ನೀಡಿದ್ದಾರೆ. ಜಾನಪದ ಕಥೆ ಮತ್ತು ಗಾದೆಗಳ ಸಂಗ್ರಹದಲ್ಲೂ ಹಿಂದೆ ಬಿದ್ದಿಲ್ಲ ಎಂಬುದು ಗಮನಾರ್ಹ. ಇವರ 'ಜನಪದ ಜೋಕುಗಳು' ಜನಪದ ನಗೆಹನಿಗಳ ಮೊತ್ತಮೊದಲ ಸಂಕಲನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸ್ವತಃ ಒಳ್ಳೆಯ ಜನಪದ ಗಾಯಕರಾಗಿರುವ ಇವರು ವಿವಿಧ ಸಂಪ್ರದಾಯದ ಎಲ್ಲ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದರ ಜೊತೆಗೆ ವಿವಿಧ ವಾದ್ಯಗಳ ಪರಿಚಯವನ್ನೂ ಬಲ್ಲವರು ಎಂದು ಅವರ ಬಹುಮುಖ ಪ್ರತಿಭೆಯನ್ನು ಲೇಖಕರು ಪರಿಚಯಿಸಿದ್ದಾರೆ. ಇವರೆಲ್ಲ ಕೃತಿಗಳಿಗೂ ಜಾನಪದ ಶಬ್ದಕೋಶ ಕೊಟ್ಟಿರುವುದು ಅತ್ಯಂತ ವಿಶೇಷವಾಗಿದೆ. ಮಕ್ಕಳಿಗಾಗಿಯೂ ಪುಸ್ತಕ ಬರೆದಿರುವ ಇವರು ಜಾನಪದದ ಎಲ್ಲ ಕ್ಷೇತ್ರದಲ್ಲಿಯೂ ಸಾಧನೆಗೈದಿದ್ದಾರೆ. ಜನಪದರನ್ನು ಇವರು ಅಮೂಲ್ಯ ಸಂಪತ್ತಿನ ಒಡೆಯರು ಎಂದು ಭಕ್ತಿಯಿಂದ ಗೌರವದಿಂದ ಕಾಣುವುದು ಇವರ ಒಳ್ಳೆಯತನಕ್ಕೆ ಸಾಕ್ಷಿಯಾಗಿದೆ. ಇವರು ಎಪ್ಪತ್ತರ ದಶಕದಲ್ಲೇ ಕ್ಷೇತ್ರಕಾರ್ಯವನ್ನು ಆರಂಭಿಸಿ ಅಪಾರ ಅನುಭವ ಹೊಂದಿದ್ದಾರೆ. ಇವರು ಕ್ಷೇತ್ರಕಾರ್ಯದ ಅನುಭವವನ್ನು ಕೃತಿ ರೂಪದಲ್ಲಿ ಪ್ರಕಟಿಸಿದರೆ ಮುಂದೆ ಕ್ಷೇತ್ರಕಾರ್ಯದಲ್ಲಿ ತೊಡಗುವವರಿಗೆ ಅನುಕೂಲವಾಗಬಹುದು.

ಇವರ ಜಾನಪದ ಗುರು ಡಾ. ರಾಗೌ ಇವರಿಗೆ 'ಮಿಸ್ಟರ್ ಫೋಕ್ ಲೋರ್' ಎಂಬ ಬಿರುದನ್ನು ನೀಡಿದ್ದಾರೆ. ಇವರ ವೃತ್ತಿ ಜೀವನ, ಇವರು ಪಡೆದ ಪ್ರಶಸ್ತಿ ಸಂದ ಸನ್ಮಾನಗೌರವಗಳು ಎಲ್ಲದರ ವಿವರಣೆ ಈ ಕೃತಿಯಲ್ಲಿದೆ. ಈ ಕೃತಿಯನ್ನು ಓದಿದ ಪ್ರತಿಯೊಬ್ಬರಿಗೂ ಸಹ ಇವರೊಬ್ಬ ಜಾನಪದ ಹಿಮಾಲಯ ಎನಿಸುವುದು ಸುಳ್ಳಲ್ಲ.

– ಒಟ್ಟಿನಲ್ಲಿ ಈ ನಾಲ್ಕು ಪುಟ್ಟ ಕೃತಿಗಳು ಆಯಾ ವ್ಯಕ್ತಿಯ ಜೀವನ ಸಾಧನೆಗಳನ್ನು ಪರಿಚಯಿಸಿವೆ ಎನ್ನಬಹುದು.

ಪದ್ಮಾಕೃಷ್ಣಮೂರ್ತಿ

ಜಾಗತಿಕ ಜಾನಪದ ಸಂಕೀರ್ಣ

* **ಜಾನಪದ ತಜ್ಞರು :** ಸಂ. ವೃಷಭಕುಮಾರ್, ಪ್ರ–ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬, ಪುಟಗಳು .೨೪+೨೪೩, ಬೆಲೆ ರೂ. ೧೦೦/–

ವೃಷಭಕುಮಾರ್‌ರವರು 'ಜಾನಪದ ತಜ್ಞರು' ಕೃತಿಯನ್ನು ಸಂಪಾದನೆ ಮಾಡಿಕೊಟ್ಟಿರುವುದು ಹಾಗೂ ಇಂತಹ ಮೌಲ್ಯಯುತವಾದ ಕೃತಿಯನ್ನು ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಮೈಸೂರು ವಿಶ್ವವಿದ್ಯಾಲಯದಿಂದ ಹೊರ ತಂದಿರುವುದು ಜಾನಪದ ಆಸಕ್ತರಿಗೆ ತುಂಬ ಅನುಕೂಲವಾಗಿದೆ. ಸಂಪಾದಕರೇ 'ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಗೊಂಡಿರುವ ಕನ್ನಡ ವಿಶ್ವಕೋಶದ

ಹದಿನಾಲ್ಕು ಸಂಪುಟಗಳಲ್ಲಿನ ಜಾಗತಿಕ ಜಾನಪದ ಮತ್ತು ವಿದ್ವಾಂಸರ ಮಾಹಿತಿಗಳನ್ನು ನೀಡುವ ಆಯ್ದ ಲೇಖನಗಳನ್ನು ಕಲೆಹಾಕಿ ಪರಿಷ್ಕರಿಸಿ ಈ ಕೃತಿಯಲ್ಲಿ ಸಂಪಾದಿಸಿ ನೀಡಿದ್ದೇನೆ ಎಂದು ಹೇಳಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಶಿಷ್ಟ ಸಾಹಿತ್ಯವೇನೋ ಧಾರಾಳವಾಗಿ ಸೃಷ್ಟಿಯಾಗುತ್ತಿದೆ. ಎಲ್ಲಾ ಪ್ರಕಾರಗಳು ಸಮಾನವಾಗಿ ನಿರ್ಮಾಣಗೊಂಡು ಓದುವ ವರ್ಗದವರಿಂದ ಮೆಚ್ಚುಗೆಗೆ ಅರ್ಹವಾಗುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ ವಿದ್ವಾಂಸರಲ್ಲಿ ಅಲ್ಲಲ್ಲಿ ಕ್ವಚಿತ್ತಾಗಿ ಸಂಪಾದನೆ, ಸಂಶೋಧನೆಯ ಅಧ್ಯಯನಗಳು ನಡೆಯುತ್ತಿವೆ. ಆದರೆ ಜಾನಪದ ಸಾಹಿತ್ಯ ಓದುವ ವರ್ಗ ಮಾತ್ರ ಇಲ್ಲವಾಗುತ್ತಿದೆ. ಜಾಗತೀಕರಣದ ಪ್ರಭಾವದಿಂದ ಜನಪದ ಸಂಸ್ಕೃತಿಯ ಅವನತಿ ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸಬೇಕೆಂದರೆ ಕನ್ನಡ ನಾಡಿನ ಜನ ಜವಾಬ್ದಾರಿಯಿಂದ ಮುಂದಿನ ಪೀಳಿಗೆಗೆ ಸಂರಕ್ಷಿಸುವ ಜರೂರನ್ನು ಇಂದು ಹೊಂದಬೇಕಾಗಿದೆ.

ಇಂದು ಬರೀ ಕರ್ನಾಟಕ ಜನಪದ ಸಂಸ್ಕೃತಿಗಷ್ಟೇ ಮೀಸಲಾಗದೆ ದೇಶ, ವಿದೇಶಗಳ ಜನಪದ ಸಂಸ್ಕೃತಿಯನ್ನು ತಿಳಿಯುವ ಅಗತ್ಯತೆಗಳು ಒದಗಿ ಬರುತ್ತಿವೆ. ಈಗಾಗಲೇ ಈ ರೀತಿಯ ಎಷ್ಟೋ ಕೆಲಸಗಳು ನಡೆದಿವೆ ಮತ್ತು ನಡೆಯುತ್ತಿವೆ. ಅಂತಹ ಪ್ರಯತ್ನ ವೃಷಭ ಕುಮಾರ್‌ರವರ 'ಜಾನಪದ ತಜ್ಞರು' ಕೃತಿಯಲ್ಲಿ ವ್ಯಕ್ತಗೊಂಡಿದೆ.

ಇದುವರೆಗೂ ಜಾನಪದ ತತ್ವ, ಸಿದ್ಧಾಂತಗಳನ್ನು ತಿಳಿಯಲು ಮತ್ತು ಜಾಗತಿಕ ಜಾನಪದ ಸಂಸ್ಕೃತಿಯನ್ನು ಅರಿಯಲು ಒಂದು ಇಡಿಯಾದ ಕೃತಿ ಕನ್ನಡಕ್ಕೇ ಬರದೇ ಇದ್ದದ್ದು ಕೊರತೆಯೆನಿಸಿತ್ತು. ಇದೇ ವಿಶ್ವವಿದ್ಯಾನಿಲಯದಿಂದ ಬಂದ ಹದಿನಾಲ್ಕು ಸಂಪುಟಗಳಲ್ಲಿನ ಜಾಗತಿಕ ಜಾನಪದ ಸಂಸ್ಕೃತಿ, ತತ್ವ, ಸಿದ್ಧಾಂತಗಳು, ಸಿದ್ಧಾಂತಕಾರರ ಸಾಧನೆಗಳನ್ನು ಕ್ರೋಢೀಕೃತ ಕೃತಿ 'ಜಾನಪದ ತಜ್ಞರು' ಬಂದಿರುವುದರಿಂದ ಈ ಕೊರತೆ ನಿವಾರಣೆಯಾದಂತಾಗಿದೆ.

'ಜಾನಪದ ತಜ್ಞರು' ಕೃತಿಯಲ್ಲಿ ಎರಡು ಭಾಗಗಳನ್ನು ಮಾಡಲಾಗಿದೆ. ಒಂದು ಜಾಗತಿಕವಾಗಿ ಐವತ್ತು ದೇಶಗಳ ಜಾನಪದ ಅಧ್ಯಯನ ಮತ್ತು ಇದರಲ್ಲಿಯೇ ಪ್ರತಿಷ್ಠಿತ ಜಾನಪದ ಸಂಸ್ಥೆಗಳ ಅಧ್ಯಯನ. ಮತ್ತೊಂದು ಭಾಗದಲ್ಲಿ ಜಗತ್ತಿನ ಬಹುಶ್ರುತ ಜಾನಪದ ವಿದ್ವಾಂಸರ ಸಾಧನೆಗಳು, ಕೊಡುಗೆಗಳನ್ನು ವಿವರಿಸಲಾಗಿದೆ.

ಪ್ರತಿಯೊಂದು ದೇಶದ ಜಾನಪದ ಸಂಸ್ಕೃತಿಯನ್ನು ವಿವರಿಸುವ ಸಂದರ್ಭದಲ್ಲಿ ಆ ದೇಶದ ಭೌಗೋಳಿಕ ಹಿನ್ನೆಲೆ, ರಾಜಕೀಯ ಚರಿತ್ರೆ, ಧಾರ್ಮಿಕ ಪಂಥಗಳ ವಿವರಣೆ, ಸಮುದಾಯಗಳ ಪಾರಂಪರಿಕ ಸಂಸ್ಕೃತಿಯ ವೈವಿಧ್ಯ, ಪರಕೀಯರ ದಾಳಿಯಿಂದ

ಸಂಸ್ಕೃತೀಕರಣ, ಪರಂಪರೆಯಲ್ಲಾದ ಜಾನಪದ ಸ್ಥಿತ್ಯಂತರಗಳ ಸೂಕ್ಷ್ಮ ಅಂಶಗಳನ್ನು ಈ ಕೃತಿಯಲ್ಲಿ ಚಿತ್ರಿಸಿರುವ ವಿದ್ವಾಂಸರ ಪ್ರಯತ್ನ ಯಶಸ್ವಿಗೊಂಡಿದೆ.

ತೀವ್ರಗತಿಯಲ್ಲಿ ನಾಶವಾಗುತ್ತಿರುವ ಜಾನಪದ ಅಂಶಗಳನ್ನು ಆಮೂಲಾಗ್ರವಾಗಿ ಸಂಗ್ರಹ, ಸಂಪಾದನೆ, ಸಂಶೋಧನೆ, ಸಂರಕ್ಷಣೆಯ ಬದ್ಧತೆಯೊಂದಿಗೆ ಸ್ಥಾಪನೆಗೊಂಡ ಜಾನಪದ ಸಂಸ್ಥೆಗಳಲ್ಲಿ ಅಪಾರವಾದ ಸೇವೆಗೈದ 'ಅಮೇರಿಕಾದ ಜಾನಪದ ಪರಿಷತ್ತು' ಅವಿಸ್ಮರಣೀಯವಾದ ಕೆಲಸ ಮಾಡಿದೆ. ಜಾನಪದ ವಿದ್ವಾಂಸರು 'ಅಮೇರಿಕನ್ ಫೋಕ್‌ಲೋರ್' ಪತ್ರಿಕೆಯ 'ಇಲಿನಾಯ್ಸ್' ವಿಶ್ವವಿದ್ಯಾಲಯದಿಂದ ೧೦೦ಕ್ಕೂ ಹೆಚ್ಚು ಸಂಚಿಕೆಗಳನ್ನು ಹೊರ ತರುವುದರೊಂದಿಗೆ ಜಾಗತಿಕ ಜಾನಪದ ಅಧ್ಯಯನಕ್ಕೆ ಬುನಾದಿ ಹಾಕಿದರು. ಇದೇ ರೀತಿಯ ಅಧ್ಯಯನದ ಜವಾಬ್ದಾರಿಯ ಸಂಸ್ಥೆಗಳಲ್ಲಿ 'ನಾರ್ಡಿಕ್ (ಫಿನ್ಲೆಂಡ್, ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಐಸ್ಲೆಂಡ್) ಇನ್‌ಸ್ಟಿಟ್ಯೂಟ್ ಆಫ್ ಫೋಕ್‌ಲೋರ್' ಒಂದಾಗಿದೆ. ಸ್ಥಳೀಯ ಜ್ಞಾನ ಪರಂಪರೆಗೆ ಹೆಚ್ಚಿನ ಮಹತ್ವ ಕೊಟ್ಟು, ಸಂರಕ್ಷಿಸಿಕೊಳ್ಳುವ ನಿಟ್ಟಿನಿಂದ ಜಾನಪದ ಸಂಗ್ರಹ ಮತ್ತು ಅಧ್ಯಯನಗಳು ವಾರ್ಷಿಕ ಸಮ್ಮೇಳನ, ಸಮಾವೇಶ, ಕಮ್ಮಟ, ವಿಚಾರ ಸಂಕಿರಣಗಳ ಮುಖಾಂತರ ಮೌಲಿಕ ಕೃತಿಗಳನ್ನು ಹೊರತರುವ ಜವಾಬ್ದಾರಿ ಹೊತ್ತಿರುವಂತದ್ದು.

ಜಾನಪದ ಅಧ್ಯಯನದಲ್ಲಿ ಅಂತರಾಷ್ಟ್ರೀಯ ಸಂಬಂಧಗಳನ್ನು ಹೆಚ್ಚುಗೊಳಿಸುವ ಈ ಕಾರ್ಯ ಪ್ರಗತಿಯಲ್ಲಿರುವುದು ಮತ್ತು ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾದ ಯುನೆಸ್ಕೊ ಜಾನಪದ ಸಂರಕ್ಷಣೆಗಾಗಿ ಸದಸ್ಯ ರಾಷ್ಟ್ರಗಳ ಸಲಹೆ ಮೇರೆಗೆ 'ರೆಕಮಂಡೇಶನ್ ಫಾರ್ ಸೇಫ್‌ಗಾರ್ಡಿಂಗ್ ಆಫ್ ಫೋಕ್‌ಲೋರ್ ಅಂಡ್ ಟ್ರೆಡಿಷನಲ್ ಕಲ್ಚರ್' ಮುಖಾಂತರ ಜಗತ್ತಿನ ವಿವಿಧ ದೇಶಗಳಲ್ಲಿ ಜನಪದ ಸಂಸ್ಕೃತಿ ಉಳಿವಿಗಾಗಿ ಧನ ಸಹಾಯ ನೀಡುತ್ತಾ ಯುನೆಸ್ಕೋ ಸದಸ್ಯ ರಾಷ್ಟ್ರಗಳಿಗೆ ಮಾಡಿದ ಹಲವು ಶಿಫಾರಸ್ಸುಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ವೃಷಭಕುಮಾರ್‌ರವರು ಸಂಪಾದಿಸಿರುವ ಈ ಕೃತಿಯಲ್ಲಿ ಇಪ್ಪತ್ತೆಂಟು ಜಾನಪದ ವಿದ್ವಾಂಸರ ಸಹಕಾರದೊಂದಿಗೆ ಜಾಗತಿಕ ಐವತ್ತು ರಾಷ್ಟ್ರಗಳ ಜಾನಪದದ ಅಧ್ಯಯನವನ್ನು ಸ್ಥೂಲವಾಗಿ ವಿವರಿಸುವ ಮತ್ತು ಆ ಜಾನಪದ ಪರಂಪರೆಯಲ್ಲಿರುವ ಉತ್ಕೃಷ್ಟ ಜಾನಪದ ಸಾಂಸ್ಕೃತಿಕ ಅಂಶಗಳನ್ನು ಪರಿಚಯಾತ್ಮಕವಾಗಿ ತಿಳಿಸುವ ಉದ್ದೇಶವನ್ನೊಳಗೊಂಡಿದ್ದಾರೆನ್ನಬಹುದು. ಇದುವರೆವಿಗೂ ಪ್ರತಿದೇಶವೂ ಜಾನಪದ ಅಧ್ಯಯನಕ್ಕಾಗಿ ಏನೆಲ್ಲಾ ಪ್ರಯತ್ನಮಾಡಿದೆ ಮತ್ತು ಯಾವ ರೀತಿ ಸಂರಕ್ಷಣೆಗೆ ಒತ್ತು ನೀಡಿದೆ ಎಂಬುದನ್ನು ವಿವರಿಸಲಾಗಿದೆ. ದೇಶಗಳ ವೈಶಿಷ್ಟ್ಯವೆನಿಸುವ ಕಥೆಗಳು, ಗೀತೆಗಳು, ನಂಬಿಕೆಗಳು, ಗಾದೆಗಳು, ಸಂಗೀತ-ನೃತ್ಯ, ಸಂಪ್ರದಾಯಗಳು, ಹಬ್ಬ ಹರಿದಿನಗಳು,

ನಾಟಕ, ನೃತ್ಯ ರೂಪಗಳು, ವಾದ್ಯಗಳು, ಆಟಗಳು ಹೀಗೆ ಮಾನವ ಬದುಕಿನಲ್ಲಿ ಮುಖ್ಯವೆನಿಸುವ ಜನಪದ ಸಂಸ್ಕೃತಿಯ ವಿವರಣೆಗಳನ್ನು ಒಂದೊಂದಾಗಿ ವಿವರಿಸುವ ಪ್ರಯತ್ನ ಈ ಕೃತಿಯದಾಗಿದೆ.

ಪ್ರತಿಯೊಂದು ದೇಶದ ವಿಶಿಷ್ಟವೆನಿಸುವ ಜನಪದೀಯ ಅಂಶಗಳು ರಚನಾತ್ಮಕವಾಗಿ ಕೃತಿಯಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಅಮೇರಿಕಾದಲ್ಲಿ ಹಲೋವಿನ್, ಥ್ಯಾಂಕ್ಸ್ ಗೀವಿಂಗ್ ಹಬ್ಬಗಳು ಮುಖ್ಯವಾದರೆ, ಅರ್ಜೆಂಟೈನಾದಲ್ಲಿ ಟ್ಯಾಂಗೊ, ಎಲ್ ಬಾಲ್ಸನ್ ಹಬ್ಬಗಳು ಪ್ರಾಮುಖ್ಯ ಪಡೆದಿವೆ. ಆಫ್ರಿಕಾದಲ್ಲಿನ ಜನಪದ ಕತೆಗಳು ಅದರಲ್ಲೂ ಪ್ರಾಣಿಕತೆಗಳು ಪ್ರಧಾನವಾಗಿವೆ. ಕತೆಗಳು ಪ್ರಾಣಿಗಳ ಗುಣ ಹೇಳುವುದಾಗಿವೆ. ಆಸ್ಟ್ರೇಲಿಯಾದ ಬುಡಕಟ್ಟುಗಳಲ್ಲಿ ನಂಬಿಕೆಯಿರುವ ಮಾಟ–ಮಂತ್ರಗಳ ಬಗೆಗೆ ಹೇಳುತ್ತಾ ಇಂಡೋನೇಷ್ಯಾದಲ್ಲಿನ ಹಬ್ಬಗಳಲ್ಲಿ 'ಓಡಾಲನ್' ನೊಂದಿಗೆ ಒಂಭತ್ತು ಹಬ್ಬಗಳ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಇಟಾಲಿಯನ್ ಜಾನಪದವು ಶಾಸ್ತ್ರೀಯವಾಗಿ ಅಧ್ಯಯನವಾಗಿರುವ ವಿವರಣೆ, ಪ್ರಾಚೀನ ಸಂಸ್ಕೃತಿಯಿರುವ ಈಜಿಪ್ಷಿಯನ್ ಶಿಲ್ಪಕಲೆ, ಹಬ್ಬಗಳ ಬಗೆಗೆ, 'ಅಮೇರಿಕನ್ ಇಂಡಿಯನ್' ಜಾನಪದದಲ್ಲಿ ಭಾರತದ ಜಾನಪದ ಅಂಶಗಳ ಸಾಮ್ಯವಿರುವುದನ್ನು ಸೂಕ್ಷ್ಮವಾಗಿ ಗುರುತಿಸಲಾಗಿದೆ. 'ಎಸ್ಟೋನಿಯನ್' ಜಾನಪದ ವಿಶಿಷ್ಟ ಸಂಸ್ಕೃತಿಯೆಂದರೆ, 'ರೆಗಿವಾರ್' (ಪ್ರಾಸಬದ್ಧ ಹಾಡು)ನ ವಿವರಣೆ, 'ಕೆಲ್ಟಿಕ್' ಜನರಲ್ಲಿರುವ ಐರಿಷ್ ಜನಪದ ಕಥೆಗಳ ಸಮೃದ್ಧಿ, ಸಂಮ್ಮಿಶ್ರ ಜನಾಂಗೀಯ ಹಿನ್ನೆಲೆಯುಳ್ಳ ಗಾಯನದ ಜಾನಪದ ಹಬ್ಬಗಳು, ಆಚರಣೆಗಳು ವಿಶಿಷ್ಟವಾಗಿದೆ. ಚೀನಾದ ಜಾನಪದ ಪರಂಪರೆಯಲ್ಲಿ ಪಂಚಾಂಗಕ್ಕೆ ತನ್ನದೇ ಆದ ಮಹತ್ವವಿದೆ. ಜಪಾನ್ ಜಾನಪದವು ಚೀನಾ, ಭಾರತದ ಪ್ರಭಾವಕ್ಕೆ ಸಿಲುಕಿದ್ದರೂ ತನ್ನ ಸ್ವಂತಿಕೆಯ ಹಬ್ಬ, ಗಾದೆ, ನಂಬಿಕೆ, ಸಂಗೀತ, ವಾದ್ಯ ನೃತ್ಯಗಳಲ್ಲಿ ಶ್ರೇಷ್ಠ ಪರಂಪರೆಯುಳಿಸಿ ಕೊಂಡಿದೆ.

ನೂರೈವತ್ತು ವರ್ಷಗಳಿಂದ ಫಿನ್ಲೆಂಡಿನಲ್ಲಿ ಜಾನಪದ ಅಧ್ಯಯನ ಮಾಡಿಕೊಂಡು ಬದಲಾಗುತ್ತಿರುವ ವಿಷಯ, ಹಾಗೆಯೇ ಜಾಗತಿಕ ಮಹಾಕಾವ್ಯ 'ಕಲೇವಾಲ'ದ ಸಂಪಾದಕ ಲೆನ್ರೂಟ್ ಎಲಿಯಾಸ್‌ನ ಸಾಧನೆ, ಜನಪದ ವಿಜ್ಞಾನ ಕ್ಷೇತ್ರದಲ್ಲಿ ಪ್ರಕಾರಗಳ ಅಧ್ಯಯನ, ಸಂಶೋಧನೆ, ಸಂರಕ್ಷಣೆಗಳ ವಿವರಣೆ, ಹೆಲ್ಸಿಂಕಿ ವಿಶ್ವವಿದ್ಯಾಲಯದ ವಿವರಣೆ ಮತ್ತು ರಷ್ಯಾದ 'ರಷ್ಯನ್' ಜಿಯಾಗ್ರಫಿಕ್ ಸೊಸೈಟಿ ಸೆಂಟ್ಸ್ ಪೀಟರ್ಸ್‌ಬರ್ಗ್ ಜೀವಾಯ್ ಸ್ಟರೀನಾ ಪತ್ರಿಕೆಯು ಜನಪದ ನಂಬಿಕೆಗಳು, ಪುರಾಣ, ಜನಪದ ಸಂಸ್ಕೃತಿಗಳು, ಮಕ್ಕಳ ಜನಪದ ಸಾಹಿತ್ಯ, ಸಮಕಾಲೀನ ಐತಿಹ್ಯಗಳನ್ನೂ ವೈಜ್ಞಾನಿಕ ಸಂಶೋಧನೆ ಇಲ್ಲಿ ಅಚ್ಚುಕಟ್ಟಾಗಿ ನಡೆದಿರುವುದನ್ನೂ ತಿಳಿಸಲಾಗಿದೆ. ಇಷ್ಟೇ ಅಲ್ಲದೆ ಅಲ್ಲಿನ ಜನಜೀವನದ ವಿವರಣೆಗಳನ್ನು ಕೂಲಂಕಷವಾಗಿ ನೀಡಿದ್ದಾರೆ.

ಹೀಗೆ, ಆಸ್ಟ್ರಿಯ, ಇಥಿಯೋಪಿಯಾ, ಈಜಿಪ್ಟ್, ಉತ್ತರ ಅಮೇರಿಕ, ಕೊರಿಯ, ಗ್ರೀಕ್, ಗ್ರೇಟ್‌ಬ್ರಿಟನ್, ಘಾನ, ಜೆಕೊಸ್ಲೊವಾಕಿಯ, ಜರ್ಮನ್, ಟಿಬೆಟಿಯನ್, ಡೆನ್ಮಾರ್ಕ್, ತುರ್ಕಿ, ಥೈಲ್ಯಾಂಡ್, ದಕ್ಷಿಣ ಅಮೇರಿಕ, ನಾರ್ವೆ, ನೀಗ್ರೋ, ನೇಪಾಳ, ಪಾಲಿನೇಷ್ಯ, ಪೋರ್ಚ್‌ಗಲ್, ಪೋಲೆಂಡ್, ಫ್ರೆಂಚ್, ಬಲ್ಗೇರಿಯಾ, ಬಾಂಗ್ಲಾ, ಬಾಸ್ಕ್, ಮಂಗೋಲಿಯ, ಮಲೇಷ್ಯ, ಮಯನ್ಮಾರ್, ಮೆಕ್ಸಿಕೋ, ಯುಗೋಸ್ಲೋವಿಯ, ಲಾತ್ವಿಯನ್, ಶ್ರೀಲಂಕಾ, ಸೈಬೀರಿಯ, ಸೈಪ್ರಸ್, ಸ್ವಿಟ್ಸರ್ಲೆಂಡ್, ಸ್ವೀಡನ್ ದೇಶಗಳ ಅತ್ಯದ್ಭುತ ಜಾನಪದ ವಿಚಾರಧಾರೆಗಳನ್ನು ಕ್ರಮವಾಗಿ ಭೌಗೋಳಿಕ ಚಿತ್ರಣದೊಂದಿಗೆ ವೈವಿಧ್ಯಮಯವಾದ ಮಾನವ ಸಂಸ್ಕೃತಿಗಳ ಅನಾವರಣ ಮಾಡಲಾಗಿದೆ.

ಈ ಕೃತಿಯ ಇನ್ನೊಂದು ಭಾಗದಲ್ಲಿ ಜಾಗತಿಕ ಜಾನಪದ ವಿದ್ವಾಂಸರ ಕಾರ್ಯಸಾಧನೆಗಳನ್ನು ಕೂಲಂಕಷವಾಗಿ ನಿರ್ವಚಿಸಲಾಗಿದೆ. ಜಗತ್ತಿನಾದ್ಯಂತ ಹಲವು ವಿದ್ವಾಂಸರು ತತ್ವಸಿದ್ಧಾಂತಗಳ, ಜನಪದ ಪ್ರಕಾರಗಳ, ಜನಜೀವನದ ಬಗೆಗೆ ಅಧ್ಯಯನಗಳನ್ನು ಮಾಡಿರುವುದನ್ನು ಇಲ್ಲಿ ತಿಳಿಸಲಾಗಿದೆ.

ಜಾನಪದ, ಜನಪದದ ನಿಷ್ಪತ್ತಿಗಳ ಬಗೆಗೆ ವಿವರಣೆ ನೀಡಿರುವವರ, ಜನಪದ ಪ್ರಕಾರಗಳ ವರ್ಗೀಕರಣ, ನಂತರ ವೈಜ್ಞಾನಿಕ, ಶಾಸ್ತ್ರೀಯ ವರ್ಗೀಕರಣಗಳ ವಿವರಣೆ, ಹಾಗೆಯೇ ಜಾನಪದ ಅಧ್ಯಯನದ ಮೌಲ್ಯಯುತವಾದ ಕೃತಿಗಳ ವಿವರಣೆಗಳನ್ನು ಸ್ಥೂಲವಾಗಿ ಚಿತ್ರಿಸಲಾಗಿದೆ. ಅಂತಹ ಕೃತಿಕಾರರಲ್ಲಿ ಅಲೆಕ್ಸಾಂಡರ್ ಎಚ್.ಕ್ರಾಪೆ (ದಿ ಸೈನ್ಸ್ ಆಫ್ ಫೋಕ್‌ಲೋರ್), ಆಲ್ಬರ್ಟ್ ಲಾರ್ಡ್ (ಸಿಂಗರ್ ಆಫ್ ಟೇಲ್ಸ್), ಫ್ರೇಜರ್ ಜೇಮ್ಸ್ ಜಾರ್ಜ್ (ದಿ ಗೋಲ್ಡನ್ ಬೊ), ಜಗತ್ತಿನ ಶ್ರೇಷ್ಠ ಜನಪದ ಮಹಾಕಾವ್ಯ ಸಂಗ್ರಹಿಸಿದ ಲೆನ್ರೂಟ್ ಎಲಿಯಾಸ್ (ಕಲೇವಾಲ), ತುಳು ಅಧ್ಯಯನವನ್ನು ಅಂತಾರಾಷ್ಟ್ರೀಯ ಜಾನಪದದ ತೆಕ್ಕೆಗೆ ಒಗ್ಗಿಸಿದ ಜೆ.ಕ್ಲಾಸ್ ಪೀಟರ್ (ದಕ್ಷಿಣ ಕನ್ನಡ ಜಿಲ್ಲೆಯ ಬಂಟರ ಬಂಧುತ್ವ ವ್ಯವಸ್ಥೆ), ಬಿ. ಪ್ರಾನ್ಸಿಸ್ ಗಮರಿ (ದಿ ಪಾಪ್ಯೂಲರ್ ಬ್ಯಾಡಲ್) ಮೊದಲಾದ ಲೇಖಕರ ಕೃತಿಗಳ ವಿವರಣೆ ನೀಡಲಾಗಿದೆ.

ಇಲ್ಲಿನ ಜಾನಪದ ವಿದ್ವಾಂಸರೆಲ್ಲರೂ ಒಂದಲ್ಲ ಒಂದು ಕಾರಣಕ್ಕೆ ಪ್ರಾಮುಖ್ಯ ಪಡೆದವರಾಗಿದ್ದಾರೆ. ಅವರಲ್ಲಿ ಆಟ್ಲಿ ಪ್ರಾನ್ಸಿಸ್ ಲೀ, ಅಬ್ರಹಾಂ ರೋಜರ್‌ಡಿ, ಅರಿಲಿಯೊ ಎಂ.ಎಸ್ಪಿನೋಸ, ಕೋಸ್ಕೆನ್, ಗೋಲ್ಡ್ ಸ್ಮೀನ್, ಕೆನ್ನೆತ್, ಗ್ರೀಮ್ ಸಹೋದರರು, ಹೆನ್ರಿ ಗ್ಲಾಸಿ, ಅಲನ್‌ಡಂಡೆಸ್, ಅಮೋಸ್ ಡಾನ್‌ಬೆನ್, ಆಲ್‌ಫ್ರೆಡ್ ನಟ್, ಫ್ರಾನ್ಸಿಸ್ ಪಾಟರ್ ಚಾರ್ಲ್ಸ್, ವಿ.ಜೆ. ಪ್ರಾಪ್, ಜಾರ್ಜ್ ಫ್ರೇಜರ್ ಜೇಮ್ಸ್, ಬಿಷಪ್ ಪರ್ಸಿ, ಹಾವಿಓ ಮರ್ತಿ, ಕ್ರಾನ್ ಯೂಲಿಯಸ್, ರಿಚರ್ಡ್ ಎಂ. ಡಾರ್ಸನ್, ಆಲ್ಬರ್ಟ್ ಲಾರ್ಡ್,

ಕ್ಲಾಡ್‌ಲೆವಿಸ್ಟ್ರಾಸ್, ಲೌರಿಹಾಂಕೊ, ಸ್ಟಿತ್‌ಥಾಮ್‌ಸನ್, ವೈ.ಎಂ. ಸೊಕೊಲೊವ್, ಎಂ. ಹಾರ್ಮನ್ ಹೀಗೆ ಎಲ್ಲಾ ವಿದ್ವಾಂಸರ ವಿವರಣೆ ನೀಡಲಾಗಿದೆ.

ಒಟ್ಟಾರೆಯಾಗಿ ಸರ್ವಗ್ರಾಹಿಯಾಗಿರುವ **'ಜಾನಪದ ತಜ್ಞರು'** ಕೃತಿ ಜಗತ್ತಿನ ಜಾನಪದದ ಸಾರವನ್ನು ಎರಡು ಭಾಗಗಳಲ್ಲಿ ಸಂಪಾದಿಸಿಕೊಟ್ಟಿರುವ ವೃಷಭ ಕುಮಾರ್‌ರವರ ಕೆಲಸ ತುಂಬ ಅಪೂರ್ವವಾದುದು, ಅನನ್ಯವಾದುದು. ಇಂತಹ ಕೆಲಸಗಳನ್ನು ಇನ್ನಷ್ಟು ಕನ್ನಡಿಗರಿಗೆ ತಲುಪಿಸುವ ಕಾರ್ಯ ಮಾಡಿದರೆ ಜಗತ್ತಿನ ಜಾನಪದ ಸಂಕೀರ್ಣದ ದಾಖಲೆಯ ಕೊರತೆ ನಿವಾರಣೆ ಮಾಡಬಹುದು.

ಕೆ.ವಿ. ಮುದ್ದುವೀರಪ್ಪ

ಯಕ್ಷಗಂಧರ್ವನ ಜೀವನ ಚಿತ್ರ

* **ಯಕ್ಷ ಗಂಧರ್ವ ಹಾರಾಡಿ ರಾಮ ಗಾಣಿಗ:** ಲೇ. ಕಂದಾವರ ರಘುರಾಮಶೆಟ್ಟಿ, ಪ್ರ ಕನ್ನಡ ಸಂಘ, ಕಾಂತಾವರ, ಪುಟಗಳು ೫೬, ಬೆಲೆ ರೂ. ೩೩/–

ಉಡುಪಿ ಜಿಲ್ಲೆಯ ಕಾಂತಾವರ ಊರಿನ ಕಾಂತಾವರ ಕನ್ನಡ ಸಂಘ ಹೊರತಂದಿರುವ ಈ ಕೃತಿ ೫೬ ಪುಟಗಳನ್ನೊಳಗೊಂಡಿದೆ. ಇತಿಹಾಸದ ಪುಟಗಳನ್ನು ತಿರುವಿದಾಗ ಆ ಕಾಲದ ಸಾಂಸ್ಕೃತಿಕ ದಾಖಲೆಗಳಾದ ರಾಮಾಯಣ ಮಹಾಭಾರತ ಮಹಾಕಾವ್ಯಗಳಲ್ಲಿ ಆ ಕಾಲದ ಜನಜೀವನದ ಪರಿಚಯವಾಗುತ್ತದೆ. ಹಾಗೆಯೇ ಅಂದು ರಂಗಕಲೆ ತುಂಬಾ ಪ್ರಸಿದ್ಧಿ ಮತ್ತು ಪ್ರಚಲಿತದಲ್ಲಿತ್ತು. ಜನಪದ ರಂಗಭೂಮಿಯ ವೇಷಗಾರರು ಪುರಾಣದ ಯಾವುದೇ ವೇಷವನ್ನು ಹಾಕಿ ಜೀವ ತುಂಬುತ್ತಿದ್ದರು. ಕರ್ನಾಟಕ ಜನಪದ ರಂಗಭೂಮಿಯಲ್ಲಿ ಯಕ್ಷಗಾನ ತುಂಬಾ ಪ್ರಸಿದ್ಧವಾದದ್ದು, ಅದರಲ್ಲೂ ಕರಾವಳಿಯ ಯಕ್ಷಗಾನವು ಆಂಗಿಕ ಅಭಿನಯ, ನಿರ್ದಿಷ್ಟ ತಾಳ, ಚಲನೆ, ಭಂಗಿ, ನೃತ್ಯವನ್ನೊಳಗೊಂಡ ಒಂದು ವ್ಯವಸ್ಥಿತ ಶಾಸ್ತ್ರ ಎಂಬಿತ್ಯಾದಿ ಅಂಶಗಳು ಈ ಕೃತಿಯಲ್ಲಿ ವಿವರಿಸಲ್ಪಟ್ಟಿದೆ.

ಜನಪದ ಕಲಾ ಪ್ರಕಾರ 'ಯಕ್ಷಗಾನ'ವನ್ನು ಉಳಿಸಿ ಬೆಳೆಸಿದವರಲ್ಲಿ ಯಕ್ಷ ಗಂಧರ್ವ ಹಾರಾಡಿ ರಾಮ ಗಾಣಿಗರು ಪ್ರಮುಖರು. ಕಲಾವಿದ ರಾಮ ಗಾಣಿಗರ ಜೀವನ ಚರಿತ್ರೆಯನ್ನೊಳಗೊಂಡ ಈ ಕೃತಿ ಮೊದಲಿಗೆ ಅವರ ಬಾಲ್ಯ ಮತ್ತು ವಿದ್ಯಾಭ್ಯಾಸದ ಕುರಿತಾಗಿ ವಿವರಣೆ ನೀಡುತ್ತದೆ. ಉಡುಪಿ ಜಿಲ್ಲೆಯ ಪುಟ್ಟಹಳ್ಳಿ ಹಾರಾಡಿಯ ಸುಬ್ಬಯ್ಯಗಾಣಿಗ ಮತ್ತು ಕೊಲ್ಲು ದಂಪತಿಗಳ ಸುಪುತ್ರರಾದ ಇವರು ಬಡತನದಲ್ಲೇ ಬಾಲ್ಯ ಕಳೆದವರು. ಆರನೆಯ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಇವರಿಗೆ ತಾಯಿಯೇ ಸರ್ವಸ್ವವಾಗಿದ್ದರು. ಇವರದ್ದೂ ಸಹ ಕಲಾವಿದರ ಕುಟುಂಬವೇ ಆಗಿತ್ತು,

ಇವರ ಕುಟುಂಬದವರೇ ಆದ ದೊಡ್ಡ ಅಣ್ಣಪ್ಪ, ಕರಿಮಂಜ ಮತ್ತು ಹಾರಾಡಿ ತಿಮ್ಮ ಎಂಬುವವರು ಪ್ರಸಿದ್ಧ ವೇಷಧಾರಿಗಳಾಗಿ ಯಕ್ಷಗಾನಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದರು. ಐಗಳ ಮಠದಲ್ಲಿ ವಿದ್ಯೆ ಕಲಿಯಲು ಬಂದ ರಾಮಗಾಣಿಗರು ಯಕ್ಷಗಾನ ಪ್ರಸಂಗಗಳನ್ನು ಅಧ್ಯಯನ ಮಾಡಿದರು. ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣ ಗ್ರಂಥಗಳನ್ನು ಬಹಳ ಶ್ರದ್ಧೆಯಿಂದ ಅಧ್ಯಯನ ಮಾಡಿದುದರ ಪ್ರಯುಕ್ತ ಮುಂದೆ ಮಹಾನ್ ಕಲಾವಿದರಾಗಿ ಬೆಳೆಯಲು ಅನುಕೂಲವಾಯಿತು. ಮಗ ಯಕ್ಷಗಾನ ಕಲಾವಿದನಾಗಬೇಕೆಂಬ ತಾಯಿಯ ಕನಸು ಆತನ ಹದಿನೈದನೇ ವಯಸ್ಸಿನಲ್ಲೇ ಈಡೇರಿತು. ೧೯೧೬ರಲ್ಲಿ ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆಕಟ್ಟಿ ಯಕ್ಷಲೋಕದೊಳಗೆ ಹಾರಾಡಿ ರಾಮರವರ ಪ್ರವೇಶವಾಯಿತು. ಇವರ ಕುಟುಂಬದ ಕುಲದೇವತೆ ಮಂದವರ್ತಿಯ ಮಹಾದೇವಿಯಾಗಿದ್ದರಿಂದ ಮಂದಾರ್ತಿ ಮೇಳಕ್ಕೆ ಸೇರಬೇಕೆಂಬ ಬಯಕೆ ಕೂಡ ದೇವಿಯ ಅನುಗ್ರಹದಿಂದ ಫಲಿಸಿತು. ಯಕ್ಷಗಾನದಲ್ಲಿ ನೃತ್ಯ (ಕುಣಿತ) ಬಹಳ ಮುಖ್ಯವಾದ ಕಾರಣ ಪಾಂಡೇಶ್ವರ ಮತ್ತು ಸುಬ್ಬಯ್ಯಣ್ಣನವರಿಂದ ನೃತ್ಯವನ್ನು ಕಲಿತು ಮೊದಲು ಪೀಠಿಕೆ, ಸ್ತ್ರೀ ವೇಷ, ಒಡ್ಡೋಲಗದ ವೇಷ ಮಾಡಿದರು, ನಂತರ ಬಾಲ ವೇಷಗಳಾದ ಪ್ರಹ್ಲಾದ, ಲವಕುಶ, ಬಾಲಗೋಪಾಲ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಪ್ರಸಿದ್ಧ ವೇಷಗಳಾದ ಗಂಧವೇಷಗಳು, ಈಶ್ವರ, ನಾರದ, ದ್ರೋಣ, ಭೀಷ್ಮ, ಬಲರಾಮ, ಭೀಮ, ಅರ್ಜುನ, ರಾಮರಾವಣ, ಹಿರಣ್ಯಕಶಿಪು, ಕರ್ಣ ಮುಂತಾದ ಪಾತ್ರಗಳಿಂದ ಕೀರ್ತಿಪ್ರಾಯರಾದ ಸಂಗತಿ ಈ ಕೃತಿಯಲ್ಲಿ ಮನಮುಟ್ಟುವಂತೆ ನಿರೂಪಿಸಲ್ಪಟ್ಟಿದೆ. ಈ ಕೃತಿಯಲ್ಲಿ ಮಾರಣಕಟ್ಟೆ ಮೇಳ, ಮಂದಾರ್ತಿಮೇಳ, ವರಂಗಮೇಳ, ಸೌಕೂರುಮೇಳ, ಅಮೃತೇಶ್ವರಿಮೇಳ ಮುಂತಾದ ಯಕ್ಷಗಾನ ಮೇಳ ಮತ್ತು ಅದರಲ್ಲಿರುವ ಕಲಾವಿದರ ಸಂಕ್ಷಿಪ್ತ ಪರಿಚಯ ಸಹ ಉಪಯುಕ್ತವಾಗಿದೆ. ಯಕ್ಷಗಾನ ಗಾರುಡಿಗ ರಾಮಗಾಣಿಗರು ಸದ್ಗುಣ ಸಂಪನ್ನರಾಗಿದ್ದರೆಂದು ಅನೇಕ ಉದಾಹರಣೆಗಳ ಮೂಲಕ ತಿಳಿಯ ಬಹುದಾಗಿದೆ. ಕಲೆಗೆ ದ್ರೋಹ ಮಾಡಬಾರದೆಂದು ಜೀವನ್ಮರಣದ ಹೋರಾಟದಲ್ಲಿದ್ದ ಮಗಳ ಭಾರವನ್ನು ದೇವಿ ಮೇಲೆ ಹಾಕಿ ಇವರು ಗೆಜ್ಜೆ ಕಟ್ಟಿ ವೇಷ ಹಾಕಿದರೆಂಬ ಘಟನೆ ಓದುವಾಗ ಕಲಾವಿದನ ಬದುಕು ಕಲೆಗೆ ಅರ್ಪಿತ ಎಂಬ ಸತ್ಯ ಓದುಗರ ಅರಿವಿಗೂ ಬರುತ್ತದೆ. ಧರ್ಮಪತ್ನಿ ರಾಧಾರೊಂದಿಗೆ ಸುಖ ದಾಂಪತ್ಯ ನಡೆಸಿ ೫೦ ವರ್ಷಗಳಿಗೂ ಹೆಚ್ಚು ಕಾಲ ಯಕ್ಷಲೋಕದಲ್ಲಿ ಸೂರ್ಯನಂತೆ ಬೆಳಗಿ ರಾಷ್ಟ್ರ ಪ್ರಶಸ್ತಿಯನ್ನೂ ಸೇರಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ ಇವರು ೧೯೬೮, ಡಿಸೆಂಬರ್ ೧೧ರಂದು ಇಹಲೋಕ ತ್ಯಜಿಸಿದರು.

ಈ ಕೃತಿಯ ಕೊನೆಯಲ್ಲಿ ಯಕ್ಷಗಂಧರ್ವ ರಾಮ ಗಾಣಿಗರ ಮೇಲೆ ಗಣ್ಯಾತಿಗಣ್ಯರು ಕೊಟ್ಟಿರುವುದನ್ನು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಕ್ರೋಡೀಕರಿಸಲಾಗಿದೆ. ಅಪ್ಪಟ

ಯಕ್ಷಗಾನ ಕಲಾವಿದರ ಜೀವನ ಚರಿತೆ ಬರೆಯುವುದರ ಮೂಲಕ ಲೇಖಕರಾದ ಕೆಂದಾವರ ರಘುರಾಮ ಶೆಟ್ಟರು ಜನಪದ ಲೋಕಕ್ಕೆ ಕೊಡುಗೆ ನೀಡಿದ್ದಾರೆನ್ನಬಹುದು.

ಪದ್ಮಾ ಕೃಷ್ಣಮೂರ್ತಿ

ಕಾರಂತರ ಪರಿಚಯ

*** ಕಡಲ ತಡಿಯ ಭಾರ್ಗವ ಕೋಟ ಶಿವರಾಮ ಕಾರಂತ–** ಲೇ. ಕೋಣಿ ಶಿವಾನಂದ ಕಾರಂತ, ಪ್ರ. ಕನ್ನಡ ಸಂಘ, ಕಾಂತಾವರ, ಕಾರ್ಕಳ ತಾ॥, ಉಡುಪಿ ಜಿಲ್ಲೆ; ಪು. ೫೬; ಬೆಲೆ ರೂ. ೩೩/–

'ನಾಡಿಗೆ ನಮಸ್ಕಾರ' ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆಯಡಿಯಲ್ಲಿ ಕಾಂತಾವರ ಕನ್ನಡ ಸಂಘ ಹೊರತಂದಿರುವ ಈ ಕೃತಿಯ ಲೇಖಕರಾದ ಕೋಣಿ ಶಿವಾನಂದ ಕಾರಂತರು ಪ್ರಾರಂಭದಲ್ಲೇ 'ಕಡಲ ತಡಿಯ ಭಾರ್ಗವ ಕೋಟ ಶಿವರಾಮ ಕಾರಂತರಂತಹ ಮಹಾನ್ ಚೇತನದ ಬಗ್ಗೆ ಬರೆಯಲು ಎಲ್ಲಿಂದ ಶುರುಮಾಡಲಿ ಎಲ್ಲಿಗೆ ಮುಗಿಸಲಿ' ಎಂದಿದ್ದಾರೆ. ಇದರರ್ಥ– ಭೂಮಿ ನಡೆದಷ್ಟೂ ಇದೆ. ಸಮುದ್ರ ಈಜಿದಷ್ಟೂ ಇದೆ, ಆಕಾಶ ನೋಡಿದಷ್ಟೂ ಇದೆ, ಅಂತೆಯೇ ಕಾರಂತರ ಕುರಿತಾಗಿ ಬರೆದಷ್ಟೂ ಇದೆ. ಅವರ ಊರು ಮತ್ತು ಕುಟುಂಬದ ಬಗ್ಗೆ ಬರೆಯುತ್ತಾ ಅನೇಕ ಮೇಧಾವಿಗಳಿಗೆ, ಸಂಶೋಧಕರಿಗೆ, ಸಾಹಿತಿಗಳಿಗೆ, ಕ್ರೀಡಾ ಪಟುಗಳಿಗೆ ಜನ್ಮಕೊಟ್ಟ ನೆಲ ಎಂದು ಕೋಟವನ್ನು ಬಣ್ಣಿಸುತ್ತಾರೆ. ಯಕ್ಷಗಾನ ಕಲೆಗೆ ಹೆಸರಾದ ಈ ಊರು ಜನಪದೀಯ ಕಲಾವಿದರ ತವರೂರು ಎನ್ನಬಹುದು. ಅತ್ಯಂತ ಮಡಿವಂತ ಮನೆತನದಲ್ಲಿ ಜನಿಸಿದ ಕಾರಂತರು ಅಂಧಶ್ರದ್ಧೆ, ಕೆಟ್ಟ ಸಂಪ್ರದಾಯಗಳನ್ನು ಧಿಕ್ಕರಿಸಿದವರು. ಮೇಲ್‌ಗಂಗೊಳ್ಳಿಯ ಗಣೇಶ ಎಂಬ ದಲಿತ ಪ್ರತಿಭೆಯನ್ನು ಗುರುತಿಸಿ ಮನೆಗೆ ಕರೆದುಕೊಂಡು ಹೋಗಿ ಶಾಲು ಹೊದೆಸಿ ಗೌರವಿಸಿದ್ದನ್ನು ಓದಿದಾಗ ಅವರ ಮಾನವೀಯ ಗುಣ ಎದ್ದು ಕಾಣುತ್ತದೆ. ಹೊಸತನವನ್ನು ಅರಸಿ ಅರಗಿಸಿಕೊಂಡವರು ಕಾರಂತರು ಎಂಬುದನ್ನು ಲೇಖಕರು ಅನೇಕ ಉದಾಹರಣೆಗಳ ಮೂಲಕ ಪ್ರಸ್ತುತಪಡಿಸುತ್ತಾರೆ.

ಭಾರತೀಯ ರಂಗಭೂಮಿಗೆ ತಾತ್ವಿಕ ತಳಹದಿ ಸಿಕ್ಕಿದ್ದು ಭರತನ ನಾಟ್ಯಶಾಸ್ತ್ರದಿಂದಾದರೆ ಯಕ್ಷಗಾನಕ್ಕೆ ಹೊಸ ಆಯಾಮ ಸಿಕ್ಕಿದ್ದು ಕಾರಂತರಿಂದ. ಕರ್ನಾಟಕದ ಜನಪದ ರಂಗಭೂಮಿಯ ಯಕ್ಷಗಾನ ಕಲೆಗೆ ಕಾರಂತರು ನೀಡಿದ ಕೊಡುಗೆ ನಾಡಿಗೇ ದೊಡ್ಡ ಹೆಮ್ಮೆ. ಯಕ್ಷಗಾನವನ್ನು ಕಾರಂತರು ಆಳವಾಗಿ ಅಧ್ಯಯನ ಮಾಡಿದವರು. ಯಕ್ಷಗಾನಕ್ಕೆ ಹೊಸ ತಿರುವನ್ನು ಕೊಟ್ಟ ಕಾರಂತರು ಮೂಡಲಪಾಯ ಮತ್ತು ಪಡುವಲಪಾಯವೆಂಬ ವಿಭಾಗವನ್ನು ನಿರ್ದಿಷ್ಟವಾಗಿ ಅರ್ಥೈಸಿದ್ದಾರೆ. ಕಾರಂತರು ವಿದೇಶಿ ಮಹಿಳೆ ಮಾರ್ತಾ ಎಂಬುವವರಿಗೆ ಯಕ್ಷಗಾನದ ಕುರಿತಾಗಿ ಪಿಹೆಚ್.ಡಿ.

ಪ್ರಬಂಧ ಮಂಡಿಸಲು ಮಾರ್ಗದರ್ಶನ ಮಾಡಿ ಯಕ್ಷಗಾನ ಕಲೆಯನ್ನು ವಿದೇಶದಲ್ಲೂ ಪ್ರಚಲಿತಗೊಳಿಸಿದರು. ಕಾರಂತರ 'ಯಕ್ಷಗಾನ ಬಯಲಾಟ' ಕೃತಿಯನ್ನು ಮೆಚ್ಚಿದ ಸ್ವೀಡನ್ ದೇಶದವರು ಅವರಿಗೆ ಪ್ರಶಸ್ತಿ ಮತ್ತು ಕಂಚಿನ ಪದಕಗಳನ್ನು ನೀಡಿದ್ದರು. ಯಕ್ಷಗಾನಕ್ಕೆ ಯಕ್ಷಗಾನ ಬ್ಯಾಲೆ (ನೃತ್ಯ ನಾಟಕ) ಎಂಬ ಹೊಸ ರೂಪವನ್ನು ಕೊಟ್ಟು ಪ್ರಯೋಗಿಸಿದರು. ಇದರಲ್ಲಿ ಮಾತುಗಾರಿಕೆಗೆ ಮನ್ನಣೆ ಇರುವುದಿಲ್ಲ. ಕಾರಂತರ ಇನ್ನೊಂದು ಸಾಹಸ ಎಂದರೆ ೬೪ ಯಕ್ಷಗಾನ ರಾಗಗಳನ್ನು ವಿವಿಧ ಭಾಗವತರುಗಳಿಂದ ಹಾಡಿಸಿ ಧ್ವನಿಮುದ್ರಿಕೆ ಮಾಡಿಕೊಂಡಿದ್ದರು. ಹೀಗೆ ಯಕ್ಷಗಾನ ರಾಗಗಳ ಅನ್ವೇಷಣೆಯಲ್ಲೂ ತೊಡಗಿದ್ದರು ಎಂಬ ಮಹತ್ವದ ಅಂಶಗಳು ಈ ಕೃತಿಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ನಾಟಕ ಕ್ಷೇತ್ರಕ್ಕೆ ಕಾರಂತರ ಕೊಡುಗೆ ಅಪರಿಮಿತ. ನಾಟಕ ಮನೋಚಿಂತನೆಗೆ ಪೂರಕವಾಗಿರಬೇಕೆಂಬುದೇ ಅವರ ನಿಲುವಾಗಿತ್ತು. ನಾಟಕಗಳನ್ನು ಬರೆದು, ಆಡಿ, ಆಡಿಸಿ ತಾವೂ ಸಹ ಪಾತ್ರ ಮಾಡುತ್ತಿದ್ದರು. ಷೇಕ್ಸ್‌ಪಿಯರನ ನಾಟಕವನ್ನು ಅನುವಾದಗೊಳಿಸಿದ ಕೀರ್ತಿ ಸಹ ಇವರದು. ತರಂಗ ಪತ್ರಿಕೆಯಲ್ಲಿ ಮಕ್ಕಳೊಂದಿಗೆ ಮಾತನಾಡುತ್ತಿದ್ದರು. ಕಾರಂತರು ಕಾದಂಬರಿ, ಕತೆ, ಲಲಿತಪ್ರಬಂಧ, ಅಣುಕುಕೃತಿ, ಸಂಶೋಧನಾ ಕೃತಿ, ಜಾನಪದ ಕೃತಿ ಮುಂತಾದುವೆಲ್ಲವನ್ನು ಬರೆದು 'ಸಾಹಿತ್ಯ ಸೂರ್ಯ' ರಾಗಿದ್ದಾರೆ. ಈ ಕೃತಿಯ ಭಾಗ-೨ರಲ್ಲಿ ಅವರ ಕೆಲವು ಪ್ರಮುಖ ಕಾದಂಬರಿಗಳ ಕುರಿತು ಸಂಕ್ಷಿಪ್ತ ವಿವರಣೆ ಇದೆ. ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಮೂಕಜ್ಜಿಯ ಕನಸುಗಳ ಕುರಿತಾಗಿ ಲೇಖಕರು 'ಮಾನವನ ವಿಕಾಸವಾದ ಪರಿಪೂರ್ಣ ಅರಳಿದ್ದು ಈ ಕೃತಿಯಲ್ಲಿ' ಎನ್ನುತ್ತಾರೆ.

ಕಾರಂತರು ಸತ್ಯನಿಷ್ಠರು, ನೇರ ನಡೆನುಡಿಯ ಮೇರುವ್ಯಕ್ತಿತ್ವದವರು ಎಂದು ಹಲವಾರು ಉದಾಹರಣೆಗಳ ಮೂಲಕ ಲೇಖಕರು ತಿಳಿಯಪಡಿಸುತ್ತಾರೆ. ಕಾರಂತರ ಬಾಲಪ್ರಪಂಚ, ವಿಜ್ಞಾನ ಪ್ರಪಂಚಗಳಲ್ಲಿ ಅವರ ಜ್ಞಾನಕೋಶಗಳೇ ತೆರೆಯಲ್ಪಟ್ಟಿವೆ ಎಂದು ಲೇಖಕರು ಬಣ್ಣಿಸುತ್ತಾರೆ. ೪೫೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಕಾರಂತರ ಕೃತಿಗಳನ್ನು ವಿಶ್ಲೇಷಿಸಲು ವಿಶ್ವವಿದ್ಯಾಲಯದ ಮೇಧಾವಿಗಳಿಗೂ ಅಸಾಧ್ಯ ಎಂದು ವಿಮರ್ಶಕ ಭಾಸ್ಕರಮಯ್ಯರು ಹೇಳಿರುವುದರಲ್ಲಿ ಸಹಜ ಉತ್ಪ್ರೇಕ್ಷೆಯಿದೆ ಎನಿಸುತ್ತದೆ. ಕಾರಂತರ ಕೃತಿಗಳು ಯಾವುದೇ ಒಂದು ಸಿದ್ಧಾಂತಕ್ಕೆ ಜೋತುಬಿದ್ದಿರುವುದಿಲ್ಲ, ಅವರ ವಿಚಾರಗಳು ಪ್ರವಾಹದಂತೆ ಹರಿಯುತ್ತವೆ. ಅವರ ವಿಚಾರಗಳು ಮಾನವನ ಸೂಕ್ಷ್ಮ ಸಂವೇದನೆಯಿಂದ ಹಿಡಿದು ವೈಜ್ಞಾನಿಕ ಚಿಂತನೆವರೆಗೂ ಹಬ್ಬಿವೆ. ಬೆರಗುಗಣ್ಣಿನ ಶಾಲಾ ಬಾಲಕರಿಂದ ಹಿಡಿದು ಸಂಶೋಧನಾ ವಿದ್ಯಾರ್ಥಿವರೆಗೂ ಓದಲು ಈ ಕೃತಿಗಳು ತುಂಬಾ ಪ್ರಯೋಜನಕಾರಿಯಾಗಿವೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಶ್ವದ ಸಾಧಕರು ಕಾರಂತರ ಕುರಿತಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಓದಲು ಹೆಮ್ಮೆ ಎನಿಸುತ್ತದೆ.

ಇಂತಹ ಚೊಕ್ಕ ಕೃತಿ ರಚಿಸಿದ ಕೋಣಿ ಶಿವಾನಂದ ಕಾರಂತರು ಶಿವರಾಮ ಕಾರಂತರ ಮಹತ್ವವನ್ನು ಸ್ಥೂಲವಾಗಿ ಪರಿಚಿಸುವಲ್ಲಿ ಗೆದ್ದಿದ್ದಾರೆ.

ಪದ್ಮಾಕೃಷ್ಣಮೂರ್ತಿ

ಕೆರೆಮನೆಯವರ ಯಕ್ಷಗಾನ ಕಲಾಸೇವೆ

* **ಕೆರೆಮನೆ ಮಹಾಬಲ ಹೆಗಡೆ:** ಲೇ. ಎಲ್.ಎಸ್. ಶಾಸ್ತ್ರಿ, ಪ್ರಕಾಶಕರು– ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿ.ವಿ., ಪುಟಗಳು ೧೫+೫೬. ರೂ. ೪೨/–

ಸಹ್ಯಾದ್ರಿಯ ಮಡಿಲು ಹೊನ್ನಾವರದ ಗುಣವಂತೆಯ ಒಂದು ಕೇರಿಯ ಹೆಸರು ಕೆರೆಮನೆ. ಕೆರೆಗಳೂ, ಮನೆಗಳೂ ಒಟ್ಟಿಗೇ ಸೇರಿ ಕೆರೆಮನೆಯಾಗಿದೆ. ಈ ಕೆರೆಮನೆಯವರೆಲ್ಲ ಹುಟ್ಟು ಕಲಾವಿದರಾಗಿ ಶ್ರೇಷ್ಠತಮವಾದ ಕಲಾಸೇವೆಯನ್ನು ಯಕ್ಷಗಾನಬಯಲಾಟದಲ್ಲಿ ಮಾಡಿದವರು. ಕೆರೆಮನೆಯ ಹಿರೀಕರಲ್ಲಿ ಮೊದಲಿಗರಾದ ದಿವಂಗತ ಶಿವರಾಮ ಹೆಗಡೆಯವರ ಸಂಪೂರ್ಣ ಸಹಾಯ, ಸಹಕಾರದೊಂದಿಗೆ ಬೆಳೆದ 'ಕೆರೆಮನೆ ಮಹಾಬಲ ಹೆಗಡೆ'ಯವರ ಜೀವನ ಚರಿತ್ರೆಯನ್ನು ಎಲ್.ಎಸ್. ಶಾಸ್ತ್ರಿಯವರು ಎಳೆ ಎಳೆಯಾಗಿ ಚಿತ್ರಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಸಾರಾಂಗದ ಜಾನಪದ ಮಾಲೆಯಲ್ಲಿ ಪ್ರಕಟಗೊಳಿಸಿರುವುದು ನಿಜವಾಗಿಯೂ ಶ್ಲಾಘನೀಯವಾದುದು.

'ಕೆರೆಮನೆ ಮಹಾಬಲ ಹೆಗಡೆ' ಕೃತಿ ೫೬ ಪುಟದ್ದಾದರೂ ಯಕ್ಷಗಾನ ಕಲೆಯಲ್ಲಿ ತನ್ನದೇ ಸ್ವಂತಿಕೆಯನ್ನು ಸ್ವಾತಂತ್ರಿಕೆಯನ್ನು ಒಳಗೊಂಡೇ ಅನುಕರಣೆಯನ್ನು ನಿರ್ಲಕ್ಷಿಸಿ, ಸಾಧನೆ ಮಾಡಿದ ಸೀಮಾ ಪುರುಷರಾದ ಗುಣವಂತೆಯ ಕೆರೆಮನೆಯ ಬಡಗುತಿಟ್ಟಿನ ಕಲಾಕಾರರಾದ ಮಹಾಬಲ ಹೆಗಡೆಯವರ ಸವಿಸ್ತಾರವಾದ ಜೀವನ ಚರಿತ್ರೆಯನ್ನು ಎಲ್.ಎಸ್. ಶಾಸ್ತ್ರಿಯವರು ತುಂಬ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ.

ಜನಪದ ರಂಗಭೂಮಿಯಲ್ಲಿ ಯಕ್ಷಗಾನ ಬಯಲಾಟ ವಿಶಿಷ್ಟ ಪಾರಂಪರಿಕ ವೈವಿಧ್ಯವನ್ನು ಒಳಗೊಂಡು ಎಲ್ಲರನ್ನು ತನ್ನತ್ತ ಸೆಳೆಯುವ ರಂಗ ಕಲೆಯಾಗಿದೆ. ಈ ರಂಗಕಲೆಯು ಕರಾವಳಿ ಹಾಗೂ ಮಲೆನಾಡಿನ ಭಾಗಗಳಲ್ಲಿ ತೆಂಕತಿಟ್ಟು, ಬಡಗು ತಿಟ್ಟು ಮತ್ತು ದಕ್ಷಿಣ ಕನ್ನಡ ತಿಟ್ಟುಗಳ ವಿಭಿನ್ನ ಶೈಲಿಗಳ ತವರೂರಾಗಿದೆ. ಈ ಪಾರಂಪರಿಕ ಯಕ್ಷಗಾನ ಕಲೆಯು ಶರಾವತಿ ನದಿಯ ಎಡಬಲಗಳಲ್ಲಿರುವ ಹೊನ್ನಾವರದ ಆಸುಪಾಸಿನ ಅಪ್ಸರಕೊಂಡ, ಗುಣವಂತೆ, ಸಾಲಕೋಡ, ಹೊಸಾಕುಳಿ, ಹಡಿನ್‌ಬಾಳ ಗ್ರಾಮಗಳಲ್ಲಿನ ಕೇರಿಗಳ ಮನೆತನಗಳು ಜೀವನದ ಕೊನೆಯವರೆಗೂ ಯಕ್ಷಗಾನಕ್ಕಾಗಿ ಮುಡುಪಿಟ್ಟಿವೆ. ಅದರಲ್ಲಿ ಕರ್ಕಿ, ಕೆರೆಮನೆ, ಕೊಂಡದಕುಳಿ, ಮಾವಿನ ಕೆರೆ, ಚಿಟ್ಟಾಣಿ ಮೊದಲಾದ ಮನೆತನಗಳು ದುಡಿದಿವೆ ಎಂಬುದನ್ನು ಸಾರವತ್ತಾಗಿ ಲೇಖಕರು ತಿಳಿಸಿದ್ದಾರೆ.

ಎಲ್.ಎಸ್. ಶಾಸ್ತ್ರಿಯವರು ಯಕ್ಷಗಾನದ ಇತಿಹಾಸವನ್ನು ಕೂಲಂಕಷವಾಗಿ ಹೇಳುತ್ತಾ ಈ ಕಲೆಯು ಹೇಗೆ ವೈವಿಧ್ಯಮಯವಾಗಿ ವಿಶಿಷ್ಟ ಪ್ರಾದೇಶಿಕ ರಂಗಕಲೆಯಾಗಿ ಬೆಳೆದಿತೆಂಬುದನ್ನೂ ತಿಳಿಸಿದ್ದಾರೆ. ಹಾಗೆಯೇ ಇತರೆ ಭಾರತೀಯ ಕಲಾಪ್ರಕಾರಗಳನ್ನೂ ಸೂಚ್ಯವಾಗಿ ಹೇಳುತ್ತಾ ಯಕ್ಷಗಾನ ಕಲೆಯಲ್ಲಿ ಬರುವ ಪ್ರಸಂಗಗಳು, ನೃತ್ಯ, ಸಂಗೀತ, ತಿಟ್ಟುಗಳ ವಿವರಣೆ ನೀಡಿದ್ದಾರೆ. ಮುಂದುವರೆದು ಕೆರೆಮನೆ ಕುಟುಂಬ ಕಲೆಯಲ್ಲಿ ಹೇಗೆ ತೊಡಗಿಸಿಕೊಂಡಿದೆ, ಈ ಮನೆತನದವರು ಹುಟ್ಟು ಕಲಾವಿದರಾಗಿ ಕಲಾಜೀವನವನ್ನು ಹಾಗೂ ಬದುಕನ್ನು ಹೇಗೆ ಸಂಘರ್ಷಮಯವಾಗಿ ಸವೆಸಿದ್ದಾರೆ ಎಂಬುದನ್ನು ವಿಸ್ತೃತವಾಗಿ ತಿಳಿಸಿದ್ದಾರೆ.

ಮಹಾಬಲ ಹೆಗಡೆಯವರು ಕಲಾವಿದರಾಗಿ ತೆರೆದುಕೊಳ್ಳಲು ಚಿಕ್ಕಪ್ಪ ದಿವಂಗತ ಶಿವರಾಮ ಹೆಗಡೆಯವರು ಕಾರಣರೆಂದು ಹೇಳುತ್ತಾ, ಹೇಗೆಲ್ಲ ಸಹಾಯ ಸಹಕಾರ ನೀಡುತ್ತಾ ಒಬ್ಬ ಜೀವಂತ ಕಲಾವಿದನಾಗಲು ಬೆನ್ನಲುಬಾಗಿದ್ದರೆಂಬುದನ್ನು ತಿಳಿಸಿದ್ದಾರೆ. ಇವರೇ ಸ್ಥಾಪಿಸಿದ ಶ್ರೀ ಇಡಗುಂಜಿ ಮಹಾಗಣಪತಿ ಪ್ರಾಸಾದಿತ ಯಕ್ಷಗಾನ ಮಂಡಳಿಯ ಬಂಕಿಕೊಡ್ಲ ಊರಲ್ಲಿ 'ಕರ್ಣಪರ್ವ' ಪ್ರಸಂಗದ 'ವೃಷಸೇನ' ನಾಗಿ ತಮ್ಮ ೧೪ನೇ ವಯಸ್ಸಿನಲ್ಲಿ ಮೊದಲ ಪಾತ್ರವಾಗಿ ಕಾಣಿಸಿಕೊಂಡ ಮಹಾಬಲ ಹೆಗಡೆಯವರು ಎಂದು ಕೂಡಾ ಹಿಂದಿರುಗಿ ನೋಡಿದವರಲ್ಲ. ಸಂಗೀತ, ಸಾಹಿತ್ಯಾಭ್ಯಾಸದ ಜೊತೆ ಜೊತೆಗೆ ವಿದ್ವಾಂಸರ ಸೂಕ್ತ ಸಲಹೆಗಳನ್ನು ಸ್ವೀಕರಿಸುತ್ತಾ "ನಾನು ಯಾರ ಹಾಗೆಯೂ ಆಗಬಯಸಲಿಲ್ಲ. ನಾನು ನನ್ನ ಹಾಗೇ ಆಗಬೇಕೆಂದುಕೊಂಡೆ. ಅನುಕರಣೆ ನನಗೆ ಇಷ್ಟವಾಗಲಿಲ್ಲ. ಒಳ್ಳೆಯದೋ ಕೆಟ್ಟದ್ದೋ ಸರಿಯೋ ತಪ್ಪೋ ನಾನು ನನ್ನಂತೆಯೇ, ಯಾರಂತೆಯೂ ಅಲ್ಲ. ನನ್ನ ಪಾತ್ರಗಳು ಹೀಗಿರಬೇಕೆಂದು ನಾನೇ ನಿರ್ಧರಿಸಿಕೊಂಡದ್ದು. ಅದಕ್ಕೆ ನನ್ನದೇ ಆದ ಕಾರಣಗಳೂ ಇವೆ. ಸಮರ್ಥನೆಗಳಿವೆ" ಎಂದು ಹೇಳಿ ದಿಟ್ಟತನದಿಂದ ಕಲೆಯೇ ಸರ್ವಸ್ವವೆಂದು ಭಾವಿಸಿದ ಮಹಾಬಲ ಹೆಗಡೆಯವರ ನೈಜ ಬದುಕನ್ನು ಈ ಕೃತಿಯಲ್ಲಿ ತೆರೆದಿಡಲಾಗಿದೆ.

ಮಹಾಬಲ ಹೆಗಡೆಯವರು ಶಿವರಾಮ ಹೆಗಡೆ ಮತ್ತು ಕೋಟ ಶಿವರಾಮ ಕಾರಂತರಿಂದ ತುಂಬ ಪ್ರಭಾವಕ್ಕೆ ಒಳಗಾದವರು. ಕಾರಂತರ ಸಂಶೋಧನಾ ಕೃತಿಯಾದ 'ಯಕ್ಷಗಾನ ಬಯಲಾಟ'ವು ಹೇಗೆಲ್ಲಾ ಪ್ರಭಾವ ಬೀರಿತೆಂಬುದನ್ನು ಸ್ವತಃ ಅವರೇ ಕೊನೆಯವರೆಗೂ ಒಪ್ಪಿಕೊಂಡು ಬಂದಿರುವುದನ್ನು ತಿಳಿಸಿದ್ದಾರೆ. ಅಲ್ಲದೇ ಯಕ್ಷಗಾನ ಜೀವನದಲ್ಲಿ ಪ್ರತಿ ಪಾತ್ರಕ್ಕೂ ಜೀವಂತಿಕೆ ತುಂಬಲು ದಿ. ಶಿವರಾಮ ಹೆಗಡೆಯವರು ಹೇಗೆಲ್ಲಾ ಕಾರಣೀಭೂತರು ಎಂಬುದನ್ನೂ ಇಲ್ಲಿ ತಿಳಿಯಬಹುದಾಗಿದೆ.

ಮಹಾಬಲ ಹೆಗಡೆಯವರಲ್ಲಿ ಗುಪ್ತಗಾಮಿನಿಯಾಗಿದ್ದ ಕಲಾಪ್ರತಿಭೆ ಭೋರ್ಗರೆವ ನದಿಯಂತೆ ಎಲ್ಲಿಯೂ ನಿಲ್ಲದೆ ಹರಿದು ಅರವತ್ತು ವರ್ಷಗಳ ಕಾಲ ಕಲಾ ಬದುಕಿನಲ್ಲಿ ಅರವತ್ತಕ್ಕಿಂತ ಹೆಚ್ಚು ಕಥಾ ಪ್ರಸಂಗಗಳಲ್ಲಿ ಇನ್ನೂರಕ್ಕೂ ಹೆಚ್ಚು ಬಗೆಯ ಪಾತ್ರಗಳನ್ನು, ಐದು ಸಾವಿರಕ್ಕೂ ಹೆಚ್ಚು ವೇಷಗಳನ್ನು ಮಾಡಿ ಅವರು ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದಾರೆ. ಅದರಲ್ಲೂ ಗದಾಯುದ್ಧ ಪ್ರಸಂಗದ 'ಅಶ್ವತ್ಥಾಮ' ಪಾತ್ರವು ಎಂತವರನ್ನೂ ಹಿಡಿದಿಟ್ಟುಕೊಳ್ಳುವಂತೆ ಶಕ್ತಿಯಾಗಿ ನಟಿಸಿದವರು. ಈ ಪಾತ್ರಕ್ಕೆ ಎಲ್ಲಿಲ್ಲದ ಮನ್ನಣೆ ದೊರೆತಿದೆ. ಇವರು ಮಾಡಿದ ಒಂದೊಂದು ಪಾತ್ರವು ಜೀವಂತಿಕೆಗೆ ಸಾಕ್ಷಿಯಾಗಿರುತ್ತಿತ್ತು. ಪಾತ್ರೋಚಿತ ನೃತ್ಯ, ಅಭಿನಯ, ಹಾಡು, ಮಾತು ಎಲ್ಲವನ್ನು ಹದವರಿಸಿಕೊಂಡು ಕಟ್ಟುತ್ತಿದ್ದರು. ಒಂದೇ ಪಾತ್ರವನ್ನು ಎಷ್ಟೋ ಬಾರಿ ನೋಡಿದ ಪ್ರೇಕ್ಷಕನಿಗೆ ಮತ್ತೆ ಮತ್ತೆ ನೋಡಬೇಕೆನಿಸುವ ಮಟ್ಟಿಗೆ ಕಲಾಸಕ್ತಿಯನ್ನು ಬಿತ್ತಿದವರು. ಪ್ರಸಂಗಗಳಲ್ಲಿ ವೇಷತೊಟ್ಟು ಪಾತ್ರ ನಿರ್ವಹಿಸಿದವರು ಅನೇಕ ಕಲಾವಿದರಿದ್ದರೂ ಮಹಾಬಲ ಹೆಗಡೆಯವರ ರೀತಿಯಲ್ಲಿ ಅಭಿನಯಿಸಲು ಮತ್ತೆ ಯಾರೂ ಸರಿಸಾಟಿಯಾಗುವುದಿಲ್ಲವೆಂದಿದ್ದಾರೆ. ಅಲ್ಲದೆ ಕಲೆಯ ಕುರಿತು ನಿರಂತರ ಚಿಂತನೆ ಹಾಗೂ ಅಧ್ಯಯನ ಮಾಡುತ್ತಿದ್ದವರು ಮಹಾಬಲ ಹೆಗಡೆಯವರಾಗಿದ್ದರು. ಎಲ್ಲಾ ಸನ್ನಿವೇಶ, ಸಂದರ್ಭಗಳಲ್ಲಿ ತುಂಬಾ ಕ್ರಿಯಾಶೀಲವಾಗಿ ಸೃಜನಾತ್ಮಕವಾಗಿ ಚಿಂತಿಸುವ ಮನಸ್ಸು ಶ್ರೀಯುತರದಾಗಿತ್ತೆಂದು ಲೇಖಕರು ತಿಳಿಸುತ್ತಾರೆ.

ಮಹಾಬಲ ಹೆಗಡೆಯವರು ತಾವು ಕಲಿತ ಕಲೆಯನ್ನು ಶಂಭು ಹೆಗಡೆ, ಗಜಾನನ ಹೆಗಡೆ, ಬಳ್ಕೂರು ಕೃಷ್ಣಯಾಜಿಯಂತಹ ಕಲಾವಿದರಿಗೆ ಉಣಬಡಿಸಿದರು. ಚಿಟ್ಟಾಣಿ ರಾಮಚಂದ್ರಹೆಗಡೆ, ಗೋಡೆನಾರಾಯಣ ಹೆಗಡೆಯವರ ಸಮಕಾಲೀನರಾಗಿ ಜೊತೆ ಜೊತೆಯಲ್ಲಿ ಸೇರಿ ಹಲವು ಪಾತ್ರಗಳನ್ನು ಮಾಡಿ ಬಡಗತಿಟ್ಟಿನ ಯಕ್ಷಗಾನಕ್ಕೆ ಜೀವ ತುಂಬಿದರು. ಕಣ್ಮಣಿಗಳಾದರು. ಯಕ್ಷಗಾನ ಕಲಾವಿದ ಮಹಾಬಲ ಹೆಗಡೆಯವರ ಬಣ್ಣದ ಬದುಕನ್ನು ನೋಡಿದ ಬಂಧು ಬಾಂಧವರು, ಹಿತೈಷಿಗಳು, ವಿದ್ವಾಂಸರು, ಕಲಾವಿದರು, ಕಲಾತಜ್ಞರು ತಮ್ಮ ಮುಕ್ತ ಮನಸ್ಸಿನಿಂದ ಹೇಳಿದ ಅಭಿಪ್ರಾಯಗಳನ್ನು ಎಲ್.ಎಸ್. ಶಾಸ್ತ್ರಿಯವರು ಒಂದೆಡೆ ಸಂಪಾದಿಸಿ ಈ ಕೃತಿಯಲ್ಲಿ ನೀಡಿರುವುದು ಕೃತಿಯ ಮೌಲ್ಯ ಹೆಚ್ಚಿಸಿದೆ.

ಪ್ರಧಾನವಾಗಿ ಯಕ್ಷಗಾನ ಪರಂಪರೆ ಭವ್ಯವಾಗಿ ಉತ್ತುಂಗಕ್ಕೇರಲು ಮೇಳಗಳ ಪಾತ್ರ ಹಿರಿದಾದುದು. ಕೆರೆಮನೆ ಮಹಾಬಲ ಹೆಗಡೆಯವರು ಇಡಗುಂಜಿ ಮೇಳದಲ್ಲಿ ಎರಡು ದಶಕಗಳ ಕಾಲ ವೇಷ ಹಾಕಿ ನಂತರ ಸಾಲಿಗ್ರಾಮ ಮೇಳ, ಅಮೃತೇಶ್ವರಿ ಮೇಳ, ಶಿರಳಗಿ ಮೇಳ, ಮುಲ್ಕಿ ಮೇಳ, ಬಚಗಾರಮೇಳ, ಶಿರ್ಸಿ ಮೇಳಗಳಲ್ಲೂ ಆಮಂತ್ರಿತ ಕಲಾವಿದರಾಗಿ ಹಲವು ಪಾತ್ರಗಳನ್ನು ನಿರ್ವಹಿಸಿ ಸೈ ಎನಿಸಿಕೊಂಡಿದ್ದಾರೆ.

ಹಾಗೆಯೇ ಕಾಲಮಿತಿ ಪ್ರಯೋಗವನ್ನು ಹುಟ್ಟುಹಾಕಿ ಕಮಲ ಶಿಲೆ ಮೇಳದಲ್ಲಿ ಒಂದು ಸೀಜನ್‌ನಲ್ಲಿ ೮೦ ಆಟಗಳನ್ನು ಆಡುವುದರೊಂದಿಗೆ ದಾಖಲೆಯನ್ನು ನಿರ್ಮಿಸಿದರು. ಇದರಲ್ಲಿ ಗೋಡೆ ನಾರಾಯಣ ಹೆಗಡೆಯವರ ಚಿಂತನಾ ನೆಲೆಯು ಸೇರಿಕೊಂಡಿದೆ ಎಂದು ಲೇಖಕರು ತಿಳಿಸುತ್ತಾರೆ.

ಮಹಾಬಲ ಹೆಗಡೆಯವರು ಪ್ರಸಂಗಗಳಲ್ಲಿ ಮಾಡುತ್ತಿದ್ದ ಪಾತ್ರ ವೈವಿಧ್ಯತೆ, ಬದುಕಿನಲ್ಲಿ ರೂಢಿಸಿಕೊಂಡ ಶಿಸ್ತು ಬದ್ಧತೆ ಪ್ರಸಂಗಗಳಲ್ಲಿ ಆದ ಸಿಹಿ–ಕಹಿ ಅನುಭವಗಳು, ಇವರ ಕಲಾಸೇವೆಯನ್ನು ಗುರುತಿಸಿ ಬಂದ ಸರ್ಕಾರ– ಸಂಘ–ಸಂಸ್ಥೆಗಳ ಸನ್ಮಾನ ಪ್ರಶಸ್ತಿಗಳು, ಅವರು ನೀಡಿದ ಬಣ್ಣದ ಬದುಕಿಗೆ ಸಂಬಂಧಿಸಿದ ವಿಚಾರ ಸಂಕಿರಣಗಳಲ್ಲಿ ಹಲವು ಕಡೆ ಉಪನ್ಯಾಸಗಳು ಹೀಗೆ ಕ್ರಮಬದ್ಧವಾಗಿ ಹಲವು ಅಂಶಗಳನ್ನು ಲೇಖಕರು ಒಂದೆಡೆ ಬರೆದಿರುವುದು ಓದುಗರಿಗೆ ಮುಖ್ಯ ಮಾಹಿತಿಯಾಗುತ್ತದೆ.

ಒಟ್ಟಾರೆ ಎಲ್.ಎಸ್. ಶಾಸ್ತ್ರಿಯವರು ಪತ್ರಕರ್ತರಾಗಿ, ಬರಹಗಾರರಾಗಿ, ಕಲಾವಿಮರ್ಶಕರಾಗಿ ಹೆಸರು ಮಾಡಿದವರು. ಒಬ್ಬ ಕಲಾವಿದನಾಗಿ ಶ್ರೇಷ್ಠತಮ ಕಲಾಸಾಧನೆ ಮಾಡಿ, ಶಿಖರಪ್ರಾಯವಾಗಿ ಬೆಳೆದು, ಸಮಾಜ ಸರ್ಕಾರ ಗುರುತಿಸು ವಷ್ಟರ ಮಟ್ಟಿಗೆ ಬೆಳೆದ ಕೆರೆಮನೆ ಮಹಾಬಲ ಹೆಗಡೆಯವರ ಬಾಲ್ಯದ ಬದುಕಿನಿಂದ ಪ್ರಾರಂಭಗೊಂಡು ಉತ್ತಮ ಕಲಾವಿದರೆಂದು ಹೆಸರುಗಳಿಸುವವರೆಗಿನ ಮಾಹಿತಿ ಯನ್ನು ಒಂದೆಡೆ ಕ್ರೋಡೀಕರಿಸಿ ನೀಡಿರುವುದು ನಿಜಕ್ಕೂ ಶ್ಲಾಘನೀಯವಾದುದು. ಕಲಾವಿದ ಮಾತ್ರ ಅಲ್ಲ, ಆತನ ಬದುಕೂ ಇದೆ. ಕಲಾವಿದ ಮತ್ತು ಆತನ ಜೀವನವನ್ನು ಏಕಮುಖವಾಗಿಸಿಕೊಂಡು ಬಾಳಿ ತತ್ವ ಮತ್ತು ಆಚರಣೆಗಳು ಒಂದೇ ಎಂಬಂತೆ ಸಾಧಿಸಿ ತೋರಿಸಿದ ಯಕ್ಷಗಾನದ ನಿಜವಾದ ಸಾಧಕನ ಚಿತ್ರಣ ಈ ಕೃತಿಯಲ್ಲಿ ಎಲ್.ಎಸ್. ಶಾಸ್ತ್ರಿ ಚಿತ್ರಿಸಿರುವುದನ್ನು ಕಾಣಬಹುದು.

ಕೆ.ವಿ. ಮುದ್ದುವೀರಪ್ಪ

ಕಲಾವಿದನೊಬ್ಬನ ಬದುಕು, ಬಣ್ಣದ ಹಲವು ಮಜಲುಗಳು

* **ಗೋಡೆ ಚಿತ್ತಾರ** (ಗೋಡೆ ನಾರಾಯಣ ಹೆಗಡೆ ಬದುಕು, ಬಣ್ಣದ ಕಥನ) ಲೇ. ಎಂ.ಕೆ. ಭಾಸ್ಕರರಾವ್, ಪ್ರ: ಪ್ರೇಮ ಪ್ರಕಾಶನ, ೧೮೬/೮ ಅಭಿಷೇಕ್ ಕಾಂಪ್ಲೆಕ್ಸ್, ನಟರಾಜ ಥಿಯೇಟರ್ ಹಿಂಭಾಗ, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–೨೦. ಪುಟಗಳು– ೧೨+೧೩೬, ಬೆಲೆ ರೂ. ೧೫೦/–

ಯಕ್ಷಗಾನ ಪಾತ್ರಧಾರಿಗಳಲ್ಲಿ 'ಗೋಡೆ' ಎಂದೇ ಪ್ರಸಿದ್ಧರಾಗಿರುವ ಗೋಡೆ ನಾರಾಯಣ ಹೆಗಡೆಯವರು, ಯಕ್ಷಗಾನ ಪ್ರಸಂಗಗಳಲ್ಲಿ ವಿಭಿನ್ನ ಶೈಲಿಯಲ್ಲಿ ಪಾತ್ರಗಳನ್ನು

ಹಾಕಿಕೊಂಡು ಪ್ರೇಕ್ಷಕ (ಸಾಮಾಜಿಕ) ವರ್ಗವನ್ನು ಮೋಡಿ ಮಾಡಿ ಧನ್ಯತಾ ಭಾವನೆಯನ್ನು ಪಡೆದ ಯಕ್ಷಗಾನ ಕಲಾವಿದರಲ್ಲಿ ಒಬ್ಬರು. ಶ್ರೀಯುತರು ಯಕ್ಷಗಾನದ ಸಾರಸ್ವತ ಲೋಕದಲ್ಲಿ ಐವತ್ತೈದು ವರ್ಷಗಳ ಕಾಲ ಬಣ್ಣವನ್ನು ನೆಚ್ಚಿ ಬದುಕಿ ಸಾರ್ಥಕ್ಯವನ್ನು ಪಡೆದವರು.

ಇಂತಹ ಮಹಾನ್ ಯಕ್ಷಗಾನ ಕಲಾವಿದರಾದ ಗೋಡೆ ನಾರಾಯಣ ಹೆಗಡೆಯವರ ಬದುಕು ಬಣ್ಣದ ಕಥನವನ್ನು ಲೇಖಕರಾದ ಎಂ.ಕೆ. ಭಾಸ್ಕರ ರಾವ್‌ರವರು ತುಂಬ ಆಪ್ತತೆಯಿಂದ ಚಿತ್ರಿಸಿದ್ದಾರೆ. ಗೋಡೆಯವರ ಬದುಕು, ಬಣ್ಣದ ಎಲ್ಲಾ ಆಯಾಮಗಳನ್ನು ಹದಿನೇಳು ಅಧ್ಯಾಯಗಳಲ್ಲಿ ೧೨೮ ಪುಟಗಳಲ್ಲಿ ಕೂಲಂಕಷವಾಗಿ ವಿವರಿಸಿದ್ದಾರೆ. ಯಕ್ಷಗಾನ ಕಲೆಯಲ್ಲಿ ದಿಗ್ಗಜರೆನಿಸಿಕೊಂಡ, ಈ ಬಾರಿ ಪದ್ಮಶ್ರೀ ಪುರಸ್ಕೃತರಾದ ಚಿಟ್ಟಾಣಿ ರಾಮಚಂದ್ರ ಹೆಗಡೆಯಂಥವರಿಂದ ಹಿಡಿದು ಹಲವು ಕ್ಷೇತ್ರದ ವಿದ್ವಾಂಸರು ಗೋಡೆಯವರ ಬಣ್ಣದ ಬದುಕನ್ನು ಹೇಗೆಲ್ಲಾ ಅನುಭವಿಸಿದರೆಂಬುದನ್ನು ತುಂಬ ಮನೋಜ್ಞವಾಗಿ ಸಂಕ್ಷಿಪ್ತವಾಗಿ ಚಿತ್ರಿಸಿರುವುದನ್ನು ಗೋಡೆ ನಾರಾಯಣ ಹೆಗಡೆ ಅಭಿನಂದನಾ ಸಮಿತಿಯು ಸಂಪಾದಿಸಿಕೊಟ್ಟಿದೆ. ಹಾಗೆಯೇ – ಗೋಡೆಯವರ ಪಾತ್ರದ ಝಳಕನ್ನು ತುಂಬಿರುವ ಛಾಯಾ ಚಿತ್ರಗಳು ಕೃತಿಯ ಕೊನೆಯಲ್ಲಿ ಓದುಗರ ಕಣ್ಮನ ಸೆಳೆಯುತ್ತವೆ.

ಬದುಕು ಬಣ್ಣವನ್ನು ಅವಲಂಬಿಸಿದಾಗ ಬಣ್ಣದಿಂದ ಬದುಕು ಕಟ್ಟಿಕೊಳ್ಳಲು ಕಷ್ಟವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಬದುಕನ್ನೂ ಬಿಡದೆ ಬಣ್ಣವನ್ನೂ ಬಿಡದೆ ನಡುವೆ ಒದ್ದಾಡುವ ತ್ರಿಶಂಕು ಸ್ಥಿತಿ ಗೋಡೆಯವರದಾಗಿತ್ತು. ಬಾಲ್ಯದ ಬಡತನವು ಬಣ್ಣದ ಬದುಕಿನ ನಂತರವೂ ಮುಂದುವರಿಯಿತು. ಬಡತನದ ಸವಾಲನ್ನು ಕೊನೆಯವರೆಗೂ ಎದುರಿಸಿದವರು. ಬಣ್ಣದ ಬದುಕನ್ನು ಒಪ್ಪಿದವರಿಗೆ ಬಡತನ, ಅವಮಾನ, ನಿರ್ಲಕ್ಷ್ಯ, ತಾತ್ಸಾರ ಹೀಗೆ ಎಲ್ಲಾ ದಿಕ್ಕಿನಿಂದ ನೋವುಗಳನ್ನು ಅನುಭವಿಸಬೇಕಾಗುತ್ತದೆ. ಇವೆಲ್ಲವುಗಳ ನಡುವೆ ಪ್ರೇಕ್ಷಕ (ನೋಡುಗ) ವರ್ಗವನ್ನು ಮೆಚ್ಚಿಸಲು ಏನೆಲ್ಲಾ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕು, ಪ್ರೇಕ್ಷಕರು ಹೇಗೆಲ್ಲಾ ನಮ್ಮನ್ನು ಸ್ಮರಿಸುತ್ತಾರೆಂಬ ಭಯವು ಅವರನ್ನು ಕಾಡುತ್ತದೆ. ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಒಬ್ಬ ಕಲಾವಿದ ಅರಳಬೇಕು. ಹಾಗೆ ಅರಳಿದ ಗೋಡೆಯವರ ಬದುಕು ಮತ್ತು ಬಣ್ಣ ಚಿತ್ತಾರದ ಸೊಬಗನ್ನು ನಿರ್ಮಿಸಿದೆ. ಇದರಿಂದ ನಾಲ್ಕು ಕಡೆ ಗೋಡೆಯವರು ಗುರುತಿಸಲ್ಪಡುತ್ತಿದ್ದಾರೆ. ಜೊತೆಗೆ ಯಕ್ಷಗಾನದ ಪರಂಪರೆಯ ಸ್ಥಿತ್ಯಂತರಗಳಿಗೆ ಗೋಡೆಯವರ ಕೊಡುಗೆಯೂ ಇದೆಯೆಂಬುದನ್ನು ಎಂ.ಕೆ. ಭಾಸ್ಕರ್‌ರಾವ್ ತೋರಿಸಿದ್ದಾರೆ.

ಗೋಡೆಯವರು ಸಿದ್ಧಾಪುರ ತಾಲ್ಲೂಕಿನ ಹಲಗೇರಿಯವರು. ಸ್ವಾತಂತ್ರ್ಯ ಹೋರಾಟಗಾರರಾದ ಇವರ ತಂದೆ ತಿಮ್ಮಯ್ಯನವರು ಶ್ರೀಯುತರು ಹುಟ್ಟಿದ ಎರಡು ವರ್ಷಗಳಲ್ಲಿಯೇ ತೀರಿಕೊಂಡಾದ ನಂತರ ನೆಲೆ ತಪ್ಪಿ ಅಲೆಮಾರಿಯಾಗಿ ಅಲೆಯತೊಡಗಿದರು. ತಾಯಿ ಗೌರಮ್ಮ ಸೂಲಗಿತ್ತಿಯಾಗಿ ಮಕ್ಕಳ ಸಲುವಾಗಿ ಪ್ರಯತ್ನಿಸಿದರು. ಬಾಲಕ ನಾರಾಯಣ ಹೆಗಡೆ ಹೋಟೆಲ್ ಮಾಣಿಯಾಗಿ ದುಡಿದು, ತಾವೇ ಗೋಡೆಕಿರಾಣಿ ಅಂಗಡಿ, ನಂತರ ಹೋಟೆಲ್ ಮಾಡಿದರು. ಹೀಗೆ ಹಲವು ವೃತ್ತಿ ಮಾಡಿದರೂ ಹೊಟ್ಟೆ ತುಂಬಿಸಲು ಯಾವುದರಿಂದಲೂ ಸಾಧ್ಯವಾಗಲಿಲ್ಲ. ನಂತರ ಕೆರೆಮನೆ ಶಿವರಾಮ ಹೆಗಡೆಯವರ ಮೇಳದಲ್ಲಿ ಸೇರಿಕೊಂಡರು. ಪ್ರಾರಂಭದಲ್ಲಿ ಸ್ತ್ರೀಪಾತ್ರಗಳನ್ನು ಮಾಡುತ್ತಾ ಸೈ ಅನಿಸಿಕೊಂಡು ಆ ಪಾತ್ರಗಳಿಗೆ ಜೀವ ತುಂಬಿದರು. ಹಲವು ಮೇಳಗಳಲ್ಲಿ ಕಲಾಸಂಘಗಳ ಆಟಗಳಲ್ಲಿ ಮೀನಾಕ್ಷಿ, ದ್ರೌಪದಿ, ಚಿತ್ರಾಂಗದೆಯಂಥ ಪಾತ್ರಗಳನ್ನೂ ಮಾಡಿ ಮಿಂಚಿದರು. ಲೇಖಕರೇ ಹೇಳುವಂತೆ ಶಿವರಾಮ ಹೆಗಡೆ ಗೋಡೆಯವರಿಗೆ ಪಾತ್ರಃ ಸ್ಮರಣೀಯರಾಗಿದ್ದರು. ಜೊತೆಗೆ ಅಂಥ ಮಹಾನುಭಾವರನ್ನು ನೆನೆಯದ ದಿನವೇ ಇರಲಿಲ್ಲವೆಂಬುದನ್ನು ತಿಳಿಸಿದ್ದಾರೆ.

ಗೋಡೆಯವರ ಅವಿಸ್ಮರಣೀಯ ಸಂದರ್ಭಗಳನ್ನು ಲೇಖಕರು ಈ ಕೃತಿಯಲ್ಲಿ ತಿಳಿಸಿದ್ದಾರೆ. ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಜೊತೆಯಲ್ಲಿ ಅದ್ಭುತ ಪಾತ್ರಗಳನ್ನು ನಿರ್ವಹಿಸಿದ್ದು, ಕೆರೆಮನೆ ಶಂಭು ಹೆಗಡೆಯವರು ಕೆರೆಮನೆ ಮೇಳವನ್ನು ಮುನ್ನಡೆಸುವಲ್ಲಿ ಗೋಡೆಯವರು ತೊಡಗಿಸಿಕೊಂಡದ್ದು ಮತ್ತು ಈ ಒಡನಾಡಿಗಳು ಒಟ್ಟಿಗೆ ಒಂದೆಡೆ ಸೇರಿ ಒಂದು ಕಾರ್ಯಕ್ರಮದಲ್ಲಿ ಮನಬಿಚ್ಚಿ ಗೋಡೆಯವರನ್ನು ಕುರಿತು ಮಾತನಾಡಿದ್ದು ವಿಶೇಷವೆನಿಸಿತೆಂಬುದನ್ನು ವಿವರಿಸಿದ್ದಾರೆ.

ಈ ಕೃತಿಯ ಮೆರುಗನ್ನು ಹೆಚ್ಚಿಸಲು ಜಿ. ಮೃತ್ಯುಂಜಯವರು ಬರೆದಿರುವ ಮುನ್ನುಡಿ ತುಂಬ ಅರ್ಥಪೂರ್ಣವಾಗಿದೆ. ಮುನ್ನುಡಿಯಲ್ಲಿ ಮೃತ್ಯುಂಜಯರವರು ಎಲ್ಲಿಯೂ ಭಾವುಕರಾಗದೆ ಗೋಡೆಯವರ ಬದುಕಿನ ಸಂಕೀರ್ಣ ನೆಲೆ ಅರ್ಥ ಮಾಡಿಕೊಂಡವರಾಗಿ ನೈಜತೆಯಿಂದ ಬರೆದಿದ್ದಾರೆ. ಹೊರದೇಶದಲ್ಲಿದ್ದರೂ ಅವರನ್ನು ನೋಡಿದ ದಿನಗಳು ಮತ್ತು ಆಟ ಆಡಿದ ಪ್ರಸಂಗಗಳನ್ನು ಸೂಕ್ಷ್ಮ ಮನಸ್ಸಿನಿಂದ ನೋಡಿ ವಿಶ್ಲೇಷಣಾತ್ಮಕವಾಗಿ ಚಿತ್ರಿಸಿದ್ದಾರೆ.

ಯಕ್ಷಗಾನ ಕಲಾವಿದರೆಂದರೆ ಪ್ರಾರಂಭದ ದಿನಗಳಲ್ಲಿ ಕೆಲಸಕ್ಕೆ ಬಾರದವರೆಂದು ಭಾವಿಸುವ ಕಾಲ. ಅದರಲ್ಲೂ ಶ್ರೀಮಂತರಲ್ಲಿ, ಮಡಿವಂತರಲ್ಲಿ ಅದು ಹೆಚ್ಚಿಗೆ ಕಂಡು ಬರುತ್ತಿತ್ತು. ಇಂದು ಎಲ್ಲಾ ಕಡೆಯಿಂದಲೂ ಸಾಮಾಜಿಕ ಮನ್ನಣೆ, ವೃತ್ತಿಗೌರವ, ಪ್ರತಿಷ್ಠೆಗಳು ದೊರೆಯುತ್ತಿವೆ. ಕೆರೆಮನೆ ಶಿವರಾಮ ಹೆಗಡೆಯಂತಹವರೇ ತುಂಬ

ನೋವನ್ನು ಅನುಭವಿಸಬೇಕಾಗಿತ್ತು. ಆದರೂ ಮಹಾಬಲ ಹೆಗಡೆ, ದೇವರು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಶಂಭು ಹೆಗಡೆ, ಗಜಾನನ ಹೆಗಡೆಯವರನ್ನೂ ಶ್ರಮವಹಿಸಿ ಬೆಳೆಯಿಸಿದರು. ಇವರೆಲ್ಲರ ಜೊತೆಯಲ್ಲಿ ಗೋಡೆಯವರು ಬೆಳೆಯುತ್ತ ಬಂದರೆಂದು ಲೇಖಕರು ವಿಶ್ಲೇಷಿಸಿದ್ದಾರೆ.

ಎಚ್. ಭಾಸ್ಕರರಾವ್‌ರವರು ಗೋಡೆಯವರ ಇಡೀ ಬಣ್ಣದ ಬದುಕಿನಲ್ಲಿ ಮರಗುಡಿಮೇಳ, ಕೆರೆಮನೆ ಮೇಳ, ಹಣಜಿಬೈಲ್ ಮೇಳ, ಹುಕ್ಲಮಕ್ಕಿ ಮೇಳ, ಇಡಗುಂಜಿ ಮೇಳ ಅಮೃತೇಶ್ವರಿ ಮೇಳಗಳಲ್ಲಿ ಯಾವ್ಯಾವ ಪ್ರಸಂಗಗಳನ್ನು ಮಾಡುತ್ತಿದ್ದರು, ಆ ಮೇಳಗಳಲ್ಲಿ ಯಾವ ಪಾತ್ರಕ್ಕೆ ಜೀವ ತುಂಬುತ್ತಿದ್ದರು ಎಂಬುದನ್ನು ತಿಳಿಸಿದ್ದಾರೆ. ಅಲ್ಲದೆ ಕೆಲವು ಮೇಳಗಳು ಇದ್ದೂ ಇಲ್ಲದಂತಾದ ವಿಚಾರಗಳನ್ನೂ ತಿಳಿಸಿದ್ದಾರೆ. ಬಚಗಾರು ಮೇಳ, ಪಂಚಲಿಂಗೇಶ್ವರ ಮೇಳ, ಶಿರ್ಸಿ ಮೇಳಗಳು ಅಷ್ಟೊಂದು ಪ್ರಬುದ್ಧತೆಗೆ ಬರಲು ಪ್ರಯತ್ನಿಸಿದರೂ ಆರ್ಥಿಕ ಹಿನ್ನಡೆಯಿಂದ ಹಿಂದೆ ಸರಿದವು ಎಂಬುದನ್ನೂ ಲೇಖಕರು ತಿಳಿಸುತ್ತಾರೆ.

ಗೋಡೆಯವರ ಬಣ್ಣದ ಬದುಕಿನಲ್ಲಿ ಯಾರೂ ಮರೆಯಲಾಗದ ಪಾತ್ರವೆಂದರೆ ಗದಾಯುದ್ಧ ಅಥವಾ ರಕ್ತರಾತ್ರಿಯ ಕೌರವ. ನಟನಿಗೂ ಅಚ್ಚುಮೆಚ್ಚಿನ ಪಾತ್ರ, ಅದೇ ರೀತಿ ಪ್ರೇಕ್ಷಕರಿಗೂ 'ಕೌರವ' ಪಾತ್ರದಲ್ಲೇ ಗೋಡೆಯವರನ್ನು ನೋಡಬೇಕೆಂಬ ಹುಚ್ಚು ಮನಸ್ಸು. ಈ ಪಾತ್ರಕ್ಕೆ ಎಲ್ಲಿಲ್ಲದ ಜನಮನ್ನಣೆ ದೊರೆತಿದೆ. ಇಂತಹ ಪಾತ್ರ ಗೋಡೆಯವರಿಗೆ ಕೆರೆಮನೆ ಶಿವರಾಮ ಹೆಗಡೆಯವರ ಪ್ರಭಾವಳಿಯಿಂದ ಬಂದಿರುವಂತಹದ್ದು ಎಂಬುದನ್ನು ಪಾತ್ರಧಾರಿಯಿಂದಲೇ ತಿಳಿದು ಲೇಖಕರು ಹೇಳಿದ್ದಾರೆ. ಅಲ್ಲದೆ ಬಡಗ ತಿಟ್ಟಿನಲ್ಲಿ ಕೌರವನ ಪಾತ್ರವನ್ನು ಇಷ್ಟೊಂದು ಅದ್ಭುತವಾಗಿ ನಟಿಸಿದ ಮತ್ತೊಬ್ಬರಿಲ್ಲವೆಂಬುದನ್ನು ತಿಳಿಸಿದ್ದಾರೆ.

ಈ ಕೃತಿಯಲ್ಲಿ ಗೋಡೆಯವರು ಅಭಿನಯಿಸಿದ ಪ್ರಮುಖ ಪಾತ್ರಗಳ ಬಗೆಗೆ ಸವಿಸ್ತಾರವಾಗಿ ಹೇಳುತ್ತಾರೆ. ಅದರಲ್ಲಿ 'ಬ್ರಹ್ಮಕಪಾಲ'ದ ಬ್ರಹ್ಮನಪಾತ್ರ, 'ಕೃಷ್ಣಪ್ರಿಯ' ಪ್ರಸಂಗದ ಅಕ್ರೂರ ಪಾತ್ರ, 'ನಳದಮಯಂತಿ'ಯ ಋತುಪರ್ಣ ಪಾತ್ರ, 'ಪ್ರಚಂಡ ವಿಶ್ವಾಮಿತ್ರ' ಪ್ರಸಂಗದ ತ್ರಿಶಂಕು, 'ಮಾಯಾಮೃಗಾವತಿ' ಪ್ರಸಂಗದ ಸಹಸ್ರಾನಿಕ ಪಾತ್ರ (ಈ ಪಾತ್ರವನ್ನು ಮೊದಲರ್ಧದಲ್ಲಿ ಚಿಟ್ಟಾಣಿ ರಾಮಚಂದ್ರಹೆಗಡೆ ನಿರ್ವಹಿಸಿದರೆ ನಂತರದರ್ಧದ್ದು ಗೋಡೆಯವರದಾಗಿತ್ತು), ಸುಧನ್ವಾರ್ಜುನ ಅರ್ಜುನ, ಕೃಷ್ಣಾರ್ಜುನದ ಅರ್ಜುನ ಪಾತ್ರಗಳನ್ನೂ ನಿರ್ವಹಿಸಿದ್ದಾರೆ. ಇಷ್ಟೇ ಅಲ್ಲದೆ ಸ್ತ್ರೀ ಪಾತ್ರಗಳಲ್ಲಿ ಎಲ್ಲಿಲ್ಲದ ಆಸಕ್ತಿಯೂ ಇತ್ತು. ಹೀಗೆ 'ಪ್ರಸಂಗವೆಂದರೆ ಇಂತಹ ಪಾತ್ರ ಗೋಡೆಯವರದು

ಇರುತ್ತದೆ'ಂಬುವಷ್ಟರ ಮಟ್ಟಿಗೆ ಜನಮನ್ನಣೆ ಪಡೆದವರಾಗಿದ್ದರೆಂದು ಲೇಖಕರು ಎಳೆ ಎಳೆಯಾಗಿ ಬಿಡಿಸುತ್ತಾ ಸಾಗುತ್ತಾರೆ.

ಒಟ್ಟಾರೆ ಕಲಾವಿದನಾದವನಿಗೆ ತಾನು ನಿರ್ವಹಿಸಿದ ಪಾತ್ರ ಪ್ರೇಕ್ಷಕರಿಗೆ ಇಷ್ಟವಾದರೆ ಸಾಕೆನ್ನುವ ಧನ್ಯತಾಭಾವದಲ್ಲಿರುತ್ತಾನೆ. ಅದರಾಚೆ ಎಷ್ಟೇ ಬಡತನವಿದ್ದರೂ ಅದನ್ನು ಮರೆಯಿಸಿಕೊಳ್ಳಲು ಪಾತ್ರಗಳಲ್ಲಿ ಮುಳುಗುತ್ತಾನೆ. ಬೇಂದ್ರೆಯವರ ಮಾತು "ಬಡತನವೆನಗಿರಲಿ ಅದರ ಸವಿಯನ್ನಷ್ಟೇ ಉಣಿಸುವೆನು ರಸಿಕ ನಿನಗೆ " ಎಂಬುವು ದರಲ್ಲಿ ಎಷ್ಟೋ ಕಲಾವಿದರು, ಸಾಹಿತಿಗಳು ಜೀವನ ಸವೆಸಿ ಹೋಗಿದ್ದಾರೆ. ಹಾಗೆ ಸವೆಸುತ್ತಿದ್ದಾರೆ. ಅಂತವರಲ್ಲಿ ಗೋಡೆ ನಾರಾಯಣ ಹೆಗಡೆಯವರು ಒಬ್ಬರಾಗಿದ್ದಾರೆ. ತಮ್ಮ ಇಡೀ ಬಣ್ಣದ ಬದುಕಿನ ಹಾದಿಯಲ್ಲಿ ಮುಳ್ಳು ಕಲ್ಲುಗಳ ನಡುವೆ ಸಾಗುತ್ತಾ ತಮ್ಮನ್ನು ಇಷ್ಟ ಪಡುವ ಪ್ರೇಕ್ಷಕ ವರ್ಗಕ್ಕೆ ರಸನೆ ನೀಡಿ ಇಂದು ಬಡಗು ತಿಟ್ಟಿನ ಯಕ್ಷಗಾನದಲ್ಲಿ ಪ್ರಬುದ್ಧ ಕಲಾವಿದರಾದ ಗೋಡೆಯವರ ಜೀವನ ಕಥನವನ್ನು ಎಂ.ಕೆ. ಭಾಸ್ಕರರಾವ್ ತುಂಬ ಅಚ್ಚುಕಟ್ಟಾಗಿ ಒಪ್ಪುವಂತಹ ಭಾಷೆಯನ್ನು ಬಳಸಿ, ಓದುಗರ ಪ್ರೀತಿಗೆ ಪಾತ್ರರಾಗಿರುವುದು ಅತಿಶಯೋಕ್ತಿಯಲ್ಲವೆಂದು ಭಾವಿಸುತ್ತೇನೆ.

ಈ ಕೃತಿಯನ್ನು ಅನೇಕ ವರ್ಣಚಿತ್ರಗಳು, ಕಪ್ಪು ಬಿಳುಪು ಚಿತ್ರಗಳು ಹಾಗೂ ರೇಖಾಚಿತ್ರಗಳನ್ನು ಉತ್ತಮ ಹಾಲು ಕಾಗದದಲ್ಲಿ ಸುಂದರವಾಗಿ ಮುದ್ರಿಸಿರುವ 'ಪ್ರೇಮ ಪ್ರಕಾಶನ' ದವರೂ ಸಹ ತುಂಬ ಅಭಿನಂದನಾರ್ಹರು.

ಕೆ.ವಿ. ಮುದ್ದುವೀರಪ್ಪ

ಅಧ್ಯಾಯ – ೩

ಜಾನಪದ ಸಂಗ್ರಹಗಳು

ಗೀಗೀ ಪದಗಳ ಶಿಸ್ತುಬದ್ಧ ಸಂಕಲನ

* **ಗುಡಲಾಲ ಮತ್ತು ಕಲ್ಲಪ್ಪ ಅವರ ಗೀಗೀ ಪದಗಳು–** ಸಂ: ಎಂ.ಜಿ. ಬಿರಾದಾರ, ಬಿ.ಎಸ್. ಕೋಟ್ಯಾಳ. ಪ್ರ: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು – ೬. ಪುಟಗಳು – ೨೦+೩೭೨; ಬೆಲೆ ರೂ. ೧೭೨/–

ನಮ್ಮ ಹಿರಿಯ ವಿದ್ವಾಂಸರಲ್ಲೊಬ್ಬರಾದ ಎಂ.ಜಿ. ಬಿರಾದಾರ ಹಾಗೂ ಅವರ ಶಿಷ್ಯ ಬಿ.ಎಸ್. ಕೋಟ್ಯಾಳ ಅವರು ೧೯೮೦ರ ದಶಕದಲ್ಲಿ (ಬಹುಶಃ ವಿಜಾಪುರ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ) ತಿರುಗಾಡಿ ಸಂಗ್ರಹಿಸಿದ ಹಲವಾರು ನೂರು ಗೀಗೀ ಪದಗಳಲ್ಲಿ ಕೇವಲ ಎಂಭತ್ತಾರು ಹಾಡುಗಳು ಒಂದು ಸಂಪುಟವಾಗಿ ಈಗ ಪ್ರಕಟವಾಗುತ್ತಿವೆ. ಬಹುಶಃ ಡಿ.ಕೆ. ರಾಜೇಂದ್ರ ಅವರು ಮುಕ್ತ ವಿಶ್ವ ವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿರದಿದ್ದರೆ ೨೦೧೧ರಲ್ಲಿ ಅಲ್ಲಿಂದ ಇಷ್ಟೊಂದು ಜಾನಪದ ಕೃತಿಗಳು ಪ್ರಕಟವಾಗುತ್ತಿರಲಿಲ್ಲವೇನೋ !

ಗೀಗೀ ಪದಗಳಲ್ಲಿ ನಾಗೇಶಿ ಮತ್ತು ಹರದೇಶಿ ಎಂಬ ಎರಡು ಮುಖ್ಯ ವರ್ಗಗಳಿದ್ದು ಆ ಎರಡೂ ಸಂಪ್ರದಾಯಗಳ ಹಾಡುಗಳು ಇಲ್ಲಿವೆ. ಇವನ್ನು ಮುಖ್ಯವಾಗಿ ಗುಡಲಾಲ ಹಾಗೂ ಕಣ್ಣೆಕಲ್ಲಪ್ಪ ಅವರುಗಳು ರಚಿಸಿ ಪ್ರಚುರಪಡಿಸಿದ್ದು, ಇದರಲ್ಲಿ ಗುಡಲಾಲನ ೪೬ ನಾಗೇಶಿ ಪದಗಳೂ ಕಲ್ಲಪ್ಪನ ೨೨ ಹರದೇಶೀ ಪದಗಳೂ ಇದ್ದು ಇತರರ ೧೫ಹರದೇಶೀ ಹಾಡುಗಳೂ ಹಣಮಂತ ಎಂಬಾತನ ಮೂರು ಗೀಗೀ ಪದಗಳೂ ಇವೆ. ಹಾಡುಗಳನ್ನು ಚಂದವಾಗಿ ಸಂಪಾದಿಸಲಾಗಿದ್ದು, ಹದಿನೈದು ಪುಟಗಳ ಪ್ರಸ್ತಾವನೆಯಲ್ಲಿ ಗೀಗೀ ಪದಗಳ ಸ್ವರೂಪ, ವರ್ಗಗಳು ಹಾಗೂ ವಕ್ತೃ ವಿವರಗಳನ್ನು ನೀಡಲಾಗಿದೆ. ಬೇರೆ ಅನುಬಂಧ ಏನೂ ಇಲ್ಲ. ಅದರ ಅಗತ್ಯವೂ ಅಷ್ಟಾಗಿ ಕಾಣುವುದಿಲ್ಲ. ಆ ಭಾಗದ ಕೆಲವು ದೇಸೀ ಪದಗಳ ಅರ್ಥಕೋಶ ಕೊಟ್ಟಿದ್ದರೆ ಇತರ ಭಾಗದವರಿಗೆ ಉಪಯೋಗ ಆಗುತ್ತಿತ್ತು. ಅದಿಲ್ಲದೆ ಅಂಥಾ ತೊಂದರೆ ಏನೂ ಆಗಿಲ್ಲ.

ಇಲ್ಲಿ–ಚಾಂದಕವಟೆಯ ಗುಡಲಾಲ ರಚಿಸಿರುವ ನಾಗೇಶೀ ಹಾಡುಗಳಲ್ಲಿ ತತ್ವಪದಗಳು, ಸತ್ಯಹರಿಶ್ಚಂದ್ರನ ಪದ, ಆದಿಶಕ್ತಿ–ಇಂಥ ಪದಗಳಿವೆ. ಕಲ್ಲಪ್ಪನ ಹರದೇಶೀ ಹಾಡುಗಳಲ್ಲಿ ಖಾಜಾ ಬಂದೇನವಾಜನ ಮೇಲೆ, ಮಹಬೂಬ ಸುಬಾನಿಯ ಮೇಲಿನ

ಪದಗಳೂ ಇವೆ. ಹುಟ್ಟಿನಿಂದ ಬಂದ ಜಾತಿ ಅನ್ಯ ದೇವರನ್ನೂ ಕುರಿತು ಹಾಡಲಿಕ್ಕೆ ಇವರಿಗೆ ಅಡ್ಡಿಯಾಗಲಿಲ್ಲ ಎಂದು ಇದು ತೋರಿಸುತ್ತದೆ. ಇಂಥ ಅನೇಕ ಉದಾಹರಣೆಗಳನ್ನು ನಾವು ಜನಪದರ ಜೀವನದಲ್ಲಿ ಕಾಣಬಹುದು. ಸೌಹಾರ್ದತೆ ಜನಪದರ ಜೀವನಮೌಲ್ಯವಾಗಿತ್ತು.

ಇಲ್ಲಿರುವ–ಸಿದ್ಧರಾಮ, ಶರಣಬಸವ, ಶಂಕರ, ಅನಸೂಯೆ ಮೊದಲಾದವರ ಕುರಿತ ಹಾಡುಗಳಲ್ಲಿ ಪ್ರಸಿದ್ಧ ಪುರಾಣಗಳಲ್ಲಿರುವುದಕ್ಕಿಂತ ತುಸು ಭಿನ್ನವಾದ ಕೆಲವಂಶಗಳು ಕಾಣುತ್ತವೆ.

ಗೀಗೀ ಸಂಪ್ರದಾಯದ ಅಧ್ಯಯನಕ್ಕೆ ಹಾಗೂ ಐತಿಹಾಸಿಕ/ಪೌರಾಣಿಕ ವ್ಯಕ್ತಿಗಳ ಬಗೆಗಿನ ತೌಲನಿಕ ಅಧ್ಯಯನಕ್ಕೆ ಈ ಸಂಕಲನ ತುಂಬ ಉಪಯುಕ್ತವಾಗಿದೆ. ಇಂಥದೊಂದು ಶ್ರಮಸಾಧ್ಯವಾದ, ಶಿಸ್ತುಬದ್ಧವಾದ ಸಂಕಲನಕ್ಕಾಗಿ ಸಂಪಾದಕರನ್ನು ಅಭಿನಂದಿಸಬೇಕಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಜಾನಪದ ವೀರನನ್ನು ಕುರಿತ ಕಾವ್ಯ

* **ವೀರಬೊಮ್ಮನಹಳ್ಳಿ ದಿಬ್ಬದ ವೀರಬೊಮ್ಮಣ್ಣನ ಕಾವ್ಯ**– ಸಂಗ್ರಹ – ಜಂಗಮರಹಳ್ಳಿ ಮುದ್ದವೀರಪ್ಪ, ಪ್ರ. ಸಾಹಿತ್ಯ ಪ್ರಕಾಶನ, ರಂಗನಾಥ ನಿಲಯ, ೭ನೇ ಕ್ರಾಸ್, ಚಂದ್ರಮೌಳೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು – ४. ಪುಟಗಳು ೧೮+೬४; ಬೆಲೆ ರೂ. ೭೦/–

ಇದು ಶಿರಾ ತಾಲ್ಲೂಕಿನ (ತುಮಕೂರು ಜಿಲ್ಲೆ) ಒಬ್ಬ ಗ್ರಾಮೀಣ ಜಾನಪದ ವೀರನನ್ನು ಕುರಿತ ಕಥನ ಕಾವ್ಯ. ಶ್ರೀ ಜಂಗಮರಹಳ್ಳಿ ಮುದ್ದವೀರಪ್ಪ ಇದನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ವೀರಬೊಮ್ಮಣ್ಣ ಎಂಬ ಕುಂಚಿಟಿಗರ ಯುವಕ ತನ್ನ ಅತ್ತಿಗೆಯ ಮಗುವಿಗೆ ಹಾಲಿಗೆಂದು ಹಸುಗಳನ್ನು ಸಂಪಾದಿಸಿ ತರಲೆಂದು ಮನೆಯಿಂದ ಹೊರಟು ಬೇರೊಂದು ಗ್ರಾಮಕ್ಕೆ ಹೋಗಿ ಅಲ್ಲಿನ ಗೊಲ್ಲರ ವಿಶ್ವಾಸ ಸಂಪಾದಿಸಿ ಅವರ ತುರುಗಳನ್ನು ಕಾಯಲು ಸೇರಿಕೊಳ್ಳುವುದು, ಅವರಿಲ್ಲದ ದಿನ ನೋಡಿ ಮೇಯಿಸಲು ತಂದಿದ್ದ ಎಲ್ಲ ತುರುಗಳನ್ನೂ ತನ್ನ ಗ್ರಾಮಕ್ಕೆ ಹೊಡೆದು ಕೊಂಡು ಬರುವುದು. ಇದರಿಂದ ಅವರು ತೊಂದರೆಗೊಳಗಾಗಿ ಗೋಳಾಡುವುದು. ಇವನ ತಂದೆ ತಾಯಿ ಕೂಡ ಇವನ ಕಾರ್ಯ ಒಪ್ಪದೆ ಇವನನ್ನು ಮನೆಯಿಂದ ಆಚೆ ಕಳಿಸುವುದು, ಹಾಗೆ ತುರುಗಳೊಡನೆ ಹೊರಟು ಬಂದ ಇವನು ಬೇರೊಂದೆಡೆ ನೆಲೆಸಿ ಜನಪದ ದೈವವಾಗುವುದು ಇಲ್ಲಿನ ವಸ್ತು. ಕಥನದಲ್ಲಿ ಸಾತತ್ಯಕ್ಕೆ ಭಂಗ ಬಂದಿದೆ ಎಂದು ಸಂಪಾದಕರೇ ಹೇಳಿದ್ದಾರೆ. ಕಥಾನಾಯಕ ದೇವತ್ವಕ್ಕೆ ಏರಿದ್ದು ಹೇಗೆ ಎಂಬುದಕ್ಕೆ ವಿವರಣೆ ಕೊಡುವ ಕಾವ್ಯಭಾಗ ಗಾಯಕಿಯರಿಗೆ ಮರೆತು ಹೋಗಿರಬೇಕು.

ಬಹುಮಟ್ಟಿಗೆ ತ್ರಿಪದಿ, ಕೆಲವೆಡೆ ಅರೆ ತ್ರಿಪದಿಗಳಿಂದ ಕೂಡಿರುವ ಈ ಕಾವ್ಯದ ಸಂಪಾದನೆ ತೃಪ್ತಿಕರವಾಗಿದೆ. ಉಪಯುಕ್ತ ಪ್ರಸ್ತಾವನೆಯಿದೆ. ಅನುಬಂಧದಲ್ಲಿ ವಕ್ತೃ ವಿವರ, ಅರ್ಥಕೋಶ, ಸ್ಥಳವಿವರಗಳಿವೆ. ಈ ವೀರನ ಬಯಲುಗುಡಿ ಇರುವಡೆಯಲ್ಲಿನ ಶಿಲ್ಪಗಳ ಚಿತ್ರವಿದ್ದರೂ ಅದರ ಮುದ್ರಣ ಸರಿಯಾಗಿ ಬಂದಿಲ್ಲ. ಅಲ್ಲಿ ನಡೆಯುವ ಜಾತ್ರೆಯ ವಿವರ ಪ್ರಸ್ತಾವನೆಯಲ್ಲಿದೆ. ತುಮಕೂರು ಜಿಲ್ಲೆಯ ಜನಪದ ವೀರರ ಅಧ್ಯಯನಕ್ಕೆ ಈ ಲೇಖಕರು ಪ್ರಕಟಿಸಿರುವ ಎರಡು ಕಥನ ಕಾವ್ಯಗಳು ಒಳ್ಳೆಯ ಆಕರ ಒದಗಿಸಿವೆ ಎನ್ನಬಹುದು.

ಎಸ್.ಪಿ. ಪದ್ಮಪ್ರಸಾದ್

ಗಿಳಿಹಾಡು ಮತ್ತು ಜೋಗಿಹಾಡು

*** ಗಿಳಿ ಹಾಡು ಮತ್ತು ಜೋಗಿ ಹಾಡು :** ಸಂಪಾದಕರು ಬಿ.ಎಂ. ಗೀತಾ. ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.; ಮಾನಸಗಂಗೋತ್ರಿ, ಮೈಸೂರು–೬.
ಪುಟಗಳು – ೨೪+೧೨೪; ಬೆಲೆ ರೂ. ೫೦

ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ಹಸ್ತಪ್ರತಿಯಿಂದ ಸಂಪಾದಿಸಿರುವ ಕೃತಿ. ಹಸ್ತಪ್ರತಿಯ ಆಧಾರದಿಂದ ಒಂದು ಕಾವ್ಯವನ್ನು ಸಂಪಾದಿಸುವಾಗ ಆ ಹಸ್ತಪ್ರತಿಯ ಬಗ್ಗೆ ಆದಷ್ಟು ಹೆಚ್ಚು ವಿವರಗಳನ್ನು ಕೊಡಬೇಕಾದುದು ಒಂದು ಕ್ರಮ. ಅದರಲ್ಲೂ ಜಾನಪದ ಹಾಡುಗಳನ್ನು ಬರೆದಿಟ್ಟಿದ್ದರಂತೂ ಅದು ಇನ್ನಷ್ಟು ಅಗತ್ಯವಾಗುತ್ತದೆ. ಯಾಕೆಂದರೆ ಮೌಖಿಕ ಪರಂಪರೆಯಿಂದ ಅದು ಯಾವಾಗ ಲಿಪಿಬದ್ಧವಾಯಿತು ಎಂದು ತಿಳಿಯುತ್ತದೆ. ಆದರೆ ಇಲ್ಲಿ ಹಸ್ತಪ್ರತಿಯ ಬಗ್ಗೆ ಯಾವ ವಿವರವೂ (ಕೊನೇ ಪಕ್ಷ ಅದು ಕಾಗದದ್ದೋ ಅಥವಾ ಓಲೆ ಗರಿಯದ್ದೋ ಎಂಬುದೂ ಕೂಡಾ) ಇಲ್ಲ. ಲಿಪಿಬದ್ಧವಾದ ದಿನಾಂಕ ಹಾಗೂ ಸ್ಥಳದ ಉಲ್ಲೇಖವಿದೆಯೋ ಇಲ್ಲವೋ ಎಂಬುದೂ ಕೂಡಾ ಹೇಳಲ್ಪಟ್ಟಿಲ್ಲ. 'ಕವಿಯ ಉಲ್ಲೇಖವಿಲ್ಲ' ಎಂಬುದನ್ನು ಮಾತ್ರ ಸಂಪಾದಕರು ಸ್ಪಷ್ಟವಾಗಿ ಹೇಳಿದ್ದಾರೆ.

ಈ ಕೃತಿಯಲ್ಲಿ ಎರಡು ಜಾನಪದ ಕಥನ ಗೀತೆಗಳಿವೆ. ಎರಡೂ ಸಹ ಮಹಾಭಾರತಕ್ಕೆ, ಅರ್ಜುನನ ಕತೆಗೆ ಸಂಬಂಧಿಸಿದವು. ಅರ್ಜುನ ನಿರ್ಲಕ್ಷಿಸಿದ್ದ ಇಬ್ಬರು ರಾಣಿಯರಾದ ಚಿತ್ರಾ ಮತ್ತು ಕುಸುಮತಿಯರ ಸಂಕಟವನ್ನು ಕೇಳಿ ಶಿವಪಾರ್ವತಿಯರು ಕೈಲಾಸದಿಂದ ಎರಡು ಗಿಳಿಗಳನ್ನು ಕಳಿಸುವುದು, ಅವು ಇಲ್ಲಿ ಬಂದು ಅರ್ಜುನ, ದ್ರೌಪದಿ, ಅವರ ಚೆಲುವು, ಅರಮನೆಯ ವೈಭವಗಳನ್ನು ಕಂಡು, ಮೆಚ್ಚಿ, ಅನಂತರ ಚಿತ್ರಾ ಮತ್ತು ಕುಸುಮತಿಯರ ಬಳಿ ಬಂದು ಅವರೊಡನೆ ಮಾತಾಡಿ, ಅವರ

ಹೊಟ್ಟೆಯಲ್ಲಿ ಮಣಿಪುರಕ್ಕೆ ಅರಸಾಗುವ ಮಗ ಹುಟ್ಟುತ್ತಾನೆ ಎಂದು ಹರಸಿ ಮರಳಿ ಹಾರಿಹೋಗುತ್ತವೆ. ಆ ರಾಣಿಯರು ಅರ್ಜುನನ ಚಿತ್ರ ಬರೆವಂಥ ಚಿತ್ರಕಾರನನ್ನು ಹುಡುಕುತ್ತಾ ಪಟ್ಟಣದೊಳಗೆ ಬಂದಾಗ, ಅರ್ಜುನನಿಗೆ ಅವರ ನೆನಪು ಬಂದು ಆಗಷ್ಟೇ ಅಭ್ಯಂಜನ ಮಾಡಿದ್ದ ಅರ್ಜುನ ದುಃಖದಿಂದ ಮಂಚದ ಮೇಲೆ ಮಲಗುತ್ತಾನೆ. ಚಿಂತೆಗೊಂಡ ದ್ರೌಪದಿ ಅವನಿಂದ ಕಾರಣ ತಿಳಿದು ಅವನನ್ನು ಸಂತೈಸುತ್ತಾಳೆ. ಹಾಡು ಅಲ್ಲಿಗೆ ಕೊನೆಗೊಳ್ಳುತ್ತದೆ. ಮುಂದೇನಾಯಿತೆಂದು ತಿಳಿಯುವುದಿಲ್ಲ. ಅಂದರೆ – ಇಲ್ಲಿನ ಕಥನ ಅಪೂರ್ಣವಾದಂತೆ ಕಾಣುತ್ತದೆ. ಈ ಅಂಶ ಸಂಪಾದಕರ ಗಮನ ಸೆಳೆದಂತಿಲ್ಲ.

ಎರಡನೆಯ ಗೀತೆ – **ಜೋಗಿ ಹಾಡು.** ಇದು 'ಅರ್ಜುನ ಜೋಗಿ ಹಾಡು' ಎಂದು ಜನಪ್ರಿಯವಾಗಿರುವ, ಅನೇಕ ಕಡೆಗಳಲ್ಲಿ ಪ್ರಕಟವಾಗಿರುವ ಕಥೆಯನ್ನುಳ್ಳ ಗೀತೆಯೇ. ಅರ್ಜುನ ಕಾರಣಾಂತರದಿಂದ ಜೋಗಿ ವೇಷವನ್ನು ಹಾಕಿಕೊಳ್ಳುವುದು, ಅದೇ ವೇಷದಲ್ಲಿ ಅವನು ಚಿತ್ರಾ, ಕುಸುಮತಿಯರ ಅರಮನೆಗೆ ಬಂದು ಅವರನ್ನು ಕಾಡಿಸುವುದು, ಅವರಿಗೆ ಅವನ ಗುರುತು ಸಿಕ್ಕದೆ ತಪ್ಪಿಸಿಕೊಂಡು ಬಂದು ದ್ರೌಪದಿಯಲ್ಲಿ ತಮ್ಮ ತೊಂದರೆ ಹೇಳಿಕೊಳ್ಳುವುದು, ಆಗ ದ್ರೌಪದಿ 'ಅವನೇ ನಿಮ್ಮ ರಾಯ' ಎಂದು ಹೇಳಿ ಅವನೊಡನೆ ಇವರ ಭೇಟಿ ಏರ್ಪಡಿಸುವುದು– ಇವೆಲ್ಲ ಬರುತ್ತವೆ.

ಈ ಸಂಗ್ರಹಕ್ಕೆ ಸಂಪಾದಕಿ ಇಪ್ಪತ್ತೆರಡು ಪುಟಗಳ ಒಂದು ಪ್ರಸ್ತಾವನೆ ಬರೆದಿದ್ದಾರೆ. ಅದರಲ್ಲಿ ಅವರು ಮಾಡಿರುವ ಒಂದು ಒಳ್ಳೆಯ ಕೆಲಸವೆಂದರೆ ಅನ್ಯತ್ರ ದೊರೆಯುವ ಎರಡು ಮೂರು ಜೋಗಿ ಹಾಡಿನ ಆಕರಗಳೊಡನೆ ಇಲ್ಲಿನ ಪಾಠವನ್ನು ಅಲ್ಲಲ್ಲಿ ತುಲನೆ ಮಾಡಿರುವುದು. (ಇಂಥ ಹೋಲಿಕೆ–ವ್ಯತ್ಯಾಸಗಳ ಒಂದು ಪಟ್ಟಿ ಕೊಟ್ಟಿದ್ದರೆ ಚೆನ್ನಾಗಿತ್ತು.) ಇದರಿಂದ ತೌಲನಿಕ ಅಧ್ಯಯನಾಸಕ್ತರ ಗಮನವನ್ನು ಅತ್ತ ಸೆಳೆಯುವುದು ಸಾಧ್ಯವಾಗುತ್ತದೆ.

ಈ ಹಾಡುಗಳ ಚರಣಗಳು ನಾಲ್ಕು ಪಾದಗಳನ್ನು ಹೊಂದಿವೆ. ಹಾಗೆಂದು ಇವು 'ಮಾನೌಮಿ ಪದಗಳ'ಲ್ಲಿ ಕಂಡು ಬರುವ ಚೌಪದನದ ಛಂದಸ್ಸಲ್ಲ. ಸಾಂಗತ್ಯವೂ ಅಲ್ಲ. ಇವುಗಳ ಛಂದಸ್ಸಿನ ಬಗ್ಗೆ ಪ್ರಸ್ತಾವನೆಯಲ್ಲಿ ಯಾವ ಚರ್ಚೆಯೂ ಇಲ್ಲ.

ಅನುಬಂಧದಲ್ಲಿ ಮೂರು ಪುಟಗಳದ್ದೊಂದು ಅರ್ಥಕೋಶವಿದೆ. ಅದು ಸಾಕು. ಆದರೆ 'ಆಶಯ ಸೂಚಿ' ಯೊಂದನ್ನು ಕೊಟ್ಟಿದ್ದರೆ ಉಪಯುಕ್ತವಾಗಿರುತ್ತಿತ್ತು. ಒಟ್ಟಿನಲ್ಲಿ ಇದೊಂದು ಉಪಯುಕ್ತ ಪ್ರಕಟಣೆ.

ಎಸ್.ಪಿ. ಪದ್ಮಪ್ರಸಾದ್

ದೇವರ ಪದಗಳ ಸಂಕಲನ

* **ಸಾವಿರದ ಜನಪದ ದೇವರ ಪದಗಳು;** ಬಿ.ಎಸ್. ಸ್ವಾಮಿ –ಪ್ರ: ಸಿ.ಪಿ. ಇನೋವೇಷನ್ಸ್, ನಂ.೧೮. ೧೭ನೇ ಅಡ್ಡರಸ್ತೆ, ಕಬ್ಬನ್‌ಪೇಟೆ, ಬೆಂಗಳೂರು – ೦೨. ಪುಟಗಳು– ೧೧೦೪, ಬೆಲೆ ರೂ. ೭೩೦/–

ಬಿ. ಸಿದ್ಧಲಿಂಗಸ್ವಾಮಿಯವರು ಸುಮಾರು ೨೦೧ ಪ್ರಕಟಿತ ಜಾನಪದ ಕೃತಿಗಳನ್ನು ಪರಿಶೀಲಿಸಿ ಒಂದು ಸಾವಿರ ಪುಟಕ್ಕೂ ಮೀರಿದ ವ್ಯಾಪ್ತಿಯ ಈ ಕೃತಿಯನ್ನು ಸಂಪಾದಿಸಿ ಆಕರ್ಷಕ ರೀತಿಯಲ್ಲಿ ಪ್ರಕಟಿಸಿದ್ದಾರೆ. ವಿವಿಧ ಬಗೆಯ ದೇವರುಗಳ ಬಗೆಗೆ ಇರುವ ಜನಪದ ಗೀತೆಗಳನ್ನು ಇಲ್ಲಿ ಅವರು ಸಂಗ್ರಹಿಸಿ ವರ್ಗೀಕರಿಸಿ ನೀಡಿದ್ದಾರೆ. ೫೬ ಪುಟಗಳ ಒಂದು ಪ್ರಸ್ತಾವನೆಯನ್ನೂ ಹಲವು ಪುಟಗಳ ಅನುಬಂಧವನ್ನೂ ನೀಡಿದ್ದಾರೆ.

ಕರ್ನಾಟಕದಲ್ಲಿನ ಕನ್ನಡ, ಕೊಂಕಣಿ ತುಳು ಹಾಗೂ ಕೊಡವ ಭಾಷೆಗಳಲ್ಲಿನ ಹಾಗೂ ಜೈನ, ಬ್ರಾಹ್ಮಣ, ಶೈವ, ಮತ್ತಿತರೆ ಜನಾಂಗದವರು ಹಾಡಿಕೊಳ್ಳುವ ದೇವರ ಪದಗಳು ಇದೇ ಮೊದಲ ಬಾರಿಗೆ ಒಂದು ಕಡೆ ಸಂಗ್ರಹಿತವಾಗಿ ಪ್ರಕಟವಾಗಿವೆ ಎಂಬುದೇನೋ ಪ್ರಶಂಸನೀಯ ವಿಚಾರವೇ. ಇದರಿಂದಾಗಿ ಕರ್ನಾಟಕದ ಸರ್ವಜನಾಂಗದ ದೈವಸ್ತುತಿಯ ಗೀತೆಗಳನ್ನು ಹಾಡುವವರಿಗೆ ಅವು ಒಂದೆಡೆ ಸಿಗುವುದಲ್ಲದೆ ಅಧ್ಯಯನಕಾರರಿಗೂ ಉಪಯುಕ್ತವಾಗುತ್ತದೆ. ಪದಗಳ ಸಂಗ್ರಹಕ್ಕಾಗಿ 'ನಾನು ಸಾವಿರಾರು ಪುಸ್ತಕಗಳನ್ನು ವಿವಿಧ ಗ್ರಂಥಾಲಯಗಳಿಂದ ಅವಲೋಕಿಸಬೇಕಾಯಿತು'– ಎಂದಿದ್ದಾರೆ. ಅವರ ಉತ್ಸಾಹ ಆಸಕ್ತಿಗಳು ಮೆಚ್ಚುಗೆಗೆ ಅರ್ಹ. ಇಲ್ಲಿ ಸೇರ್ಪಡೆಯಾಗಿರುವ ಬಹುತೇಕ ಹಾಡುಗಳು ಸಾಹಿತ್ಯಿಕ ದೃಷ್ಟಿಯಿಂದಲೂ ಉತ್ತಮವಾಗಿಯೇ ಇವೆ.

ಆದರೆ ಸಂಪಾದನಾ ಕಾರ್ಯದಲ್ಲಿ, ಬರವಣಿಗೆಯಲ್ಲಿ ಅನೇಕ ಕೊರತೆಗಳು, ದೋಷಗಳು ಉದ್ದಕ್ಕೂ ಕಾಣಿಸಿಕೊಂಡು 'ಇದು ಒಬ್ಬ ವಿದ್ವಾಂಸನ ಸಂಪಾದನಾ ಕಾರ್ಯ' ಎಂಬುದನ್ನೂ ಅನುಮಾನಿಸುವಂತೆ ಮಾಡುತ್ತವೆ. ಇಲ್ಲಿನ ದೋಷಗಳು ಮುಖ್ಯವಾಗಿ ಕೆಳಕಂಡ ವರ್ಗಕ್ಕೆ ಸೇರುತ್ತವೆ.

೧. ವಾಕ್ಯರಚನಾ ದೋಷಗಳು

ಕೆಲವೆಡೆ ವಾಕ್ಯ ರಚನೆಯೇ ಅರ್ಥವಾಗದ ಹಾಗೆ ಇದೆ. ಉದಾ– 'ಕೆಲವು ಹಾಡುಗಳನ್ನು ಸಂಪೂರ್ಣವಾಗಿಯೂ, ಸಂಕ್ಷಿಪ್ತವಾಗಿಯೂ ಉತ್ತಮ ಹಾಡುಗಳನ್ನು ಆಯ್ಕೆ ಮಾಡಿಕೊಂಡೆ' (ಪ್ರಸ್ತಾವನೆಯ ಮೊದಲ ಪುಟ)

೨. ಅರ್ಥ ಸಂದಿಗ್ಧತೆಯ ವಾಕ್ಯ ರಚನೆ

೧) 'ಈಗಲೂ ಗಣಪತಿಯ ದೇವಾಲಯ ಒಂದರಲ್ಲಿ ಅನೇಕ ಇಲಿಗಳು ವಾಸವಾಗಿದ್ದು ಭಕ್ತಾದಿಗಳು ಕೊಡುವ ತಿಂಡಿಯನ್ನು ತಿಂದು....' (ಪ್ರಸ್ತಾವನೆ –

ಪುಟ ೩೭)

(–ಯಾವ ಊರಿನ ಗಣಪತಿ ದೇವಾಲಯ? ಸ್ಪಷ್ಟತೆ ಬೇಡವೇ?)

೨) "ಕೊಡವ ಜನಪದ ಕಾವ್ಯದಲ್ಲಿ ಡಾ. ಡಿ.ಬಿ. ರಾಮಚಂದ್ರಾಚಾರ್ ಗ್ರಾಮಗಳಲ್ಲಿ ಏಳು ಸ್ತ್ರೀ ದೇವತೆಗಳು ನಿಲ್ಲುತ್ತಾರೆ" (ಪ್ರಸ್ತಾವನೆ. ಪು.೩೯)

ಇಂಥ ವಾಕ್ಯದ ಅರ್ಥವೇನೆಂದು ತಿಳಿಯಬೇಕು. ಗ್ರಾಮದ ಹೆಸರು ರಾಮಚಂದ್ರಾಚಾರ್ ಎಂದೇ. ಅಥವಾ ಗ್ರಾಮಗಳೇ ರಾಮಚಂದ್ರಚಾರ್‌ಗೆ ಸೇರಿದ್ದೇ?

೩. ಸಂಪಾದನಾ ಕಾರ್ಯಕ್ಕೆ ಸಂಬಂಧಿಸಿದ ದೋಷಗಳು

ಈ ನಿಟ್ಟಿನ ತಪ್ಪು ಅಸಂಖ್ಯವಾಗಿವೆ. ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಿದರೆ ಸಾಕು.

೧. ರತ್ನಾಕರವರ್ಣಿಯಂತಹ ಶಿಷ್ಟಕವಿಯ ಲಿಖಿತ ಗೀತೆಗಳನ್ನೂ ಸಹ ಜನಪದ ಗೀತೆಗಳೆಂದು ಅಂಗೀಕರಿಸಿ ಇಲ್ಲಿ ಸೇರಿಸಿಕೊಂಡಿರುವುದು.

೨. ೯೦೦ನೇ ಪುಟದಲ್ಲಿರುವ ಒಂದು ಹಾಡಿಗೆ 'ಸಾಹಿತ್ಯದಿಂದ ವೆಟೇಲುಂ' ಎಂಬ ಶೀರ್ಷಿಕೆ ಕೊಟ್ಟಿದ್ದಾರೆ. ಹೀಗೆಂದರೆ ಏನರ್ಥ?

೩. ಪ್ರಸ್ತಾವನೆಯಲ್ಲಿ ಕೆಲವು ಹಾಡುಗಳನ್ನು ಭಾಗಶಃ ಕೊಡುವುದನ್ನು ಸಮರ್ಥಿಸಿ ಕೊಳ್ಳುತ್ತಾ – "ಪುಟಗಳ ಸಂಖ್ಯೆ ಬೆಳೆಯುವ ದೃಷ್ಟಿಯಿಂದ ಅವುಗಳನ್ನು ಸಂಸ್ಕಾರಕ್ಕೆ ಒಳಪಡಿಸಬೇಕಾಯಿತು"– ಎಂದಿದ್ದಾರೆ. ಹೀಗೆ ಮಾಡುವ ಅಧಿಕಾರ ಸಂಪಾದಕನಿಗೆ ಎಲ್ಲಿದೆ?

೪. ವಿವಿಧ ಸಂಕಲನಗಳಿಂದ ಹಾಡುಗಳನ್ನು ಆರಿಸಿರುವುದರಿಂದ ಪ್ರತಿಹಾಡಿನ ಕೆಳಗೂ ಸಂಕಲನದ ಹೆಸರು ಮತ್ತು ವಕ್ತೃ– ವಿವರ, ಸಂಗ್ರಹಿಸಿದ ದಿನಾಂಕ ಕೊಡಬೇಕಿತ್ತು. ಸಂಕಲನದ ಸಂಪಾದಕರು ಮತ್ತು ಪ್ರಕಾಶಕರ ವಿವರಗಳನ್ನು ಅನುಬಂಧದ ಪಟ್ಟಿಯಲ್ಲಿ ಕೊಡಬೇಕಿತ್ತು. ಹಾಗೆ ಮಾಡಿಲ್ಲ. ಪ್ರಸ್ತಾವನೆಯಲ್ಲಿ ಬೇರೆ ಬೇರೆ ಸಂಕಲನಗಳ ಹಾಗೂ ಅವುಗಳ ಸಂಪಾದಕರ ಹೆಸರು ಹೇಳಿ 'ಈ ಸಂಕಲನದಿಂದ ಇಂಥಿಂಥ ಹಾಡುಗಳನ್ನು ಆರಿಸಿಕೊಂಡಿದ್ದೇನೆ' ಎಂದಿದ್ದಾರೆ. ಇದರಿಂದ ಯಾವುದೇ ಹಾಡಿನ ಆಕರ ಯಾವುದು ಎಂದು ನೋಡಬೇಕಾದರೆ ಪ್ರಸ್ತಾವನೆಯ ಪುಟಗಳನ್ನು ಆಚೀಚೆ ತಿರುಗಿಸಿ ನೋಡಬೇಕಾಗುತ್ತದೆ. ಆದ್ದರಿಂದ ಪ್ರಸ್ತಾವನೆಯಲ್ಲಿ ಆಕರಗಳ ಹೆಸರು ಹೇಳುವ ಬದಲು ಆಯಾ ಗೀತೆಗಳ ಕೆಳಗೇ ಹೇಳುವುದು ಅಗತ್ಯವಾಗಿತ್ತು.

ಅನುಬಂಧದಲ್ಲಿ ಕೊಟ್ಟಿರುವ ಆಕರ ಗ್ರಂಥ ಸೂಚಿ ಸಮರ್ಪಕವಾಗಿದೆ.

೫. 'ವಕ್ತೃ ವಿವರ ಕೆಲವು ಗ್ರಂಥಗಳಲ್ಲಿ ಇದೆ. ಕೆಲವಲ್ಲಿ ಇಲ್ಲ. ಸಿಕ್ಕಿದಷ್ಟನ್ನು ಕೊಟ್ಟಿದ್ದೇನೆ' ಎಂದು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಆದರೆ ಆಕರ ಗ್ರಂಥಗಳಲ್ಲಿ ಕೊಟ್ಟಿರುವ ವಕ್ತೃ ವಿವರವನ್ನು ಪೂರ್ತಿಯಾಗಿ ಕೊಡದೆ ಇರುವ ಸಂದರ್ಭಗಳು ತುಂಬ ಇವೆ. ಉದಾಹರಣೆಗೆ ಎಸ್.ಪಿ. ಪದ್ಮಪ್ರಸಾದ್ ಅವರ 'ಜೈನ ಜಾನಪದ ಸಾಹಿತ್ಯ–ಸಂಪಾದನೆ ಮತ್ತು ಅಧ್ಯಯನ' ಕೃತಿಯ ಅನುಬಂಧದಲ್ಲಿ ಕೊಟ್ಟಿರುವ ಪ್ರತಿ ಹಾಡಿನ ವಕ್ತೃ ವಿವರ ಹಾಗೂ ಸಂಗ್ರಹಿಸಿದ ದಿನಾಂಕ ಕೊಡಲಾಗಿದೆ. ಇವರು ಅಲ್ಲಿಂದ ತೆಗೆದುಕೊಂಡ ಹಾಡಿಗೂ ಸಹ ಹಾಡಿದವನ ಹೆಸರು, ಹಳ್ಳಿ ಕೊಟ್ಟಿದ್ದಾರೆ. ವಕ್ತೃ ವಿವರವೆಂದರೆ – ಹಾಡಿದವನ ಹೆಸರು, ವಯಸ್ಸು, ಗ್ರಾಮ, ಸಂಗ್ರಹಿಸಿದ ದಿನಾಂಕ, ಹಾಗೂ ಆತ ಆ ಹಾಡನ್ನು ಯಾರಿಂದ, ಎಷ್ಟು ವರ್ಷಗಳ ಹಿಂದೆ ಎಲ್ಲಿ ಕಲಿತಿದ್ದ ಎಂಬ ವಿಚಾರಗಳು ಸೇರುತ್ತವೆ. ಆ ಹಾಡಿನ ಪರಂಪರೆ ಮತ್ತು ಭೌಗೋಳಿಕ ಅಧ್ಯಯನಕ್ಕೆ ಇದು ಅಗತ್ಯ. ಲಭ್ಯವಿಲ್ಲದ ಸಂಕಲನಗಳ ಬಗ್ಗೆ ಏನೂ ಮಾಡಲಾಗುವುದಿಲ್ಲ ನಿಜ (ಆದರೆ ಅಂಥ ಸಂಕಲನಗಳನ್ನೇ ಕೈಬಿಡಬಹುದು– ಅದು ಶಾಸ್ತ್ರೀಯ ಸಂಪಾದನೆ ಅಲ್ಲವಾದ್ದರಿಂದ). ಆದರೆ ಲಭ್ಯವಿರುವ ಕಡೆಯದೂ ಕೊಟ್ಟಿಲ್ಲವೆಂಬುದೇ ದುಃಖದ ವಿಷಯ.

೬ ಅನೇಕ ಕಡೆ ಅಪಾರ್ಥಕೊಡುವಂಥ ಅಥವಾ ಅರ್ಥ ಸಂದಿಗ್ಧತೆಯನ್ನು ಉಂಟು ಮಾಡುವಂಥ ಶೀರ್ಷಿಕೆ/ಅರ್ಥ ವಿವರ ಇದೆ.

ಉದಾ:೧. ಪುಟ ೯೬ರಲ್ಲಿ ಒಂದು ಹಾಡಿನ ಶೀರ್ಷಿಕೆ 'ಹುಸೇನ ಹುಸೇನ'ಎಂದಿದೆ. ಈಕೆ ಬೀಬಿ ಫಾತಿಮಾಳ ಮಕ್ಕಳು ಎಂದೂ ಹಾಡಿನಲ್ಲಿ ಬಂದಿದೆ. ಅಣ್ಣ ತಮ್ಮ ಇಬ್ಬರಿಗೂ ಒಂದೇ ಹೆಸರು ಯಾಕಿರುತ್ತದೆ? ಈ ಸೋದರರು ಕರ್ಬಲಾ ಮೈದಾನದಲ್ಲಿ ಹೋರಾಡಿದರೆಂದೂ ಈ ಹಾಡಿನಲ್ಲೇ ಇದೆ. ಕರ್ಬಲ ಪದಗಳ ಬೇರೆ ಸಂಕಲನಗಳೂ ಇವೆ. ಅಲ್ಲೂ ಈ ಸೋದರರ ಹೆಸರುಗಳು ಬಂದಿವೆ. ಸ್ವಲ್ಪ ಯೋಚಿಸಿದ್ದರೆ, ಪರಾಮರ್ಶಿಸಿದ್ದರೆ ಗೊತ್ತಾಗುತ್ತಿತ್ತು. ಈ ಸೋದರರ ಹೆಸರು ಹಸನ್ ಮತ್ತು ಹುಸೇನ್ ಎಂದು.

೨. ಉತ್ತರ ಕನ್ನಡ ಜಿಲ್ಲೆಯ ಸ್ತ್ರೀ ದೇವತೆಗೆ ಸಂಬಂಧಿಸಿದ ಹಾಡಿನಲ್ಲಿ 'ಸುಂಗಾರಾಗ' ಎಂಬ ಶಬ್ದಕ್ಕೆ 'ಶೃಂಗಾರ' ಎಂದಷ್ಟೆ ಅರ್ಥ ಹೇಳಲಾಗಿದೆ. ಹೊನ್ನಾವರ ತಾಲ್ಲೂಕಿನಲ್ಲಿ ಕೆಳವರ್ಗದ ಜನರಲ್ಲಿ ಭಾಷೆಯ ಬಳಕೆ ಹೇಗಾಗುತ್ತದೆ ಎಂಬುದು ತಿಳಿಯದಿರುವುದರ ಪರಿಣಾಮವಿದು. ಇದರ ಸರಿಯಾದ ಪದವಿಭಾಗ 'ಸುಂಗಾರ+ಆಗ' ಅಂದರೆ ಶೃಂಗಾರ ಆಗುವುದಿಲ್ಲ ಎಂದರ್ಥ. ದೇವತೆಯನ್ನು ಭಕ್ತರು ಪ್ರಾರ್ಥಿಸುತ್ತಾರೆ – 'ನೀನು ಬರದಿದ್ದರೆ ಶೃಂಗಾರ ಆಗುವುದಿಲ್ಲ' ಎಂದು. ಆ ಸಂದರ್ಭಕ್ಕೂ ಈ ಅರ್ಥ ಸರಿಯಾಗಿ ಹೊಂದಿಕೊಳ್ಳುತ್ತದೆ.

೭. ಹಲವೆಡೆಗಳಲ್ಲಿ ಸರಿಯಾದ ಪಾಠ ನಿರ್ಣಯವೇ ಸಂಪಾದಕರಿಗೆ ಸಾಧ್ಯವಾಗಿಲ್ಲ. (ಜನಪದ ಗೀತೆಗಳಲ್ಲಿ ಹಲವು ಪಾಠಗಳಿರುತ್ತವೆ ಎಂಬುದು ನಿಜ. ಆದರೆ ಇಲ್ಲಿ ಹೇಳುತ್ತಿರುವುದು ಶಬ್ದರೂಪವು ಅರ್ಥಕ್ಕೆ ಹೊಂದಾಣಿಕೆಯಾಗುವುದು/ಆಗದಿರುವುದರ ಬಗ್ಗೆ.) ಉದಾಹರಣೆಗೆ

(ಅ) ಪುಟ ೯೧೮ರಲ್ಲಿ 'ಮರಿಯಮ್ಮ' ಎಂಬ ಹಾಡಿನ ಒಂದು ಚರಣವನ್ನು 'ಶಿಲುಬೆಗೆ ಮತ್ತೆ ಪೋಣಿಸಿರೊ'– ಎಂಬ ಪಂಕ್ತಿಯಿದೆ. ಇದು ಅರ್ಥಕೊಡುವುದಿಲ್ಲ. ಇದರ ಹಿಂದಿನ ತ್ರಿಪದಿಯ ಕೊನೆಯ ಸಾಲು 'ಶಿಲುಬೆಗೆ ಮುತ್ತ ಬಿಡಿಸವಲೆ' ಎಂದಿದೆ. ಅದರಿಂದ ಇದೂ ಸಹ 'ಶಿಲುಬೆಗೆ ಮುತ್ತ ಪೋಣಿಸಿರೋ'– ಎಂದಿರಬೇಕಿತ್ತು. ಒಮ್ಮೆ ಇವರು ಈ ಹಾಡನ್ನು ಎತ್ತಿಕೊಂಡ ಸಂಕಲನದಲ್ಲೂ ಹಾಗೇ ಇದ್ದರೆ ಅದು ಸಂಗ್ರಹಕಾರನ ತಪ್ಪು. ಆತ ಸರಿಯಾಗಿ ಕೇಳಿಸಿಕೊಂಡಿಲ್ಲದಿರಬಹುದು. ಅಂಥ ಸಂದರ್ಭಗಳಲ್ಲಿ ಮೂಲಪಾಠವನ್ನು ತಿದ್ದುವ ಅಧಿಕಾರ ಸಂಪಾದಕನಿಗಿರುವುದಿಲ್ಲವಾದ್ದರಿಂದ ತನ್ನ ಊಹೆಯ ಬದಲಿ ಪಾಠವನ್ನು ಅಡಿಟಿಪ್ಪಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆ ಸಹಿತ ಸೂಚಿಸುವುದು ಉತ್ತಮ. ಈ ಬೃಹತ್ ಸಂಕಲನದಲ್ಲಿ ಎಲ್ಲಿಯೂ ಇಂಥ ಎಚ್ಚರಿಕೆಯ ಪರಿಶೀಲನೆ ಕಾಣುವುದಿಲ್ಲ.

(ಆ) ಪುಟ ೯೧೯ರಲ್ಲಿ 'ಮೇರಿಗೆ ಹರಕೆ' ಎಂಬ ಹಾಡಿದೆ. ಇದರ ಕೊನೆಯ ತ್ರಿಪದಿ ಹೀಗಿದೆ –

ಹರಕೆ ಒಪ್ಪಿ ನೋಡಿ ಚಿಕ್ಕದೊಂದು ಹರಕೆಲ್ಲ
ಹುತ್ತಿ ಬಾನಪ್ಪ ಪೌಳಿಯ – ಪೀಠದ ಮುಂದೆ
ಹೊತ್ತು ಕೊಳಮ್ಮ ಶಿಲುಬೆಯs.

– ಇಲ್ಲಿ ನಡುವಿನ ಪಾದಕ್ಕೆ ಏನರ್ಥ? ಇದೇ ಮಾದರಿಯ ಇತರೆಡೆಗಳಲ್ಲಿನ ತ್ರಿಪದಿಗಳನ್ನು ನೆನಪಿಸಿಕೊಂಡರೆ ಗೊತ್ತಾಗುತ್ತದೆ– ಈ ಪಾದವು 'ಸುತ್ತಿ ಬಾರಪ್ಪ ಪೌಳಿಯ' ಎಂದಿರಬೇಕು ಎಂದು. ಇಂಥ ಊಹಾಪಾಠವನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿದರೆ ಓದುಗರಿಗೆ ಅರ್ಥ ಸ್ಪಷ್ಟವಾಗುತ್ತದೆ.

(ಇ) ಪುಟ ೮೮೨ರಲ್ಲಿ 'ಗೊಮ್ಮಟ' ಎಂಬ ಶೀರ್ಷಿಕೆಯಡಿ ಒಂದೇ ಒಂದು ತ್ರಿಪದಿ ಹೀಗಿದೆ–

ಅಕ್ಕ ತಂಗೆರು ನಾವು ಹೊಕ್ಕು ನೋಡುವ ಬಾರ
ಬೆಟ್ಟದ ಕೆಳಗೆ ಬೆಳಗೋಳ। ಗೊಮ್ಮಟ ಸ್ವಾಮಿ
ಕಟ್ಯಾದ್ಯಾವ ರತ ಬೆಳ್ಳಿ ॥

ಇಲ್ಲಿ ಕೊನೆಯ ಪಾದದ ಅರ್ಥವೇನು? ಮೊದಲ ಪಾದಕ್ಕೂ ಎರಡನೇ ಪಾದಕ್ಕೂ ಅರ್ಥದ ಹೊಂದಾಣಿಕೆ ಎಲ್ಲಿದೆ? ಇಂಥ ಪ್ರಶ್ನೆಗಳು ಈ ಸಂಪಾದಕರ ತಲೆ ಕೆಡಿಸಿದಂತೆ ಕಾಣುವುದಿಲ್ಲ. ಎಸ್.ಪಿ. ಪದ್ಮಪ್ರಸಾದರ 'ಜೈನ ಜನಪದ ಸಾಹಿತ್ಯ' ಮಹಾಪ್ರಬಂಧದಲ್ಲಿ ಈ ತ್ರಿಪದಿಯ ಸರಿಯಾದ ರೂಪ ಸಿಕ್ಕುತ್ತದೆ. ಅದು ಹೀಗಿದೆ–

ಅಕ್ಕ ತಂಗೇರ ಬಸ್ತಿ ಹೊಕ್ಕು ನೋಡೋಣುಬಾರ
ಬೆಟ್ಟದ ಕೆಳಗೆ ಬೆಳಗೂಳ। ಗೊಮ್ಮಟ ಸ್ವಾಮಿ
ರಟ್ಟಿಗ್ಹಬ್ಯಾವೆ ರಸಬಳ್ಳಿ ॥

'ಅಕ್ಕ ತಂಗೇರ ಬಸದಿ'– ಎಂಬುದು ಶ್ರವಣಬೆಳ್ಗೊಳದ ಚಿಕ್ಕಬೆಟ್ಟದ ಮೇಲಿರುವ ಒಂದು ಬಸದಿಯ ಹೆಸರು. ಬೆಳ್ಗೊಳದಲ್ಲಿ ಗೊಮ್ಮಟಸ್ವಾಮಿಯ ಬೆಳ್ಳಿರಥದ ಉತ್ಸವವೂ ಜರುಗುವುದಿಲ್ಲ. ಆದ್ದರಿಂದ ಈ ಗ್ರಂಥದಲ್ಲಿ ಕೊಟ್ಟಿರುವ ತ್ರಿಪದಿಯ ಕೊನೆಯ ಪಾದವನ್ನು ಹಾಗೆ ಅನ್ವಯಿಸಿಕೊಳ್ಳಲೂ ಬರುವುದಿಲ್ಲ.

೮. ಅನುಬಂಧದಲ್ಲಿ 'ಟಿಪ್ಪಣಿಗಳು' ಎಂಬ ಭಾಗದಲ್ಲಿ 'ಜೈನ ಜಾನಪದ' ಎಂಬ ಹೆಸರಿನ ಟಿಪ್ಪಣಿ ಎರಡು ಕಡೆ ಅಚ್ಚಾಗಿದೆ. (ಪುಟ ೯೯೩ ಮತ್ತು ೯೮೮) ಹೀಗೆ ಕೊಡುವ ಅಗತ್ಯ ಏನಿತ್ತು ? ಒಂದೇ ಕಡೆ ಕೊಡಬಹುದಿತ್ತಲ್ಲ? ಮೊದಲ ಟಿಪ್ಪಣಿ ಅರ್ಥಕೋಶವನ್ನು ಹೊಂದಿದೆ. ಎರಡನೆ ಟಿಪ್ಪಣಿಯಲ್ಲಿ ಹಾಡುಗಾರ್ತಿಯ ಪರಿಚಯವಿದ್ದು ಅಲ್ಲಿಯೂ ಅರ್ಥಕೋಶವಿದೆ. ಇದೇಕೆ ಹೀಗೆ? ಮೂಲ ಸಂಕಲನದೊಂದಿಗೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ–ಇವೆರಡೂ ಟಿಪ್ಪಣಿಗಳೂ ಮೂಲತಃ ಒಂದೇ. ಎರಡನೆಯ ಟಿಪ್ಪಣಿಯೇ ಮೂಲ ಟಿಪ್ಪಣಿಯ ಮೊದಲ ಭಾಗವಾಗಿದ್ದು ಎರಡನೇ ಟಿಪ್ಪಣಿ ಅಲ್ಲಿನ ಅರ್ಥಕೋಶದ ಮುಂದುವರಿಕೆಯಾಗಿದೆ. ಇಷ್ಟೇ ಅಲ್ಲ– ಈ ಅರ್ಥಕೋಶದಲ್ಲಿ ಇರುವ ಕೆಲವು ಶಬ್ದಗಳು (ಅವಕ್ಕೆ ವಿವರಣೆ ಕೊಟ್ಟಿದ್ದಾರೆ) ಈ ಸಂಗ್ರಹಕ್ಕೆ ಆಯ್ದುಕೊಂಡಿರುವ ತ್ರಿಪದಿಗಳಲ್ಲೇ ಇಲ್ಲ! (ಉದಾ_ಸುಷ್ಮಕ್ಕ, ಶೀತಲ, ಬಮ್ಮಣ್ಣ). ಮೂಲ ಸಂಕಲನದ ಸಂಗ್ರಾಹಕ, ಸಂಪಾದಕರಾದ ಶ್ರೀ ಡಿ.ಎನ್. ಅಕ್ಕಿ ಅವರು ತಮ್ಮ ಆ ಸಂಕಲನದಲ್ಲಿನ ೧೦೮ ತ್ರಿಪದಿಗಳನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಪದ ವಿವರಣೆಯನ್ನು ತಾವು ಆರಿಸಿಕೊಂಡಿರುವ ೩೪ ತ್ರಿಪದಿಗಳಿಗೂ (ಬೇಕೋ ಬೇಡವೋ ಎಂದೂ ಯೋಚಿಸದೆ) ಈ 'ಸಾವಿರದ ದೇವರ ಪದಗಳು' ಸಂಪಾದಕರು ಕೊಟ್ಟಿರುವುದೇ ಇದಕ್ಕೆ ಕಾರಣ.

೯. ಕೆಲವೆಡೆ ಒಂದೇ ಶೀರ್ಷಿಕೆಯ ೨–೩ ಹಾಡುಗಳಿವೆ. ಇಂಥ ಕಡೆಗಳಲ್ಲೆಲ್ಲ ಆ ಹಾಡುಗಳಿಗೆ ೧–೨–೩ ಎಂದು ಉಪಸಂಖ್ಯೆಗಳನ್ನಾದರೂ ಕೊಡಬೇಕಿತ್ತು.

೧೦. ಅನೇಕ ಕಡೆ ಮುದ್ರಣ ದೋಷಗಳಿವೆ.

ಹೀಗೆ, ಜಾನಪದ ತಜ್ಞರೆಂದು ಪುರಸ್ಕೃತರಾದ ಸ್ವಾಮಿಯವರ ಈ ಬೃಹತ್ ಸಂಕಲನ ಮೇಲ್ಕಂಡ ಅನೇಕ ಕೊರತೆಗಳಿಂದಾಗಿ ಶಾಸ್ತ್ರೀಯ ಹಾಗೂ ವೈಜ್ಞಾನಿಕ ರೀತಿಯ ಸಂಕಲನವೆಂದು ಕರೆಸಿಕೊಳ್ಳುವ ಮಟ್ಟದಿಂದ ಬಹುದೂರದಲ್ಲಿದೆ. ಅಲ್ಲದೆ ಈ ಕೃತಿಗಾಗಿ ವಿವಿಧ ಸಂಕಲನಗಳಿಂದ ಗೀತೆಗಳನ್ನು ಆರಿಸಿಕೊಳ್ಳುವಾಗ ಆಯಾ ಮೂಲ ಕೃತಿಗಳ ಸಂಪಾದಕರ ಅನುಮತಿಯನ್ನು ಪಡೆದಿರುವಂತೆ ಕಾಣುವುದಿಲ್ಲ. ಏಕೆಂದರೆ 'ಆ ಸಂಪಾದಕರಿಗೆ ನಾನು ಕೃತಜ್ಞನಾಗಿದ್ದೇನೆ' ಎಂದು ಎರಡು ಮೂರು ಕಡೆ ಹೇಳಿಕೊಂಡಿದ್ದಾರೆಯೇ ವಿನಃ, 'ಅವರು ಅನುಮತಿಸಿದ್ದಾರೆ' ಎಂದು ಎಲ್ಲಿಯೂ ಹೇಳಿಲ್ಲ. ಕ್ಷೇತ್ರಕಾರ್ಯ ಮಾಡಿ ಒಬ್ಬರು ಸಂಗ್ರಹಿಸಿದ ಹಾಡುಗಳನ್ನು ಮತ್ತೊಬ್ಬರು ಅನಾಮತ್ತಾಗಿ ಎತ್ತಿ ಜೋಡಿಸಿ ಮತ್ತೊಂದು ಕೃತಿಯಾಗಿ ಪ್ರಕಟಿಸುವುದು ಸರಿಯೆ?

ಬಿ.ಎಸ್. ಸ್ವಾಮಿಯವರು ಉದ್ದಾಮ ಹಾಗೂ ಅವಿಶ್ರಾಂತ ಲೇಖಕರೆಂದು ಈ ಕೃತಿಯ ಕೊನೆಯಲ್ಲಿರುವ ವರ್ಷವಾರು ಪ್ರಕಟವಾಗಿರುವ ಅವರ ಕೃತಿಗಳ ಪಟ್ಟಿಯಿಂದ ತಿಳಿಯುತ್ತದೆ. ೧೯೭೪ರಲ್ಲಿ ೯ ಕೃತಿಗಳು, ೧೯೭೬ರಲ್ಲಿ ೮, ೧೯೭೭ರಲ್ಲಿ ೭, ಹೀಗೆಲ್ಲ ಪ್ರಕಟಿಸುತ್ತಾ ಬಂದು ೨೦೦೬ರಲ್ಲಿ ೯, ೨೦೦೭ರಲ್ಲಿ ೧೪, ೨೦೦೮ರಲ್ಲಿ ೧೯, ೨೦೦೯ ರಲ್ಲಿ ೧೧, ಹಾಗೂ ೨೦೧೧ರಲ್ಲಿ ೧೨ ಕೃತಿಗಳನ್ನು ಪ್ರಕಟಿಸಿದ್ದಾರೆ. (ನಡುವಿನ ಎಷ್ಟೋ ವರ್ಷಗಳಲ್ಲಿನ ವಿವರವನ್ನು ಉಲ್ಲೇಖಿಸದೆ ಕೈಬಿಡಲಾಗಿದೆ). ನಮ್ಮಲ್ಲಿನ ಯಾವುದೇ ಖ್ಯಾತ ಲೇಖಕರ ವಾರ್ಷಿಕ ಪ್ರಕಟಣೆಗಳ ಸಂಖ್ಯೆಯನ್ನೂ ಮೀರಿಸುವ ಸಂಖ್ಯೆಯಿದು. ಇಂಥವರ ಈ ಬೃಹತ್ ಕೃತಿ – ಕರ್ನಾಟಕ ಧಾರ್ಮಿಕ ಜಾನಪದದ ಪ್ರಾತಿನಿಧಿಕ ಸ್ವರೂಪವನ್ನು ಹೊಂದಿದ್ದೂ ಸಹ ಮೇಲ್ಕಂಡ ದೋಷಗಳನ್ನು ಹೊಂದಿರದಿದ್ದರೆ ಚೆನ್ನಾಗಿತ್ತು.

ಎಸ್.ಪಿ. ಪದ್ಮಪ್ರಸಾದ್

ಬಾಗಲಕೋಟೆಯ ಗೀತೆಗಳು

* **ಬಾಗಲಕೋಟ ಜಿಲ್ಲೆಯ ಜನಪದ ಹಾಡುಗಳು** : ಪ್ರಸಂ:ಎಸ್.ಜಿ. ಕೋಟಿ: ಪ್ರ–ಜಿಲ್ಲಾ ಕ.ಸಾ.ಪ. ಬಾಗಲಕೋಟ; ಪುಟಗಳು: ೨೨+೯೮. ಬೆಲೆ ರೂ. ೬೦/–

ನಗರೀಕರಣ, ಕೈಗಾರಿಕರಣ, ಸಮೂಹ ಮಾಧ್ಯಮಗಳ ಪ್ರಭಾವ ಇಂದು ಹೇರಳವಾಗಿ ಜನರ ಮನಸ್ಸನ್ನು ಪರಿಣಾಮಕಾರಿಯಾಗಿ ಸೆಳೆಯುತ್ತಿರುವ ಸಂದರ್ಭದಲ್ಲಿ ಆಯಾ ಸ್ಥಳೀಯ ಜನರೊಂದಿಗೆ ಬೆರೆತು ಹೋದ ಕಲೆಗಳನ್ನು ಉಳಿಸುವುದು ಇಂದು ಮುಖ್ಯವಾಗಿದೆ. ಅಂತಹ ನಿಟ್ಟಿನಲ್ಲಿ ಇಂತಹ ಜನಪದ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಪ್ರಯತ್ನ ಶ್ಲಾಘನೀಯ.

ಈ ಕೃತಿಯ ಪ್ರಸ್ತಾವನೆಯಲ್ಲಿ ಜಾನಪದ ವಿದ್ವಾಂಸರಾದ ಪ್ರಕಾಶ ಗ. ಖಾಡೆಯವರ ವಿಚಾರ ಹೆಚ್ಚು ಗಮನಾರ್ಹವಾದುದು. ಪ್ರಾಚೀನ ಕಾಲದ ಛಂದಸ್ಸಿನ ತಾಯಿ ಬೇರಾದ ತ್ರಿಪದಿಯಿಂದ ಹಿಡಿದು ಜಾನಪದದ ಸಂಗ್ರಹಣದ ಪ್ರಯತ್ನ ಹೇಗೆ ನಡೆದು ಬಂದಿದೆ ಎಂಬುದರವರೆಗೂ ವಿಚಾರವನ್ನು ಕಟ್ಟಿಕೊಡುವುದಲ್ಲದೆ ಕೆಲವು ಸಂಪಾದನಾ ಕೃತಿಗಳ ಸಂಕ್ಷಿಪ್ತ ಪರಿಚಯ ಮುಖ್ಯವಾಗಿದೆ.

ಬಾಗಲಕೋಟ ಜಿಲ್ಲೆಯ ಸುತ್ತಮುತ್ತ ಕಂಡು ಬರುವ ಕಲೆ/ಕಲಾವಿದರಾದ– ದಾಸರಾಟ ಕಲೆ, ಪಾರಿಜಾತದ ಬಯಲಾಟ, ಗೊಂದಲಿಗರು, ಬುಡುಬುಡುಕಿಯವರು, ಕಿಳ್ಳಿಕ್ಯಾತರು, ಹಚ್ಚೆಕಲೆ, ದುರುಗ ಮುರುಗಿಯವರು, ಮೋಡಿಯಾಟದವರು, ಹಲಗಿ ಮಜಲು ಹಾಗೂ ಕರಡಿ ಮಜಲು– ಹೀಗೆ ಓದುಗರಿಗೆ ಜಾನಪದದ ಹೊಸ ಲೋಕವನ್ನೇ ತೆರೆದಿಡುತ್ತದೆ ಮತ್ತು ಈ ಕೃತಿಯಲ್ಲಿ ಮೂರು ಜನ ವಿದ್ವಾಂಸರು ಜನಪದ ಹಾಡುಗಳ ಸಂಗ್ರಹ ಮಾಡಿರುವುದು ಮತ್ತು ಅವುಗಳನ್ನು ಸಂಗ್ರಹಿಸಿ ಹಾಗೆಯೇ ಬರಹದ ರೂಪ ನೀಡಿರುವುದು ಗಮನಾರ್ಹ. "ಬಾಗಲಕೋಟ ಜಿಲ್ಲೆಯ ಜನಪದ ಹಾಡುಗಳು" ಕೃತಿಯಲ್ಲಿ ಸುಮಾರು ೬೦ ಜನಪದ ಹಾಡುಗಳ ಸಂಗ್ರಹವನ್ನು ಕಾಣುತ್ತೇವೆ ಗಣೇಶ, ಗೌರಿಯನ್ನು ಕುರಿತಾದ ಹಾಡು ಮೊದಲುಗೊಂಡು ಗೊಂದಲಿಗರ ಹಾಡಿನವರೆಗೂ ಸಾಗಿ ಕೊನೆಗೊಳ್ಳುತ್ತದೆ.

ಜನಪದರು ವಿಘ್ನವಿನಾಶಕನಾದ ಗಣೇಶನಿಗೆ ಮೊದಲು ಆದ್ಯತೆ ನೀಡುತ್ತಾರೆ. ಸಂಗ್ರಹಿಸಿ ಪ್ರಕಟಿಸಿರುವ ಸಂದರ್ಭದಲ್ಲೂ ಅದೇ ನಂಬಿಕೆಯನ್ನು ಅನುಸರಿಸಿದೆ. ಗಣೇಶ ಸ್ತುತಿ, ಗೌರಿಹಾಡು, ಚೌಡಕಿ ಹಾಡು, ಡೊಳ್ಳಿನ ಹಾಡು, ತತ್ವಪದ, ಬೀಸುಕಲ್ಲಿನ ಹಾಡು, ಹಂತಿಹಾಡು, ಕಬಡೊ ಹಾಡು, ಲಾವಣಿ ಹಾಡು, ಕರಿಮುತ್ಯಾ ಮತ್ತು ಬೇಲಿ, ಕತೆ ಕತೆ ಕಾರಣ, ಹರಕಿಯ ಹಾಡು, ಸುಗ್ಗಿಯ ಹಾಡು, ಕೋಲಿನ ಹಾಡು, ಬೀಗರ ಹಾಡು, ಒಳಕಲ್ಲ ಹಾಡು, ಹಂದರಗಂಬ ತರುವ ಹಾಡು, ನಿಬ್ಬಣ ಸೀಮಂತ ಮದುವೆ, ಸೋಬಾನೆ, ಬಯಕೆ, ಗೋಪಾಲನ ಹಾಡು, ಹೆಸರಿಡುವ ಹಾಡು, ಜೋಗಳ ಹಾಡು ಹೋಳಿ ಹುಣ್ಣಿಮೆ ಹಾಡು, ಜೋಕುಮಾರನ ಹಾಡು, ಅರಳೆಲೆ ಬಸವನ ಹಾಡು, ಗುರ್ಜಿ ಹಾಡು, ನಾಗರ ಪಂಚಮಿ, ಮಳೆ ಚಂಗಳಕೆವ್ವನ, ಆಕಳ, ಸಾರು ಐನ್ಯಾರ, ಬಬಲಾದಿಯವರ, ಮುಂಡಗಿ ಸಿಂಧೂರ ಲಕ್ಷ್ಮಣನ ಕುರಿತಾದ, ಹಣಬೆ ಬಟ್ಟಿನ, ಬಳಿಗಾರಣ್ಣನ ಹಾಗೂ ಗೊಂದಲಿಗರ ಹಾಡು ಕಂಡು ಬರುತ್ತವೆ.

ಈ ಹಾಡುಗಳನ್ನು ಒಂದು ಕ್ರಮದಲ್ಲಿ ವಿಭಾಗ ಮಾಡಿಕೊಂಡು ವಿಂಗಡಿಸಿಯೂ ನೋಡಬಹುದಾಗಿದೆ. ಕೆಲವು ಜನಪದ ಹಾಡುಗಳು ಕಥೆಯನ್ನು ಆಧರಿಸಿವೆ.

ಈ ಕೃತಿಯಲ್ಲಿ ವಿಶೇಷವಾಗಿ ಹಾಡು ಹೇಳಿದವರ ಹೆಸರನ್ನು ಪದ್ಯದ ಕೆಳಗೆ ಹಾಕಿ ಅನಂತರ ಸಂಗ್ರಹ ಮಾಡಿದವರ ಹೆಸರನ್ನು ಹಾಕಿರುವುದೂ ಕೂಡ ಒಂದು ಉತ್ತಮ ಕಾರ್ಯ. ಏಕೆಂದರೆ ಜನಪದ ಹಾಡುಗಳ ಸಂಗ್ರಹದ ಸಂದರ್ಭದಲ್ಲಿ ಯಾರೋ ಜನಪದರು ಹಾಡುತ್ತಾರೆ ಮತ್ಯಾರೋ ಸಂಗ್ರಹಿಸಿ ಶ್ರಮಿಸುತ್ತಾರೆ. ಮತ್ತ್ಯಾರದೋ

ಹೆಸರು ಸಂಪಾದನೆಯಲ್ಲಿ ಮೂಡುತ್ತದೆ. ಹಾಗೆ ಆಗದೆ ಹಾಡಿದವರ ಸಂಗ್ರಹಿಸಿದವರ ಹೆಸರಿನ ಸೂಚನೆ ಇರಬೇಕಾದ್ದು ಮುಖ್ಯವಾಗುತ್ತದೆ.

ಇಲ್ಲಿನ ಎಷ್ಟೋ ಹಾಡುಗಳಲ್ಲಿ ದ್ವಿಪದಿ, ಚೌಪದಿ, ತ್ರಿಪದಿಗಳನ್ನೂ ಕಾಣುತ್ತೇವೆ. ಹೆಚ್ಚು ಹಾಡುಗಳು ಒಂದೇ ಓದಿಗೆ ಅರ್ಥವಾಗುತ್ತವೆ. ಮತ್ತೆ ಕೆಲವು ಅರ್ಥವಾದರೂ ಭಾಷೆಯ ಅರ್ಥದ ಗೊಂದಲವುಂಟಾಗುತ್ತದೆ. ಆಯಾ ಸ್ಥಳೀಯ ಗ್ರಾಮ್ಯ ಶಬ್ದಗಳ ಅರ್ಥವನ್ನು ಕೊನೆಯಲ್ಲಿ ನೀಡಿದ್ದರೆ ಅರ್ಥಯಿಸಿಕೊಳ್ಳಲು ಸುಲಭವಾಗುತ್ತಿತ್ತು.

ಆರ್. ಶಾಂತ, ಕಂಪಾರಹಳ್ಳಿ

ಸಂಗ್ರಹವೇನೋ ದೊಡ್ಡದು. ಆದರೆ...........

*** ಸಾಂಸ್ಕೃತಿಕ ವೀರರು ಮತ್ತು ಮಹಾಸತಿಯರ ಲಾವಣಿಗಳು:** ಸಂ. ಕೆಂಕೆರೆ ಹನುಮಂತೇಗೌಡ, ಪ್ರ-ತುಮಕೂರು ವಿ.ವಿ. ಪು. ೧೬+೪೬೪. ಬೆಲೆ ರೂ. ೨೨೫/-

ಈ ಸಂಗ್ರಹದಲ್ಲಿ ಎಂಟುಮಂದಿ ಜನಪದ ವೀರರು/ಮಹಾಸತಿಯರನ್ನು ಕುರಿತ ಗೀತೆಗಳಿವೆ. ಕೆಲವು ವೀರರ ಬಗೆಗಿನ ಭಾಗದಲ್ಲಿ ಅನೇಕ ಬಿಡಿ ಹಾಡುಗಳಿವೆ. ಈ ಹಾಡುಗಳು ವಸ್ತುವಿನ ದೃಷ್ಟಿಯಿಂದ ಪರಸ್ಪರ ಸಂಬಂಧಿಸಿದಂತೆ ಕಾಣುತ್ತವೆ. ವೀರಬಂಡಣ್ಣ, ದಿಬ್ಬರ ವೀರ ಬೊಮ್ಮಣ್ಣ, ವೀರನಾಗಪ್ಪ, ನಿಡಗಲ್ಲು ಸೂರನ ಹೀರಣ್ಣ, ಹುಳಿಯಾರು ಕೆಂಚಮ್ಮ, ಮುದ್ದೇದ ಸ್ವಾರಮ್ಮ, ವಡ್ಡಗೆರೆ ನಾಗಮ್ಮ, ಬರಗೂರು ವೀರಮ್ಮ- ಇವರನ್ನು ಕುರಿತ ಗೀತೆಗಳು ಇಲ್ಲಿವೆ.

ಈ ಹಾಡುಗಳನ್ನು ಬೇರೆ ಬೇರೆಯವರು ಸಂಗ್ರಹಿಸಿದ್ದಾರೆ. ವೀರಬಂಡಣ್ಣನನ್ನು ಕುರಿತ ಗೀತೆಗಳನ್ನು ಶ್ರೀ ಮನ್ಮಥ, ಹೊಸಯಳನಡುರವರು ಸಂಗ್ರಹಿಸಿದ್ದಾರೆ, ದಿಬ್ಬರ ವೀರಬೊಮ್ಮಣ್ಣ ಹಾಗೂ ವೀರನಾಗಪ್ಪನ ಪದಗಳನ್ನು ಕೆ.ವಿ. ಮುದ್ದವೀರಪ್ಪ ಸಂಗ್ರಹಿಸಿದ್ದಾರೆ. ನಿಡಗಲ್ಲು ಶೂಲದ ಈರಣ್ಣನನ್ನು ಕುರಿತ ಕಾವ್ಯವನ್ನು ಸಣ್ಣನಾಗಪ್ಪ ಸಂಗ್ರಹಿಸಿದ್ದಾರೆ. ಇದೇ ರೀತಿ ಒಬ್ಬೊಬ್ಬರನ್ನು ಕುರಿತ ಗೀತೆಗಳನ್ನು ಒಬ್ಬೊಬ್ಬರು ಸಂಗ್ರಹಿಸಿದ್ದಾರೆ. ಹೀಗೆ ಸಂಗ್ರಹಿಸಿದ ಗೀತೆಗಳನ್ನು ಹಾಗೆಯೇ ಒಂದರ ಪಕ್ಕದಲ್ಲೊಂದನ್ನು ಜೋಡಿಸಿ ಒಂದು ಸಂಪುಟವಾಗಿ ಮಾಡಿ ಪ್ರಕಟಿಸಲಾಗಿದೆ. ಈ ಎಲ್ಲ ಗೀತೆಗಳೂ ವಸ್ತು ಹಾಗೂ ಛಂದಸ್ಸಿನ ದೃಷ್ಟಿಯಿಂದ ಅಭ್ಯಾಸಕ್ಕೆ ಅರ್ಹವಾದವುಗಳಾಗಿವೆ. ಇಲ್ಲಿನ ಕೆಲವು ವೀರರ/ಸತಿಯರ ಬಗ್ಗೆ ಈಗಾಗಲೇ ಇತರರು ಕೆಲವು ಗೀತೆ/ಖಂಡಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಆದ್ದರಿಂದ ತೌಲನಿಕ ಅಧ್ಯಯನಕ್ಕೆ ಈ ಗೀತೆಗಳು ತುಂಬ ನೆರವಾಗುತ್ತವೆ.

ಇಷ್ಟರಮಟ್ಟಿಗೆ ಸರಿ. ಆದರೆ ಇಲ್ಲಿ ಸಂಪಾದಕರು ಮಾಡಿರುವುದಾದರೂ ಏನು ಎಂಬ ಪ್ರಶ್ನೆ ಏಳುತ್ತದೆ. ಈ ಪುಸ್ತಕಕ್ಕೆ ಒಂದು ಪ್ರಸ್ತಾವನೆ ಇಲ್ಲ. ಯಾವ ವೀರ/ಸತಿಯ

ಬಗ್ಗೆಯೂ ಒಂದು ಪುಟದ ಟಿಪ್ಪಣಿಯೂ ಇಲ್ಲ. ಅವರು ಯಾವ ಪ್ರದೇಶಕ್ಕೆ ಸೇರಿದವರು, ಯಾವ ಜನಾಂಗದಿಂದ ಪೂಜೆಗೊಳ್ಳುವವರು ಎಂಬ ಮಾಹಿತಿ ಇಲ್ಲ. ಹೋಗಲಿ, ಈ ಗೀತೆಗಳನ್ನು ಯಾರಿಂದ ಸಂಗ್ರಹಿಸಲಾಯಿತು, ಯಾವ ದಿನಾಂಕದಂದು? ಆ ವಕ್ತೃಗಳಿಗೆ ಸಂಬಂಧಿಸಿದ ಯಾವ ಮಾಹಿತಿಯೂ ಇಲ್ಲ. ಒಂದೆಡೆ ನಾಲ್ಕಾರು ಚಿತ್ರಗಳಿವೆ. ಆ ಚಿತ್ರದಲ್ಲಿನ ವಕ್ತೃಗಳು ಹಾಡಿದ ಹಾಡು ಯಾವುದು ಎಂಬ ಮಾಹಿತಿ ಇಲ್ಲ. ವಕ್ತೃ ವಿವರವೆಂದರೆ– ಆ ಹಾಡು/ಕತೆಯನ್ನು ಹೇಳಿದ ವ್ಯಕ್ತಿಯ ಹೆಸರು, ಗ್ರಾಮ, ಸಂಗ್ರಹಿಸಿದ ದಿನಾಂಕ, ಆ ವಕ್ತೃ ಅದನ್ನು ಎಷ್ಟು ವರ್ಷಗಳ ಹಿಂದೆ ಯಾರಿಂದ ಕಲಿತದ್ದು, ಆ ವ್ಯಕ್ತಿಗೆ ಆಗ ಎಷ್ಟು ವಯಸ್ಸಾಗಿತ್ತು– ಈ ಮಾಹಿತಿಗಳನ್ನೆಲ್ಲ ಸಾಧ್ಯವಾದಷ್ಟು ಸಂಗ್ರಹಿಸಬೇಕು. ಇದರಿಂದ ಆ ಹಾಡಿನ ಪರಂಪರೆ ಹಾಗೂ ಭೌಗೋಳಿಕ ಪ್ರಸಾರವನ್ನು ಲೆಕ್ಕ ಹಾಕಲು ಸಾಧ್ಯವಾಗುತ್ತದೆ. ಜಾನಪದ ಸಂಗ್ರಹದಲ್ಲಿ ಈ ಪದ್ಧತಿಯೆಲ್ಲ ಕನ್ನಡದಲ್ಲೂ ಚಾಲ್ತಿಯಲ್ಲಿರುತ್ತ ನಲವತ್ತು ವರ್ಷಗಳೇ ಆದವು. ಇದೆಲ್ಲ ಇರಲಿ, ಈ ಗೀತೆಗಳನ್ನು ಸಂಗ್ರಹಿಸಿದವರ ವಿಳಾಸಗಳನ್ನೂ ಸಹ ಕೊನೆಯಲ್ಲಿ ಕೊಟ್ಟಿಲ್ಲ ! ಪ್ರತಿಯೊಂದು ಪುಟದ ಮೇಲ್ತುದಿಯ ಶೀರ್ಷಿಕೆ (ಹೆಡರ್) ಯಾಗಿ ಪುಸ್ತಕದ ಉದ್ದಕ್ಕೂ ಪುಸ್ತಕದ ಹೆಸರನ್ನೇ ಮೊದಲಿಂದ ಕೊನೆವರೆಗೂ ಮುದ್ರಿಸಲಾಗಿದೆ. ಅನುಬಂಧದಲ್ಲಿ ಆಶಯ ಸೂಚಿ, ಕ್ಲಿಷ್ಟಪದ ಸೂಚಿ ಇತ್ಯಾದಿ ಯಾವುದೇ ಪಟ್ಟಿ ಇಲ್ಲ. ಸಂಗ್ರಹಕರಿಂದ ಗೀತೆಗಳನ್ನು ಪಡೆದು ನೇರವಾಗಿ ಪ್ರಕಟಣೆಗೆ ಒಪ್ಪಿಸಿದ ಹಾಗೆ, ತಜ್ಞರ ಸಮಿತಿ ಪುಟಗಳನ್ನೇ ತೆರೆಯದೆ ಮುದ್ರಣಕ್ಕೆ ಕಳಿಸಿದ ಹಾಗೆ ಈ ಪುಸ್ತಕವನ್ನು ಹೊರತರಲಾಗಿದೆ.

ಒಗಟುಗಳನ್ನು ಕುರಿತ ಮತ್ತೊಂದು ಪುಸ್ತಕ

* **ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು:** ಲೇ: ಕಂಟಲಗೆರೆ ಸಣ್ಣಹೊನ್ನಯ್ಯ: ಪ್ರ–ತುಮಕೂರು ವಿಶ್ವವಿದ್ಯಾಲಯ, ಪು. ೧೬+೯೦; ಬೆಲೆ ರೂ. ೪೦/–

ಕನ್ನಡದಲ್ಲಿ ಒಗಟುಗಳ ಸಂಗ್ರಹಗಳು ಈಗಾಗಲೇ ಸಾಕಷ್ಟು ಬಂದಿವೆ. ಸೋಮಶೇಖರ ಇಮ್ರಾಪೂರ ಅವರ 'ಕನ್ನಡದ ಸಾವಿರದ ಒಗಟುಗಳು' ಈ ಕ್ಷೇತ್ರದ ಒಂದು ಮುಖ್ಯವಾದ ಕೃತಿ. ಪ್ರಸ್ತುತ ಕೃತಿಯಲ್ಲಿ ಕೂಡ ಸಾವಿರಕ್ಕೆ ಸಮೀಪದಷ್ಟು (೯೬೫) ಒಗಟುಗಳಿದ್ದು ಇವೆಲ್ಲವೂ ತುಮಕೂರು ಜಿಲ್ಲೆಯಲ್ಲಿ ಸಂಗ್ರಹಿಸಿದವುಗಳಾಗಿವೆ ಎಂಬುದೊಂದೇ ಇಲ್ಲಿನ ವಿಶೇಷ.

ಇದಕ್ಕೊಂದು ೩೨ ಪುಟಗಳ ಪ್ರಸ್ತಾವನೆ ಇದೆ. ಮುದ್ರಣದೋಷ ಅಥವಾ ಅರ್ಥ ಸಂದಿಗ್ಧತೆ ಇಲ್ಲದ ಒಂದು ಪುಟವಾದರೂ ಈ ಭಾಗದಲ್ಲಿದೆಯೇ ಎಂಬುದನ್ನು ಹುಡುಕಿ ನೋಡಬೇಕಾಗುತ್ತದೆ. ಕೆಲವು ಪುಟಗಳಲ್ಲಂತೂ ಮೂರ್‍ನಾಲ್ಕು ಮುದ್ರಣ ದೋಷಗಳಿವೆ. ಈ ಪ್ರಸ್ತಾವನೆಯಲ್ಲಿ ಪಾಟರ್, ಸಾಕ್ರಟೀಸ್, ಆರ್.ಎಸ್. ಬಾಗ್ಸ್

ಮೊದಲಾದವರ ಅಭಿಪ್ರಾಯಗಳನ್ನು ಪ್ರಸ್ತಾಪಿಸುತ್ತಾರೆ. ಆದರೆ ಅಡಿಟಿಪ್ಪಣಿಗಳಾಗಲೀ, ಆಧಾರ ಗ್ರಂಥ ಸೂಚಿಯಾಗಲೀ ಇಲ್ಲ. ಇವರು ಈ ಪ್ರಸ್ತಾವನೆಯಲ್ಲಿ ಹೇಳುವ ಅನೇಕ ಮಾತುಗಳು ಇವರ ಅಧ್ಯಯನದ ಗಂಭೀರತೆಯ ಬಗ್ಗೆ ಸಂಶಯವನ್ನುಂಟು ಮಾಡುತ್ತವೆ. ಕೆಲವು ಉದಾಹರಣೆಗಳನ್ನು ನೋಡಿ–

೧. 'ಪ್ರಶ್ನೆ, ವಿವಾದ, ಸಮಸ್ಯಾ– ಮುಂತಾದ ಪದಗಳೂ ಒಗಟು ಎಂಬ ಅರ್ಥದಲ್ಲಿ ಪ್ರಚಲಿತವಾಗಿವೆ.' (ಪುಟ–೧)

– ಇದಕ್ಕೆ ಆಧಾರವೇನು? ಯಾವ್ಯಾವ ತಜ್ಞರು ಈ ಮಾತನ್ನು ಹೇಳಿದ್ದಾರೆ? 'ಪ್ರಶ್ನೋತ್ತರ ರತ್ನ ಮಾಲಿಕಾ' ದಂತಹ ಕೃತಿಯನ್ನು ಇವರು ಪ್ರಸ್ತಾಪಿಸಿದ್ದಾರೆ. ಆದರೆ ಅಲ್ಲಿರುವುದು ಒಗಟುಗಳೇ ಅಲ್ಲ. ಅಲ್ಲಿರುವುದೆಲ್ಲ ಜಿಜ್ಞಾಸೆಯ ಪ್ರಶ್ನೆಗಳು. ಸಮಸ್ಯಾ ಪೂರ್ತಿ ಪದ್ಯಗಳೂ ಸಂಸ್ಕೃತ / ಕನ್ನಡ ಸಾಹಿತ್ಯದಲ್ಲಿವೆ. ಆದರೆ ಅವುಗಳ ಆಶಯ/ ಸ್ವರೂಪಕ್ಕೂ ನಾವು ಒಗಟುಗಳೆಂದು ಕರೆಯುತ್ತಿರುವ ಭಾಷಿಕ ರಚನೆಗಳಿಗೂ ತುಂಬ ವ್ಯತ್ಯಾಸವಿದೆ.

೨. ಒಗಟು ಮತ್ತು ಒಡಪು ಎರಡೂ ಒಂದೇ ಎಂಬರ್ಥದಲ್ಲಿ ಬರೆಯುತ್ತಾರೆ. 'ಒಡೆ=ಬಿಡಿಸು ಎಂಬರ್ಥದಲ್ಲಿ 'ಒಡಪು' ಬಂದಿರಬೇಕೆಂದು ತೋರುತ್ತದೆ' ಎನ್ನುತ್ತಾರೆ. (ಪುಟ–೧೧). ವಾಸ್ತವವಾಗಿ ಒಡಪು ಎಂದರೆ ಮದುಮಕ್ಕಳು ಪರಸ್ಪರರ ಹೆಸರನ್ನು ವಿನೋದ ಮಯವಾಗಿ ಹೇಳಲು ಬಳಸುವ ಭಾಷಿಕ ಪ್ರಕಾರ. (ಗಮನಿಸಿ– 'ಹೆಸರ ಹೇಳ್ತೀನಿ ಒಡಪ ಕಟ್ಟಿ'– ಜ್ಯೋತಿ ಹೊಸೂರ) ಈ ಶಬ್ದವನ್ನು ಈ ಅರ್ಥದಲ್ಲಿ ಜಾನಪದ ಅಭ್ಯಾಸಿಗಳು ಬಳಸುತ್ತಾ ಹತ್ತಿರ ಹತ್ತಿರ ನಲವತ್ತು ವರ್ಷಗಳೇ ಕಳೆದಿವೆ.

೩. ಕೆಲವೆಡೆ ಈ ಲೇಖಕರ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ಉದಾ.ಗೆ ಈ ವಾಕ್ಯ ಗಮನಿಸಿ – "ಒಗಟೂ ಒಂದು ಮೂಲಭೂತವಾಗಿ ಸೃಷ್ಟಿಯೇ ಒಂದು ಪ್ರಶ್ನೆ ಜೀವನವೇ ಒಂದು ಅರ್ಥವತ್ತಾದ ಸಮಸ್ಯೆ ಎಂಬ ಸಾಂಕೇತಿಕ ದೃಷ್ಟಿಯ ಹಿನ್ನೆಲೆಯಲ್ಲಿ ರಚಿತವಾಗಿರುವಂತೆ ತೋರುತ್ತದೆ" (ಪುಟ–೧) ಇಲ್ಲಿ ನಡುವೆ ಯಾವುದೇ ಚಿನ್ಹೆ ಇಲ್ಲ. ನಾವು ಹೇಗೆ ವ್ಯಾಕರಣ ಚಿನ್ಹೆ ಹಾಕಿಕೊಂಡರೂ ವಾಕ್ಯದ ಅರ್ಥ ಸ್ಪಷ್ಟವಾಗುವುದಿಲ್ಲ. ಅದಿರಲಿ–ಒಗಟು ಒಂದು ಚಿಂತನೆ ಹಾಗೂ ಭಾಷಾ ಚಮತ್ಕಾರ ಅಷ್ಟೆ. ಅದನ್ನು 'ಇಡೀ ಸೃಷ್ಟಿಯೇ ಒಂದು ಸಮಸ್ಯೆ ಎಂಬ ಹಿನ್ನೆಲೆಯಲ್ಲಿ ರಚಿತವಾಗಿದೆ'– ಎಂದು ಭಾವಿಸುವುದು ಇಲ್ಲದ ತಾತ್ವಿಕತೆಯ ಅತಿಭಾರಾರೋಪಣವಾಗುತ್ತದೆ ಅಷ್ಟೆ. ಇಂತಹ ಸಂದಿಗ್ಧತೆಯ ವಾಕ್ಯಗಳು ಈ ಮೂವತ್ತು ಪುಟದ ಪ್ರಸ್ತಾವನೆಯನ್ನು ಕನಿಷ್ಠ ಹತ್ತಾದರೂ ದೊರೆಯುತ್ತವೆ. 'ಭಾರತೀಯ ಒಗಟಿನ ಇತಿಹಾಸದಲ್ಲಿ ಮಹಾಭಾರತವೊಂದು ವಿಶೇಷವಾಗಿ ಹೆಸರಿಸಬೇಕಾದ ಗ್ರಂಥ' (ಪು.೨೫) ಎನ್ನುವುದು ಇನ್ನೊಂದು ಅರಗಿಸಿಕೊಳ್ಳಲಾಗದ ಅಸಮರ್ಥನೀಯ ಹೇಳಿಕೆ.

೪. 'ಪ್ರಾಕೃತದ 'ವಡ್ಡಕಹಾ' ಕ್ಕೆ 'ದೊಡ್ಡಕಥೆ' ಎಂಬರ್ಥವನ್ನು ನಿಸ್ಸಂದೇಹವಾಗಿ ಹೊರಿಸಬಹುದು' ಎನ್ನುತ್ತಾರೆ (ಪು.೨) ಇದು ತಪ್ಪು. ಪ್ರಾಕೃತದ 'ವಡ್ಡ' ಕ್ಕೆ ಹಿರಿಯ ಶ್ರೇಷ್ಠ ಎಂಬರ್ಥದಲ್ಲಿ ಮಾತ್ರ ಕನ್ನಡದ 'ದೊಡ್ಡ' ಪದವನ್ನು ಬಳಸಬಹುದೇ ಹೊರತು ಗಾತ್ರದಲ್ಲಿ ದೊಡ್ಡದಾದ ಎಂಬರ್ಥದಲ್ಲಿ ಅಲ್ಲ. (ನೋಡಿ–ವಡ್ಡಾರಾಧನಾ=ದೊಡ್ಡವರ/ಹಿರಿಯರ/ಪೂಜ್ಯರ ಆರಾಧನೆ)

ಬೇರೆಡೆ ಓದಿದ ಮಾತುಗಳನ್ನು ನಾವು ನಮ್ಮ ಚಿಕಿತ್ಸಕ ವಿಶ್ಲೇಷಣೆಗೆ ಒಳಪಡಿಸಿ ಅದನ್ನು ವಿಮರ್ಶಿಸಬೇಕು. ಇಲ್ಲಿ ಅಂಥ ಯಾವ ಪ್ರಯತ್ನವೂ ಕಾಣುವುದಿಲ್ಲ. ಹೀಗಾಗಿ ಈ ಪ್ರಸ್ತಾವನೆಯಲ್ಲಿನ ಮಾತುಗಳನ್ನು ಓದುತ್ತಿದ್ದಾಗ ಅನೇಕ ಕಡೆಗಳಲ್ಲಿ ಅನ್ಯರ ತಪ್ಪು ಅಭಿಪ್ರಾಯಗಳನ್ನು ಹಾಗೆಯೇ ಒಪ್ಪಿಕೊಂಡು ಬರೆದಿಟ್ಟಿರುವಂತೆ ಕಾಣುತ್ತದೆ. ಅಡಿ ಟಿಪ್ಪಣಿಗಳಿಲ್ಲದಿರುವುದರಿಂದಾಗಿ ಇವೆಲ್ಲ ಈ ಪುಸ್ತಕದ ಲೇಖಕರು (ವಾಸ್ತವವಾಗಿ ಸಂಪಾದಕ ಎನ್ನಬೇಕಿತ್ತು) ಎಂದು ತಮ್ಮನ್ನು ಕರೆದುಕೊಂಡಿರುವವರ ಅಭಿಪ್ರಾಯಗಳೆಂದೇ ತಿಳಿಯಬೇಕಾಗಿರುತ್ತದೆ.

ಈ ಪ್ರಸ್ತಾವನೆಯ ಬಳಿಕ ಒಗಟುಗಳನ್ನು ಸೀದಾ ಒಂದು ಪಟ್ಟಿಯಂತೆ ಉದ್ದಾನುದ್ದಕ್ಕೆ ಪ್ರಕಟಿಸಲಾಗಿದೆ. ಇವನ್ನು ಯಾವುದಾದರೊಂದು ರೀತಿಯಲ್ಲಿ (ಉದಾ:– ವಸ್ತು ಸಂಬಂಧಿ/ಪ್ರಾಣಿಸಂಬಂಧಿ/ಸಸ್ಯ ಸಂಬಂಧಿ/ ಪ್ರಕೃತಿ ಸಂಬಂಧಿ/–ಇತ್ಯಾದಿ) ವರ್ಗೀಕರಿಸಿ ಕೊಡಬಹುದಿತ್ತು. ಅದಿಲ್ಲವಾದರೆ ಅಕಾರಾದಿಯಾಗಿ ಯಾದರೂ ಕೊಡಬಹುದಿತ್ತು. ಅದು ಹೋಗಲಿ ಎಂದರೆ ಅನೇಕ ಕಡೆಗಳಲ್ಲಿ ಒಂದು ಒಗಟಿನ ಉತ್ತರ ಮತ್ತೊಂದು ಒಗಟಿನ ಉತ್ತರವಾಗಿ ಪ್ರತ್ಯಕ್ಷವಾಗಿದೆ. ಕೆಲ ಉದಾಹರಣೆ ನೋಡಿ.

ಸಂಖ್ಯೆ ೯೦೪– 'ನಾಲ್ಕು ಕಾಲುಗಳುಂಟು ಮೃಗವು ತಾನಲ್ಲ, ಮೇಲೆ ಪುಕ್ಕಗಳುಂಟು ಪಕ್ಷಿ ನಾನಲ್ಲ, ಲೀಲೆ ಮುಖ ಎರಡುಂಟು ಬಾಲ ತನಗಿಲ್ಲ, ನಾಲ್ಕು ಜಾಣರು ಕೂಡಿ ಹೇಳಿ ನೀವೆಲ್ಲ'

ಸಂಖ್ಯೆ ೯೦೮– 'ಬದಿನಲ್ಲಿ ಹುಟ್ಟುವುದು ಬದಿನಲ್ಲಿ ಬೆಳೆಹುದು, ಹೋಗುವರ ಸೆರಗ್ಹಿಡಿದು ಎಳೆವುದು, ಎಲೆಬಾಲೆ ಇದರರ್ಥ ತಿಳಿದ್ಹೇಳೆ'.

–ಇದಕ್ಕೆ 'ಕಹಳೆ' ಎಂದು ಉತ್ತರ ಮುದ್ರಿಸಲಾಗಿದೆ. ಆದರೆ ವಾಸ್ತವವಾಗಿ ಇದರ ಉತ್ತರ– 'ಉತ್ತರವಾಣಿ ಕಡ್ಡಿ' ಅದನ್ನು ೯೧೦ನೇ ಸಂಖ್ಯೆಯ 'ಕರಿ ಹುಡುಗನಿಗೆ ಬಿಳಿಟೋಪಿ' ಎಂಬ ಒಗಟಿಗೆ ಉತ್ತರವಾಗಿ ಮುದ್ರಿಸಲಾಗಿದೆ. ೯೦೮ನೇ ಒಗಟಿಗೆ ಮುದ್ರಿಸಿರುವ 'ಕಹಳೆ'ಎಂಬ ಉತ್ತರವು ಇಲ್ಲಿನ ೯೦೬ನೇ ಸಂಖ್ಯೆಯು 'ಅರ್ಧಚಂದ್ರಮನಂತೆ ಆಕಾರವಿಹುದು, ಮುದ್ದುಕೊಟ್ಟರೆ ಒತ್ತಿ ಗದ್ದರಿಸುತಿಹುದು' ಎಂಬು

ಒಗಟಿಗೆ ಸರಿಯಾದ ಉತ್ತರವಾಗಿದೆ. ಆದರೆ ಆ ಒಗಟಿಗೆ 'ಪಲ್ಲವಿ' ಎಂಬ ಉತ್ತರ ನೀಡಲಾಗಿದೆ.

ಇದೇ ರೀತಿ– ೬೯೩, ೬೯೫, ೮೭೮, ೮೮೦, ೮೮೧, ೮೮೨, ೮೮೫, ೮೮೬ ಈ ಒಗಟುಗಳಿಗೆ ನೀಡಿರುವ ಉತ್ತರಗಳೂ ತಪ್ಪಾಗಿವೆ. ಇಂಥ ಇನ್ನೆಷ್ಟು ತಪ್ಪುಗಳಿವೆಯೋ! ಇಂಥ ಗಂಭೀರ ದೋಷಗಳಿರುವ ಪುಸ್ತಕವೊಂದನ್ನು ವಿಶ್ವವಿದ್ಯಾಲಯದ ತಜ್ಞರ ಸಮಿತಿ ಪ್ರಕಟಣೆಗೆ ಶಿಫಾರಸ್ಸು ಮಾಡುವುದೆಂಬುದನ್ನು ಊಹಿಸುವುದೂ ಕಷ್ಟವಾಗುತ್ತದೆ.

ಎಸ್.ಪಿ. ಪದ್ಮಪ್ರಸಾದ್

ಮಹಾಸತಿ ಕುರಿತ ಖಂಡ ಕಾವ್ಯ

* **ಮಹಾಸತಿ ಬರಗೂರು ವೀರಮ್ಮನ ಕಾವ್ಯ;** ಸಂ.– ಜಂಗಮರಹಳ್ಳಿ ಮುದ್ದವೀರಪ್ಪ; ಪ್ರ–ಸಾಹಿತ್ಯ ಪ್ರಕಾಶನ, ರಂಗನಾಥ ನಿಲಯ, ೭ನೇ ಕ್ರಾಸ್, ಚಂದ್ರಮೌಳೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು – ೪; ಪುಟಗಳು ೧೭+೬೮. ಬೆಲೆ ರೂ. ೭೫/–

ಜಂಗಮರಹಳ್ಳಿ ಮುದ್ದವೀರಪ್ಪನವರು 'ಮಹಾಸತಿ ಬರಗೂರು ವೀರಮ್ಮನ ಕಾವ್ಯ' ಎಂಬ ೪೩೨ ತ್ರಿಪದಿಗಳಷ್ಟು ದೀರ್ಘವಾದ ಜನಪದ ಕಾವ್ಯವೊಂದನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ನಿರ್ದಿಷ್ಟ ಹಾಡುಗಾರ್ತಿಯರೇ ಪೂರ್ಣವಾಗಿ ಹಾಡಿರುವ ಕಾವ್ಯವಾದ್ದರಿಂದ ಇಲ್ಲಿ ಪಾಠಾಂತರ ನಿರ್ಣಯದ ಕ್ಲೇಶವಿಲ್ಲ. ಗೀತೆಯನ್ನು ಸಂಗ್ರಹಿಸಿದ ದಿನಾಂಕಗಳ ವಿವರವಿಲ್ಲ ಎಂಬ ಒಂದು ಲೋಪವನ್ನು ಬಿಟ್ಟರೆ ಈ ಕಥನ ಕಾವ್ಯದ ಸಂಗ್ರಹ ಮತ್ತು ಸಂಪಾದನೆ ಬಹುಮಟ್ಟಿಗೆ ಶಾಸ್ತ್ರೀಯವಾಗಿದೆ. ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಬರಗೂರು ಗ್ರಾಮದ ಬಳಿಯ ತಡಕಲೂರು ಎಂಬಲ್ಲಿ ವೀರಮ್ಮ ಎಂಬಾಕೆ ಕೆಲವು ಶತಮಾನಗಳ ಹಿಂದೆ ಸಹಗಮನ ಮಾಡಿ ಮಹಾಸತಿಯಾದುದರ ವಿವರವಾದ ವರ್ಣನೆಯೇ ಇಲ್ಲಿನ ವಸ್ತು.

ಕಾವ್ಯವು ತ್ರಿಪದಿ ಛಂಧಸ್ಸಿನಲ್ಲಿದ್ದು ಹೃದಯಸ್ಪರ್ಶಿಯಾಗಿದೆ. ಇಂಥದೇ ವಸ್ತುವನ್ನುಳ್ಳ ಇತರ ಖಂಡಕಾವ್ಯ/ಕಥನ ಗೀತೆಗಳೊಂದಿಗೆ ತೌಲನಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಕೊನೆಯಲ್ಲಿನ ಅನುಬಂಧದಲ್ಲಿ ಅರ್ಥಕೋಶ, ವಕ್ತೃವಿವರ ಹಾಗೂ ಕಾವ್ಯದಲ್ಲಿ ಉಲ್ಲೇಖಗೊಂಡಿರುವ ಊರುಗಳ ಬಗ್ಗೆ ಸಂಕ್ಷಿಪ್ತ ವಿವರಗಳಿವೆ. ಒಂದು ಆಶಯ ಸೂಚಿ ಹಾಗೂ ಪ್ರಸ್ತಾವನೆಯಲ್ಲಿ ಸಂವಾದಿಕಥನ ಗೀತೆಗಳೊಂದಿಗೆ ತುಲನಾತ್ಮಕ ವಿವೇಚನೆ ಇದ್ದಿದ್ದರೆ ಈ ಪ್ರಕಟಣೆಯ ಮೌಲ್ಯ ಇನ್ನೂ ಹೆಚ್ಚುತ್ತಿತ್ತು. ಹೀಗಿದ್ದರೂ ಈ ಯುವ ಜಾನಪದ ತಜ್ಞರ ಶ್ರದ್ಧೆ ಹಾಗೂ ಉತ್ಸಾಹಗಳು ಮೆಚ್ಚತಕ್ಕವಾಗಿವೆ.

ಎಸ್.ಪಿ. ಪದ್ಮಪ್ರಸಾದ್

ಜನಪ್ರಿಯ ಗೀತೆಗಳ ಸಂಗ್ರಹ

* **ಜಾನಪದ ಮಕರಂದ :** ಸಂಗ್ರಹ, ಸಂಪಾದನೆ; ಬಂಡ್ಲಹಳ್ಳಿ ವಿಜಯಕುಮಾರ್, ಪ್ರ: ಮೇವಿ ಪಬ್ಲಿಕೇಷರ್ಸ್, ನಂ. ೫೬೫, ೧ನೇ ಮಹಡಿ, ೩ನೇ ಹಂತ, ಪಶ್ಚಿಮಕಾರ್ಡ್ ರಸ್ತೆ, ಮಂಜುನಾಥ ನಗರ, ಬೆಂಗಳೂರು – ೫೬೦ ೦೧೦, ಪುಟಗಳು ೧೬+೧೬೦; ಬೆಲೆ ರೂ. ೧೫೦/–

ಜಾನಪದ ಮಕರಂದವು ಕನ್ನಡದ ತುಂಬ ಜನಪ್ರಿಯವಾದ ೧೩೫ ಜನಪದ ಗೀತೆಗಳನ್ನು ವಿವಿಧ ಸಂಗ್ರಹಗಳಿಂದ ಆಯ್ದು ಸಿದ್ಧಪಡಿಸಿರುವ ಒಂದು ಜನಪ್ರಿಯ ಉದ್ದೇಶದ ಸಂಕಲನ. ಇಲ್ಲಿರುವುದೆಲ್ಲ ಬಹಳಷ್ಟು ಕಡೆಗಳಲ್ಲಿ ನಾವು ಕೇಳಿರುವಂಥವೇ. ಯಾವ ಯಾವ ಸಂಗ್ರಹಗಳಿಂದ ಇವನ್ನು ಎತ್ತಿಕೊಳ್ಳಲಾಗಿದೆ ಎಂಬ ಉಲ್ಲೇಖ ಇಲ್ಲಿ ಎಲ್ಲಿಯೂ ಇಲ್ಲ.

ಈ ಕೃತಿಯ ಸಂಪಾದಕ ಶ್ರೀ ಬಂಡ್ಲಹಳ್ಳಿ ವಿಜಯಕುಮಾರ್ ಅವರು. ಜಾನಪದ ಗಾಯಕರಾದ ಅವರು ವಿದ್ಯಾರ್ಥಿಗಳಿಗೆ ತರಬೇತಿ ಕೊಡಲೆಂದು ಈ ಸಂಗ್ರಹವನ್ನು ಸಿದ್ಧಪಡಿಸಿದ್ದಾರೆ. ಮುಖಪುಟದಲ್ಲಿಯೇ 'ಜನಪದ ಗೀತೆಗಳು ಮತ್ತು ಕಲಿಯುವ ಬಗೆ' ಎಂದು ಪುಸ್ತಕದ ಪರಿಚಯದ ಉಪ ಶೀರ್ಷಿಕೆಯನ್ನೂ ಕೊಟ್ಟಿದ್ದಾರೆ. ಆದ್ದರಿಂದ ಇಲ್ಲಿ ಎಲ್ಲಿಯೂ ನಾವು ಜನಪದ ಗೀತೆಗಳನ್ನು ಸಂಗ್ರಹಿಸಿ ಸಂಪಾದಿಸುವ ಜಾನಪದ ತಜ್ಞನ ಶಿಸ್ತಿನ ಕೆಲಸವನ್ನು ನಿರೀಕ್ಷಿಸುವಂತಿಲ್ಲ. ಇದು ಹಾಡುಗಾರರಿಗೆ ಮಾತ್ರವೇ ಉಪಯುಕ್ತವಾದ ಕೃತಿ. ಅಧ್ಯಯನಕಾರರಿಗಲ್ಲ. ಆ ಸೀಮಿತ ಉದ್ದೇಶದಲ್ಲಿ ಇದು ಯಶಸ್ವಿಯೇ ಎನ್ನಬಹುದು. ಕೊನೆಯಲ್ಲಿ ಜಾನಪದ ಗೀತೆಗಳಲ್ಲಿ ಬರುವ ಶಿವನ ಹಲವಾರು ಹೆಸರುಗಳನ್ನು, ರೂಢಿಯಲ್ಲಿ ಬರಲಿ ಎಂಬ ಕಾರಣದಿಂದ ಕೆಲವು ಗಾದೆ ಒಗಟುಗಳನ್ನು ಕೊಟ್ಟಿದ್ದಾರೆ. ವಿಸ್ತಾರವಾದ ಅರ್ಥಕೋಶವೂ ಇದೆ. ಇದೆಲ್ಲ ಮೆಚ್ಚುವಂಥದೇ. ಆದರೆ 'ರೈತಗೀತೆ' ಯನ್ನು ಮುದ್ರಿಸುವಲ್ಲಿ ಆರು ತಪ್ಪುಗಳನ್ನು ಉಳಿಸಿರುವುದನ್ನೂ ಕ್ಷಮಿಸಲಾಗದು.

ಜನಪದ ಗೀತೆಗಳನ್ನು ಹಾಡುವುದರ ಅಭ್ಯಾಸವನ್ನು ಹೇಗೆ ಆರಂಭಿಸಬೇಕೆಂಬುದರ ಬಗ್ಗೆ ಆರಂಭದಲ್ಲಿ ಒಂದು ಪುಟ್ಟ ಲೇಖನವನ್ನು ಸಂಪಾದಕರು ಬರೆದಿದ್ದಾರೆ. ಅದನ್ನು ಹಾಡುಗಾರರು ಪರೀಕ್ಷಿಸಿ ನೋಡಬೇಕಷ್ಟೆ.

ಎಸ್.ಪಿ. ಪದ್ಮಪ್ರಸಾದ್

ತುಳು ಪಾಡ್ದನಗಳ ಸಂಗ್ರಹ

* **ಚಂದಬಾರಿ ರಾಧೆ ಗೋಪಾಲ ಮತ್ತು ಇತರ ಪಾಡ್ದನಗಳು:** ಸಂ: ಲಕ್ಷ್ಮೀ ಜಿ. ಪ್ರಸಾದ. ಪ್ರ: ಮಾತೃಶ್ರೀ ಪ್ರಕಾಶನ, ಬೆಂ–೫೬. ಪುಟಗಳು: ೨೦+೧೨೪. ಬೆಲೆ ರೂ. ೧೨೫–

ದೈವಗಳಿಗೆ ಸಂಬಂಧಿಸಿದ ತುಳುನಾಡಿನ ಜನಪದ ಕಥನ ಗೀತೆಗಳಿಗೆ ಪಾಡ್ದನ ಎನ್ನುತ್ತಾರೆ. ಇಂಥ ನೂರಾರು ಪಾಡ್ದನಗಳು ತುಳುನಾಡಿನ ಜನಪದರ ನಾಲಿಗೆ ಮೇಲಿವೆ. ಇವುಗಳ ಹಲವು ಸಂಗ್ರಹಗಳು ಬಂದಿವೆ. ಈ ಬಗ್ಗೆ ಅಧ್ಯಯನವೂ ವಿವಿಧ ವಿದ್ವಾಂಸರಿಂದ ನಡೆದಿದೆ. ಪೀಟರ್ ಜೆ. ಕ್ಲಾಸ್‌ರಂಥ ವಿದೇಶೀ ವಿದ್ವಾಂಸರೂ ಈ ಬಗ್ಗೆ ಬರೆದಿದ್ದಾರೆ. ಆದರೂ ಇವುಗಳ ಬಗೆಗಿನ ಅಧ್ಯಯನ ಇನ್ನೂ ಸಾಕಷ್ಟು ನಡೆಯಬೇಕೆನ್ನುವಷ್ಟು ಈ ಕ್ಷೇತ್ರ ಸಮೃದ್ಧವಾಗಿಯೇ ಉಳಿದಿದೆ. ಪ್ರಸ್ತುತ ಪಾಡ್ದನ ಸಂಗ್ರಹ ಈ ಕ್ಷೇತ್ರದಲ್ಲಿ ಇನ್ನೊಂದು ಹೊಸ ಪ್ರಯತ್ನವಾಗಿದೆ.

ಲಕ್ಷ್ಮೀ ಪ್ರಸಾದ ಅವರು ಈ ಪುಟ್ಟ ಕೃತಿಯಲ್ಲಿ ಹನ್ನೊಂದು ಪಾಡ್ದನಗಳನ್ನು ಸಂಗ್ರಹಿಸಿ, ಅವುಗಳನ್ನು ಕನ್ನಡ ಅನುವಾದ, ಸೂಕ್ತ ಪ್ರಸ್ತಾವನೆ ಹಾಗೂ ಸಾಂಸ್ಕೃತಿಕ ಪದಕೋಶಗಳೊಂದಿಗೆ ನೀಡಿದ್ದಾರೆ. ಇಲ್ಲಿ ಎರಡು ನಾಗಬೆರ್ಮೆರ ಪಾಡ್ದನಗಳಲ್ಲದೆ ಚಾಮುಂಡಿ ಪಾಡ್ದನ, ಶಿರಾಡಿಭೂತ ಪಾಡ್ದನ, ಪರತಿ ಮಂಗಣೆ ಪಾಡ್ದನ, ಚಂದಬಾರಿ ರಾಧೆ ಗೋಪಾಲ ಪಾಡ್ದನ, ಮರ್ಲು ಮೈಯೊನ್ದಿ ಪಾಡ್ದನ– ಮೊದಲಾದ ಪಾಡ್ದನಗಳಿವೆ. ಪ್ರತಿ ಪಾಡ್ದನಕ್ಕೆ ಸಂಬಂಧಿಸಿದಂತೆ ಅದರ ಸಾರಾಂಶ ನೀಡುವ ಟಿಪ್ಪಣಿಯೂ ಆರಂಭದಲ್ಲಿದೆ. ಏಳು ಪುಟಗಳ ಪ್ರಸ್ತಾವನೆಯಲ್ಲಿ 'ಪಾಡ್ದನ' ಶಬ್ದ ನಿಷ್ಪತ್ತಿ, ಅವುಗಳ ಸ್ವರೂಪ, ವರ್ಗೀಕರಣ ವಿಧಾನ ಇವುಗಳನ್ನು ಕುರಿತು ಚರ್ಚಿಸುತ್ತಾರೆ. 'ಪಾಡ್ದನ'ವು ಸಂಸ್ಕೃತದ 'ಪ್ರಾರ್ಥನೆ' ಯಿಂದ ಬಂದದ್ದು ಎನ್ನುವ ಇವರ ಮಾತನ್ನು ಒಪ್ಪುವುದು ಕಷ್ಟ.

ಪಾಡ್ದನಗಳನ್ನು ವಸ್ತುವಿನ ಆಧಾರದ ಮೇಲೆ ವಿಂಗಡಿಸಿರುವ ಕ್ರಮ ಸರಿಯಾಗಿದೆ. ಆದರೆ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸುವ ವಿದ್ವಾಂಸರ ಅಭಿಪ್ರಾಯಗಳ ಆಕರಗಳನ್ನು ಉಲ್ಲೇಖಿಸುವುದಿಲ್ಲ. ಅದೇ ರೀತಿ ವಕ್ತೃವಿವರ ಕೂಡ ಅಪೂರ್ಣ. ವಕ್ತೃಗಳ ಹೆಸರು ಮಾತ್ರ ಕೊಟ್ಟರೆ ಸಾಲದು, ಅವರ ವಯಸ್ಸು, ಊರು, ಸಂಗ್ರಹಿಸಿದ ದಿನಾಂಕ, ಅವರು ಎಷ್ಟು ವರ್ಷಗಳ ಹಿಂದೆ ಯಾರಿಂದ ಕಲಿತದ್ದು– ಎಂಬೆಲ್ಲ ವಿವರಗಳೂ ಕ್ರಮಬದ್ಧವಾಗಿ ಇರಬೇಕು. ಇಂಥ ದೋಷಗಳನ್ನು ತಮ್ಮ ಮುಂದಿನ ಕೃತಿಗಳಲ್ಲಿ ತಿದ್ದಿಕೊಂಡು ಹೀಗೆ ಉಪಯುಕ್ತ ಸಂಶೋಧನೆಯನ್ನು ಇವರು ಮುಂದುವರಿಸಲಿ ಎಂದು ಆಶಿಸಬಹುದು.

ಎಸ್.ಪಿ. ಪದ್ಮಪ್ರಸಾದ್

ಸುಂದರ ತುಳು ಜನಪದ ಗೀತೆಗಳು

* **ತುಳು ಜನಪದ ಕವಿತೆಗಳು:** ಸಂ. ಲಕ್ಷ್ಮೀ ಜಿ. ಪ್ರಸಾದ, ಪ್ರ: ಮಾತೃಶ್ರೀ ಪ್ರಕಾಶನ, ನಂ.೫, 'ನಂದನ ತೋಟ'ಮನೆ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯ ರಸ್ತೆ, ಬೆಂಗಳೂರು – ೫೬. ಪು. ೯+೧೨೨. ಬೆಲೆ ರೂ. ೧೨೦/–

ಈ ಸಂಕಲನದಲ್ಲಿ ಲಕ್ಷ್ಮೀ ಅವರು ೨೯ ತುಳು ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದಾರೆ. ಈ ಗೀತೆಗಳಲ್ಲಿ ಕಥನಾಂಶ ಕಡಿಮೆ. ಆದರೆ ಒಂದು ರೀತಿಯ ಉತ್ಸಾಹದ ಮನೋಭಾವ ಹೆಚ್ಚಿನವುಗಳಲ್ಲಿದೆ. ಒಂದೆರಡು ನೋವಿನ ವಿಷಾದಗೀತೆಗಳೂ ಇವೆ.

ಸಂಪಾದನಾ ಕ್ರಮ ಅಚ್ಚುಕಟ್ಟಾಗಿದೆ. ಪ್ರತಿ ಗೀತೆಗೂ ಮುನ್ನ ಒಂದು ಟಿಪ್ಪಣಿ, ಹಾಡಿದವರ ಹೆಸರು, ಊರು, ವಯಸ್ಸು ಕೊಟ್ಟು ಅನಂತರ ತುಳುಗೀತೆಯನ್ನು ಮುದ್ರಿಸಿದ್ದಾರೆ. ಆ ಬಳಿಕ ಅದರ ಅನುವಾದವೂ ಇದೆ. ಪುಸ್ತಕದ ಕೊನೆಯಲ್ಲಿ ಸಾಕಷ್ಟು ವಿವರಣ ಪೂರ್ಣವಾದ ಅರ್ಥಕೋಶವೂ ಇದೆ. ಪ್ರತಿ ಹಾಡಿಗೂ ಸಂಗ್ರಹಿಸಿದ ದಿನಾಂಕವೂ ಇರಬೇಕಿತ್ತು. ಇದರ ವಿನಃ ಮತ್ತೇನೂ ಕೊರತೆ ಕಾಣುವುದಿಲ್ಲ. ಬೆಲೆ ಮಾತ್ರ ತುಂಬ ಹೆಚ್ಚಾಯಿತು.

ಎಸ್.ಪಿ. ಪದ್ಮಪ್ರಸಾದ್

ಅಧ್ಯಾಯ – ೪

ವಿಚಾರ, ವಿಮರ್ಶೆ ಮತ್ತು ಸಂಶೋಧನೆ

ಶಿವಮೊಗ್ಗ ಜಿಲ್ಲೆಯ ಜನಪದ ಕಲೆಗಳ ಶ್ರದ್ಧಾಪೂರ್ವಕ ಅಧ್ಯಯನ

* **ತುಂಗೆಯ ಮಡಿಲ ಜಾನಪದ:** ಲೇ॥ ಬಿ.ವಿ. ಗೀತಾ, ಪ್ರ: ಸಿರಿವರ ಪ್ರಕಾಶನ, ನಂ. ಎಂ. ೩೭/ಬಿ, ೮ನೇ ಕ್ರಾಸ್, ಲಕ್ಷ್ಮೀನಾರಾಯಣ ಪುರ, ಬೆಂಗಳೂರು – ೫೬೦ ೦೨೧, ಪು. ೧೬+೩೮೪. ಬೆಲೆ ರೂ. ೨೫೦/–

ಶ್ರದ್ಧೆ ಮತ್ತು ಪರಿಶ್ರಮಗಳಿಂದ ಕೂಡಿದ ಕ್ಷೇತ್ರಕಾರ್ಯದ ಮೂಲಕ ಒಬ್ಬ ಸಂಶೋಧಕ ಎಂಥ ಆಕರ ಗ್ರಂಥವನ್ನು ರೂಪಿಸಬಹುದೆಂಬುದಕ್ಕೆ ಸಾಕ್ಷಿಯಾದ ಸಾಕಷ್ಟು ಜಾನಪದ ಕೃತಿಗಳು ಕನ್ನಡದಲ್ಲಿ ಬಂದಿವೆ. ಅವುಗಳ ಗುಂಪಿಗೆ ಸೇರುವ ಅರ್ಹತೆಯುಳ್ಳ ಇತ್ತೀಚಿನ ಕೃತಿಗಳಲ್ಲಿ ಒಂದು – ಬಿ.ವಿ. ಗೀತಾ ಅವರ – 'ತುಂಗೆ ಮಡಿಲ ಜಾನಪದ'. ಇದು ಶಿವಮೊಗ್ಗ ಜಿಲ್ಲೆಯ ಜಾನಪದ ಕಲೆಗಳನ್ನು ಕುರಿತ ಪಿಎಚ್.ಡಿ. ನಿಬಂಧ. (ಯಾವ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೆಂದು ಸ್ಪಷ್ಟವಾಗುವುದಿಲ್ಲ. ಅಷ್ಟೇ ಅಲ್ಲ, ತಾಂತ್ರಿಕ ಪುಟದಲ್ಲಿ A article by Dr. Geetha B.V. ಎಂದಿದೆ.)

ಮುನ್ನೂರಾ ಎಂಭತ್ತು ಪುಟಗಳ ಈ ಬೃಹತ್ ಗ್ರಂಥದಲ್ಲಿ ಆರು ಅಧ್ಯಾಯಗಳಿದ್ದು ಇಂಥ ಮಹಾಪ್ರಬಂಧಗಳಿಗಿರಬೇಕಾದಂತೆ – ೧) ಅಧ್ಯಯನದ ಉದ್ದೇಶ, ವ್ಯಾಪ್ತಿ ೨) ಜನಪದ ಕುಣಿತಗಳ ಉಗಮ ಮತ್ತು ವಿಕಾಸ ೩)ಶಿವಮೊಗ್ಗ ಜಿಲ್ಲೆಯ ಭೌಗೋಳಿಕ ಪರಿಸರ, ಜನವರ್ಗ ಮತ್ತು ಸಂಸ್ಕೃತಿ ೪) ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುವ ಕಲೆಗಳು ೫) ಆಧುನಿಕ ಸಂದರ್ಭದಲ್ಲಿ ಜನಪದ ಕಲೆಗಳ ಪ್ರಸ್ತುತತೆ ಹಾಗೂ ೬) ಉಪಸಂಹಾರ – ಇವೇ ಈ ಆರು ಅಧ್ಯಾಯಗಳು. ಅಧ್ಯಾಯಗಳ ವಿಂಗಡಣೆ ಸಮರ್ಪಕ.

ಗ್ರಂಥದ ಪ್ರಧಾನ ಭಾಗವೆಂದರೆ ನಾಲ್ಕನೇ ಅಧ್ಯಾಯ. ಮುನ್ನೂರು ಪುಟಗಳಿಗೂ ಹೆಚ್ಚಿನ ವ್ಯಾಪ್ತಿಯನ್ನು ಈ ಅಧ್ಯಾಯ ಪಡೆದುಕೊಂಡಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಕಂಡಬರುವ ಜನಪದ ಕಲೆಗಳಲ್ಲಿ ಬಹಳಷ್ಟನ್ನು ಸಂಶೋಧಕಿ ಇಲ್ಲಿ ಪರಿಚಯಿಸಿದ್ದಾರೆ. ಈ ಪರಿಚಯವು ಕೇವಲ ಸಾಮಾನ್ಯ ಮಟ್ಟದ್ದಾಗಿರದೆ ಕ್ಷೇತ್ರಕಾರ್ಯಾಧಾರಿತ ಮಾಹಿತಿ, ವಿಶ್ಲೇಷಣೆ ಹಾಗೂ ಹಲವು ಕಡೆ ತೌಲನಿಕ ಅಧ್ಯಯನಗಳನ್ನು ಒಳಗೊಂಡಿರುವುದು ತುಂಬ ತೃಪ್ತಿಕರವಾದ ಅಂಶ. ದೊಂಬರಾಟ, ಕೋಲೆಬಸವನ ಆಟಗಳಿಂದ ಹಿಡಿದು

ಮೂಡಲಪಾಯ ಯಕ್ಷಗಾನ, ಕೋಲಾಟ, ವೀರಗಾಸೆ, ಪುರವಂತಿಕೆ, ತಟ್ಟೀರಾಯನ ಕುಣಿತ, – ಇಂಥ ಅನೇಕ ಕಲೆಗಳನ್ನು ಇಲ್ಲಿ ವಿವರಿಸಿದ್ದಾರೆ. ಹೀಗೆ ವಿವರಿಸುವಾಗ ಅವುಗಳ ಬಗ್ಗೆ ಇರುವ ನಂಬಿಕೆಗಳು, ಐತಿಹ್ಯಗಳು, ಉಗಮ ಮತ್ತು ಪ್ರಸಾರ, ವಾದ್ಯಗಳು, ಅವುಗಳ ತಯಾರಿಕೆ, ಪ್ರದರ್ಶನ ವಿಧಾನ, ಆ ಕಲೆಯ ಪ್ರದರ್ಶಕರ ಬಗೆಗಿನ ಮಾಹಿತಿ, ಹಾಡು/ಸಂಭಾಷಣೆಗಳ ಉಲ್ಲೇಖಗಳು–ಹೀಗೆ ಸಮಗ್ರ ಮಾಹಿತಿ ನೀಡಲು ಪ್ರಯತ್ನಿಸಿದ್ದಾರೆ. ಇಲ್ಲೇ ಸಂಶೋಧಕಿಯ ಶ್ರದ್ಧೆ ಮತ್ತು ಪರಿಶ್ರಮಗಳ ಬಗ್ಗೆ ಬೆರಗು ಮತ್ತು ಮೆಚ್ಚುಗೆ ಮೂಡುತ್ತದೆ. ಇಂದಿನ ದಿನಗಳಲ್ಲಿ ಹೀಗೆ ಶ್ರಮಪಟ್ಟು ಸಂಶೋಧನೆ ನಡೆಸುವ ಯುವಕ ಯುವತಿಯರ ಸಂಖ್ಯೆ ಗಮನಾರ್ಹವಾಗಿ ಕ್ಷೀಣಿಸಿದೆ ಎಂಬುದು ಎಲ್ಲ ವಿದ್ವಾಂಸರ/ಮಾರ್ಗದರ್ಶಕರ ಅನುಭವಕ್ಕೆ ಬಂದಿರುವ ಸಂಗತಿಯೇ ಆಗಿದೆ. ಇಲ್ಲಿ ವಿಶ್ಲೇಷಣೆ, ನಿರ್ಣಯಗಳಿಗೆ ಸಂಬಂಧಿಸಿದಂತೆ ತಪ್ಪುಗಳು ಕೊರತೆಗಳು ಕಂಡುಬರುವುದುಂಟು. ಅದು ಅನೇಕ ಶೋಧ ಪ್ರಬಂಧಗಳಲ್ಲೂ ಕಂಡುಬರುವಂಥದೇ. ಆ ಬಗ್ಗೆ ಚರ್ಚಿಸಲು ಇತರರಿಗೆ ಅವಕಾಶವಿದ್ದೇ ಇದೆ. ಆದರೆ ಒಂದು ಜಿಲ್ಲೆಯ ಜನಪದ ಕಲೆಗಳ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ಒಂದೆಡೆ ಕ್ರಮಬದ್ಧವಾಗಿ ಕಲೆಹಾಕಿರುವ ಶಿಸ್ತು ಮತ್ತು ಶ್ರಮ ಖಂಡಿತ ಸಣ್ಣದಲ್ಲ.

ಆದರೆ ಒಂದು ಸಂಶೋಧನ ಗ್ರಂಥವನ್ನು ಪ್ರಕಟಿಸುವಾಗ ಇರಬೇಕಾದ ಶಿಸ್ತು ಮತ್ತು ಕ್ರಮಬದ್ಧತೆ ಇಲ್ಲಿ ಮಾಯವಾಗಿರುವಂತೆ ಕಾಣುತ್ತದೆ. ವಿಷಯಾನುಕ್ರಮಣಿಕೆ (Index) ಪಟ್ಟಿಯಾಗಲೀ, ಅಡಿಟಿಪ್ಪಣಿಗಳಾಗಲೀ, ಗ್ರಂಥಾಂತ್ಯದಲ್ಲಿ ಇರಲೇಬೇಕಾದ ಆಧಾರ ಗ್ರಂಥಗಳ ಪಟ್ಟಿಯಾಗಲೀ ಇಲ್ಲಿಲ್ಲ. ನಾಲ್ಕನೇ ಅಧ್ಯಾಯದಲ್ಲಿ ಸುಮಾರು ೮೫ ಆಧಾರ ಸೂಚಿ ಸಂಖ್ಯೆಗಳಿವೆ. ಆದರೆ ಅಡಿಟಿಪ್ಪಣಿಗಳೇ ಇಲ್ಲ. ಪುಸ್ತಕದ ಕೊನೆಯಲ್ಲಿ ಏಳು ಪುಟಗಳಲ್ಲಿ ಒಟ್ಟು ಹದಿನಾರು ಚಿತ್ರಗಳಿವೆ. ಯಾವುದಕ್ಕೂ ಶೀರ್ಷಿಕೆ ಇಲ್ಲ. ಅನೇಕ ಕಡೆಗಳಲ್ಲಿ ಮುದ್ರಣದೋಷಗಳು ಗಂಭೀರವಾದ ಸ್ವರೂಪದಲ್ಲಿ ಉಳಿದುಕೊಂಡಿವೆ. ಉದಾ: ತಪ್ಪೇಭೂಮಿ (ಪುಟ.೧೭), ನಾಥಿಪಂಥ (೨೬), ತೀರ್ಥಂಕರರ ಮೂಲೆಗಳು (ಪು.೨೯– 'ಮೂರ್ತಿಗಳು' ಎಂಬುದಕ್ಕೆ), – ಇತ್ಯಾದಿ ಇತ್ಯಾದಿ.

ಕೆಲವು ಕಡೆ ಸಂಶೋಧಕಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಒಪ್ಪುವುದೇ ಕಷ್ಟವಾಗುತ್ತದೆ. ಅದಕ್ಕೆ ಆಧಾರವನ್ನೂ ಒದಗಿಸಿಲ್ಲ. ಉದಾಹರಣೆಗೆ ಪುಟ ೨೬ರಲ್ಲಿ 'ಬಳ್ಳಿಗಾವೆಯ ಮಹಾಮನೆಯ ಮಂಟಪದಲ್ಲಿ ಅಲ್ಲಮಪ್ರಭುಗಳು, ಬಸವಣ್ಣನವರು ಮತ್ತು ಮಹಾದೇವಿಯಕ್ಕನವರು ಅನುಭವ ಮಂಟಪದ ರೂಪು ರೇಷೆಗಳನ್ನು ಚರ್ಚಿಸುತ್ತಿದ್ದರು' – ಎಂದು ದಿಗ್ಭ್ರಮೆ ಹಿಡಿಸುವಂಥ ಮಾತು ಬರೆಯುತ್ತಾರೆ. ಪುಟ ೮೪ರಲ್ಲಿ ಒಡಪು ಮತ್ತು ಒಡಬುಗಳನ್ನು ಒಂದೇ ಅರ್ಥದಲ್ಲಿ ಬಳಸಿದ್ದರೆ ಅಲ್ಲೇ ಹತ್ತಿರದಲ್ಲಿ ಇನ್ನೊಂದೆಡೆ ಅವುಗಳು ಹೇಗೆ ಬೇರೆ ಬೇರೆ ಎಂದು ವಿವರಿಸಿದ್ದಾರೆ.

ಸಂಶೋಧನ ಮಹಾಪ್ರಬಂಧಗಳು ಬಹುಮಟ್ಟಿಗೆ ಜೀವಮಾನದಲ್ಲಿ ಒಮ್ಮೆ ಮಾತ್ರ ಪ್ರಕಟವಾಗುತ್ತವೆ. ಅಂಥ ಸಂದರ್ಭದಲ್ಲಿ ಅಲ್ಲಿ ದೊಡ್ಡ ತಪ್ಪುಗಳಿಲ್ಲದಂತೆ ನೋಡಿಕೊಳ್ಳದಿದ್ದರೆ ಸಂಶೋಧಕ ಅಪಾರ್ಥಕ್ಕೆ ಗುರಿಯಾಗುತ್ತಾನೆ. ಶ್ರದ್ಧೆ ನಿಷ್ಠೆಗಳುಳ್ಳ ಈ ಲೇಖಕಿ ಸುಸ್ವರೂಪದ ಬರವಣಿಗೆ/ಪ್ರಕಟಣೆಯ ಕ್ರಮವನ್ನು ರೂಢಿಸಿಕೊಳ್ಳಲಿ.

ಎಸ್.ಪಿ. ಪದ್ಮಪ್ರಸಾದ್

ವೃತ್ತಿಗಾಯಕರ ಕುರಿತು.........

* **ಕರ್ನಾಟಕದ ಜನಪದ ವೃತ್ತಿಗಾಯಕರು:** ಲೇ॥ ಪಿ.ಕೆ. ರಾಜಶೇಖರ, ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬. ಪುಟಗಳು–೨೪+೧೦೪+೪, ಬೆಲೆ ರೂ.೬೦–

ಕನ್ನಡ ನಾಡಿನ ಸುಪ್ರಸಿದ್ಧ ಜಾನಪದ ತಜ್ಞರಲ್ಲಿ ಪಿ.ಕೆ. ರಾಜಶೇಖರರವರ ಹೆಸರು ಮುಂಚೂಣಿಯಲ್ಲಿದೆ. ಪ್ರಸ್ತುತ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಪ್ರಕಟಪಡಿಸಿರುವ ಪಿ.ಕೆ. ರಾಜಶೇಖರರವರ **'ಕರ್ನಾಟಕ ಜನಪದ ವೃತ್ತಿಗಾಯಕರು'** ಕೃತಿ ಅಪರೂಪವಾದುದು ಮತ್ತು ಅನನ್ಯವಾದುದು.

'ಕರ್ನಾಟಕ ಜನಪದ ವೃತ್ತಿಗಾಯಕರು' ಕೃತಿ ನಾಲ್ಕು ಅಧ್ಯಾಯಗಳನ್ನೊಳಗೊಂಡ ೧೦೪ ಪುಟದ ಪುಸ್ತಕ. ಪ್ರಧಾನವಾಗಿ ಎರಡು ಅಧ್ಯಾಯಗಳಲ್ಲಿ ವಿಸ್ತೃತವಾದ ವಿವರಣೆಯನ್ನು ಸಂಶೋಧನೆಯ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ. ವೃತ್ತಿಗಾಯಕರನ್ನು ಎರಡು ಭಾಗವಾಗಿ ವಿಂಗಡಿಸಿ, ದೇವರ ಆರಾಧನೆಯೇ ಮುಖ್ಯವೆಂದು ಭಾವಿಸಿ, ಆ ದೇವರ ಕಥನವನ್ನು ಸೂಕ್ತ ವಾದ್ಯಗಳೊಂದಿಗೆ ಪ್ರಚುರ ಪಡಿಸುವ ಗಾಯಕರನ್ನು ಧಾರ್ಮಿಕ ವೃತ್ತಿ ಗಾಯಕರೆಂದು ಸೂಚಿಸಿ, ಕೆಲವು ಸಮುದಾಯಗಳು ತಮ್ಮ ಬದುಕಿನ ನಿರ್ವಹಣೆಗಾಗಿ ನಿರ್ದಿಷ್ಟ ವಾದ್ಯಗಳೊಂದಿಗೆ ಪರಂಪರೆಯಿಂದ ರೂಢಿಸಿಕೊಂಡು ಬಂದಿರುವ ಕಥನಗಳ ಗಾಯನವನ್ನು ಮಾಡುತ್ತಿರುವವರನ್ನು ಲೌಕಿಕ ವೃತ್ತಿಗಾಯಕರೆಂದು ಅಧ್ಯಯನದ ಅನುಕೂಲಕ್ಕೆ ವಿಂಗಡಿಸಿ ಅದರಂತೆ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಈ ಕೃತಿಯ ಮೊದಲನೆ ಅಧ್ಯಾಯ ನಾಡಿನಲ್ಲಿರುವ ವೃತ್ತಿಗಾಯಕರ ಶೋಧವನ್ನು ಒಳಗೊಂಡಿದೆ. ಅನಕ್ಷರಸ್ಥ ಸಮುದಾಯಗಳು ತಲೆತಲಾಂತರದಿಂದ ರೂಢಿಸಿಕೊಂಡು ಬಂದಿರುವ ತಮ್ಮ ವೃತ್ತಿಗಳನ್ನು ಎಲ್ಲಿಯೂ ಚ್ಯುತಿ ಬರದಂತೆ ಕಾಯ್ದುಕೊಂಡು ಬಂದಿರುವುದನ್ನು ತಿಳಿಸಿದ್ದಾರೆ. ಹಾಗೆಯೇ ಇದುವರೆಗೂ ವೃತ್ತಿಗಾಯಕರ ಬಗೆಗೆ ಎಷ್ಟೆಲ್ಲಾ ಅಧ್ಯಯನಗಳು ನಡೆದಿವೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿ ಗುರುತಿಸಿದ್ದಾರೆ. ಇವರ ಬಗೆಗೆ ಇನ್ನಷ್ಟು ಅಧ್ಯಯನಗಳು ಅಗತ್ಯವಿದೆ ಎಂಬುದರ ಕಡೆ

ನೋಟ ಹರಿಸುತ್ತಾರೆ. ಜೀ.ಶಂಪ.ರವರ ಧಾರ್ಮಿಕ ಮತ್ತು ಲೌಕಿಕ ವಿಭಾಗೀಕರಣದ ಜೊತೆಗೆ ಲೇಖಕರು ಕರಪಾಲದವರು, ಹೆಳವರು, ತೆಲುಗುಬಣಜಿಗರು, ಆಸಾದಿಗಳು, ಲಾವಣಿಕಾರರನ್ನು ಉಪವೃತ್ತಿಗಾಯಕರೆಂದು ಕರೆಯುವುದರೊಂದಿಗೆ ಇನ್ನಷ್ಟು ಆಲೋಚಿಸಲು ಅಧ್ಯಯನಕಾರರಿಗೆ ಸುಳುವು ನೀಡಿದ್ದಾರೆ.

ಕೃತಿಯ ಕೊನೆ ಅಧ್ಯಾಯದಲ್ಲಿ ಆಧುನಿಕತೆಯಿಂದ ತೀವ್ರವಾಗಿ ನಾಶಗೊಳ್ಳುತ್ತಿರುವ ಜಾನಪದ ಸಂಸ್ಕೃತಿ ಬಗೆಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ವೃತ್ತಿಗಾಯನ ಕಲೆಯ ಭವಿಷ್ಯದ ಬಗ್ಗೆ ಯೋಚಿಸುತ್ತಾ ಅದಕ್ಕೆ ಮಾರ್ಗೋಪಾಯಗಳನ್ನು ಸೂಚಿಸುತ್ತಾರೆ. ಪರಂಪರೆಯಿಂದ ರೂಢಿಸಿಕೊಂಡು ಬರುತ್ತಿರುವ ಜನಪದ ಗಾಯಕರು ತಮ್ಮಲ್ಲಿರುವ ಗಾಯನವನ್ನು ಸಂರಕ್ಷಿಸುವ ಉದ್ದೇಶದಿಂದ ತಮ್ಮ ಪೀಳಿಗೆಯವರಿಗೆ ಕಲಿಸಲು ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲವೆಂಬುದನ್ನು ತಿಳಿಸುತ್ತಾ, ವೃತ್ತಿಗಾಯನವನ್ನು ನೆರವೇರಿಸಿಕೊಂಡು ಬರುತ್ತಿರುವ ಸಮುದಾಯಗಳು ಮುಖ್ಯ ವಾಹಿನಿಯಲ್ಲಿ ಬದುಕಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ಹಲವು ಸಲಹೆಗಳನ್ನು ಸೂಚಿಸಿದ್ದಾರೆ.

ಧಾರ್ಮಿಕ ವೃತ್ತಿ ಗಾಯಕರನ್ನು ಎರಡು ಭಾಗವಾಗಿ ಹೇಳುತ್ತಾರೆ. ಒಂದು ಗುಂಪಿನಲ್ಲಿ ಹತ್ತು ಬಗೆಯ ಗಾಯಕರನ್ನು ಹೇಳಿ, ಇನ್ನೊಂದರಲ್ಲಿ ಉಪವೃತ್ತಿ ಗಾಯಕರಲ್ಲಿ ಎರಡು ರೀತಿಯ ಗಾಯಕರನ್ನು ಸೂಚಿಸಿದ್ದಾರೆ. ಧಾರ್ಮಿಕ ವೃತ್ತಿ ಗಾಯಕರಲ್ಲಿ ನೀಲಗಾರರು ಮುಖ್ಯರು. ಇವರು ಧರೆಗೆ ದೊಡ್ಡವರಾದ ಮಂಟೇಸ್ವಾಮಿಗೆ ನಡೆದುಕೊಳ್ಳುವವರಾಗಿದ್ದಾರೆ. ನೀಲಗಾರರು ವೃತ್ತಿಗಾಯನವನ್ನು ಮಾಡುವಾಗ ರೂಢಿಯಲ್ಲಿರುವ ವೇಷ, ಭೂಷಣಗಳ ಮತ್ತು ಬಳಸುವ ವಾದ್ಯಗಳ ಬಗೆಗೆ ಸೂಚಿಸಿದ್ದಾರೆ. ದೇವರ ಗುಡ್ಡದವರ ಜೊತೆ ಸಾಮ್ಯ, ಭಿನ್ನತೆಗಳನ್ನು ಲೇಖಕರು ಗುರುತಿಸುತ್ತಾರೆ. ವಾದ್ಯಗಳ ತಯಾರಿಕೆಗೆ ಬಳಕೆಯಾಗುವ ಸಂಪನ್ಮೂಲಗಳ ವಿವರಣೆಯಿದೆ. ನೀಲಗಾರರು ದೀಕ್ಷೆಯನ್ನು ಪಡೆಯುವಾಗ ಹಲವು ಆಚರಣೆಗಳನ್ನು ಮಾಡುತ್ತಾರೆ. ಅಂತಹ ಆಚರಣೆಗಳೆಲ್ಲವೂ ಆಧುನಿಕತೆಯ ಭರಾಟೆಯಿದ್ದರೂ ಕಳೆದು ಹೋಗಿಲ್ಲದಿರುವುದು ವಿಶೇಷವೆನಿಸುತ್ತದೆ. ಹಾಗೆಯೇ ಕರ್ನಾಟಕದ ಜನಪದ ವೃತ್ತಿಗಾಯಕರಲ್ಲಿ ದೇವರಗುಡ್ಡರು (ಕಂಸಾಳೆಯವರು) ನೀಲಗಾರರಂತೆ ಅಗ್ರಗಣ್ಯರು. ಈ ಎರಡು ಬಗೆಯ ವೃತ್ತಿಗಾಯಕರು, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಚದುರಿದ್ದಾರೆ. ಮಲೆಯ ಮಾದೇಶ್ವರನೇ ಆರಾಧ್ಯದೈವ. 'ಗುಡ್ಡ' ಎಂದರೆ ಮಾದೇಶ್ವರನ ಭಕ್ತ, ಶಿಶುಮಗನಾಗಿ ನಡೆದುಕೊಳ್ಳುವ ಪದ್ಧತಿಯಿದೆ. ಮಾದೇಶ್ವರನ ಕಥನವನ್ನು ಹಾಡುತ್ತಾ, ಕಂಸಾಳೆಯೊಂದಿಗೆ ದೈವದ ಸ್ಮರಣೆ ಮಾಡುವುದು ಮುಖ್ಯವಾಗಿದೆ. ಹಾಗೆಯೇ ಇಡೀ ಜೀವನದಲ್ಲಿ

ಮಾದೇಶ್ವರನನ್ನು ತಮ್ಮ ಭಾಗವಾಗಿಸಿಕೊಂಡು ಬದುಕನ್ನು ಸವೆಸುವುದನ್ನು ತಿಳಿಸಲಾಗಿದೆ. ಗುಡ್ಡರ ಹುಟ್ಟಿನಿಂದ ಸಾಯುವವರೆಗೆ ರೂಢಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳಾವುವು ಎಂಬುದನ್ನು ಲೇಖಕರು ತುಂಬ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ.

ಇಲ್ಲಿ ಬರುವ ವೃತ್ತಿಗಾಯಕರಲ್ಲಿ ಕೆಲವರು ಭಿಕ್ಷಾಟನೆಯನ್ನು ಮಾಡುವವರಿದ್ದಾರೆ. ತಮ್ಮ ತಮ್ಮ ಮನೆದೇವರನ್ನು ಮನದೇವರನ್ನು ಹಾಡುತ್ತಾ ಊರೂರು ತಿರುಗಿ ಭಿಕ್ಷಾಟನೆಯೊಂದಿಗೆ ಜೀವನ ಸಾಗಿಸುವುದಿದೆ. ಚುಂಚನಗಿರಿ ಭೈರವನಿಗೆ ನಡೆದುಕೊಳ್ಳುವ ಜೋಗಿಗಳು, ಮೈಲಾರಲಿಂಗನನ್ನು ಆರಾಧ್ಯದೈವನನ್ನಾಗಿ ಮಾಡಿಕೊಂಡಿರುವ ಗೊರವರು, ಅಂಬಾ ಭವಾನಿಯನ್ನು ಕುಲದೇವತೆಯನ್ನಾಗಿಸಿಕೊಂಡ ಗೊಂದಲಿಗರು, ಅರ್ಜುನ ಸಂಪ್ರದಾಯದವರೆಂದು ಕರೆಯುವ ಕಿನ್ನರಿ ಜೋಗಿಗಳು, ಭೂತೇರರು, ಜೋಳಿಗೇರರು, ಎಲ್ಲಮ್ಮನ ಪರಮ ಭಕ್ತರಾದ ಚೌಡಿಕೆಯವರು, ತಮ್ಮದೇ ಆದ ವೇಷ ಭೂಷಣ, ರೀತಿ-ನೀತಿಗಳಿಂದ ಶ್ರದ್ಧೆಯಿಂದ ತಮ್ಮ ದೈವನನ್ನು ಕೊಂಡಾಡುತ್ತಾ ವೃತ್ತಿಯಾಗಿಸಿಕೊಂಡು ಬದುಕುವ ಸಮುದಾಯದವರ ವಿವರಗಳನ್ನು ಲೇಖಕರು ನೀಡಿದ್ದಾರೆ.

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ ಜುಂಜಪ್ಪ. ಈತನ ಬದುಕಿನ ಎಲ್ಲಾ ಮಗ್ಗುಲುಗಳನ್ನು ಗಣೆಯೊಂದಿಗೆ ಹಾಡುವುದು ರೂಢಿಯಿದೆ. ಇವರಲ್ಲಿ ಭಿಕ್ಷಾಟನೆ ಇಲ್ಲ. ಇವರ ಬದುಕಿನ ನೆಲೆಯೇ ಇತರ ಜನಾಂಗಕ್ಕಿಂತ ತುಂಬ ಭಿನ್ನವಾಗಿದೆ. ಆ ಎಲ್ಲಾ ಅಂಶಗಳನ್ನೂ 'ಗಣೆಯವರು' ಎಂಬ ಧಾರ್ಮಿಕ ವೃತ್ತಿಗಾಯಕ ಗುಂಪಿನಲ್ಲಿ ವಿಸ್ತೃತವಾಗಿ ಲೇಖಕರು ವಿವರಿಸಿದ್ದಾರೆ.

ಪ್ರಧಾನವಾದ ಮತ್ತೊಂದು ಅಧ್ಯಾಯ 'ಲೌಕಿಕ ವೃತ್ತಿ ಗಾಯಕರು'. ಇವರು ಯಾವುದೇ ಧಾರ್ಮಿಕ ವೃತ್ತಿಯೊಂದನ್ನು ಒಳಗೊಂಡಿಲ್ಲದೆ ಇರುವುದರಿಂದ, ಲೌಕಿಕ ಮತ್ತು ಧಾರ್ಮಿಕವೆನ್ನದೆ ಎರಡನ್ನೂ ಹಾಡುತ್ತಾ ಬಂದಿರುವುದರಿಂದ ಲೌಕಿಕ ವೃತ್ತಿ ಗಾಯಕರೆಂದು ಸೂಚಿಸುತ್ತಾರೆ. ಲೌಕಿಕ ವೃತ್ತಿ ಗಾಯಕರಲ್ಲಿ ತಂಬೂರಿಯವರಿಗೆ ಶ್ರೇಷ್ಠ ಸ್ಥಾನವಿದೆ. ಪುರಾಣದ ಕಥನಗಳನ್ನೂ ಐತಿಹಾಸಿಕ ಕಥನಗಳನ್ನೂ ಕಾವ್ಯವಾಗಿಸಿ ಹಾಡುವುದರಲ್ಲಿ ನಿಪುಣರು. ಇವರಿಗೂ ಮತ್ತು ನೀಲಗಾರರಲ್ಲಿ ಎಷ್ಟು ಹೊಂದಾಣಿಕೆಯಿದೆ ಎಂಬುದನ್ನು ತಿಳಿಸುತ್ತಾರೆ. ತಂಬೂರಿಯವರ ವೇಷ ಭೂಷಣಗಳು, ವಾದ್ಯಗಳು ನೀಲಗಾರರ ವೇಷ ಭೂಷಣ, ವಾದ್ಯಗಳಲ್ಲಿ ಸಾಮ್ಯವಿದೆ. ಇವರ ಆಚಾರ-ವಿಚಾರಗಳಲ್ಲಿ ವೈಶಿಷ್ಟ್ಯವಿದೆ. ಹುಟ್ಟಿನಿಂದ ಸಾಯುವವರೆಗೆ ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು, ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಆಚರಿಸುವುದನ್ನು ಕಾಣಬಹುದಾಗಿದೆ. ದೊಂಬಿದಾಸರು ಗಾಯನ ಸಂಪ್ರದಾಯದ ಜೊತೆ ಜೊತೆಗೆ ಜನಪದ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಊರೂರು ಸುತ್ತುತ್ತ ಜನಪದರನ್ನು ತಮ್ಮ ಕಲೆಯ ಮೋಡಿಯಿಂದ

ಗೆದ್ದು ಜೀವನೋಪಾಯಗಳನ್ನು ಮಾಡುತ್ತಿದ್ದಾರೆ. ಮಾತೃಭಾಷೆ ತೆಲುಗಾದರೂ ಇವರ ಕಾವ್ಯ ಭಾಷೆ ಕನ್ನಡವಾಗಿದೆ. ಇವರಿಗೆ ಒಂದು ನಿರ್ದಿಷ್ಟ ಕಾವ್ಯವೆಂಬುದಿಲ್ಲ ಹಾಡಲು. ಇಡೀ ಕರ್ನಾಟಕದ ಸಾಂಸ್ಕೃತಿಕ ಅಂಶಗಳನ್ನು ಕಾವ್ಯಕ್ಕೆ ಒಗ್ಗಿಸಿಕೊಂಡು ಗಾಯನ ಮಾಡುತ್ತಾರೆ. ಇದೇ ರೀತಿ ತೆಲುಗು ಜಂಗಮರದ್ದು ಶೈವ ಸಂಪ್ರದಾಯ. ಮಾತೃಭಾಷೆ ತೆಲುಗು ಆಗಿದ್ದು, ಹಾಡುವ ಹಾಡುಗಳ ಭಾಷೆ ಕನ್ನಡದಲ್ಲಿ. ಏಕತಾರಿಯೊಡನೆ ತತ್ವಪದಗಳನ್ನು ಹೇಳುತ್ತಾ ಊರೂರು ಸುತ್ತುವ ತೆಲುಗು ಜಂಗಮರು ಲೌಕಿಕ ವೃತ್ತಿಗಾಯಕರು. ಜಂಗಮರು ಎನ್ನುವ ಹೆಸರನ್ನು ಒಳಗೊಂಡಿದ್ದರೂ ಶುದ್ಧ ಮಾಂಸ ಹಾರಿಗಳಾಗಿರುವುದರಿಂದ ವೀರಶೈವರಲ್ಲವೆಂಬುದನ್ನೂ ಸ್ಪಷ್ಟಪಡಿಸಿದ್ದಾರೆ.

ಹೀಗೆ ತೆಲುಗು ಬಣಜಿಗರು, ಹೆಳವರು, ಗೀಗಿ ಪದಗಾರರು, ಲಾವಣಿಕಾರರು, ಬುರ‍್ರ ಕಥಾಗಾರರು, ಬಾಳಸಂತೋಷರು, ಕರಪಾಲದವರು ಲೌಕಿಕ ವೃತ್ತಿಗಾಯಕರಲ್ಲಿ ಇತರ ಪ್ರಮುಖರು. ಇವರಲ್ಲಿ ಕೆಲವರು ತೆಲುಗು ಮೂಲದವರಾದರೂ ಕನ್ನಡ ಕಾವ್ಯ ಭಾಷೆಯಲ್ಲಿ ನುರಿತವರು. ಪರಂಪರೆಯಿಂದ ರೂಢಿಸಿಕೊಂಡು ಬಂದ ವಾದ್ಯಗಳನ್ನು ತಮ್ಮ ಗಾಯನಕ್ಕೆ ತಕ್ಕಂತೆ ಬಳಸಿಕೊಂಡು ಜನಪದರ ಮನಸೂರೆಗೊಂಡವರು. ಒಂದು ಕಡೆ ನಿಲ್ಲದೆ ಜೀವನ ಬುತ್ತಿ ಸಾಗಿಸಲು ವೃತ್ತಿಗಾಯನವನ್ನೇ ಅವಲಂಬಿಸಿ ಸಾಗಿಬಂದವರು. ಇತ್ತೀಚೆಗೆ ಸರ್ಕಾರದ ಸಹಾಯದಿಂದ ಒಂದು ನೆಲೆಯನ್ನು ಈ ಸಮುದಾಯದವರು ಕಂಡುಕೊಳ್ಳುತ್ತಿದ್ದಾರೆ.

ಧಾರ್ಮಿಕ ವೃತ್ತಿಗಾಯಕರಲ್ಲಿ ಆಸಾದಿ ಗಾಯಕರು, ಎಣ್ಣೆ ಜೋಗಿಗಳು ಮತ್ತು ಲೌಕಿಕ ವೃತ್ತಿ ಗಾಯಕರಲ್ಲಿ ಲಾವಣಿಕಾರರು, ಬಾಳಸಂತೋಷರು, ಉಪವೃತ್ತಿಗಳ ಗಾಯನವನ್ನು ಮಾಡಿಕೊಂಡು ಬರುವವರಾಗಿದ್ದಾರೆ. ಪೂರ್ಣ ಪ್ರಮಾಣದ ವೃತ್ತಿ ಗಾಯಕರಲ್ಲದೆ ಇರುವುದರಿಂದ, ಮತ್ತೊಂದು ವೃತ್ತಿಯನ್ನು ಅವಲಂಬಿಸಿ ಜೀವನಕ್ಕೆ ಆಧಾರವಾಗಿಸಿಕೊಂಡಿರುವುದರಿಂದ ಉಪವೃತ್ತಿಗಾಯಕರೆಂದು ಗುರುತಿಸಲಾಗಿದೆ. ಇಷ್ಟೇ ಅಲ್ಲದೆ ಇವರು ಬಳಸುವ ವಾದ್ಯಗಳು, ಗಾಯನದ ಕಾವ್ಯ, ಮತ್ತು ಬದುಕಿನ ಆಚಾರ–ವಿಚಾರಗಳನ್ನು ಕೂಲಂಕಷವಾಗಿ ತಿಳಿಸಿದ್ದಾರೆ. ಒಟ್ಟಾರೆ ಕನ್ನಡ ನಾಡಿನ ಉದ್ದಗಲಕ್ಕೂ ವಾಸಿಸುತ್ತಿರುವ ವೃತ್ತಿ ಗಾಯಕರ ಬಗೆಗೆ ವಿದ್ವತ್ ಪೂರ್ಣವಾದ ಕೃತಿ ಇದುವರೆಗೂ ಬಂದಿರಲಿಲ್ಲ. ಈ ಕೃತಿಯು ಇವರ (ಗಾಯಕರ) ಬಗ್ಗೆ ಯಾವ್ಯಾವ ವಿದ್ವಾಂಸರು ಮಾಹಿತಿಗಳನ್ನೂ ಕ್ವಚಿತ್ತಾಗಿ ಹೇಳಿದ್ದರೋ ಅವೆಲ್ಲಾ ಅಂಶಗಳನ್ನೂ ಪರಿಗಣಿಸಿ, ಜೊತೆಗೆ ಲೇಖಕರು ಕ್ಷೇತ್ರಕಾರ್ಯವನ್ನೂ ಮಾಡಿ ಈ ಕೃತಿಯಲ್ಲಿ ಸಂಕಲನಗೊಳಿಸಿದ್ದಾರೆ. ಅಲ್ಲದೆ ಪ್ರತಿ ವೃತ್ತಿಗಾಯಕರ ಬಗೆಗೆ ಸವಿಸ್ತಾರವಾದ ವಿವರಣೆ ನಂತರ ಲೇಖಕರು ಆ ವೃತ್ತಿಗಾಯಕರನ್ನು ಯಾರು ಮೊದಲಿಗೆ ಅಧ್ಯಯನ ಮಾಡಿದರು ಮತ್ತು ಯಾರು ಅವರು ಹೇಳುವ ಕಾವ್ಯಗಳನ್ನು ಸಂಗ್ರಹಿಸಿದರು ಎಂಬುದನ್ನೂ ಕೃತಿ, ಕೃತಿಕಾರರ

ವಿವರ ನೀಡಿರುವುದು ಮುಂದಿನ ಓದುಗರಿಗೆ, ಸಂಶೋಧಕರಿಗೆ ಅಗತ್ಯ ಮಾಹಿತಿ ನೀಡಿದಂತಾಗಿದೆ.

ಕೆ.ವಿ.ಎಂ.

ಗ್ರಾಮಜೀವನ ಕುರಿತ ಗಂಭೀರ ಕೃತಿ

* **ಗ್ರಾಮಾಂತರ:** ಲೇ॥ ಎಚ್.ಆರ್. ಚೇತನ. ಪ್ರ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮಾನಸ ಗಂಗೋತ್ರಿ, ಮೈಸೂರು – ೫೭೦ ೦೦೬. ಪುಟಗಳು--೨೪+೧೧೦, ಬೆಲೆ ರೂ. ೭೦/–

ಗ್ರಾಮಾಂತರ – ಎಚ್.ಆರ್. ಚೇತನ ಅವರ ಈ ಕೃತಿ ಒಂದು ಗ್ರಾಮದ ರಚನೆ, ಬೆಳವಣಿಗೆ, ಜೀವನ ಕ್ರಮ, ನಂಬಿಕೆಗಳು, ಸಂಪ್ರದಾಯಗಳು– ಇಂಥ ವಿಚಾರಗಳನ್ನು ಸಾಮಾನ್ಯ ಸ್ವರೂಪದಲ್ಲಿ ಸಂಶೋಧಕರಿಗೆ ತಿಳಿಸಿಕೊಡುವ ಉದ್ದೇಶದ್ದು. ಒಂದು ಗ್ರಾಮವನ್ನು ಅಧ್ಯಯನ ಮಾಡಬೇಕಾದರೆ ಯಾವೆಲ್ಲ ಅಂಶಗಳನ್ನು ಗಮನಿಸ ಬೇಕು, ಅವು ಹೇಗೆ ಇರಲು ಸಾಧ್ಯ ಎಂಬುದನ್ನು ನೂರಾರು ಉದಾಹರಣೆಗಳ ಸಮೇತ ಇಲ್ಲಿ ಹಲವು ಚಿಕ್ಕ ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ. ಸಾಕಷ್ಟು ವಿಸ್ತಾರವಾದ ಓದು, ಕ್ಷೇತ್ರಕಾರ್ಯ ಹಾಗೂ ತಾಳ್ಮೆಯಿಂದ ಕೂಡಿದ ವಿಶ್ಲೇಷಣೆ–ಇಲ್ಲಿ ಎದ್ದು ಕಾಣುತ್ತವೆ. ಯಾವುದೇ ನಿರ್ದಿಷ್ಟ ಗ್ರಾಮವನ್ನು ವಸ್ತುವಾಗಿಟ್ಟು ಕೊಂಡು ಮಾಡಿದ ಅಧ್ಯಯನ ಇದಲ್ಲವಾದರೂ ಲೇಖಕರು ಮುಖ್ಯವಾಗಿ ಹನುಮನಹಳ್ಳಿಯಿಂದ ಮಾಹಿತಿ ಸಂಗ್ರಹಿಸಿ ಅದರ ಜೊತೆಗೆ ಅಲ್ಲಲ್ಲಿ ಇತರೆಡೆಯಿಂದ ತುಲನೆಗಾಗಿ ಉದಾಹರಣೆ ಅಥವಾ ವ್ಯತ್ಯಾಸಗಳನ್ನು ನೀಡಿರುವಂತೆ ಕಾಣುತ್ತದೆ. ಗ್ರಾಮಗಳಲ್ಲಿನ ಸಂಪ್ರದಾಯಗಳು, ಪದ್ಧತಿಗಳ ಬಗ್ಗೆ ಹೇಳುವಾಗ ಈಚೆಗೆ ಅವು ಬದಲಾಗಿರುವುದನ್ನು ಹೇಳಿರುವುದು ಕಡಿಮೆ. ಕೆಲವು ಕಡೆ ವಿವರಗಳು Out dated ಆಗಿರುವುದು ಕಾಣುತ್ತದೆ. (ಉದಾ–ಪುಟ ೮೧ರಲ್ಲಿ 'ಹೆಣ್ಣುಮಕ್ಕಳನ್ನು ಹಡೆದ ಮನೆಯವರೇ ಹೋಗಿ ಕೇಳಿ ಮದುವೆ ಮಾಡುವ ಸಂಪ್ರದಾಯ ಗ್ರಾಮಾಂತರದಲ್ಲಿ ಇಲ್ಲ'– ಎಂದು ಖಚಿತವಾಗಿ ಹೇಳುತ್ತಾರೆ. ಆದರೆ ಹಾಗಿರುವ ಎಷ್ಟೋ ಉದಾಹರಣೆಗಳನ್ನು ನಾವು ಬಲ್ಲೆವು. ಆದರೆ ಅವೆಲ್ಲ ಕ್ಷಮ್ಯವಾದವು) ಪುಟ್ಟ ಪುಸ್ತಕವಾಗಿರುವುದರಿಂದ ತನಗೆ ಗೊತ್ತಿರುವ ಎಲ್ಲವನ್ನೂ ವಿವರಿಸಲು ಲೇಖಕರಿಗೆ ಅವಕಾಶವಾಗದೆಯೂ ಇರಬಹುದು. ಆದರೆ–ಗ್ರಾಮವೊಂದರ ಅಧ್ಯಯನಕ್ಕೆ ನಾವು ಯಾವೆಲ್ಲ ಕೋನಗಳಿಂದ ಮುಂದಾಗಬೇಕೆಂಬುದನ್ನೂ ಅದರ ಮಹತ್ವವನ್ನೂ ಹೊಸ ಅಧ್ಯಯನಕಾರರಿಗೆ ಮನವರಿಕೆ ಮಾಡಿಕೊಡುವಲ್ಲಿ ಲೇಖಕಿ ಖಂಡಿತ ಯಶಸ್ವಿಯಾಗಿದ್ದಾರೆ. ಕೃತಿಯ ಭಾಷೆ, ವಾಕ್ಯರಚನೆಗಳು ಸರಳವಾಗಿವೆ. ಗಂಭೀರ ಕೃತಿಯಾಗಿದ್ದರೂ ಸಾಮಾನ್ಯ ಓದುಗನಿಗೂ ಎಲ್ಲಿಯೂ ತಲೆಬೇನೆ ಎನಿಸದಂತೆ ಪುಸ್ತಕವನ್ನು ಬರೆದಿರುವುದು ಖಂಡಿತ ಮೆಚ್ಚಬೇಕಾದ ಅಂಶ.

ಎಸ್.ಪಿ. ಪದ್ಮಪ್ರಸಾದ್

ಸ್ಥಳನಾಮ ವ್ಯಾಸಂಗ ವಿಧಾನ

* **ಸ್ಥಳನಾಮ ವ್ಯಾಸಂಗ**– ಲೇ. ದೇಜಗೌ. ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬. ಪುಟಗಳು:೨೪+೧೨೪+೪=೧೫೨, ಬೆಲೆ ರೂ.೬೦/–

'ಸ್ಥಳನಾಮ ವ್ಯಾಸಂಗ'– ದೇಜಗೌ ಅವರ ಈಚಿನ ಕೃತಿ. ಈ ವಿಷಯದ ಕುರಿತಂತೆ ದೀರ್ಘಕಾಲದಿಂದಲೂ ಬರಹ ಮತ್ತು ಭಾಷಣಗಳ ಮೂಲಕ ಅಧ್ಯಯನಕಾರರನ್ನು ಎಚ್ಚರಿಸುತ್ತ ಬಂದವರು ಅವರು. ಅಂದಿನಿಂದಲೂ ಮಾಡಿಟ್ಟುಕೊಂಡಿದ್ದ ಟಿಪ್ಪಣಿಗಳನ್ನು ಕ್ರಮಬದ್ಧವಾಗಿ ಜೋಡಿಸಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶಕವಾಗಬಲ್ಲಂಥ ಆಚಾರ್ಯ ಕೃತಿಯೊಂದನ್ನು ಇದೀಗ ಹೊರತಂದಿದ್ದಾರೆ. ಈ ವಯಸ್ಸಿನಲ್ಲೂ ಇಂಥ ಗಂಭೀರ ಬರವಣಿಗೆಯಲ್ಲಿ ಅವರು ತೋರಿರುವ ಅಚ್ಚುಕಟ್ಟು ಹಾಗೂ ಸಮಗ್ರತೆಗಳು ಯಾರಿಗಾದರೂ ಆದರ್ಶವೆನಿಸುವಂತಿವೆ.

ಕನ್ನಡದಲ್ಲಿ ಕೆಲವು ಜಿಲ್ಲೆಗಳ ಸ್ಥಳನಾಮಗಳ ಅಧ್ಯಯನ ಕೃತಿಗಳು ಪಿಎಚ್.ಡಿ. ನಿಬಂಧಗಳ ರೂಪದಲ್ಲಿ ಬಂದಿವೆ. ಆದರೆ ಸ್ಥಳನಾಮಗಳ ಅಧ್ಯಯನದ ವಿಧಾನ, ಅಲ್ಲಿ ಬರುವ ಸಮಸ್ಯೆಗಳು, ಅದನ್ನು ನಿವಾರಿಸಿಕೊಳ್ಳುವ ಬಗೆ, ಸ್ಥಳನಾಮಗಳ ವ್ಯುತ್ಪತ್ತಿ, ವರ್ಗೀಕರಣ ವಿಧಾನ, ಕ್ಷೇತ್ರಕಾರ್ಯಕ್ಕೆ ಬೇಕಾದ ಸಿದ್ಧತೆ – ಇಂಥ ಎಲ್ಲಾ ವಿಚಾರಗಳನ್ನೂ ಕೇವಲ ೧೨೦ ಪುಟಗಳ ಸಣ್ಣ ಪುಸ್ತಕದಲ್ಲಿ ತೀರ ಖಚಿತವಾದ ಮಾತುಗಳಲ್ಲಿ ನಿರೂಪಿಸುವಂಥ ಪುಸ್ತಕದ ಕೊರತೆಯಿತ್ತು. ಅದೀಗ ದೇಜಗೌರವರ ಈ ಕೃತಿಯಿಂದ ನೀಗಿದಂತಾಗಿದೆ.

ವಿಪುಲವಾದ ಉದಾಹರಣೆಗಳು, ಎಲ್ಲಿಯೂ ಸಂದಿಗ್ಧತೆಗೆಡೆಯಿರದ ವಾಕ್ಯರಚನೆ, ನೇರವಾಗಿ ಹೇಳಬೇಕಾದ್ದನ್ನು ಯಾವ ಗೋಜಲೂ ಇಲ್ಲದಂತೆ ನಿರೂಪಿಸಿರುವುದು ಇಲ್ಲಿನ ವಿಶೇಷ. ಸ್ಥಳನಾಮಗಳ ಬಗ್ಗೆ ವ್ಯಾಸಂಗ ಮಾಡ ಬೇಕೆನ್ನುವವರು ಈ ಕೃತಿಯನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ತಮ್ಮನ್ನು ತಾವು ಸಿದ್ಧಪಡಿಸಿಕೊಂಡರೆ ಅವರು ತಮ್ಮ ಅಧ್ಯಯನದಲ್ಲಿ ಯಶಸ್ವಿಯಾಗಬಹುದು. ಅಷ್ಟರ ಮಟ್ಟಿಗೆ ಆಧಾರಭೂತವೂ ಮಾರ್ಗದರ್ಶಕವೂ ಆಗಿದೆ ಈ ಕೃತಿ.

ಎಸ್.ಪಿ. ಪದ್ಮಪ್ರಸಾದ್

ನಂಬಿಕೆಗಳು ಮತ್ತು ನಿಷೇಧಗಳು

* **ನಂಬಿಕೆಗಳು ಮತ್ತು ನಿಷೇಧಗಳು :** ಲೇ|| ಎನ್.ಆರ್. ನಾಯಕ, ಪ್ರ–ಜಾನಪದ ಪ್ರಕಾಶನ, ಹೊನ್ನಾವರ (ಉ.ಕ.); ಪುಟಗಳು ೪೨. ಬೆಲೆ ರೂ.೪೦/–

ನಂಬಿಕೆಗಳು ಮತ್ತು ನಿಷೇಧಗಳು – ಖ್ಯಾತ ಜಾನಪದ ವಿದ್ವಾಂಸ ಎನ್.ಆರ್. ನಾಯಕ ಅವರ ಒಂದು ಪುಟ್ಟ ಗ್ರಂಥ. ಇದು ನಲುವತ್ತು ಪುಟಗಳ ಒಂದು ಪ್ರಬಂಧ ಮಾತ್ರ. ಕನ್ನಡದಲ್ಲಿ ಜನಪದ ನಂಬಿಕೆಗಳನ್ನು ಸಂಗ್ರಹಿಸಿದ ಕೆಲವು ಕೃತಿಗಳು ಬಂದಿವೆ. ಆದರೆ ನಂಬಿಕೆ ಮತ್ತು ನಿಷೇಧಗಳನ್ನು (Beliefs and taboos) ಸೈದ್ಧಾಂತಿಕವಾಗಿ ಚರ್ಚಿಸಿ ಕ್ಷೇತ್ರ ಕಾರ್ಯಾಧಾರಿತ ಉದಾಹರಣೆಗಳನ್ನು ಕೊಟ್ಟಿರುವುದು ಕಡಿಮೆ. ಈ ಪುಟ್ಟ ಕೃತಿ ಆ ಕೆಲಸವನ್ನು ಮಾಡಿದೆ. ವಾಸ್ತವವಾಗಿ ಇದೂ ಸಹ ಕಡಿಮೆಯೇ. ಆದರೆ ಇಲ್ಲಿ ಮೂಲಭೂತವಾದ ವ್ಯಾಖ್ಯೆ ಮತ್ತು ವಿವರಣೆಗಳು ಉದಾಹರಣೆ ಸಹಿತವಾಗಿ ಮೂಡಿ ಬಂದಿರುವುದೇ ವಿಶೇಷ.

ಮೊದಲ ಕಂಡಿಕೆಯಿಂದಲೇ ಗಂಭೀರ ವಿಷಯ ನಿರೂಪಣೆಗೆ ತೊಡಗುವ ಈ ಕೃತಿ 'ನಂಬಿಕೆ'ಯ ಅರ್ಥವಿವರಣೆ, ಅವುಗಳ ಪ್ರದೇಶವಾರು/ಜಾತಿವಾರು ಮಿತಿಗಳನ್ನೂ ವಿವರಿಸುತ್ತಾ ಸಾಗುತ್ತದೆ. 'ನಂಬಿಕೆ'ಯ ಸ್ವರೂಪವನ್ನು ಎಳೆಎಳೆಯಾಗಿ ಬಿಡಿಸಿರುವುದು ಇಲ್ಲಿನ ವಿಶೇಷ. ನಂಬಿಕೆಗಳಲ್ಲಿ ವೈಜ್ಞಾನಿಕತೆ–ಅವೈಜ್ಞಾನಿಕತೆ, ತರ್ಕಬದ್ಧತೆ–ತರ್ಕಹೀನತೆ, ತಾತ್ಕಾಲಿಕತೆ–ದೀರ್ಘಕಾಲಿಕತೆ– ಇವೆಲ್ಲ ಇರುವುದನ್ನು ವಸ್ತುನಿಷ್ಠವಾಗಿ ನಿರೂಪಿಸುತ್ತಾರೆ. ನಂಬಿಕೆಗಳನ್ನು ತಮ್ಮದೇ ಆದ ರೀತಿಯಲ್ಲಿ ಅಮೂರ್ತ ವಸ್ತುಗಳಲ್ಲಿನ ನಂಬಿಕೆ, ಮೂರ್ತವಸ್ತುಗಳಲ್ಲಿನ ನಂಬಿಕೆ ಮತ್ತು ಇತರೆ– ಎಂದು ಮೂರು ಮುಖ್ಯ ಭಾಗಗಳಾಗಿ ಮಾಡಿಕೊಂಡು ನಂತರ ಆ ಪ್ರತಿ ಯೊಂದರಲ್ಲೂ ಹಲವಾರು ಭಾಗಗಳನ್ನು ಮಾಡಿದ್ದಾರೆ. ಭಾರತೀಯ ಜೀವನ ಪದ್ಧತಿಗೆ ಈ ವರ್ಗೀಕರಣ ಹೊಂದಿಕೊಳ್ಳುವಂತಿದೆ. ಐತಿಹ್ಯಗಳಲ್ಲಿನ ನಂಬಿಕೆ, ಶಕುನಗಳು, ಮಾಟ ಮಂತ್ರಗಳು, ಪಂಚಭೂತಗಳಲ್ಲಿನ ನಂಬಿಕೆ – ಇವೆಲ್ಲವನ್ನೂ ಸಾರಾಂಶ ರೂಪದಲ್ಲಿ ವಿವರಿಸಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ.

ಇದೇ ರೀತಿ 'ನಿಷೇಧ' ಗಳನ್ನು ಕುರಿತಾದ ವಿವೇಚನೆಯೂ ಖಚಿತ ರೀತಿಯಲ್ಲಿದೆ. ಇವನ್ನು ವರ್ಗೀಕರಿಸುವ ಪ್ರಯತ್ನ ಇಲ್ಲಿಲ್ಲ. ಆದರೆ ಅನೇಕ ನಿಷೇಧಗಳನ್ನು ಉದಾಹರಿಸಿದ್ದಾರೆ. ಪ್ರಬಂಧದ ಕೊನೆಯ ಭಾಗದಲ್ಲಿ ಕನ್ನಡದಲ್ಲಿ ಈ ಹಿಂದೆ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಕೆಲವರನ್ನು ಸ್ಮರಿಸಿಕೊಂಡಿದ್ದಾರೆ.

ಲೇಖನದ ಕೊನೆಗೆ ಅನುಬಂಧವಾಗಿ ೮೩ ನಂಬಿಕೆಗಳನ್ನು ೯೨ ನಿಷೇಧಗಳನ್ನೂ ಪಟ್ಟಿಮಾಡಿದ್ದಾರೆ. ಚಿಕ್ಕದಾದರೂ ಇದೊಂದು ಶ್ಲಾಘನೀಯ ಪ್ರಯತ್ನ.

ಎಸ್.ಪಿ. ಪದ್ಮಪ್ರಸಾದ್

ವಿಪುಲ ಮಾಹಿತಿ, ಕ್ರಮಬದ್ಧ ಜೋಡಣೆ

* **ಕಂಬಳ ಕೋರಿ ನೇಮ**– ಡಾ. ಲಕ್ಷ್ಮಿ ಜಿ. ಪ್ರಸಾದ್, ಮಾತೃಶ್ರೀ ಪ್ರಕಾಶನ, ನಂ.೫, 'ನಂದನ ತೋಟದಮನೆ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯರಸ್ತೆ, ಬೆಂಗಳೂರು – ೫೬; ಪು.೧೦+೧೧೨: ಬೆಲೆ ರೂ. ೧೧೦/–

ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಸಿದ್ಧವಾದ ಜನಪದ ಆಚರಣೆಯಾದ 'ಕಂಬಳ ಕೋರಿ ನೇಮ'ವನ್ನು ಕುರಿತಾದ ಅಧ್ಯಯನವಿದು. ಚಿಕ್ಕ ಪುಸ್ತಕವಾದರೂ ಸುಲಭವಾಗಿ ಬರೆಯಬಹುದಾದ್ದಂಥದಲ್ಲ. ಈ ಆಚರಣೆಗೆ ಸಂಬಂಧಿಸಿದ ಬಹುತೇಕ ಎಲ್ಲ ಮಾಹಿತಿಗಳನ್ನೂ ಕಲೆಹಾಕಿ ಲೇಖಕಿ ಇಲ್ಲಿ ಅವನ್ನು ವಿವಿಧ ಅಧ್ಯಾಯಗಳಲ್ಲಿ ವ್ಯವಸ್ಥಿತವಾಗಿ ಜೋಡಿಸಿ ಸಾದರಪಡಿಸಿದ್ದಾರೆ. ಇಲ್ಲಿ 'ಕಂಬಳ' ಶಬ್ದದ ನಿಷ್ಪತ್ತಿ, ಅದರ ಬಗೆಗಿನ ಐತಿಹ್ಯಗಳು, ಕಂಬಳದ ಪ್ರಕಾರಗಳು, ಪೂಕರೆ ಕಂಬಳದ ವಿಶಿಷ್ಟ ಆಚರಣೆಗಳು, ನಿಯಮಗಳು, ಇದಕ್ಕೆ ಸಂಬಂಧಿಸಿದ ತುಳುನಾಡಿನ ದೈವಗಳ ಹೆಸರು ಹಾಗೂ ಅವುಗಳಲ್ಲಿ ಕೆಲವರ ಬಗ್ಗೆ ಮುಖ್ಯಾಂಶಗಳನ್ನೊಳಗೊಂಡ ಟಿಪ್ಪಣಿ–ಇವೆಲ್ಲ ಇವೆ. ಜೊತೆಯಲ್ಲಿ ಕಂಬಳಕ್ಕೆ ಸಂಬಂಧಿಸಿದ ಒಂದು ದೈವದ ಪಾಡ್ದನದ ಮೂಲ ತುಳು ಕೃತಿ ಹಾಗೂ ಅದರ ಕನ್ನಡ ಅನುವಾದ– ಎಲ್ಲವೂ ಇವೆ. ಪುಸ್ತಕದ ಕೊನೆಯಲ್ಲಿ ಈ ಆಚರಣೆಗೆ ಸಂಬಂಧಿಸಿದ ಕಪ್ಪು–ಬಿಳುಪು ಚಿತ್ರಗಳೂ ಇವೆ.

ಪುಸ್ತಕದ ಪ್ರಾರಂಭದಲ್ಲೊಂದು ಪ್ರಸ್ತಾವನೆ ಇದ್ದು ಅದರಲ್ಲಿ ಕಂಬಳದ ಅರ್ಥ, ಭೂತಗಳ ಪಟ್ಟಿ, ಪೂಕರೆ ಕಂಬದ ಕುರಿತಾದ ವಿವರಣೆಗಳಿವೆ. ನಂತರದ ಅಧ್ಯಾಯ 'ಕಂಬಳದ ಪ್ರಾಚೀನತೆ ಮತ್ತು ಐತಿಹ್ಯಗಳು'; ಅದರಲ್ಲಿ ತತ್ಸಂಬಂಧೀ ವಿವರಗಳಿವೆ. ಮುಂದಿನ ಅಧ್ಯಾಯಗಳು–'ಕಂಬಳದ ಪ್ರಕಾರಗಳು', 'ಕಂಬಳದಲ್ಲಿ ಫಲವಂತಿಕೆಯ ಆಚರಣೆಗಳು', 'ಕಂಬಳದಲ್ಲಿ ನಾಗಾರಾಧನೆ ಮತ್ತು ದೈವಾರಾಧನೆ'– ಇವೆಲ್ಲ ವಿವರವಾಗಿ ನೀಡಲ್ಪಟ್ಟಿವೆ. ಆರನೇ ಅಧ್ಯಾಯದಲ್ಲಿ ೩೯ ದೈವಗಳ ಪರಿಚಯವಿದೆ. ಅದರ ನಂತರ ಸಂಬಂಧಿಸಿದ ಪಾಡ್ದನವು ಅನುವಾದ ಸಹಿತವಾಗಿದೆ.

ಕೃತಿಯಲ್ಲಿ ಆಚರಣೆ/ನಂಬಿಕೆಗಳನ್ನು ಅಲ್ಲಲ್ಲಿ ವಿಶ್ಲೇಷಿಸಲು ಲೇಖಕಿ ಪ್ರಯತ್ನಿಸಿದ್ದಾರೆ. ತುಳುನಾಡಿನ ಬಗ್ಗೆ ಹಿಂದೆ ಚಿಂತಿಸಿರುವ ಬಿ.ಎ. ವಿವೇಕ ರೈ, ಬಿಳಿಮಲೆ, ಗಣನಾಥ ಎಕ್ಕಾರು – ಇವರ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಈ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇತರರಾದ ಚಿನ್ನಪ್ಪಗೌಡ, ನಾವಡ ದಂಪತಿಗಳು, ಪೂವಪ್ಪ ಕಣಿಯೂರು, ಸುಂದರ ಕೇನಾಜೆ ಹಾಗೂ ಪಾಶ್ಚಾತ್ಯ ವಿದ್ವಾಂಸರ ಬರಹಗಳನ್ನು ಗಮನಿಸಿದಂತೆ ಕಾಣುವುದಿಲ್ಲ.

ಈ ಪುಸ್ತಕ ತುಳುನಾಡಿನ ಈ ಜನಪದ ಆಚರಣೆಯನ್ನು ಕುರಿತ ಒಂದು ಗಮನಾರ್ಹ ಕೃತಿ ಎಂಬುದು ಖಚಿತ. ಆದರೆ ವಿಶ್ಲೇಷಣೆ ಇನ್ನೂ ಆಳವಾಗಬಹುದಿತ್ತು

ಎನಿಸುತ್ತದೆ. ಅಡಿಟಿಪ್ಪಣಿ ಕೊಡುವಲ್ಲಿ ಇನ್ನಷ್ಟು ಶಿಸ್ತು, ಕೊನೆಯಲ್ಲಿ ಆಧಾರ ಗ್ರಂಥಗಳ ಪಟ್ಟಿ– ಇವೂ ಅಗತ್ಯವಾಗಿದ್ದವು. ಅಲ್ಲಲ್ಲಿ ಒಂದೊಂದು ಮುದ್ರಣ ದೋಷವಿದ್ದರೂ ಅದು ಕ್ಷಮ್ಯ.

ಎಸ್.ಪಿ. ಪದ್ಮಪ್ರಸಾದ್

ಕರಪಾಲ ಮೇಳಗಳನ್ನು ಕುರಿತು..........

* **ತುಮಕೂರು ಜಿಲ್ಲೆಯಲ್ಲಿ ಕರಪಾಲ ಮೇಳ–** ಲೇ: ಕಂಟಲಗೆರೆ ಸಣ್ಣ ಹೊನ್ನಯ್ಯ; ಪು: ೧೬+೧೮೮; ಬೆಲೆ ರೂ. ೭೦/– ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

'ಕನ್ನಡ ಭಾಷಾಭಿವೃದ್ಧಿ ಯೋಜನೆ' ಯಡಿಯಲ್ಲಿ ತುಮಕೂರು ವಿಶ್ವ ವಿದ್ಯಾನಿಲಯ ಪ್ರಕಟಿಸಿರುವ ಈ ಕೃತಿಯಲ್ಲಿ ಏಳು ಭಾಗಗಳಿದ್ದು, ಮೊದಲ ಎರಡು ಭಾಗದಲ್ಲಿ ಪೀಠಿಕೆಯನ್ನೊಳಗೊಂಡಂತೆ ಜನಪದ–ಜಾನಪದ, ಜನಪದ ಕರಪಾಲ ಮೇಳ ನಡೆದು ಬಂದ ದಾರಿ, ಕರಪಾಲ ಮೇಳದ ರಂಗಸ್ಥಳ, ಜನಪದ ಕರಪಾಲ ಮೇಳದ ಅರ್ಥ, ವ್ಯಾಪ್ತಿ ಮತ್ತು ಸ್ವರೂಪ, ಉಡುಪುಗಳು, ವಸ್ತ್ರಾಲಂಕಾರಗಳು, ಪ್ರದರ್ಶನ ಕಲೆಯ ಹಿನ್ನೆಲೆ ಮುಂತಾದ ಉಪಶೀರ್ಷಿಕೆಗಳನ್ನು ಹಾಕಿಕೊಂಡು 'ಕರಪಾಲ ಮೇಳ' ಕಲೆಯನ್ನು ಕುರಿತು ಈ ಹಿಂದೆ ಪ್ರಕಟಗೊಂಡಿರುವ ಪುಸ್ತಕ, ಲೇಖನಗಳಲ್ಲಿ ಮೂಡಿಬಂದಿರುವ ವಿಚಾರಗಳನ್ನು ಕಲೆಹಾಕಿ ವಿವರಣೆಗಳನ್ನು ಕೊಡುವ ಕಂಟಲಗೆರೆ ಸಣ್ಣಹೊನ್ನಯ್ಯನವರು ಆ ವಿಚಾರಗಳನ್ನು ಮರುಚಿಂತನೆಗೆ ಒಳಪಡಿಸಿ ಹೊಸಹೊಳಹುಗಳನ್ನು ನೀಡಬಹುದಾಗಿತ್ತು. ಈಗ ತಿಳಿಸಿರುವ ವಿಚಾರಗಳು ಚರ್ವಿತ ಚರ್ವಣವಾದಂತಿವೆ.

ಈ ಕಲೆ ದಕ್ಷಿಣ ಕರ್ನಾಟಕದ ಗೀತ ನೃತ್ಯ ಮತ್ತು ಅಭಿನಯಗಳಿಂದ ಕೂಡಿದ ವ್ಯವಸ್ಥಿತವಾದ ರಂಗ ಸಜ್ಜಿಕೆಯಲ್ಲಿ ಏರ್ಪಡುವ ಒಂದು ಬಗೆಯ ಜನಪದ ನಾಟಕ ರೂಪವೇ ಆಗಿದೆ. ಆದರೆ, ಉತ್ತರ ಕರ್ನಾಟಕ ಭಾಗದ ಕರಪಲ್ಲದಲ್ಲಿ ಈ ಅಂಶಗಳು ಕಂಡುಬರುವುದಿಲ್ಲ ಎಂಬುದನ್ನು ತಿಳಿಸುವ ಲೇಖಕರು ಅದಕ್ಕೆ ಕಾರಣಗಳಾವುವು ಎಂಬುದನ್ನು ಶೋಧಿಸುವ ಕಾರ್ಯ ನಿರ್ವಹಿಸಿಲ್ಲ.

ಮುಂದಿನ ಭಾಗದಲ್ಲಿ 'ಕರಪಾಲ ಮೇಳದಲ್ಲಿ ಮಾದರಿ ಕಥೆಯಾಗಿ ಕಾಡು ಸಿದ್ಧಮ್ಮನ ಕಥೆ'ಯನ್ನು ಆಧಾರವಾಗಿರಿಸಿಕೊಂಡು, ಅಲ್ಲಿ ಬರುವ ನಂಬಿಕೆಗಳು, ಆಚರಣೆಗಳು, ಗಾದೆಗಳು, ಒಗಟುಗಳು ಸಂಪ್ರದಾಯಗಳನ್ನು ಗುರುತಿಸಿ ಸರಳವಾದ ವಿವರಣೆ ನೀಡಿದ್ದಾರೆ. ಅಲ್ಲದೆ ಕರಪಾಲದಲ್ಲಿ ಚಾಲನೆಯಲ್ಲಿರುವ ಇಪ್ಪತ್ಮೂರು ಕಥೆಗಳ ಪಟ್ಟಿಯನ್ನು ನೀಡಿದ್ದಾರೆ.

ಮೂರನೇ ಭಾಗದಲ್ಲಿ 'ಕಾಡುಸಿದ್ಧಮ್ಮನ ಕಥೆ'ಯ ಪಠ್ಯರೂಪವನ್ನು ೭೧ಪುಟಗಳಲ್ಲಿ ನೀಡಿದ್ದಾರೆ. ಮುಂದೆ ಉಪಕಥೆಗಳ ಬಗ್ಗೆ ಐದುಪುಟ ವಿವರಣೆ ಕೊಡುವರಲ್ಲದೆ ಭಾಗ ೪, ೫, ೬ ರಲ್ಲಿ ಕ್ರಮವಾಗಿ ಪೂಜಾರಿ ಪುಟ್ಟಕ್ಕನ ಕಥೆ (೧೩ ಪುಟ), ಜಿಮಣ ಗಂಡನ ಕಥೆ (೧೪ ಪುಟ), ನೀರ್ ಮಜ್ಜಿಗೆ ಕಥೆ (೨೦ ಪುಟ)ಯ ಪಠ್ಯ ರೂಪಗಳನ್ನು ಕೊಟ್ಟಿದ್ದಾರೆ. ಪುಸ್ತಕದ ಸಿಂಹಪಾಲು ಭಾಗ ಪಠ್ಯರೂಪದಿಂದ ಕೂಡಿದೆ. ಕಡೆಯ ಭಾಗದಲ್ಲಿ ತುಮಕೂರು ಜಿಲ್ಲೆಯ ಕರಪಾಲ ಮೇಳದ ಕಲಾವಿದರು, ತಂಡ, ವಿಳಾಸಗಳನ್ನು ಕಾಣಬಹುದು.

ಈ ಕೃತಿಯಲ್ಲಿ ಲೇಖಕರು ಎಂದು ಮುದ್ರಿಸಿರುವ ಜಾಗದಲ್ಲಿ ಸಂಗ್ರಹಕಾರರು ಎಂದಿದ್ದರೆ ಔಚಿತ್ಯಪೂರ್ಣವಾಗುತ್ತಿತ್ತು. ಹಾಗೆಯೇ ಮುಖಪುಟದಲ್ಲಿ 'ತುಮಕೂರು ಜಿಲ್ಲೆಯಲ್ಲಿ ಕರಪಾಲ ಮೇಳ' ಎಂದು ಪುಸ್ತಕದ ಹೆಸರು ಮುದ್ರಿತವಾಗಿದೆ. ಆದರೆ ಒಳಪುಟಗಳ ಮೇಲ್ಭಾಗದಲ್ಲಿ 'ತುಮಕೂರು ಜಿಲ್ಲೆಯಲ್ಲಿ ಕರಪಾಳ ಮೇಳ– ಒಂದು ಸಾಂಸ್ಕೃತಿಕ ಅಧ್ಯಯನ' ಎಂದು ಅಚ್ಚಾಗಿದೆ. ಇಂಥ ಎರಡು ಶೀರ್ಷಿಕೆಗಳು ಓದುಗರನ್ನು ಗಲಿಬಿಲಿಗೊಳಿಸುವ ಸಾಧ್ಯತೆಗಳಿವೆ. ಅನೇಕ ಕಡೆ ವಾಕ್ಯಗಳಲ್ಲಿ ಕರ್ತೃ–ಕರ್ಮ–ಕ್ರಿಯಾಪದಗಳ ಹೊಂದಾಣಿಕೆ ಇಲ್ಲವಾಗಿದೆ. (ಉದಾ: ಪು.೨೬)

ಈ ಕೃತಿಯಲ್ಲಿ ಪ್ರದರ್ಶನ ಕಲೆಯ ಭಾವಚಿತ್ರಗಳು, ಬಳಸುವ ವಾದ್ಯ ಪರಿಕರಗಳ ಚಿತ್ರಗಳನ್ನು ನೀಡಬಹುದಾಗಿತ್ತು. ಕಥೆಗಳಲ್ಲಿ ಬಳಕೆಯಾಗುವ ವಿಶೇಷವಾದ ಪದಗಳಿಗೆ ಶಬ್ದಕೋಶವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಈ ಎಲ್ಲದಕ್ಕಿಂತಲೂ ಮುಖ್ಯವಾಗಿ ಈ ಪುಸ್ತಕದಲ್ಲಿ ಕೊಟ್ಟಿರುವ ಕರಪಾಲ ಮೇಳ ಕಥೆಗಳ ಪಠ್ಯರೂಪವನ್ನು ಯಾರಿಂದ ಸಂಗ್ರಹಿಸಿದರೆಂದು ವ್ಯಕ್ತಿಯ ಹೆಸರು, ವಯಸ್ಸು, ಜನಾಂಗ, ಸ್ಥಳ, ಯಾರಿಂದ ಕಲಿತರು ಎಂಬ ವಿವರಗಳನ್ನೊಳಗೊಂಡ ಒಂದು ಸಂದರ್ಶನವನ್ನು ನೀಡಿದ್ದರೆ ಅನೇಕ ವಿಚಾರಗಳು ಹೊರಬೀಳುತ್ತಿದ್ದವು.

ಒಂದು ಜಿಲ್ಲೆಯವರು ಬಳಸುವ ಭಾಷೆ, ಸಂಸ್ಕೃತಿ, ಸಾಹಿತ್ಯ, ಆಚಾರ, ವಿಚಾರಗಳನ್ನು ಐತಿಹಾಸಿಕ, ಪರಂಪರೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವವರಿಗೆ ಇಂಥ ಕೃತಿಗಳು ಆಕರಗ್ರಂಥಗಳಾಗಿ ಲಭ್ಯವಾಗಬೇಕು.

ಒಟ್ಟಾರೆ ಕಂಟಲಗೆರೆ ಸಣ್ಣ ಹೊನ್ನಯ್ಯ ಅವರ ಪರಿಶ್ರಮ ಪ್ರಯತ್ನ ಒಪ್ಪುವಂಥದು. ಆದರೆ, ಅವಸರದಲ್ಲಿ ಹಲವು ತಪ್ಪುಗಳಾಗಿವೆ ಎಂಬುದನ್ನು ಹೇಳಬೇಕಾಗುತ್ತದೆ. ಸ್ವತಃ ಕಲಾವಿದರೂ ಆಗಿರುವ ಅವರ ಏಳು ಪುಸ್ತಕಗಳು, (ಜಾನಪದಕ್ಕೆ ಸಂಬಂಧಿಸಿದಂತೆ) ಏಕಕಾಲದಲ್ಲಿ ಈ ವಿಶ್ವವಿದ್ಯಾನಿಲಯ ಪ್ರಕಟಿಸಿರುವುದು ಅಚ್ಚರಿ ಮೂಡಿಸುತ್ತದೆ.

ಕರ್ನಾಟಕದ ಹೆಸರಾಂತ ತಜ್ಞರ ಸಮಿತಿಯ ಮುಂದೆ ಹಾದು ಬಂದಿರುವ ಈ ಪುಸ್ತಕ ಇನ್ನೂ ಹೆಚ್ಚು ಮೌಲಿಕವಾಗಿ ಬರಬಹುದಿತ್ತು. ಹೆಚ್ಚಿನ ಜವಾಬ್ದಾರಿಯುಳ್ಳ ವಿಶ್ವವಿದ್ಯಾನಿಲಯ ಪುಸ್ತಕ ಪ್ರಕಟಣೆಗೆ ಮುನ್ನ ಹಸ್ತಪ್ರತಿ/ಡಿ.ಟಿ.ಪಿ. ಪ್ರತಿಗಳನ್ನು ಗಂಭೀರವಾದ ಪರಿಶೀಲನೆಗೆ ಒಳಗು ಮಾಡಿಕೊಡಬೇಕು. ಮುದ್ರಿತವಾದ ಪುಸ್ತಕ ಮಾತ್ರ ಓದುಗರ ಕೈಸೇರುವುದರಿಂದ ಏನೇ ವಿವರಣೆ ಕೊಡುವ ಹೇಳಿಕೆಗಳನ್ನು ನಂತರ ನೀಡಿದರೂ ಪ್ರಯೋಜನವಾಗದು.

ಎಂ.ಎಲ್. ನರಸಿಂಹಮೂರ್ತಿ

ಸಮಾಧಾನಕರ ಸ್ಥಳನಾಮ ಅಧ್ಯಯನ

* **ತುಮಕೂರು ಜಿಲ್ಲೆಯ ಸ್ಥಳ ನಾಮಗಳು** – ಲೇ. ಶ್ರೀಪಾದಭಟ್, ಎಲ್.ಪುಟ್ಟ ರಾಜು, ಪು.೧೬+೧೭೦. ಬೆ. ರೂ. ೭೦; ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಯೊಂದು ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಅಗತ್ಯವಾಗಿ ನಡೆಯಬೇಕಾಗಿದೆ. ಇದರಿಂದ ಆ ಭಾಗದ ಜನಜೀವನ, ಸಾಹಿತ್ಯ, ಕಲೆ, ಆಚರಣೆ, ನಂಬಿಕೆ, ಐತಿಹ್ಯಗಳು– ಹೀಗೆ ಜಿಲ್ಲೆಯ ಸಾಂಸ್ಕೃತಿಕ ಜಗತ್ತು ಅನಾವರಣಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಕೆಲವು ಜಿಲ್ಲೆಯ ಸ್ಥಳನಾಮಗಳ ಬಗ್ಗೆ ಕೆಲವರು ಪಿಎಚ್.ಡಿ. ಪದವಿಗಾಗಿ ವಿವಿಧ ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಸಿದ ಮಹಾಪ್ರಬಂಧಗಳು ಪ್ರಕಟವಾಗಿವೆ.

ತುಮಕೂರು ವಿಶ್ವವಿದ್ಯಾನಿಲಯ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಮೊದಲ ಹಂತವಾಗಿ ಪ್ರಕಟಿಸಿರುವ ೩೫ ಪುಸ್ತಕಗಳಲ್ಲಿ 'ತುಮಕೂರು ಜಿಲ್ಲೆಯ ಸ್ಥಳನಾಮಗಳು' ಎಂಬ ಕೃತಿ ಕೂಡ ಒಂದು. ಈ ಕೃತಿಯಲ್ಲಿ ಎರಡು ಅಧ್ಯಾಯಗಳಿದ್ದು, ಕಡೆಭಾಗದಲ್ಲಿನ ಅನುಬಂಧದಲ್ಲಿ ಸ್ಥಳನಾಮಗಳ ಹುಡುಕಾಟದಲ್ಲಿ ಸಹಕರಿಸಿದ ವಕ್ತೃಗಳ ಮಾಹಿತಿ ಮತ್ತು ಆಕರ ಗ್ರಂಥಗಳನ್ನು ಕೊಟ್ಟಿದ್ದಾರೆ. ಇದು ಸರಿಯಾದ ಕ್ರಮ.

ಅಧ್ಯಾಯ ಒಂದರಲ್ಲಿ ಆರು ಪುಟಗಳ ಸ್ಥಳನಾಮ ವಿಜ್ಞಾನದ ಇತಿಹಾಸವಿದ್ದು, ಈವರೆಗೆ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ತಮ್ಮ ಅಧ್ಯಯನಕ್ಕಾಗಿ ಮಾಡಿಕೊಂಡಿರುವ ವರ್ಗೀಕರಣದ ಮಾಹಿತಿ ಕಂಡುಬರುತ್ತದೆ. ಇವನ್ನೆಲ್ಲ ಗಮನದಲ್ಲಿರಿಸಿಕೊಂಡು, ಲೇಖಕರು ತಮ್ಮ ಪ್ರಸ್ತುತ ಅಧ್ಯಯನಕ್ಕೆ ಅನುಕೂಲವಾಗುವಂತೆ ತುಮಕೂರು ಜಿಲ್ಲೆಯ ಸ್ಥಳನಾಮಗಳನ್ನು ವಸತಿ, ಭೌಗೋಳಿಕ, ಪ್ರಾಣಿವಾಚಕ, ಸಸ್ಯವಾಚಕ, ಧರ್ಮವಾಚಕ, ಐತಿಹಾಸಿಕ, ಜನಾಂಗಿಕ, ಜಲವಾಚಕ, ಇತರೆ–ಹೀಗೆ ಒಂಬತ್ತು ವಿಭಾಗಗಳಡಿಯಲ್ಲಿ ನೋಡುವ ಯತ್ನ ಮಾಡಿದ್ದಾರೆ.

ಅಧ್ಯಾಯ ಎರಡರಲ್ಲಿ ಕ್ರಮವಾಗಿ ತುಮಕೂರು, ಕುಣಿಗಲ್, ಕೊರಟಗೆರೆ, ಮಧುಗಿರಿ, ಪಾವಗಡ, ಸಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ, ತುರುವೇಕೆರೆ, ತಿಪಟೂರು ತಾಲ್ಲೂಕಿನ

ಸ್ಥಳನಾಮಗಳ ಅಧ್ಯಯನವಿದೆ. ಈ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಎಲ್ಲ ಸ್ಥಳನಾಮಗಳನ್ನು ಪರಿಗಣಿಸದೆ ಗ್ರಾಮಗಳ ಹೆಸರನ್ನು ಮಾತ್ರ ಪರಿಗಣಿಸಿರುವುದಾಗಿ ಲೇಖಕದ್ವಯರು ಹೇಳಿಕೊಂಡಿದ್ದಾರೆ. ಆದರೆ ಆಂಧ್ರದ ಗಡಿಭಾಗದಲ್ಲಿರುವ ಪಾವಗಡ, ಶಿರಾ ಹಾಗೂ ಮಧುಗಿರಿ ತಾಲ್ಲೂಕಿನಲ್ಲಿರುವ ಕೆಲವು ಹಳ್ಳಿಗಳ ಹೆಸರು ಪೂರ್ಣವಾಗಿ ತೆಲುಗು ಭಾಷೆಯಿಂದ ಕೂಡಿದ್ದು, ಈ ಅಧ್ಯಯನದಲ್ಲಿ ಅಂಥ ಹೆಸರುಗಳನ್ನು ಪರಿಗಣಿಸದಿರುವುದು ಕಂಡುಬರುತ್ತದೆ. ಕಾಲಮಿತಿಯ ಕೊರತೆಯಿಂದ ಕ್ಷೇತ್ರಕಾರ್ಯ ನಡೆಸಲು ಸಾಧ್ಯವಿಲ್ಲದಿರಬಹುದು. ಆದರೆ ತೆಲುಗು ಭಾಷೆಯ ಹಳ್ಳಿಗಳ ಹೆಸರುಗಳನ್ನು ಅಗತ್ಯವಾಗಿ ಗಮನಿಸಬೇಕಾಗಿತ್ತು.

ಈ ಜಿಲ್ಲೆಯ ಬೇರೆ ತಾಲ್ಲೂಕುಗಳಲ್ಲಿ ಒಂದೇ ಹೆಸರಿರುವ ಹೆಸರುಗಳನ್ನು ಈ ಪುಸ್ತಕದಲ್ಲಿ ಅಧ್ಯಯನ ಮಾಡಿದ್ದಾರೆ. ಇದರಿಂದ ಪುಟಸಂಖ್ಯೆ ಹೆಚ್ಚಬಹುದಷ್ಟೆ. ಇದರ ಬದಲಿಗೆ ಇತರೆ ಹಳ್ಳಿಗಳ ಅಧ್ಯಯನ ಮಾಡಿದ್ದರೆ ಹೆಚ್ಚು ವ್ಯಾಪಕತೆ ಬರುತ್ತಿತ್ತು. ಉದಾಃ ತಗ್ಗೀಹಳ್ಳಿ: (ಪು:೧೦೧–ಸಿರಾ ತಾ. ಪುಟ:೭೨–ಮಧುಗಿರಿ ತಾಲ್ಲೂಕು). ಬ್ಯಾಡರಹಳ್ಳಿ: (ಪು.೧೫೪–ತುರುವೇಕೆರೆ ತಾ; ತಿಪಟೂರು ತಾ. ಪು. ೧೬೪). ದಬ್ಬೇಘಟ್ಟ: (ಪು:೭೫–ಮಧುಗಿರಿ ತಾ. ತುರುವೇಕೆರೆ ತಾ. ಪು.೧೪೮). ಕುರುಬರಹಳ್ಳಿ (ಪು.೧೫೩–ತುರುವೇಕೆರೆ ತಾ, ಪು: ೬೪ ಮಧುಗಿರಿ ತಾ). ಈ ಹೆಸರುಗಳ ಒಂದೇ ರೀತಿಯ ವಿವರಣೆ ಕಂಡುಬರುವುದರಿಂದ ಪುನರಾವರ್ತನೆ ಎನ್ನಿಸುತ್ತದೆ. ಪುಸ್ತಕದಲ್ಲಿ ಇಂಥ ಉದಾ.ಗಳನ್ನು ಹಲವಾರು ಕಾಣಬಹುದು. ಹೀಗಾಗದಂತೆ ಎಚ್ಚರವಹಿಸಬೇಕಾಗುತ್ತದೆ.

ಕೆಲವು ಗ್ರಾಮಗಳಿಗೆ ಅಡ್ಡಹೆಸರುಗಳಿರುವುದನ್ನು ಕೂಡ ಗಮನಿಸಬೇಕಿತ್ತು. ಅಲ್ಲದೆ ಕೆಲವು ಗ್ರಾಮಗಳ ಹೆಸರು ಬದಲಾವಣೆಯಾಗಿರುವುದೂ ಉಂಟು. ಸ್ಥಳನಾಮಗಳು ಭೂತ, ವರ್ತಮಾನ, ಭವಿಷ್ಯತ್ತುಗಳನ್ನು ಸಂಪರ್ಕಿಸುವ ಸೇತುವೆಗಳಾದ್ದರಿಂದ ಸ್ವಾತಂತ್ರ್ಯದ ನಂತರದ ಭಾರತ ಸರ್ಕಾರ ರಾಜ್ಯಗಳಿಗೆ ನಾಮಾಂತರ ನಿಯಂತ್ರಣಕ್ಕಾಗಿ ಆದೇಶಗಳನ್ನು ರವಾನಿಸಿ ಕೆಲವು ಮುಖ್ಯ ಸೂಚನೆಗಳನ್ನು ನೀಡಿದೆ. ಆದರೂ ಹೆಸರುಗಳು ಬದಲಾಗುತ್ತಲೇ ಇವೆ. ಇದಕ್ಕೆ ರಾಜಕೀಯ ಕಾರಣಗಳಿರಬಹುದು.

ಕಡೆಯದಾಗಿ ಹೇಳಬೇಕಾದ್ದು: ಯಾವ ಅಧ್ಯಯನವೂ ಸಂಪೂರ್ಣವಲ್ಲ. ಕೆಲವು ಮಿತಿಗಳ ನಡುವೆ ಈ ಕೃತಿ ರಚನೆಯಾಗಿರುವುದರಿಂದ ಈ ಅಧ್ಯಯನ ಇನ್ನೂ ಹಿಗ್ಗುವ ಬೆಳೆಯುವ, ಭಿನ್ನವಾಗಿ ನಿಲ್ಲುವ ಎಲ್ಲ ಅವಕಾಶಗಳು ಇವೆ. ಇದೆಲ್ಲವನ್ನೂ ಗಮನದಲ್ಲಿರಿಸಿಕೊಂಡು ಈ ಪುಸ್ತಕ ಗಮನ ಸೆಳೆಯುತ್ತದೆ. ಇದೇ ನಿಟ್ಟಿನಲ್ಲಿ ಐತಿಹ್ಯಗಳ ಸಂಗ್ರಹ ಅಗತ್ಯವಾಗಿತ್ತು.

ಎಂ.ಎಲ್.ಎನ್.

ಅನಗತ್ಯ ವಿಸ್ತಾರದ ಕೃತಿ

* **ತುಮಕೂರು ಜಿಲ್ಲೆಯ ಪ್ರದರ್ಶನ ಜನಪದ ಕಲೆಗಳು**–ಲೇ: ಕಂಟಲಗೆರೆ ಸಣ್ಣಹೊನ್ನಯ್ಯ; ಪು: ೧೬+೨೫೭; ಬೆ: ರೂ. ೧೦೦; ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

'ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಯಡಿಯಲ್ಲಿ ದೊರೆತ ಅನುದಾನದಿಂದ ಜಿಲ್ಲೆಯ ಐತಿಹಾಸಿಕ ಪರಂಪರೆ, ಸಾಹಿತ್ಯ, ಕಲೆ, ಆಚರಣೆ, ನಂಬಿಕೆ, ಐತಿಹ್ಯಗಳ ಮೂಲಕ ವಿಶೇಷವಾಗಿ ಸಾಂಸ್ಕೃತಿಕ ಸತ್ವವನ್ನು ಗುರುತಿಸುವ, ಇಲ್ಲಿಯ ಜ್ಞಾನಪರಂಪರೆಯ ಮೇಲೆ ಬೆಳಕು ಬೀರುವ ಪ್ರಯತ್ನ ನಡೆದಿದೆ. ಅರಿವಿನ ಚಲನಶೀಲತೆಯನ್ನು ಅಂತರ್ಗತಗೊಳಿಸಿಕೊಳ್ಳುತ್ತಾ ವಿಕಸನದ ಮಾರ್ಗ ನಿರ್ಮಿಸುವ ಕಾಯಕಕ್ಕೆ ವೈವಿಧ್ಯಮಯ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರೂಪಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ ೩೫ ಪುಸ್ತಕಗಳನ್ನು ಹೊರತಂದಿದೆ'– ಇಂಥ ನುಡಿಗಳು ಪುಸ್ತಕದ ಮೊದಲ ಪುಟಗಳಲ್ಲಿ ಕಂಡುಬರುತ್ತವೆ.

ಅದರಲ್ಲಿ ಕಂಟಲಗೆರೆ ಸಣ್ಣಹೊನ್ನಯ್ಯ ಅವರು ಬರೆದಿರುವ 'ತುಮಕೂರು ಜಿಲ್ಲೆಯ ಪ್ರದರ್ಶನ ಜನಪದ ಕಲೆಗಳು' ಎಂಬ ಪುಸ್ತಕವೂ ಒಂದು. ಈ ಪುಸ್ತಕದಲ್ಲಿ ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಮೂವತ್ತೆರಡು ಪ್ರದರ್ಶನ ಜನಪದ ಕಲೆಗಳನ್ನು ಪುರಾಣ, ವೇಷಭೂಷಣ, ಆಚರಣೆಯ ನೆಲೆ–ಹಿನ್ನೆಲೆಯಲ್ಲಿ ವಿವರವಾಗಿ ತಿಳಿಸುವ ಕಾರ್ಯ ನಡೆದಿದೆ. ಸ್ವತಃ ಕಲಾವಿದರೂ ಆಗಿರುವ ಲೇಖಕರು ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ನಡೆಸಿ ಈ ಕೃತಿಯನ್ನು ರಚಿಸುವ ಆಸಕ್ತಿ ತೋರಿದ್ದಾರೆ. ಸರಳವಾದ ಭಾಷೆಯಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಸಂವಹನಗೊಳಿಸುವ ಪ್ರಯತ್ನ ಮಾಡಿದ್ದಾರೆ. ಈ ಮಟ್ಟಿಗೆ ಕೃತಿ ಸಫಲವಾಗಿದೆ.

ಆದರೆ, ಪುಸ್ತಕದಲ್ಲಿ ಈ ಜಿಲ್ಲೆಗೆ ಹೊರತಾದ ಕೆಲವು ಪ್ರದರ್ಶನ ಕಲೆಗಳನ್ನು ದಾಖಲಿಸುವುದು ಸೂಕ್ತವಲ್ಲ. ಪು.೬ರಲ್ಲಿ ಆಸಾದಿಗೆ ಸಂಬಂಧಿಸಿದಂತೆ ಉದಾಹರಿಸಿರುವ ಹಾಡು ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಚಲಿತವಿರುವಂಥದು. ಪು.೫೯ರ ಜಗ್ಗಲಿಗೆ ಮೇಳವು ಉತ್ತರ ಕರ್ನಾಟಕದಲ್ಲಿ, ಅದರಲ್ಲೂ ಧಾರವಾಡ, ಹುಬ್ಬಳ್ಳಿ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಕಂಡುಬರುತ್ತದೆ. ಪು.೭೪ರ ಮರಗಾಲು ಕುಣಿತ ಕೋಲಾರ, ಧಾರವಾಡ, ಮಂಡ್ಯ, ಮೈಸೂರು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತದೆ. ಪು. ೭೩ರ ಕರಡಿವೇಷ, ಪು. ೮೭ರ ಲಾವಣಿ ಸಂಪ್ರದಾಯ, ಬೀಬಿ ಇಂಗಳಗಿ ಭಾಗದ ಲಾವಣಿಕಾರರು, ಹಲಸಂಗಿ ಭಾಗದ ಲಾವಣಿಕಾರರು, ಪು. ೯೨ರ ಸಾವಳಗಿ ದೇಗಾದಿ ಭಾಗದ ಲಾವಣಿಕಾರರು, ಹರದೇಶಿ–ನಾಗೇಶಿ ಸಂಪ್ರದಾಯ

ಮುಂತಾದವು ತುಮಕೂರು ಜಿಲ್ಲೆಯ ಪ್ರದರ್ಶನ ಕಲೆಗಳಲ್ಲಿ ನುಸುಳಿದ್ದಾದರೂ ಹೇಗೆ? ಈ ಕೃತಿ ಕಲೆಗಳ ತೌಲನಿಕ ಅಧ್ಯಯನವೂ ಅಲ್ಲ. ಹಾಗೆಯೇ ಪು. ೯೫ರ ಕಪ್ಪೆ ಒನಕೆ ಮೆರವಣಿಗೆ, ಪು. ೯೬ರ ಚಿತ್ತಾರದ ಚಂದ್ರಮ–ಇವೆಲ್ಲ ಸಂಪಾದಕರಾದ ಐವರ ಕಣ್ಣು ತಪ್ಪಿಸಿ ಸೇರ್ಪಡೆಗೊಂಡದ್ದಾದರೂ ಹೇಗೆ. ಇದನ್ನು ಕರ್ನಾಟಕದ ಜನಪದ ವಿದ್ವಾಂಸರಾದರೂ ತಿಳಿಸಿಯಾರೆ?

ಅದೇನೇ ಇರಲಿ, ಪು. ೧೨೦ರ ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಹಬ್ಬಗಳು, ಪು. ೧೩೬ರ ರಾಷ್ಟ್ರೀಯ ಹಬ್ಬಗಳು, ಪು. ೧೩೯ರ ಶಿಕ್ಷಕರ ದಿನಾಚರಣೆ, ಗಾಂಧಿಜಯಂತಿ, ಪು: ೧೪೦ ರಿಂದ ಪ್ರಾರಂಭವಾಗುವ ಮುಸ್ಲಿಮರ ಮತ್ತು ಕ್ರೈಸ್ತರ ಹಬ್ಬಗಳು, ಪು. ೧೪೪ ರಿಂದ ಪ್ರಾರಂಭವಾಗುವ ಹಬ್ಬಗಳು, ಪು: ೧೯೫–೨೦೪ ಜನಪದ ಸಾಹಿತ್ಯದಲ್ಲಿ ಹಬ್ಬಗಳನ್ನು ಈ ಪುಸ್ತಕದಲ್ಲಿ ಸೇರಿಸುವ ಅಗತ್ಯವಿತ್ತೆ? ಇಂಥದನ್ನೆಲ್ಲ ಒಗ್ಗೂಡಿಸಿ ಪ್ರತ್ಯೇಕ ಪುಸ್ತಕವೊಂದನ್ನು ಹೊರತರಬಹುದಿತ್ತು. ಇಂಥ ಕಲಸು ಮೇಲೋಗರದಿಂದ ಪುಸ್ತಕದ ಗಾತ್ರ ಹಿಗ್ಗಬಹುದು. ಪುಸ್ತಕದ ಶೀರ್ಷಿಕೆಗೆ ನ್ಯಾಯ ದೊರಕಿಸಿದಂತಾಗದು.

ಈ ಕೃತಿಯನ್ನು ರಚಿಸುವಾಗ ಬಳಸಿಕೊಂಡ ಆಧಾರ ಗ್ರಂಥಗಳನ್ನು ಲೇಖಕರ ಪ್ರಕಾಶಕರ ಹೆಸರನ್ನು, ಅಗತ್ಯವಾಗಿ ನೀಡಬೇಕಾಗಿತ್ತು. ಇದರಿಂದ ಲೇಖಕರ ಅಧ್ಯಯನ ಪರಿಶ್ರಮವಾದರೂ ತಿಳಿಯುತ್ತಿತ್ತಲ್ಲದೆ ಸಂಶೋಧಕರಿಗೆ ಸಹಾಯವೂ ಆಗುತ್ತಿತ್ತು. ಸಾವಿರ ಮಾತುಗಳಲ್ಲಿ ಹೇಳಬಹುದಾದುದನ್ನು ಒಂದು ಚಿತ್ರ ತಿಳಿಸುತ್ತದೆ. ಅಗತ್ಯವಿದ್ದ ಚಿತ್ರಗಳನ್ನು ನೀಡಿದ್ದರೆ ಕೃತಿಯ ಹಿರಿಮೆಯಾದರೂ ಹೆಚ್ಚುತ್ತಿತ್ತು. ಇಲ್ಲಿನ ಮುದ್ರಣ ದೋಷಗಳಿಗೆ ಕೆಲವು ಉದಾ:–

ಪು. ೩– ಮಾಂಸಾಹ, ಪು.೮ ಶಾನುಭೀಗ, ಪು.೧೨ ಲಿಂಗಾಯದ, ಪು. ೫೬ ವಿಶೆಷ, ಪು.೨೦ ಘಟೋತ್ಭಚ, ಪು. ೨೨ ದಾನ್ಯ, ಪು. ೩೭ ತಥಾಸ್ತ್ರು, ಪು: ೩೪ ಶ್ರಗಳಿರುವುದು, ಪು: ೪೨ ಮಗದಿ– ಇಂಥ ಹಲವಾರು ಮುದ್ರಣ ದೋಷಗಳಿವೆ. ಕರಡು ತಿದ್ದುವಾಗ ಬಹಳ ಎಚ್ಚರ ವಹಿಸಬೇಕಾಗುತ್ತದೆ. ಇದೆಲ್ಲಾ ಅಚಾತುರ್ಯದಿಂದ ನಡೆದಿದ್ದರೆ ಪುಸ್ತಕದ ಕೊನೆಯಲ್ಲಿ ತಪ್ಪು–ಒಪ್ಪು ಪಟ್ಟಿಯಾದರೂ ಕೊಡಬೇಕಾಗಿತ್ತು.

ಇವು ಆಕ್ಷೇಪಣೆಯ ನುಡಿಗಳಲ್ಲ; ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುವ ಕೃತಿಗಳು ದೋಷಮುಕ್ತವಾಗಿ, ಅಚ್ಚುಕಟ್ಟಾಗಿ, ವಿಷಯದಾಚೆ ಹೋಗದೆ, ವಿಷಯ ವ್ಯಾಪ್ತಿಯ ಮಿತಿಯಲ್ಲಿ ಹೊರಬರಲಿ ಎಂಬ ಸದಾಶಯದ ಅಪೇಕ್ಷಿತ ನುಡಿಗಳಷ್ಟೆ.

ಒಟ್ಟಾರೆ, ವಿಶ್ವವಿದ್ಯಾನಿಲಯದ ಈ ಯೋಜನೆ ಮಹತ್ವಾಕಾಂಕ್ಷೆಯದು. ಲೇಖಕರ ಪರಿಶ್ರಮವನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಆಗಲೇ ಪುಸ್ತಕ

ಸರ್ವಾಂಗ ಸಮರ್ಥವಾಗಿ ಬೆಳಕಾಗುವುದು. ಯಾವ ಹಂತದಲ್ಲೂ ಅವಸರ ಬೇಡ. ಎಲ್ಲ ಹಂತದಲ್ಲೂ ಸಿದ್ಧತೆ, ಶುದ್ಧತೆ, ಬದ್ಧತೆಯಿದ್ದರೆ ಚೆನ್ನಾಗಿರುತ್ತದೆ.

ಎಂ.ಎಲ್. ನರಸಿಂಹಮೂರ್ತಿ

ಪುನರಾವರ್ತಿತ ಕ್ಷೇತ್ರ ಕಾರ್ಯದ ಕೆಲಸ

* **ಕಾಡುಗೊಲ್ಲರು:** ಲೇ॥ ಪಿ.ಎಂ. ಗಂಗಾಧರಯ್ಯ, ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ೧೬+೧೯೪; ಬೆಲೆ ರೂ. ೧೦೦/–

ಇದು–ರಾಜ್ಯಸರ್ಕಾರವು ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ನೀಡಿದ ಸಹಾಯಧನದಿಂದ ತುಮಕೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕೃತಿಗಳಲ್ಲೊಂದು. ಈ ಮಾಲಿಕೆಯ ಯಾವ ಕೃತಿಯಲ್ಲೂ ಲೇಖಕನಿಗೆ ಮುನ್ನುಡಿ ರೂಪದಲ್ಲಿ ತನ್ನ ಮಾತುಗಳನ್ನು ಹೇಳಲು ಅವಕಾಶ ಕೊಟ್ಟಂತೆ ಕಾಣುವುದಿಲ್ಲ. ಹೀಗಾಗಿ ಅವರು ಈ ಪುಸ್ತಕ ರಚನೆಗೆ ಇಟ್ಟುಕೊಂಡಂಥ ಇತಿಮಿತಿಗಳನ್ನು ಪ್ರಸ್ತಾವನೆಯ ಮಾತುಗಳಿಂದಲೇ ತಿಳಿಯಬೇಕಾಗುತ್ತದೆ.

ಕಾಡುಗೊಲ್ಲರನ್ನು ಕುರಿತಾದಂತೆ ಈಗಾಗಲೇ ಮಹತ್ವದ ಅಧ್ಯಯನಗಳನ್ನು ತೀ.ನಂ. ಶಂಕರನಾರಾಯಣ ಹಾಗೂ ಕಾಳೇಗೌಡನಾಗವಾರ ಅವರುಗಳು ಕಾಲು ಶತಮಾನದ ಹಿಂದೆಯೇ ಮಾಡಿದ್ದಾರೆ. ಅನಂತರ ಮೀರಸಾಬಿಹಳ್ಳಿ ಶಿವಣ್ಣನವರ ಅಧ್ಯಯನವೂ ನಡೆದಿದೆ. ಆ ಪುಸ್ತಕಗಳ ಹೆಸರನ್ನು ಈ ಲೇಖಕರು ತಮ್ಮ ಈ ಕೃತಿಯ ಕೊನೆಯಲ್ಲಿರುವ ಆಧಾರ ಗ್ರಂಥಗಳ ಪಟ್ಟಿಯಲ್ಲೂ ಕೊಟ್ಟಿದ್ದಾರೆ. ಆದರೆ ಆ ಮೂರು ಪ್ರಮುಖ ಅಧ್ಯಯನಗಳಿಗಿಂತ ತಮ್ಮ ಈ ಅಧ್ಯಯನ ಯಾವ ರೀತಿ ಭಿನ್ನ ಎಂಬುದನ್ನು ಎಲ್ಲಿಯೂ ಹೇಳಿಲ್ಲ. ಅಷ್ಟೇ ಅಲ್ಲ, ತೌಲನಿಕವಾಗಿ ಕೂಡ ಅಲ್ಲಿ ದಾಖಲಾಗಿರುವ ಅಂಶಗಳನ್ನು ತಾವು ಸಂಗ್ರಹಿಸಿದ ಅಂಶಗಳೊಡನೆ ಎಲ್ಲಿಯೂ ಹೋಲಿಸಿ ನೋಡಿ ವಿಶ್ಲೇಷಣೆ ಮಾಡಿಲ್ಲ. ಇನ್ನೂರು ಪುಟಗಳ ಈ ಪುಸ್ತಕದಲ್ಲಿ ಒಂದೇ ಒಂದು ಅಡಿ ಟಿಪ್ಪಣಿಯೂ ಇಲ್ಲ. ಆದರೆ ಕೊನೆಯಲ್ಲಿ ಹದಿನಾರು ಆಧಾರಗ್ರಂಥಗಳ ಪಟ್ಟಿ ಇದೆ. ಹೀಗಿರುವುದರಿಂದ ಇದರಲ್ಲಿ ಈ ಲೇಖಕರ ಸ್ವಂತ ಕ್ಷೇತ್ರಕಾರ್ಯ / ಚಿಂತನೆಯ ಅಂಶಗಳು ಯಾವುವು, ಅನ್ಯ ಗ್ರಂಥಗಳಿಂದ ತೆಗೆದು ಕೊಂಡದ್ದು ಯಾವುದು ಎಂಬುದೇ ತಿಳಿಯದಂತಾಗಿದೆ. ಈ ಮಾತನ್ನು ಬದಿಗಿಟ್ಟು ಕೃತಿಯನ್ನು ಓದಿದಾಗಲೂ ಸಹ ಈಗಾಗಲೇ ಪ್ರಕಟವಾಗಿರುವ ಕಾಡುಗೊಲ್ಲರ ಸಂಸ್ಕೃತಿಯ ವಿವರಗಳಿಗಿಂತ ಗಮನಾರ್ಹವಾದ ಅನ್ಯ ವಿವರಗಳು ಇಲ್ಲಿ ಕಾಣುವುದಿಲ್ಲ. ತುಮಕೂರು ಜಿಲ್ಲೆಯಲ್ಲಿನ ಕಾಡುಗೊಲ್ಲರ ಹಟ್ಟಿಗಳನ್ನು ತಾಲ್ಲೂಕುವಾರಾಗಿ ಕೊಟ್ಟಿದ್ದು ಅದು ಸಾಕಷ್ಟು ವಿವರ ಪೂರ್ಣವಾಗಿರುವುದು ಇದರ ಒಂದು ಒಳ್ಳೆಯ ಅಂಶವಾಗಿದೆ. ಅನೇಕ ಚಿತ್ರಗಳಿವೆ. ಆದರೆ ಹೆಚ್ಚಿನವು ಮುದ್ರಣದಲ್ಲಿ ಸ್ಪಷ್ಟವಾಗಿ ಬಂದಿಲ್ಲ.

ಈ ಕೃತಿಯಲ್ಲಿ ಪ್ರಸ್ತಾವನೆ ಸಮಾರೋಪಗಳ ಹೊರತಾಗಿ ಆರು ಅಧ್ಯಾಯಗಳಿವೆ. ಇವು ಕ್ರಮವಾಗಿ – ತುಮಕೂರು ಜಿಲ್ಲೆಯ ಭೌಗೋಳಿಕತೆ, ಕಾಡುಗೊಲ್ಲರ ಭೌತಿಕ ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ, ಜೀವನ ವಿಧಾನ, ನಂಬಿಕೆ ಸಂಪ್ರದಾಯಗಳು, ಕಾಡುಗೊಲ್ಲರ ಕಲೆ– ಈ ಶೀರ್ಷಿಕೆಗಳನ್ನು ಹೊಂದಿವೆ. ಕೃತಿ ಅಧ್ಯಯನದಲ್ಲೂ ಸಾಕಷ್ಟು ವಿವರಗಳಿವೆ ನಿಜ. ಆದರೆ ಹಿಂದೆಯೇ ಹೇಳಿದಂತೆ ಈ ಹಿಂದಿನ ಈ ವಿಷಯದ ಕೃತಿಗಳಲ್ಲಿನ ವಿವರಗಳೇ ಬಹಳಷ್ಟು ಮಟ್ಟಿಗೆ ಪುನರಾವರ್ತಿತವಾಗಿವೆ. 'ಭೌಗೋಳಿಕತೆ' ಅಧ್ಯಾಯದಲ್ಲಿ ಜಿಲ್ಲೆಯಲ್ಲಿರುವ ಶಿಷ್ಟ ದೇವಾಲಯಗಳು, ಸಾಹಿತಿಗಳು, ರಂಗಭೂಮಿ– ಈ ವಿವರಗಳೂ ಇವೆ. ಇದನ್ನು ನೀಡಿರುವುದರ ಔಚಿತ್ಯ ತಿಳಿಯುವುದಿಲ್ಲ.

ಅನೇಕ ಕಡೆ ಈ ಸಂಶೋಧಕರ ವಾಕ್ಯರಚನೆಯೇ 'ಅನನ್ಯ' ರೀತಿಯಲ್ಲಿದೆ. ಉದಾ:–

೧. ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಗುರುತಿಸಬಹುದಾದರೂ ಪ್ರಧಾನವಾಗಿ ಕಾಡುಗೊಲ್ಲರು, ಲಂಬಾಣಿಗಳನ್ನು ಗುರುತಿಸಬಹುದು' (ಪುಟ.೩)

೨. "ಈ ಸಮುದಾಯವನ್ನು ಸಂಶೋಧನಾ ಕಾರ್ಯದಿಂದ ಇವರ ಜೀವನ ವಿಧಾನವನ್ನು ಅಳೆಯಲು ಪ್ರಯತ್ನಿಸಲಾಗಿದೆ'. (ಪು.೪)

೩. 'ತುಮಕೂರು ಜಿಲ್ಲೆಯ ಸಿರಾ ಪಾವಗಡ ಮಧುಗಿರಿ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು **ಬರಗಾಲ ದಿಕ್ಸೂಚಿ ಪ್ರಾಂತ್ಯಗಳಾಗಿವೆ**' (ಪು.೬೬)

೪. '....... ಇವರ ಭಾಷೆ ಕನ್ನಡವಾಗಿದ್ದರೂ ಸಮಾಜದ ನಡುವೆ ಸಂಪ್ರದಾಯಬದ್ಧ ಆಚರಣೆಗೆ ಅಂಟಿಕೊಂಡು ಬದುಕಿದ್ದಾರೆ' (ಪು.೧೭೩). (ಕನ್ನಡ ಮಾತಾಡುವವರು ಹಾಗಿರುವುದಿಲ್ಲವೆ?)

೫. '.... ಹಟ್ಟಿಗಳ ಪ್ರವೇಶ ಪಡೆದಾಗ ಕಂಡ ಅನುಭವ ಸಾಮಾಜಿಕ ಸ್ಥಿತಿಗತಿಗಳ ಕಾಣಿಕೆ ಸಂಪ್ರದಾಯದಲ್ಲಿಯೇ ಉಳಿದಿದೆ'. (ಪು.೧೭೩)

೬. 'ಇದನ್ನು 'ದೇವರ ಕುರಿ' ಎಂದು ಇದರ ಕಿವಿಯನ್ನು ತ್ರಿಶೂಲಾಕಾರದಲ್ಲಿ ದೇವರ ಹತ್ತಿರ ಶಾಸ್ತ್ರ ಕೇಳಿ ಹೆಣ್ಣು ಕುರಿಯನ್ನು ಬಿಟ್ಟಿರುತ್ತಾರೆ' (ಪು.೧೧೫) ಇತ್ಯಾದಿ.

– ಈ ಪುಸ್ತಕ ಬರೆದವರು ಡಾಕ್ಟರೇಟ್ ಪದವೀಧರರು. ಈ ಹಸ್ತ ಪ್ರತಿಯನ್ನು ಪರಿಶೀಲಿಸಿದವರು ನಿಜಕ್ಕೂ ಚೆನ್ನಾಗಿ ಓದಿಕೊಂಡ ತಜ್ಞರು. ಪ್ರಕಟಿಸಿದವರು ಒಂದು ವಿಶ್ವವಿದ್ಯಾಲಯ. ಅಂದ ಮೇಲೆ ಈ ವಾಕ್ಯರಚನೆ ಸರಿಯೇ ಇರಬಹುದೇನೋ ! ಇದು 'ಭವಿಷ್ಯದ ಕನ್ನಡ' ವಿರಬಹುದು.

ಇಂಥ ವಾಕ್ಯರಚನೆಗೆ ಇಂಬುಕೊಡುವಂತೆ ಅನೇಕ ಶಬ್ದಗಳನ್ನು ವಿಶಿಷ್ಟ ರೀತಿಯಲ್ಲಿ ಮುದ್ರಿಸಲಾಗಿದೆ. ಉದಾ: ಕರಿಮಣಿ ಬಿಚ್ಚಲೆ (ಪು.೮೭; ಇದನ್ನು ಈವರೆಗೂ ನಾವು ಕರಿಮಣಿ, ಬಿಚ್ಚೋಲೆ ಎಂದು ಬರೆಯುತ್ತಿದ್ದೆವು.), ಸಂಪದ್ರಾಯ (ಪು.೩, ಬಹುಶಃ ಇದು 'ಸಂಪ್ರದಾಯ' ಇರಬೇಕು). ಗೋಲ್ಲ (ಪು.೬೯), ಹರಿಶಿನ (ಪು.೮೯), ವಾಜ್ಞ್ಮಯ, ಸಿದ್ದಗಂಗ, ನಿಷ್ಟೆ, ಹೋಯ್ಸಳ (ಎಲ್ಲವೂ ಪುಟ ೯ರಲ್ಲಿ), ಸಿದ್ದಲಿಂಗೇಶ್ವರ (ಪು.೧೦) ಇತ್ಯಾದಿ ಇತ್ಯಾದಿ.

ಹೇಳಿದ್ದನ್ನೇ ಪುನಃ ಪುನಃ ಹೇಳುವುದೂ ಇಲ್ಲಿ ಕಂಡುಬರುತ್ತದೆ. ಉದಾಹರಣೆಗೆ: – 'ಕಾಡುಗೊಲ್ಲರು ಹಾಲುತುಪ್ಪ ಮಾರುತ್ತಾರೆ' ಎಂಬುದನ್ನು ೬೭ನೇ ಪುಟದಲ್ಲಿ ಎರಡು ಸಾರಿ ಹೇಳಿರುವುದಲ್ಲದೆ ಪುನಃ ೬೯ನೇ ಪುಟದಲ್ಲೂ ಎರಡು ಬಾರಿ ಹೇಳಿದ್ದಾರೆ. ಪುಸ್ತಕದ ಇತರೆಡೆಗಳಲ್ಲಿಯೂ ಇದೇ ಮಾತು ಬಂದಿದೆ. ಬಹುಶಃ 'ಓದುಗರು ಮರೆಯದಿರಲಿ' ಎಂದಿರಬಹುದು (ಇದೇ ರೀತಿ – 'ಕಾಡುಗೊಲ್ಲರು ಊರಿನಿಂದ ಹೊರಗೆ ಹಟ್ಟಿಗಳನ್ನು ಕಟ್ಟಿಕೊಂಡು ಬದುಕುತ್ತಾರೆ – ಎಂಬ ಮಾತೂ ಸಹ). ಕೆಲವು ವಿಚಿತ್ರ ಹೇಳಿಕೆಗಳೂ ಇಲ್ಲಿವೆ. ಉದಾ–

೧. '........ ಮಹಾ ವೃಕ್ಷ ಸಂಪತ್ತು ಹೊಂದಿರುವ ಭೂಮಿ ಎಂದು ಹೆಸರಾದ ತುಮಕೂರು........' (ಪು.೮) (ಎಲ್ಲಿದೆ ಈ ಜಿಲ್ಲೆಯಲ್ಲಿ– 'ಮಹಾವೃಕ್ಷ ಸಂಪತ್ತು?' ಯಾರು ಹೇಳಿದ್ದಾರೆ ಹಾಗೆ? ಎಲ್ಲಿದೆ ಉಲ್ಲೇಖ?)

೨. 'ಗಂಗಾಧರಯ್ಯನವರು ಸಿದ್ಧಾರ್ಥ ನಗರದಲ್ಲಿ ಬೌದ್ಧ ವಿಹಾರವನ್ನು ನಿರ್ಮಿಸಿರುವುದು ಬೌದ್ಧಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ' (ಪು.೧೧) (ಬೌದ್ಧ ಧರ್ಮಕ್ಕೆ ಕನ್ನಡಿಯಾಗುವಷ್ಟು ಔನ್ನತ್ಯದ ಕಟ್ಟಡವಲ್ಲ ಅದು.)

೩. 'ತುಮಕೂರು ಜಿಲ್ಲೆ ಪ್ರವಾಸಿಗರ ಕಾಶ್ಮೀರ ಮುಮುಕ್ಷುಗಳ ಕಾಶಿ ಯಾತ್ರಾರ್ಥಿಗಳ ಮೆಕ್ಕಾ ಎಂಬ ಖ್ಯಾತಿಯನ್ನು ಪಡೆದಿದೆ. ಕರ್ನಾಟಕದ ಮಾತೆಯ ಕಣ್ಮಣಿಯೆನಿಸಿರುವ ತುಮಕೂರು ಜಿಲ್ಲೆ ನಿಸರ್ಗದ ಮಡಿಲಲ್ಲಿ ಮಾಣಿಕ್ಯದಂತೆ ಕಂಗೊಳಿಸಿದೆ'. (ಪುಟ೭)

(ಈ ಲೇಖಕರು ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳನ್ನು ನೋಡಿಯೇ ಇಲ್ಲವೆ?)

ಈ ಪುಸ್ತಕ ರಚನೆಯ ಹಿಂದೆ ಪರಿಶ್ರಮ ಇಲ್ಲವೆನ್ನಲಾಗುವುದಿಲ್ಲ. ಆದರೆ ಭಾಷಾಶುದ್ಧತೆ, ವಿಶ್ಲೇಷಣೆಯ ಒಳನೋಟಗಳು, ಹೊಸತನ, ಸ್ವಂತಿಕೆ ಇಲ್ಲದ ಕೃತಿಗಳು ಕಾಲದ ಓಟದಲ್ಲಿ ನಾಲ್ಕುದಿನ ನಿಲ್ಲವುದೂ ಕಷ್ಟ ತಜ್ಞರ ಸಮಿತಿಯು ಇಂಥ ಬರಹಗಳನ್ನು ಹಾಗೆಯೇ ಪ್ರಕಟಣೆಗೆ ಕಳಿಸುವ ಉತ್ಸಾಹದಲ್ಲಿ ವರ್ತಿಸುವುದು ಸರಿ ಎನಿಸದು.

ಎಸ್.ಪಿ. ಪದ್ಮಪ್ರಸಾದ್

ಜಾನಪದ ಕಲೆಯ ಹಿಂದಿನ ಬದುಕನ್ನು ಕುರಿತು.......

* **ಹರದೇಶಿ – ನಾಗೇಶಿ ಕಲೆ ಮತ್ತು ಕಲಾವಿದರು–** ಲಿಂಗ ಸಂಬಂಧಿ ಅಧ್ಯಯನ. ಲೇ॥ ಶೈಲಜಾ ಹಿರೇಮಠ, ಪ್ರ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು.೧೪+೩೦೮, ಬೆಲೆ ರೂ.: ೨೦೦/–

ಇದು ಬಹುಶಃ ಈ ಮಾದರಿಯ ಪ್ರಥಮ ಕೃತಿ. ಜಾನಪದ ಕ್ಷೇತ್ರದ ಉಪೇಕ್ಷಿತ ಆಯಾಮವೊಂದರ ಅಧ್ಯಯನ ಇಲ್ಲಿದೆ. ನೇರವಾಗಿ ಜನಪದ ಕಲೆಯೊಂದರ ಬಗ್ಗೆ ವಿವೇಚಿಸುವುದು ಇಲ್ಲಿನ ಗುರಿಯಲ್ಲ. ಬದಲಾಗಿ ಆ ಕಲೆಯನ್ನು ರೂಢಿಸಿಕೊಂಡ ಕಲಾವಿದರು ಅದರಲ್ಲೂ ಸ್ತ್ರೀಯರು ಸಾಮಾಜಿಕವಾಗಿ ಎದುರಿಸಬೇಕಾಗಿ ಬಂದ ಪರಿಸ್ಥಿತಿ, ಸವಾಲುಗಳನ್ನು ಅಧ್ಯಯನ ಮಾಡುವುದು ಇಲ್ಲಿನ ಗುರಿ.

'ಹರದೇಶಿ–ನಾಗೇಶಿ' ಎನ್ನುವುದೊಂದು ಹಾಡುಗಾರಿಕೆ ಸಂಪ್ರದಾಯ. ಇದು ಎರಡು ತಂಡಗಳ ನಡುವಿನ ಹಾಡಿಕೆಯ ಸ್ಪರ್ಧೆ ಇದ್ದಹಾಗಿರುತ್ತದೆ. ಹರದೇಶಿ ತಂಡದವರು 'ಈಶ್ವರನೇ ಹೆಚ್ಚು' ಎಂದರೆ ನಾಗೇಶಿ ತಂಡದವರು ಗಿರಿಜೆಯೇ ಹೆಚ್ಚು ಎನ್ನುತ್ತಾರೆ. ತಮ್ಮ ತಮ್ಮ ವಾದವನ್ನು ಹಾಡಿನ ರೂಪದಲ್ಲಿ ಮಂಡಿಸುತ್ತಾರೆ. ಎದುರು ಪಕ್ಷದವರು ಅದಕ್ಕೆ ಉತ್ತರ ಕೊಡಲು ತಾವೂ ಹಾಡುತ್ತಾರೆ. ಇದು ಸರಪಳಿಯಂತೆ ಮುಂದುವರೆಯುತ್ತದೆ. ಹರದೇಶಿ ತಂಡದಲ್ಲಿ ಗಂಡಸರು ಹೆಚ್ಚಿದ್ದರೆ ನಾಗೇಶಿ ತಂಡದಲ್ಲಿ ಗಾಯಕಿಯೇ ಮುಖ್ಯಳಾಗಿರುತ್ತಾಳೆ. ಗಂಟೆಗಟ್ಟಲೆ ಈ ಹಾಡಿಕೆ ನಡೆಯುತ್ತದೆ.

ಆದರೆ ವಾಸ್ತವವಾಗಿ ಈ ಪ್ರಕ್ರಿಯೆ ಇಷ್ಟಕ್ಕೇ ನಿಲ್ಲುವುದಿಲ್ಲ. ಹಾಡುವ ಸ್ತ್ರೀಯನ್ನು ತುಂಬ ಕೀಳು ದೃಷ್ಟಿಯಿಂದ ನೋಡಲಾಗುತ್ತದೆ. ಅವರನ್ನು ವೇಶ್ಯೆಯರೆಂಬಂತೆ ಭಾವಿಸಲಾಗುತ್ತದೆ. ಎದುರು ತಂಡದಲ್ಲಿನ ಪುರುಷ ಗಾಯಕರು ಈ ಸ್ತ್ರೀಯನ್ನು ಆಕರ್ಷಿಸುವ, ಕೆಣಕುವ, ಅಪಮಾನಿಸುವ ರೀತಿಯ ಹಾಡುಗಳನ್ನು ಹಾಡುತ್ತಾರೆ. ಅದಕ್ಕೆ ಇವರು ಉತ್ತರ ರೂಪದ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಾರಿಕೆ ಡಪ್ಪು, ತಂತುಣಿ, ತಾಳ– ಇಂಥ ವಾದ್ಯಗಳ ಜೊತೆ ಇರುತ್ತದೆ.

ಲೇಖಕಿ ಈ ಗಾಯಕ, ಗಾಯಕಿಯರನ್ನು ಹುಡುಕಿಕೊಂಡು ದೂರದ ಹಳ್ಳಿಗಳನ್ನು ತಿರುಗಿ, ಕಷ್ಟದಿಂದ ಅವರ ಬಾಯಿಬಿಡಿಸಿ, ಅವರ ವಿಶ್ವಾಸ ಸಂಪಾದಿಸಿಕೊಂಡು ಈ ಹಾಡಿಕೆಯ ಕಸುಬಿನ ಹಿಂದಿನ ಕಥೆಯನ್ನು ಅನಾವರಣಗೊಳಿಸುತ್ತಾರೆ. ಇದು ಸುಲಭವಲ್ಲ. ಇದಕ್ಕಾಗಿ ಲೇಖಕಿ ಸಾಕಷ್ಟು ಅಪಮಾನ ನುಂಗಿಕೊಂಡಿದ್ದಾರೆ. ಮೊದಲಾಗಿ ಯಾವುದಾದರೂ ಊರಿಗೆ ಹೋಗಿ 'ಈ ಗಾಯಕಿಯರ ಮನೆ ತೋರಿಸಿ' ಎಂದರೆ ಸಾಕು, ಅಲ್ಲಿಂದಲೇ ವಕ್ರದೃಷ್ಟಿ ಶುರು! ಹೀಗಾಗಿ ಈ ಕೃತಿಯಲ್ಲಿ ಲೇಖಕಿಯ ಅನುಭವಗಳು, ಗಾಯಕಿಯರ ಜೀವನಾನುಭವಗಳು ಹಾಗೂ ಆ ಕಲೆಗೆ ಸಂಬಂಧಿಸಿದ ಸಂಪ್ರದಾಯಗಳು

– ಇವೆಲ್ಲದರ ಪರಿಚಯವಾಗುತ್ತದೆ. ಈ ಕ್ಷೇತ್ರದಲ್ಲಿ ಗಂಡಸರು ಅನುಭವಿಸುವ ಅಪಮಾನ, ನೋವುಗಳು ತುಂಬ ಕಡಿಮೆ. ಅದೇನಿದ್ದರೂ ಹೆಂಗಸರಿಗೇ ಮೀಸಲಿಟ್ಟದ್ದು. ಹಾಡಿಕೆಯನ್ನು ಕಲಿತ ರೀತಿ, ಅವರ ಗುರುಗಳು ಅಭ್ಯಾಸ ಮಾಡಿಸುತ್ತಿದ್ದ ಕಠಿಣಕ್ರಮ, ಹಾಡಿಕೆಯ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿಕೊಳ್ಳಲು ಪಟ್ಟ ಶ್ರಮ, ಹೋದ ಊರುಗಳಲ್ಲಿ ವ್ಯವಸ್ಥಾಪಕರು ಅಥವಾ ಬೇರೆ ಗಂಡಸರು ಇವರನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದುದು, ಅದನ್ನು ತಪ್ಪಿಸಿಕೊಳ್ಳಲು ಇವರು ಪಟ್ಟ ಪಡಿಪಾಟಲು, ಅನುಭವಿಸಿದ ದೈಹಿಕ ಮಾನಸಿಕ ಹಿಂಸೆಗಳು, ಬರುತ್ತಿದ್ದ ಆದಾಯ, ಮೈಯಲ್ಲಿ ಜ್ವರವಿದ್ದರೂ ರಾತ್ರಿಯೆಲ್ಲಾ ಹಾಡಲೇ ಬೇಕಾದ ಪರಿಸ್ಥಿತಿ, ಪದೇ ಪದೇ ಹೊಸ ಹಾಡುಗಳನ್ನು ಬರೆಸಿ ಅವರಿಗೆ ಗೌರವಧನ ಕೊಟ್ಟು ಕೊಂಡುಕೊಂಡು ಅವನ್ನು ಅಭ್ಯಾಸ ಮಾಡಿ ಹಾಡಬೇಕಾದ ಅನಿವಾರ್ಯತೆ– ಇಂಥ ಅನೇಕ ಸಂಗತಿಗಳನ್ನು ಲೇಖಕಿ ಗಾಯಕ/ಗಾಯಕಿಯರ ನುಡಿಗಳಲ್ಲಿಯೇ ಔಚಿತ್ಯಕ್ಕೆ ತಕ್ಕಷ್ಟು ನಿರೂಪಿಸಿ ಅನಂತರ ಅದನ್ನು ವಿಶ್ಲೇಷಿಸುತ್ತಾರೆ. ಹೀಗೆ ವಿಶ್ಲೇಷಿಸುವಾಗ ಮಾತ್ರ ಸಹಜವಾಗಿ ಈ ಲೇಖಕಿ ಮುನ್ನೆಲೆಗೆ ಬರುತ್ತಾರೆಯೇ ವಿನಃ ಉಳಿದಂತೆ ತಾನು ಹಿನ್ನೆಲೆಯಲ್ಲೇ ಉಳಿದು ವಕ್ತೃಗಳನ್ನೇ ಮುನ್ನೆಲೆಗೆ ತರುತ್ತಾರೆ. ಇದು ಸರಿಯಾದ ಕ್ರಮವೇ. ವಕ್ತೃಗಳ ವಿವರವನ್ನು ಕ್ರಮಬದ್ಧವಾಗಿ ಕೊಟ್ಟಿರುವುದಲ್ಲದೆ ಈ ಕಲೆಯ ಕ್ಷೇತ್ರದಲ್ಲಿ ಬಳಕೆಯಾಗುವ ಕೆಲವು ಸಾಂಸ್ಕೃತಿಕ ಶಬ್ದಗಳ ಅರ್ಥ, ಸಂದರ್ಭಗಳನ್ನು ವಿವರಿಸಿದ್ದಾರೆ. ಹಲವು ಛಾಯಾಚಿತ್ರಗಳನ್ನೂ ಒದಗಿಸಿದ್ದಾರೆ. ಇವೆಲ್ಲ ಈ ಬರಹಕ್ಕೆ ಒಂದು ಖಚಿತ ಅಧಿಕೃತತೆಯನ್ನು ಒದಗಿಸಿವೆ.

ಲೇಖಕಿಯ ವಿಶ್ಲೇಷಣೆ ಅನೇಕ ಕಡೆ ಸರಿಯಾಗಿಯೇ ಇದೆ. ಒಂದೆರಡು ಕಡೆ ಅವರ ಆಲೋಚನೆಯ ದಿಕ್ಕು ಸರಿಯಿಲ್ಲ ಎನಿಸುತ್ತದೆ. 'ಗುರುಪ್ಯಾಲಾ' ದ ಸಂಪ್ರದಾಯದಿಂದ ಮಹಿಳೆಯರನ್ನು ಹೊರಗಿಟ್ಟಿರುವುದು ಲಿಂಗ ತಾರತಮ್ಯ– ಎಂಬರ್ಥದಲ್ಲಿ ಇವರು ವಿಶ್ಲೇಷಿಸುತ್ತಾರೆ. ಹಾಡುಗಳನ್ನು ಹೇಳಿಕೊಡುವ ಗುರು ಒಂದು ಹಂತದಲ್ಲಿ ಒಂದು ಬಟ್ಟಲು ಹಾಲಿನಲ್ಲಿ ತಾನು ಸ್ವಲ್ಪ ಕುಡಿದು ಅದೇ ಬಟ್ಟಲನ್ನು ತನ್ನ ಶಿಷ್ಯನಿಗೆ ಕೊಡಬೇಕು. ಅವನು ಅದರಲ್ಲಿ ಉಳಿದಿರುವ ಹಾಲನ್ನು ಕುಡಿಯಬೇಕು. ಇದು ಈ ಆಚರಣೆಯ ಮುಖ್ಯಭಾಗ. ಗಂಡಸರಿಗೆ ಮಾತ್ರ ಹೀಗೆ ನೀಡುವ, ಮಹಿಳೆಯರಿಗೆ ಹೀಗೆ ನೀಡದಿರುವ ಸಂಪ್ರದಾಯವಿದೆ. 'ಇದು ಮಹಿಳೆಯ ಬಗ್ಗೆ ಮಾಡುತ್ತಿರುವ ತಾರತಮ್ಯ' ಎಂದು ಸಂಶೋಧಕಿ ಭಾವಿಸಿರುವಂತಿದೆ. ಆದರೆ ಒಬ್ಬ ಗಂಡಸು ತನ್ನ ಎಂಜಲನ್ನು ತನಗೆ ಯಾವ ರೀತಿಯಲ್ಲೂ ಸಂಬಂಧಿಕಳಲ್ಲದ ಒಬ್ಬ ಮಹಿಳೆ ಕುಡಿಯಬೇಕೆಂಬ ಸಂಪ್ರದಾಯವೂ ತಪ್ಪಲ್ಲವೆ? ಅದು ಮತ್ತೊಂದು ರೀತಿಯಲ್ಲಿ ತನ್ನ ವಿದ್ಯಾರ್ಥಿನಿಯಾಗಬಂದವಳ ಮೇಲೆ ತನ್ನ ಗಂಡುತನವನ್ನು ಹೇರುವ ಕ್ರಿಯೆ ಎನಿಸಬಹುದಲ್ಲವೆ? ವಾಸ್ತವವಾಗಿ ಗಾಯಕಿಯಾಗಬಂದವಳ ಮೇಲೆ 'ಗುರುಪ್ಯಾಲಾ'

ದ ಆಚರಣೆ ಹೇರದಿರುವುದರಲ್ಲೇ ಒಂದು ವಿವೇಕವಿದೆ ಎನಿಸುತ್ತದೆ. ಇಂಥ ಒಂದೆರಡು ಅಂಶಗಳನ್ನು ಬಿಟ್ಟರೆ ಉಳಿದೆಲ್ಲ ವಿಚಾರಗಳಲ್ಲಿ ಶೈಲಜಾ ಅವರ ವಿಶ್ಲೇಷಣೆಯನ್ನು ನಾವು ಒಪ್ಪಿಕೊಳ್ಳಲೇ ಬೇಕೆನಿಸುವಷ್ಟು ಅವು ಪ್ರಾಮಾಣಿಕವೂ ವಸ್ತುನಿಷ್ಠವೂ ಆಗಿದೆ.

ಈ ಪುಸ್ತಕವನ್ನು ಓದುತ್ತಿರುವಾಗ 'ಇದು ಯಾವ ಬಗೆಯ ಕೃತಿ?' ಎಂಬ ಪ್ರಶ್ನೆಯೂ ಪದೇ ಪದೇ ಮೂಡುತ್ತದೆ. ಇದನ್ನು ಶುದ್ಧ ಜಾನಪದ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿ ಎನ್ನುವಂತಿಲ್ಲ. ಈ ಕಲೆಗೆ ಸಂಬಂಧಿಸಿದ ಅನೇಕ ಮಾಹಿತಿಗಳು ಇಲ್ಲಿವೆ. ಆದರೆ ಅವು ಕಲಾವಿದರ ಅನುಭವ ನಿರೂಪಣೆಗೆ ಪೂರಕವಾಗಿ ಅಲ್ಲಲ್ಲಿ ಚೆಲ್ಲಿಕೊಂಡು ಬಂದಿವೆಯೇ ವಿನಃ ವ್ಯವಸ್ಥಿತವಾಗಿ ಒಂದೆಡೆ ಬಂದಿಲ್ಲ. ಈ ಕಲೆಯ ವಿಶ್ಲೇಷಣೆಯೂ ಈ ಕೃತಿಯ ಗುರಿಯಲ್ಲ. ಇಲ್ಲಿ ಮುಖ್ಯವಾಗಿರುವುದು ಕಲೆಗಾಗಿ ಮೀಸಲಿಟ್ಟ ಬದುಕಿನ ಕಥೆ/ಅನುಭವಗಳು. ಸಂಶೋಧಕಿ ಪ್ರಾರಂಭದಲ್ಲೇ ಈ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಈ ವೃತ್ತಿಗಾಯಕಿಯರು ಸಮಾಜಕ್ಕೆ ಏನು ಕೊಟ್ಟಿದ್ದಾರೆ, ಏನು ಪಡೆದಿದ್ದಾರೆ, ಸಮಾಜ ಅವರನ್ನು ಹೇಗೆ ನಡೆಸಿಕೊಂಡಿದೆ ಎಂಬುದರ ಮಾಹಿತಿ ಸಂಗ್ರಹಿಸಿ ಅದನ್ನು ವಿಶ್ಲೇಷಿಸುವುದು, ಅದರಿಂದ ವ್ಯಕ್ತವಾಗುವ ಸಾಮಾಜಿಕ ಧೋರಣೆಗಳನ್ನು ಬಹಿರಂಗಪಡಿಸುವುದು ಇಲ್ಲಿ ಶೋಧಕಿಯ ಗುರಿ. ತೀರಾ ಅಲಕ್ಷಿತವಾದ ಈ ಕೋನದಲ್ಲಿ ಶೈಲಜಾ ಯಶಸ್ಸನ್ನೇ ಸಾಧಿಸಿದ್ದಾರೆ. ಇದು – 'ಜನಪದ ಕಲೆಯೊಂದರ ಹಿನ್ನೆಲೆಯ ಬದುಕಿನ ಸಾಮಾಜಿಕ ಅಧ್ಯಯನ'.

ಸರಿ – 'ಇಂಥ ಅಧ್ಯಯನದಿಂದ ಏನು ಪ್ರಯೋಜನ?' ಎಂದೂ ಕೇಳಬಹುದು. ಇದಕ್ಕೆ ನೇರ ಉತ್ತರ ಸುಲಭವಲ್ಲ. ಈ ಕೃತಿ 'ಹರದೇಶಿ–ನಾಗೇಶಿ' ಕಲೆಯನ್ನು ಹೇಗೆ ವ್ಯವಸ್ಥಿತಗೊಳಿಸಬೇಕೆಂಬ, ಪುನರುಜ್ಜೀವಿಸಬೇಕೆಂಬ ಯಾವ ಬುದ್ಧಿವಾದವನ್ನು ಹೇಳುವುದಿಲ್ಲ. ಆದರೆ ಆ ಗಾಯಕಿಯರ ಸಂಕಟಗಳು ಇಲ್ಲಿ ನಿರೂಪಿತವಾಗಿವುದನ್ನೂ ಓದುವಾಗ ಅಲ್ಲಲ್ಲಿಯಾದರೂ ನಮ್ಮ ಕಣ್ಣಂಚಿನಲ್ಲಿ ಹನಿ–ಗೂಡದಿದ್ದರೆ ನಮ್ಮ ಮನುಷ್ಯತ್ವದ ಸಂವೇದನೆಯೇ ಸತ್ತಿದೆ ಎನ್ನಬೇಕಾಗುತ್ತದೆ. ಅಂಥ ಪರಿಸರದಲ್ಲಿರದ, ಆ ಕಲಾವಿದೆಯರನ್ನು ಅಂಥ ದೃಷ್ಟಿಯಿಂದ ನೋಡದೆ ಅವರ ಹಾಡಿಕೆಯನ್ನಷ್ಟೇ ಕೇಳಿ ಸಂತೋಷ ಪಡುವ ಜನಕ್ಕೆ ಅವರ ಈ ಸಂಕಟಗಳು ಹೊಸದೊಂದು ಲೋಕವನ್ನೇ–ನರಕದ ಲೋಕವನ್ನೇ, ತೋರಿಸುತ್ತವೆ. ಆ ನಿಷ್ಪಾಪಿ ಜೀವಗಳ ಬಗ್ಗೆ ಅನುಕಂಪೆ ಮೂಡುತ್ತದೆ. ಈ ಹಾಡಿಕೆಯ ಸಂಪ್ರದಾಯ ಚಾಲ್ತಿಯಲ್ಲಿರುವ ಕಡೆಯ ವಿದ್ಯಾವಂತ ಜನರಾದರೂ ಇದನ್ನು ಓದಿ ಸಂಕಟ ಪಟ್ಟುಕೊಂಡು ಆ ಕಾರ್ಯಕ್ರಮಗಳ ವ್ಯವಸ್ಥಾಪಕರುಗಳ ಮೇಲೆ ಒಂದು ಕಣ್ಗಾವಲಿಟ್ಟು ಆ ಗಾಯಕಿಯರ ರಕ್ಷಕರಂತೆ ಕೆಲಸ ಮಾಡಿದರೆ, ಈ ಕೃತಿ ರಚನೆಗಾಗಿ ಪಟ್ಟ ಪರಿಶ್ರಮ, ಪ್ರಕಟಿಸಲು ವಿಶ್ವವಿದ್ಯಾಲಯ ಮಾಡಿದ ವೆಚ್ಚ ಸಾರ್ಥಕವಾದೀತು. ಈ

ಮಾದರಿಯ ಅಧ್ಯಯನಗಳು ಇತರ ಜಾನಪದ ಕಲೆಗಳಿಗೆ ಸಂಬಂಧಿಸಿದಂತೆ ನಡೆಯಲೂ ಈ ಕೃತಿ ಪ್ರೇರಣೆಯಾಗಬಹುದು.

ಎಸ್.ಪಿ. ಪದ್ಮಪ್ರಸಾದ್

ಶಕ್ತಿದೇವತೆಗಳ ಸಾಂಸ್ಕೃತಿಕ ಅಧ್ಯಯನ – ಅವಲೋಕನ

*** ತುಮಕೂರು ಜಿಲ್ಲೆಯ ಶಕ್ತಿ ದೇವತೆಗಳು:** ಲೇ: ಕಂಟಲಗೆರೆ ಸಣ್ಣಹೊನ್ನಯ್ಯ, ಪ್ರ: ತುಮಕೂರು ವಿಶ್ವವಿದ್ಯಾನಿಲಯ, ಪು. ೧೬+೨೦೦; ಬೆಲೆ ರೂ. ೮೦/–

ಕಂಟಲಗೆರೆ ಸಣ್ಣಹೊನ್ನಯ್ಯನವರ "ತುಮಕೂರು ಜಿಲ್ಲೆಯ ಶಕ್ತಿ ದೇವತೆಗಳು ಒಂದು ಸಾಂಸ್ಕೃತಿಕ ಅಧ್ಯಯನ" ಕೃತಿಯು ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ೨೦೧೧ರಲ್ಲಿ ಪ್ರಕಟಗೊಂಡ ಇವರ ಏಳು ಪುಸ್ತಕಗಳಲ್ಲಿ ಒಂದಾಗಿದೆ. ಈ ಕೃತಿಯು ಸಂಶೋಧನಾತ್ಮಕ ಹಿನ್ನೆಲೆಯಲ್ಲಿ ರಚನೆಗೊಂಡಿದೆ. ಸೂಕ್ತವಾದ ಅಧ್ಯಾಯಗಳನ್ನು ವಿಭಾಗಿಸಿಕೊಂಡು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕ್ಷೇತ್ರಕಾರ್ಯದೊಂದೊಗೆ ಆಮೂಲಾಗ್ರವಾಗಿ ಸಂಗ್ರಹಿಸಿ ಅಗತ್ಯಕ್ಕನುಗುಣವಾಗಿ ಪೂರಕ ಆಕರಗಳೊಂದಿಗೆ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಕೃತಿಯ ಕೊನೆಯ ಭಾಗದಲ್ಲಿ ಛಾಯಾ ಚಿತ್ರಗಳನ್ನೂ ಮತ್ತು ಪರಾಮರ್ಶನ ಗ್ರಂಥಗಳನ್ನು ನೀಡಿದ್ದರೆ ಕೃತಿಯ ಒಟ್ಟಂದ ಹೆಚ್ಚುತ್ತಿತ್ತು. ಈ ಕೊರತೆ ಎದ್ದುಕಾಣುತ್ತದೆ.

ಈ ಕೃತಿಯಲ್ಲಿ ಒಟ್ಟು ಏಳು ಅಧ್ಯಾಯಗಳನ್ನು ಅಧ್ಯಯನದ ಉದ್ದೇಶದಿಂದ ನಿರ್ಮಾಣ ಮಾಡಿಕೊಂಡಿದ್ದು, ಪೀಠಿಕೆ ಭಾಗದಲ್ಲಿ ಶಕ್ತಿದೇವತೆಯಾಗಿ ಯಾವುದನ್ನು ಸ್ವೀಕರಿಸುತ್ತೇವೆ, ಸಮುದಾಯ ಅದಕ್ಕಾಗಿ ಭಕ್ತಿ ಪೂರ್ವಕವಾಗಿ ಹೇಗೆ ನಡೆದು ಕೊಳ್ಳುತ್ತದೆ, ರೂಢಿಯಲ್ಲಿರುವ ಶಕ್ತಿದೇವತೆಗಳಾವುವೆಂಬುದನ್ನು ತಿಳಿಸಿದ್ದಾರೆ. ಶಕ್ತಿದೇವತೆಯನ್ನು ಬಹುಮುಖಿಯಾಗಿ ಜನಪದದಲ್ಲಿ ರೂಢಿಸಿಕೊಂಡು ಬದುಕಿನ ಭಾಗವಾಗಿಸಿ ಕೊಂಡಿದ್ದಾರೆಂಬುದನ್ನು ಹೇಳುತ್ತಾ ಅಂತರ ಶಿಸ್ತೀಯವಾಗಿ ಹಲವು ಆಯಾಮದ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳುತ್ತೇನೆಂದು ಸ್ಪಷ್ಟಪಡಿಸಿದ್ದಾರೆ.

ಶಕ್ತಿದೇವತೆಯ ಅಧ್ಯಯನವನ್ನು ತುಮಕೂರು ಜಿಲ್ಲೆಗೆ ಮಾತ್ರ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡು ಇವುಗಳ ಉಗಮ ಮತ್ತು ವಿಕಾಸ ಹೇಗಾಯಿತು ? ಏಕಾಯಿತೆಂಬ ಹಲವು ಪ್ರಶ್ನೆಗಳೊಂದಿಗೆ ಉತ್ತರವನ್ನೂ ಕಂಡುಕೊಂಡಿದ್ದಾರೆ. ಶಕ್ತಿದೇವತೆಗಳು ದ್ರಾವಿಡ ಸಂಸ್ಕೃತಿಯಲ್ಲಿ ಮಾತ್ರ ಕಂಡುಬಂದಿರುವ ಬಗೆಗೆ ಪರಂಪರೆಯ ಅವಲೋಕನದೊಂದಿಗೆ ಭಾರತದ ನೆಲಮೂಲ ಸಂಸ್ಕೃತಿಯ ಒಡೆಯರಾಗಿದ್ದ ದ್ರಾವಿಡರ ಸಂಕ್ಷಿಪ್ತ ಚಿತ್ರಣ ಚಿತ್ರಿಸಿದ್ದಾರೆ. ಮನುಷ್ಯಕುಲಕ್ಕೆ ಪೂರಕವಾಗಿರುವ ಸೃಷ್ಟಿಯ ಭಾಗಗಳನ್ನೂ

ಬಳಸಿಕೊಂಡು ಬದುಕುವುದು ಕಾಣುತ್ತೇವೆ. ಹಾಗೆಯೇ ತಾಯ್ತನದ ಸ್ವರೂಪವಿರುವ ಶಕ್ತಿಗಳನ್ನು ಮತ್ತು ಒಮ್ಮೊಮ್ಮೆ ಉಗ್ರ ಸ್ವರೂಪಿಯಾಗಿ ನಿಲ್ಲುವ ಶಕ್ತಿಗಳನ್ನು ಗೌರವ ಮತ್ತು ಭಯದಿಂದ ಮೊರೆ ಹೋಗಿರುವುದನ್ನು ಲೇಖಕರು ಗುರುತಿಸಿದ್ದಾರೆ. ಅದರಲ್ಲಿ ಭೂಮಿಯನ್ನು ಮತ್ತು ಹೆಣ್ಣು ದೇವತೆಗಳನ್ನು ಆರಾಧನೆ ಮಾಡಿಕೊಂಡೇ ಬಂದಿರುವುದನ್ನೂ ಭಾರತೀಯ ಪರಂಪರೆಯಲ್ಲಿ ಧಾರ್ಮಿಕ ಪೂಜೆಗಳು ಯಾವ್ಯಾವ ಆಯಾಮಗಳಲ್ಲಿ ನಡೆದಿದೆಂಬುದನ್ನು ಚರ್ಚಿಸಿದ್ದಾರೆ.

'ಆರ್ಯ ಸಂಸ್ಕೃತಿಯಲ್ಲಿ ಶಕ್ತಿದೇವತಾ ಪರಿಕಲ್ಪನೆ' ಅಧ್ಯಾಯದಲ್ಲಿ ಸಿಂಧೂ ನಾಗರಿಕತೆಯಲ್ಲಿದ್ದ ದ್ರಾವಿಡರ ಮೇಲೆ ನಡೆದ ದಾಳಿಯಿಂದ ಸಂಸ್ಕೃತೀಕರಣಗೊಂಡ ರೀತಿ, ಆರ್ಯರ ಪ್ರಭಾವ ದ್ರಾವಿಡರಲ್ಲಿ ಹೇಗಾಯಿತು, ಶಕ್ತಿದೇವತೆಗಳು ಕರ್ನಾಟಕದಲ್ಲಿ ಯಾವ್ಯಾವ ಸ್ವರೂಪದಲ್ಲಿ ಹುಟ್ಟಿಕೊಂಡವು ಅವುಗಳಲ್ಲಿ ನೆಲಸಂಸ್ಕೃತಿಗೆ ಹೇಗೆ ಒಗ್ಗಿಕೊಂಡಿವೆಂಬುದನ್ನು ತಿಳಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದ ತರುವಾಯ ಇಲ್ಲಿನ ದೇವತೆಗಳನ್ನು ಯಾವ್ಯಾವ ವರ್ಗದ ಮುಖಾಂತರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬೇಕೆಂಬ ನಿಲುವಿನಿಂದ ಕರ್ನಾಟಕದಲ್ಲಿ ಇದುವರೆಗೂ ವರ್ಗೀಕರಣಗಳು ಎಷ್ಟು ನಡೆದಿವೆಂಬುದನ್ನು ತಿಳಿಸುತ್ತಾ ತಮಗೆ ಒಗ್ಗುವಂತೆ ನೆಲಮೂಲ ಸಂಸ್ಕೃತಿಯ ಹೆಣ್ಣು ದೇವತೆಗಳು, ವಲಸೆ ಮೂಲ ಸಂಸ್ಕೃತಿಯವು, ಮಾನವ ಮೂಲದ ಹೆಣ್ಣು ದೇವತೆಗಳು, ರೋಗ ಮೂಲದ ದೇವತೆಗಳೆಂದು ವಿಭಾಗಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಈ ಅಂಶಗಳಿಗೆ ಪೂರಕ ವಿಶ್ಲೇಷಣೆಯ ನೀಡಿದ್ದಾರೆ.

ಈ ಕೃತಿಯ ಪ್ರಧಾನ ಅಧ್ಯಾಯವಾಗಿರುವ 'ತುಮಕೂರು ಜಿಲ್ಲೆಯ ಶಕ್ತಿ ದೇವತೆಗಳು' ಎಂಬುದರಲ್ಲಿ ಪೂರ್ಣ–ಐತಿಹ್ಯಗಳು ಪರಿಕಲ್ಪನೆಯನ್ನಿಟ್ಟುಕೊಂಡು ವಿಶ್ಲೇಷಣೆ ನಡೆಸಿದ್ದಾರೆ. ಇದುವರೆಗೂ ಈ ವಿಷಯಗಳ ಬಗೆಗೆ ಪಾಶ್ಚಾತ್ಯ ಮತ್ತು ಪೌರಾತ್ಯರ ಹೇಳಿಕೆಗಳು ಹೇಗಿವೆಯೆಂಬುದನ್ನು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಮತ್ತೊಂದು ಭಾಗದಲ್ಲಿ ಬಣ್ಣದ ದೇವತೆಗಳು ವಿಷಯದಲ್ಲಿ ಮಾರಮ್ಮ, ಕರಿಯಮ್ಮ ದೇವತೆಗಳನ್ನು ಕೇಂದ್ರೀಕರಿಸಿಕೊಂಡು ಬೇರೆ ಬೇರೆ ಪ್ರದೇಶಗಳಲ್ಲಿ ನಡೆಯುವ ಆಚರಣೆಗಳು, ನಂಬಿಕೆ–ಸಂಪ್ರದಾಯಗಳನ್ನು ಒಳಗೊಂಡು ಭಕ್ತಸಮೂಹ ಆರಾಧಿಸುತ್ತಿವೆಂಬುದನ್ನು ತಿಳಿಸುತ್ತಾರೆ. ಮಾರಮ್ಮನ ಪುರಾಣದಲ್ಲಿ ಹುಟ್ಟಿಕೊಂಡಿರುವ ಪಾಠಾಂತರಗಳ ಬಗೆಗೆ ಹಲವು ವಿದ್ವಾಂಸರ ಅಭಿಪ್ರಾಯದೊಂದಿಗೆ ತಮ್ಮ ಪ್ರದೇಶಗಳಲ್ಲಿ ಸಿಕ್ಕಿರುವ ವಿಷಯಗಳ ಬಗೆಗೆ ಚರ್ಚೆಯನ್ನು ನಡೆಸಿದ್ದಾರೆ.

'ತುಮಕೂರು ಜಿಲ್ಲೆಯಲ್ಲಿನ ಮಾರಮ್ಮನ ಕುರಿತು ಪುರಾಣ' ಅಧ್ಯಾಯದಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿನ ಪಟ್ನ ಗ್ರಾಮದ ಕೆಂಪಮ್ಮ, ತಿಪಟೂರಿನ ತಾಲ್ಲೂಕಿಗೆ ಪೆದ್ದಿಹಳ್ಳಿ

ಗ್ರಾಮದ ಕರಿಯಮ್ಮನ ಪುರಾಣಗಳಲ್ಲಿ ಮಾರಮ್ಮನ ಪುರಾಣದ ಪಾಠಾಂತರವನ್ನು ಗುರುತಿಸಿದ್ದಾರೆ. ಆಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ವೈಶಿಷ್ಟ್ಯ ಪೂರ್ಣವೆನಿಸುವವುಗಳನ್ನು ಇಲ್ಲಿ ನೀಡಿದ್ದಾರೆ. ಸಾಯುವ ಸೋಮ, ಅರ್ಚಕರು, ಗಂಗಾಸ್ನಾನ, ಬ್ರಹ್ಮರಥೋತ್ಸವ, ಮಣೇವು ವಿಷಯಗಳ ಬಗೆಗೆ ಸಮುದಾಯಗಳು ಸಂಸ್ಕೃತೀಕರಣಗೊಂಡ ಕಾಲದಲ್ಲೂ ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದಂತೆ ಉಳಿಸಿಕೊಂಡು ಬಂದಿರುವುದನ್ನು ಸವಿಸ್ತಾರವಾಗಿ ವಿವರಣೆ ನೀಡಿದ್ದಾರೆ.

ಈ ಅಧ್ಯಾಯದಲ್ಲಿ ಮಾರಮ್ಮನ ಪುರಾಣಕ್ಕೆ ಹೆಚ್ಚು ಒತ್ತುನೀಡಿ, ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದ್ದ ರೀತಿಯಲ್ಲೇ ನೀಡಿರುವುದು ಅರ್ಥಪೂರ್ಣವೆನಿಸಿದೆ. ಹಾಗೆಯೇ ಇದು ಯಾರಿಂದ ಸಂಗ್ರಹಿಸಿದ್ದು ಎಂಬುದನ್ನು ನೀಡಿದ್ದರೆ ಕೃತಿಯ ಮೌಲ್ಯ ಹೆಚ್ಚುತ್ತಿತ್ತು. ಈ ಭಾಗವು ಪದ್ಯ ಗದ್ಯ ಭಾಗದಿಂದ ಕೂಡಿದ್ದು, ಸುದೀರ್ಘವಾದ ಪುರಾಣವನ್ನು ಸಮುದಾಯದಲ್ಲಿ ಹೇಗೆ ಗ್ರಹಿಸಿದ್ದಾರೆಂದು ತಿಳಿಯುವದರೊಂದಿಗೆ ಇಲ್ಲಿ ಸಂಗ್ರಹಿಸಿ ನೀಡಿರುವುದು ನಿಜಕ್ಕೂ ಅಮೂಲ್ಯವೆನಿಸುತ್ತದೆ. ಈ ಪುರಾಣಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಅಂಶಗಳನ್ನು ಪಟ್ಟಿಮಾಡುತ್ತಾ ಅಸಾದಿಗಳು ಪುರಾಣದ ಬಗ್ಗೆ ಎಷ್ಟು ಕವಲುಗಳಾಗಿ ತಿಳಿದುಕೊಂಡಿದ್ದಾರೆಂಬುದನ್ನು ತಿಳಿಸುತ್ತಾರೆ.

'ತುಮಕೂರು ಜಿಲ್ಲೆಯ ನೆಲ ಮೂಲ ಸಂಸ್ಕೃತಿಯ ಶಕ್ತಿದೇವತೆಗಳು' ಅನ್ನುವ ಅಧ್ಯಾಯದಲ್ಲಿ ಇಡೀ ಜಿಲ್ಲೆಯಲ್ಲಿರುವ ಹೆಣ್ಣು ದೇವತೆಗಳು ನೆಲಮೂಲ ಸಂಸ್ಕೃತಿಯನ್ನು ಹೇಗೆ ಕಟ್ಟಿಸಿಕೊಡುತ್ತವೆ ಹಾಗೂ ಈ ದೇವತೆಗಳ ಬಗೆಗೆ ಇರುವ ಪುರಾಣ ಐತಿಹ್ಯ, ಆಚರಣೆ, ಸಂಪ್ರದಾಯ, ನಂಬಿಕೆಗಳಲ್ಲಿ ಏಕತಾನತೆಯನ್ನು ಸಾಧಿಸಿಕೊಂಡು ಬಂದಿರುವುದನ್ನು ಲೇಖಕರು ಗುರುತಿಸಿದ್ದಾರೆ. ಒಂದು ಊರಿನಲ್ಲಿ ಮಾರಮ್ಮ / ಕರಿಯಮ್ಮ ದೇವತೆಯ ಉತ್ಸವ ನಡೆಯುತ್ತದೆಂದರೆ ಪ್ರಾರಂಭಿಸುವುದು ಸಾರಿಕ್ಕುವುದು, ಕಂಬ ನೆಡುವುದು ನಂತರ ಕೊನೆಗೆ ವಿಸರ್ಜಿಸುವಿಕೆ ಹೀಗೆ ಎಲ್ಲವೂ ವಿಧಿ-ವಿಧಾನದಿಂದ ಎಲ್ಲಾ ಜಾತಿ ಮತ ಪಂಗಡದವರು ಸೇರಿಕೊಂಡು ಸಂಭ್ರಮದಿಂದ ಪಾಲ್ಗೊಂಡು ದೇವತೆಯ ಪೂಜೆ, ಪುರಸ್ಕಾರ, ಆರಾಧನೆ ನಿವೇದನೆ ಬಲಿ ಎಡೆ ಮಾಡುವುದರೊಂದಿಗೆ ದೇವತೆಯನ್ನು ತೃಪ್ತಿಪಡಿಸುವುದುನ್ನು ಸಮುದಾಯ ತುಂಬ ಭಯ ಭಕ್ತಿಯಿಂದ ನೋಡಿಕೊಳ್ಳುವುದನ್ನು ಚರ್ಚಿಸಿದ್ದಾರೆ.

ಕರಿಯುಮ್ಮ ಕುರಿತ ಪುರಾಣಗಳು ಮೂರು ಸಂಗತಿಯಲ್ಲಿ ತಿಳಿಸುತ್ತಾ ಕರಿಯಮ್ಮ ಉತ್ಸವದಲ್ಲಿ ಜಾಂಡೇವು, ಬಾನ, ಸಿಡಿ, ರಥೋತ್ಸವ, ಮಣೇವು, ಓಕಳಿ, ಅವಭೃತಸ್ನಾನ ಹೀಗೆ ಅಲ್ಲಿನ ಆಚರಣೆಗಳ ವಿವರಣೆಯೊಂದಿಗೆ ಚರ್ಚಿಸಿದ್ದಾರೆ. ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನ ಗ್ರಾಮಗಳಲ್ಲಿ ಕರಿಯಮ್ಮ ದೇವತೆ ಇದ್ದಾಳೆ, ಅಲ್ಲಿ ಯಾವ ರೀತಿ ಕರಿಯಮ್ಮ

ದೇವತೆಯ ಬಗೆಗೆ ಗ್ರಹಿಸಿದ್ದಾರೆ ಮತ್ತು ಅಲ್ಲಿ ನಡೆಯುವ ಆಚರಣೆಗಳೆಂತವು ಎಂಬುದನ್ನು ತಿಳಿಸುತ್ತಾರೆ. ಹಾಗೆಯೇ ದೊಡ್ಡಮ್ಮದೇವಿ ಜಿನ್ನಾರದಮ್ಮ, ಕೊಲ್ಲಾಪುರದಮ್ಮ, ಕೆಂಪಮ್ಮದೇವಿ, ಮಾರಮ್ಮ, ಅಕ್ಕಮಾರಮ್ಮ, ಕುಲಾಲ್ದಮದೇವಿ, ಕಲ್ಲಾಳಮ್ಮ, ಹೊನ್ನಾದೇವಿ, ಕಾಳಗಟ್ಟಮ್ಮ, ಚಾಮುಂಡೇಶ್ವರಿ, ಬಂದಮ್ಮ, ಯಲ್ಲಮ್ಮ, ಸಾಲಮ್ಮ, ಬನಶಂಕರಿ, ಚೌಡೇಶ್ವರಿ ಹೀಗೆ ಹಲವು ಹೆಸರಿನಿಂದ ಕರೆಯುವುದನ್ನು ಶಕ್ತಿ ದೇವತೆಗಳಲ್ಲಿರುವ ವೈಶಿಷ್ಟ್ಯತೆ, ಆಚರಣೆ–ಸಂಪ್ರದಾಯ, ನಂಬಿಕೆಗಳನ್ನೂ ಕೂಲಂಕಷವಾಗಿ ತಿಳಿಸುತ್ತಾರೆ.

ಕಂಟಲಗೆರೆ ಸಣ್ಣ ಹೊನ್ನಯ್ಯನವರ 'ತುಮಕೂರು ಜಿಲ್ಲೆಯ ಶಕ್ತಿದೇವತೆಗಳು' ಕೃತಿಯು ಭಾಗಶಃ ಕ್ಷೇತ್ರಕಾರ್ಯ ಮತ್ತು ಈಗಾಗಲೇ ನಡೆದಿರುವ ಅಧ್ಯಯನಗಳ ಆಕರಗಳೊಂದಿಗೆ ನಿರ್ಮಾಣಗೊಂಡಿದೆ. ಸಂಶೋಧನಾ ನೆಲೆಗಟ್ಟಿನಲ್ಲಿ ಕೃತಿ ರಚನೆಗೊಂಡಿದ್ದರೂ ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡುವಲ್ಲಿ ವಿಫಲವಾಗಿದೆ. ಹಾಗೆಯೇ ಶಕ್ತಿ ದೇವತೆಗಳು ಜಿಲ್ಲೆಯಾದ್ಯಂತ ನೂರಕ್ಕಿಂತ ಹೆಚ್ಚಿದ್ದರೂ ಅವೆಲ್ಲವುಗಳ ವಿವರಣೆ ನೀಡದೆ ಇರುವುದು ಕೃತಿಯ ಕೊರತೆಯೆನಿಸುತ್ತದೆ.

ಕೆ.ವಿ. ಮುದ್ದವೀರಪ್ಪ

ಆಸಾದಿಗಳ ಬದುಕು ಮತ್ತು ಸಂಸ್ಕೃತಿಯ ಸಮೀಕ್ಷೆ

* **ತುಮಕೂರು ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಸ್ಕೃತಿ:** ಲೇ॥ ಕಂಟಲಗೆರೆ ಸಣ್ಣಹೊನ್ನಯ್ಯ: ಪ್ರ: ತುಮಕೂರು ವಿ.ವಿ. ಬೆಲೆ ರೂ. ೮೦/– ೧೬+೨೨೧.

ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಕಟಗೊಂಡಿರುವ ಸಣ್ಣಹೊನ್ನಯ್ಯನವರ ಏಳು ಪುಸ್ತಕಗಳಲ್ಲಿ 'ತುಮಕೂರು ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಸ್ಕೃತಿ' ಒಂದು. ಈ ಕೃತಿಯು ತುಮಕೂರು ಜಿಲ್ಲೆಯ ಆಸಾದಿಗಳ ಸಂಸ್ಕೃತಿಯನ್ನು ಆಮೂಲಾಗ್ರವಾಗಿ ತಿಳಿಸುವ ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಆಸಾದಿಗಳು ಬರೀ ತುಮಕೂರು ಜಿಲ್ಲೆಯಲ್ಲಿ ಮಾತ್ರ ಕಾಣಿಸಿಕೊಳ್ಳದೆ ಇತರೆ ಜಿಲ್ಲೆಗಳಲ್ಲಿದ್ದರೂ, ಹಾಗೆಯೇ ಅವರೆಲ್ಲರೂ ಬೇರೆ ಬೇರೆ ಹೆಸರುಗಳನ್ನು ಹೊಂದಿದ್ದರೂ ಅವುಗಳ ಬಗೆಗೆ ಕೇಂದ್ರೀಕರಿಸದೆ ತುಮಕೂರು ಜಿಲ್ಲೆಯ ಅಸಾದಿಗಳ ಜೀವನ ವೈಶಿಷ್ಟ್ಯವನ್ನು ಕ್ಷೇತ್ರಕಾರ್ಯದ ಮುಖಾಂತರ ಅಧ್ಯಯನ ನಡೆಸಿ, ಕ್ವಚಿತ್ತಾದ ಸಂಶೋಧನೆಯ ದೃಷ್ಟಿಯಿಂದ ಕೃತಿಯನ್ನು ರಚಿಸಿದ್ದಾರೆ.

ಸಣ್ಣ ಹೊನ್ನಯ್ಯನವರು ಈ ಕೃತಿಯನ್ನು ಅಧ್ಯಯನಕ್ಕಾಗಿ ಒಂಬತ್ತು ಅಧ್ಯಾಯಗಳನ್ನಾಗಿ ರೂಪಿಸಿಕೊಂಡು ಸಮುದಾಯದ ಜೀವನ ಪದ್ಧತಿ ಹಾಗೂ ಅವರ ವೈಶಿಷ್ಟ್ಯವಾದ ಚಿಂತನ ವಿಧಾನಗಳನ್ನು ಕ್ರಮವಾಗಿ ತಿಳಿಸುತ್ತಾ ಹೋಗುತ್ತಾರೆ.

ಆಸಾದಿಗಳು ಗ್ರಾಮದೇವತೆಗಳೆಂದು ಕರೆಸಿಕೊಳ್ಳುವ ಹಲವು ದೇವತೆಗಳನ್ನು ಅದರಲ್ಲೂ ಮಾರಮ್ಮನನ್ನು ಹೊಗಳಿ–ತೆಗಳಿ ಪ್ರಸನ್ನಗೊಳಿಸಿ, ಅಲ್ಲಿ ಸೇರಿದ ಸಮಸ್ತ ಭಕ್ತ ಸಮುದಾಯದ ಕೃಪಾದೃಷ್ಟಿಗೆ ಒಳಗಾಗಿರುವ ಆಸಾದಿ ಸಮುದಾಯಗಳ ಜನಪದ ಅಧ್ಯಯನವನ್ನು ಕೈಗೊಂಡಿದ್ದೇನೆಂದು ಮೊದಲ ಅಧ್ಯಾಯದಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಈ ಕೃತಿಯ ಅಧ್ಯಯನಕ್ಕೆ ಕ್ಷೇತ್ರಕಾರ್ಯ ವಿಧಾನ ಅವಲಂಬಿಸಿ, ಇದುವರೆಗೂ ಆಗಿರುವ ಸಂಶೋಧನಾ ಕಾರ್ಯವನ್ನು ಪರಿಗಣಿಸಿಕೊಂಡು ನೂರಾರು ಪ್ರಶ್ನಾವಳಿಗಳೊಂದಿಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ಮಾಡಿದ್ದಾರೆ.

ಅಧ್ಯಾಯ ಎರಡರಲ್ಲಿ ಲೇಖಕರು ಮಾದಿಗ ಸಮುದಾಯದ ಪರಿಚಯ ಮಾಡಿಕೊಡುತ್ತಾ ಪಾರಂಪರಿಕ ಸಂಸ್ಕೃತಿಯ ವಿವರಗಳನ್ನು ಕಟ್ಟಿಕೊಡುತ್ತಾರೆ. ಶಿಷ್ಟ ಸಾಹಿತ್ಯದಲ್ಲಿ ಕವಿಗಳು ಮಾದಿಗ (ದಲಿತ) ರನ್ನು ಹೇಗೆಲ್ಲಾ ಒಳಹೊಕ್ಕು ನೋಡಿದ್ದಾರೆಂಬುದನ್ನು ಚಿತ್ರಿಸುತ್ತಾ ಮಾದಿಗರ ಬೆಡಗುಗಳು, ಒಳಪಂಗಡಗಳು, ಭಾಷೆ, ವೃತ್ತಿ, ಭಾವನೆ ಹೀಗೆ ವಿವಿಧ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಮಾದಿಗರ ಭೌತಿಕ ಬದುಕು ಮತ್ತು ಸಂಸ್ಕೃತಿಯಲ್ಲಿ ಆಹಾರ ಮತ್ತು ಉಡುಗೆ ತೊಡುಗೆ, ಅವರ ನೆಲೆ, ಭಾಷೆ, ಕೌಟುಂಬಿಕ ಚಿತ್ರಗಳು, ವೃತ್ತಿಯಲ್ಲಿನ ವೈವಿಧ್ಯತೆ, ಸಾಮಾಜಿಕ ವ್ಯವಸ್ಥೆಯಲ್ಲಿರುವ ದೋಷಗಳನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಆಸಾದಿಗಳು ಮಾರಮ್ಮನ ಆರಾಧಕರಾಗಿ ಈಕೆಯ ಹೆಸರಿನಲ್ಲಿ ದೀಕ್ಷೆಯನ್ನು ಪಡೆದು ಹೊಗಳುವ, ತೆಗಳುವುದರೊಂದಿಗೆ ಅಸಮಾನ್ಯವಾದ ಅಸಾಧ್ಯವಾದ ಅಸಾದಿಯಾಗಿದ್ದಾರೆ. ಆಸಾದಿಯ ಪದದ ನಿಷ್ಪತ್ತಿ ತಿಳಿಸುತ್ತಾ, ಇದುವರೆಗೂ ವಿದ್ವಾಂಸರು ನೀಡಿರುವ ವಿವರಣೆಗಳನ್ನು ನೀಡಿದ್ದಾರೆ. ಅಸಾದಿಯಾಗಿ ಆತನ ಕೆಲಸ ಕಾರ್ಯಗಳೇನು? ಮಾರಿದೇವತೆಯನ್ನೇ ಏಕೆ ಪೂಜಿಸುತ್ತಾರೆ, ಮಾರಮ್ಮನ ಪೂಜೆಯ ಸಂದರ್ಭದಲ್ಲಿ ಹಾಡುವ ಪುರಾಣಗಳನ್ನು ಏಕೆ ಹಾಡುತ್ತಾರೆಂಬುದನ್ನು ಲೇಖಕರು ತಿಳಿಸುತ್ತಾರೆ. ಆಸಾದಿ ದೀಕ್ಷೆ ಪಡೆದ ತರುವಾಯ ಕೆಲವು ಕಟ್ಟು ನಿಟ್ಟುಗಳ ಹಿನ್ನೆಲೆಯಲ್ಲಿ ಇರಬೇಕಾಗುತ್ತದೆ. ಅವನ ವಾದ್ಯ, ಊಟ, ಉಡಿಗೆ–ತೊಡಿಗೆಯ ಬಗೆಗೂ ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ.

ಆಸಾದಿಗಳ ಸಾಮಾಜಿಕ ನೆಲೆಯನ್ನು ವಿವರಿಸುವಾಗ ಲೇಖಕರು ತುಮಕೂರು ಜಿಲ್ಲೆಯಲ್ಲಿರುವ ಆಸಾದಿಗಳ ಬಗೆಗೆ ಹೇಳುವುದಕ್ಕಿಂತ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹೊಸದುರ್ಗದ ಭಾಗದಲ್ಲಿ ಜೀವನ ನಡೆಸುವವರ ಅಂಕಿ ಅಂಶಗಳೊಂದಿಗೆ ನೀಡುತ್ತಾರೆ. ಆದಿಕರ್ನಾಟಕ ಮತ್ತು ಇತರೆ ಜನಾಂಗದವರೊಂದಿಗೆ ಇರುವ ಸಂಬಂಧವನ್ನು ತಿಳಿಸುತ್ತಾ ಆಧುನಿಕೀಕರಣದಲ್ಲಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಹೇಗೆ ಪ್ರಬುದ್ಧತೆಯ ಕಡೆಗೆ ಹೋಗುತ್ತಿದ್ದಾರೆಂಬುದನ್ನು ತಿಳಿಸಿದ್ದಾರೆ.

ಆಸಾದಿಗಳ ಸಂಪ್ರದಾಯ ಮತ್ತು ನಂಬಿಕೆಗಳನ್ನು ಹೇಳುವಾಗ ಜನನ-ನಾಮಕರಣ-ಋತುಶಾಂತಿ-ಮದುವೆ-ಮುಟ್ಟು ವಿಧಿ-ನಿಷಿದ್ಧಗಳು ಹೇಗೆ ಹಂತ ಹಂತವಾಗಿ ಒಂದರ ಮೇಲೊಂದರಂತೆ ಸಂಪ್ರದಾಯಗಳು ಈ ಸಮುದಾಯದಲ್ಲಿ ನಡೆಯುವುದನ್ನೂ ಸಂಕ್ಷಿಪ್ತ ವಿವರಣೆಯೊಂದಿಗೆ ತಿಳಿಸಿದ್ದಾರೆ. ದೇವರೋತ್ಸವಗಳಲ್ಲಿ ಸಿಡಿ-ಬಾಯಿಬೀಗ-ಬೇವಿನ ಸೀರೆ-ಆರತಿ-ಮಂಡೆ ತೆಗೆಯುವುದು, ಬಲಿ ಹರಕೆಗಳು ಮುಡಿ ಬಿಡುವುದು-ಮೀಸಲು-ಎಡೆಹಾಕುವುದನ್ನು ಹೇಗೆಲ್ಲಾ ವಿಧಿವತ್ತಾಗಿ ನೆರವೇರಿಸುತ್ತಾರೆಂಬುದನ್ನು ತಿಳಿಸಿದ್ದಾರೆ. ಇವರ ಸಂಸ್ಕೃತಿಯ ವಿಶಿಷ್ಟ ಆವರಣ ಇಲ್ಲಿ ತೆರೆದುಕೊಳ್ಳುವುದನ್ನು ತಿಳಿಯಬಹುದು. 'ಆಸಾದಿಗಳು – ಧಾರ್ಮಿಕ ನೆಲೆ' ಅಧ್ಯಾಯ ವಿಶಿಷ್ಟವಾದುದು. ಇವರು ಆರಾಧಿಸುವ ದೈವ ಯಾರು, ಆಚರಿಸುವ ಆಚರಣೆಗಳು ಯಾವುವು, ಹಬ್ಬ-ಹರಿದಿನಗಳಾವುವು, ಮಾರಿಹಬ್ಬದಲ್ಲಿ ಉತ್ಸವಗಳನ್ನು ನೆರವೇರಿಸುವಾಗ ಯಾವ್ಯಾವ ಶಾಸ್ತ್ರಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ ಎಂಬುದನ್ನು ತಿಳಿಸುತ್ತಾ ಜಲದಿಶಾಸ್ತ್ರ, ಹೊಳೆಮರಿ, ಬಾನುಗುರಿ, ಪಟ್ಟದಕೋಣ, ಆರತಿ ಬರುವುದು, ಮಾದಿಗರ ಪಟ್ಟದ ಕೋಣ, ಪೋತಲರಾಜ, ಘಟೆ, ಚರಗ ಹಾಕುವುದು ಹೀಗೆ ಒಂದೊಂದಾಗಿ ನಡೆಯುವ ಕ್ರಿಯೆಗಳನ್ನು ತಿಳಿಸುತ್ತಾ ಹೋಗುತ್ತಾರೆ.

ಸಾಂಸ್ಕೃತಿಕ ಮತ್ತು ಕಲಾತ್ಮಕ ನೆಲೆ ಅಧ್ಯಾಯವು ನೂರು ಪುಟವನ್ನು ವ್ಯಾಪಿಸಿದೆ. ಆಸಾದಿಗಳು ಹೇಳುವ ಮಾರಿಕಥೆಯಲ್ಲಿ ತಮ್ಮ ಹಿನ್ನೆಲೆ, ಮಾರಿ ಉತ್ಸವದಲ್ಲಿ ತಮ್ಮ ಪಾತ್ರ, ತಾವು ಹೇಗೆ ಸೃಷ್ಟಿಗೊಂಡೆವು ಎನ್ನುವ ವಿಶೇಷ ವಿಚಾರ ತಿಳಿಸುತ್ತಾರೆ. ಗ್ರಾಮದೇವತೆಯ ಕಥೆ ಹೇಳುವಾಗ ಅಸಾದಿಗಳು ಅಮ್ಮನ ಶಕ್ತಿಯಲ್ಲಿ ಎಂತಹ ಮಹತ್ವವಿದೆ, ಅಮ್ಮನಿಂದಾಗುವ ಒಳಿತೇನು, ಸಮುದಾಯಗಳಿಗೆ ಅಮ್ಮನು ಎಲ್ಲಾ ತೊಡಕುಗಳನ್ನೂ ನಿವಾರಣೆ ಮಾಡುವುದರೊಂದಿಗೆ ಮೇಲ್ಜಾತಿಯ ಹೆಣ್ಣನ್ನು ಮದುವೆಯಾಗುವದರೊಂದಿಗೆ ತಾವು ಜಾತಿಯರಲ್ಲಿ ಕನಿಷ್ಠರಲ್ಲವೆಂದು ಹೇಳುವ ಕಥೆ ಸೊಗಸಾಗಿದೆ. ಗದ್ಯದ ಜೊತೆಗೆ ಅಲ್ಲಲ್ಲಿ ಪದ್ಯದ ಸಮ್ಮಿಲನದೊಂದಿಗೆ ಕಥನ ಸೊಗಸಾಗಿ ಮೂಡಿದೆ. ಇಂತಹ ಸುದೀರ್ಘವಾದ ಕಥನವನ್ನು ಹೇಳಿದವರ ವಿವರ ನೀಡಿರುವುದು ಪ್ರಮುಖ್ಯವಾಗಿದೆ. ಭಿನ್ನ ರೀತಿಯಲ್ಲಿ ವ್ಯಕ್ತವಾಗಿರುವ ಮಾರಿಕತೆಯನ್ನೂ ಲೇಖಕರು ಇಲ್ಲಿ ಬಳಸಿಕೊಂಡು ಪುರಾಣಗಳ ವೈಶಿಷ್ಟ್ಯತೆಯನ್ನೂ, ಸಾದೃಶ್ಯದ ಅಂಶಗಳಾವುವು, ಸಾಮ್ಯತೆ-ವೈರಾಗ್ಯದ ಅಂಶಗಳನ್ನೂ ಸಿದ್ಧಲಿಂಗಯ್ಯ, ಓ. ನಾಗರಾಜು, ವಡ್ಡಗೆರೆ ನಾಗರಾಜಯ್ಯರವರ ಕತೆಗಳನ್ನೂ ಇಟ್ಟುಕೊಂಡು ವಿಶ್ಲೇಷಣೆಯನ್ನು ಮಾಡುತ್ತಾರೆ. ದಲಿತರಲ್ಲಿ ಮೇಲ್ವರ್ಗದಲ್ಲಿ ಸಮಾನತೆ ಸಾಧಿಸುವ ವಿಚಾರವು ಒಂದೆಡೆ ವ್ಯಕ್ತವಾಗುವುದನ್ನು ಗ್ರಹಿಸಿಕೊಳ್ಳಬಹುದು.

ಆಸಾದಿಗಳು ರೂಢಿಸಿಕೊಂಡು ಬಂದಿರುವ ಕಾವ್ಯ, ಹಾಡುವಿಕೆ, ಅದರಲ್ಲಿ ಹಿಮ್ಮೇಳ ಮುಮ್ಮೇಳಗಳು ಅರ್ಥವತ್ತಾಗಿ ವ್ಯಕ್ತಪಡಿಸಿರುವುದನ್ನು ಇಲ್ಲಿ ಚರ್ಚಿಸಿದ್ದಾರೆ. ಬಹುಪಾಲು

ಜಾನಪದ ಕಾವ್ಯಗಳು ಇದುವರೆಗೂ ಉಳಿದುಕೊಂಡಿರುವುದು ದಲಿತ ಸಮುದಾಯಗಳಲ್ಲಿ ಅನ್ನುವುದು ಈಗಾಗಲೇ ಸ್ಪಷ್ಟವಾಗಿದೆ. ಇಲ್ಲಿ ಸಂಗ್ರಹಿಸಿ ಕೊಟ್ಟಿರುವ ಪದಗಳು ಬಹುಪಾಲು ಆಸಾದಿಗಳು ಹಾಡಿರುವುದಾಗಿದೆ. ಅದರಲ್ಲಿ ಸ್ತುತಿ ಪದಗಳು, ಹೊಳೆಪೂಜೆಯ ಸಂದರ್ಭದ ಹಾಡುಗಳು, ಕೊಂಡಾಟದ ಪದಗಳು, ಭಂಡಪದಗಳು ಹೀಗೆ ಪ್ರಚಲಿತವಾಗಿರುವ ಪದಗಳು ಅಸಾದಿಗಳ ಬದುಕಿನುದ್ದಕ್ಕೂ ತಮ್ಮ ಜೀವನದಲ್ಲಿ ಹೇಗೆ ಭಾಗವಾಗಿವೆ ಎಂಬುದನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ.

ಕಂಟಲಗೆರೆ ಸಣ್ಣಹೊನ್ನಯ್ಯನವರ ತುಮಕೂರು ಜಿಲ್ಲೆಯ ಅಸಾದಿಗಳ ಬದುಕು ಮತ್ತು ಸಂಸ್ಕೃತಿ ಕೃತಿಯು ಕೆಲವು ಅಂಶಗಳಲ್ಲಿ ಹೇಳುವುದನ್ನೂ ಹೇಳದೆ ಗೌಣವಾಗಿಸಿರುವುದು, ಈ ಕೃತಿಗೆ ಬೇಡವಾದ್ದನ್ನು ಸುದೀರ್ಘವಾಗಿ ಹೇಳಿರುವುದರಿಂದ ಕೃತಿಯ ಹೆಚ್ಚುಗಾರಿಕೆ ಇಲ್ಲವಾಗುತ್ತದೆ. ತುಮಕೂರು ಜಿಲ್ಲೆಯ ಅಂಶಗಳನ್ನು ಹೆಚ್ಚುಪಾಲು ಕಡೆಗಣಿಸಿದಂತೆ ಕಾಣುತ್ತದೆ. ತುಮಕೂರು ಜಿಲ್ಲೆಯ ಆಸಾದಿಗಳ ಬದುಕಿನ ವಿಚಾರಕ್ಕಿಂತ ಚಿತ್ರದುರ್ಗ ಜಿಲ್ಲೆಯ ಅಸಾದಿಗಳ ಬದುಕಿನ ಸಂಸ್ಕೃತಿ ವ್ಯಕ್ತವಾಗುತ್ತದೆ.

ಈ ಕೃತಿಯು ಸಂಶೋಧನಾ ನೆಲೆಗಟ್ಟಿನಲ್ಲಿ ನಿರ್ಮಾಣಗೊಂಡಿದೆ ಎಂಬ ಅನಿಸಿಕೆ ಮೂಡಿದರೂ ಕೃತಿಯ ಅಂತ್ಯದ ಹೊತ್ತಿಗೆ ನಿರಾಸೆ ಮೂಡಿಸುತ್ತದೆ. ತುಮಕೂರು ಜಿಲ್ಲೆಯ ಆಸಾದಿಗಳ ಸಂಸ್ಕೃತಿಯನ್ನು ಕಟ್ಟಿಕೊಡುವ ಮತ್ತು ಉತ್ತಮವಾದ ಕೃತಿಯಾಗುವಲ್ಲಿ ವಿಫಲಗೊಂಡಿದೆ. ಶಕ್ತಿದೇವತೆಯಾಗಿರುವ ಮಾರಮ್ಮನನ್ನು ಬೇರೆ ಬೇರೆ ಹೆಸರಿನಿಂದ ಕರೆಯಿಸಿಕೊಳ್ಳುವುದನ್ನೂ ಹೇಳುತ್ತಾ ಈ ದೇವತೆಯ ಬಗ್ಗೆ ಆಸಾದಿಗಳು ಪ್ರೇಮ, ವಿರೋಧ, ಸಿಟ್ಟು ವ್ಯಕ್ತಪಡಿಸುತ್ತಾ ಆಕೆಯನ್ನು ಮೆಚ್ಚಿಸುವುದನ್ನು ಇಲ್ಲಿ ತಿಳಿಸಿರುವುದರೊಂದಿಗೆ ಅಸಾದಿಗಳ ಬದುಕಿನ ಆರ್ದ್ರತೆ ಸವಿಸ್ತಾರವಾಗಿ ತಿಳಿಸಿದ್ದಾರೆ.

ಮುದ್ದವೀರಪ್ಪ ಕೆ.ವಿ.

ಭೂತಗಳ ಪರಿಚಯ:

* **ಕೃತಿ ತುಳುನಾಡಿನ ಅಪೂರ್ವ ಭೂತಗಳು:** ಪ್ರ: ಮಾತೃಶ್ರೀ ಪ್ರಕಾಶನ, ನಂ.೫, 'ನಂದನತೋಟ' ಮನೆ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯರಸ್ತೆ, ಬೆಂಗಳೂರು–೫೬.

ನೂರಾಹತ್ತು ಪುಟಗಳನ್ನೊಳಗೊಂಡ ಲಕ್ಷ್ಮೀ ಜಿ. ಪ್ರಸಾದರ ಕೃತಿ 'ತುಳುನಾಡಿನ ಅಪೂರ್ವ ಭೂತಗಳು' ಒಂದು ಅಪೂರ್ವ ಕೃತಿಯಾಗಿದೆ. ಭೂತ, ದೆವ್ವ ಎಂದಾಕ್ಷಣ ಸಾಮಾನ್ಯವಾಗಿ ದುಷ್ಟಶಕ್ತಿಗಳು ಎಂದು ಭಯಭೀತರಾಗುತ್ತೇವೆ. ಆದರೆ ತುಳುನಾಡಿನಲ್ಲಿ ಆರಾಧಿಸಲ್ಪಡುತ್ತಿರುವ ಭೂತಗಳು ಕೆಟ್ಟದುಷ್ಟ ಶಕ್ತಿಗಳಲ್ಲ. ಇವು ಶಿಷ್ಟರಕ್ಷಕ ದೈವಾಂಶ ಶಕ್ತಿ ಎಂದು ನೂರಾರು ಭೂತಗಳನ್ನು ಹೆಸರಿಸಿ ಲೇಖಕಿ ವಿವರಿಸಿದ್ದಾರೆ. ತುಳುನಾಡಿನ

ಭವ್ಯದಿವ್ಯ ಪ್ರಧಾನ ಸಂಸ್ಕೃತಿಯೆಂದರೆ ಭೂತಾರಾಧನೆ. ತುಳುನಾಡಿನ ಭೂತಗಳನ್ನು ಪ್ರಧಾನ ದೈವಗಳು ಮತ್ತು ಸೇರಿಗೆ ದೈವಗಳು ಎಂದು ವರ್ಗೀಕರಿಸಿ ವರ್ಣಿಸಲಾಗಿದೆ. 'ಭೂತ'ಪದ ಬಳಕೆಗೆ ಬಂದ ಸಾಧ್ಯತೆಯನ್ನು ತಿಳಿಸುತ್ತಾ ಇದು ಸಂಸ್ಕೃತದ 'ಪೂತಂ' (ಪವಿತ್ರ) ಎಂಬ ಪದ ಕಾಲಾಂತರದಲ್ಲಿ ಪೂತ ಆಗಿ ಈಗ ಭೂತ ಎಂದಾಗಿರಬಹುದೆನ್ನುತ್ತಾರೆ. ಭೂತ ಎಂದರೆ ಹಿಂದೆ ಇದ್ದವರು ಹಿಂದಿನದು ಎಂದೂ ಆಗುತ್ತದೆಯಲ್ಲವೆ? ತ್ಯಾಗ, ಬಲಿದಾನ, ಸಾಹಸ ವೀರತ್ವದಿಂದ ದೈವತ್ವಕ್ಕೇರಿದವರು ಹಿಂದೆ ಇದ್ದರು ಅಂದರೆ ಭೂತಕಾಲದಲ್ಲಿದ್ದರು ಎಂಬುದು ಸಹ ಭೂತ ಪದದ ಸಾಧ್ಯತೆಗಳಲ್ಲೊಂದಾಗಿದೆ.

ಯಾವ ಯಾವ ಕಾರಣಗಳಿಂದಾಗಿ ಆತ್ಮವೊಂದು ದೈವತ್ವ ಪಡೆದು ಅರ್ಥಾತ್ ಭೂತವಾಗಿ ನಿರ್ದಿಷ್ಟ ಜಾಗ ಮತ್ತು ಪ್ರದೇಶದಲ್ಲಿ ನೇಮನಿಷ್ಠೆಯಿಂದ ಪೂಜಿಸಲ್ಪಡುತ್ತದೆ ಎಂಬುದನ್ನು ಲೇಖಕರು ಉದಾಹರಣೆ ಸಮೇತ ಸವಿವರವಾಗಿ ಪ್ರಮಾಣೀಕರಿಸಿದ್ದಾರೆ. ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯ ಸಾಧನೆಗೈದು ಗತಿಸಿದ ಮೇಲೆ ಇವರು ಭೂತಗಳಾಗಿ ಆರಾಧಿಸಲ್ಪಡುತ್ತಾರೆ. ಹಾಗೆಯೇ ಆಯಾ ಜನಾಂಗ ಪ್ರದೇಶಗಳಲ್ಲಿರುವ ನೀತಿ ನಿಯಮ ವಿಧಿನಿಷೇಧಗಳನ್ನು ಮೀರಿದವರೂ ಸಹ ದೈವದ ಕೋಪಕ್ಕೊಳಗಾಗಿ ಮಾಯವಾಗಿ ಕೊನೆಗೆ ಅದೇ ಸೇರಿಗೆಗೆ ಸೇರಿ ದೈವಗಳಾಗಿದ್ದಾರೆ. ಭೂತದೊಂದಿಗೆ ಸುಳ್ಳು ಹೇಳಿದವರು, ಭೂತದ ಎದುರಿಗೆ ಬಂದವರು. ಭೂತಕ್ಕೆಂದು ಇಟ್ಟ ವಸ್ತುವನ್ನು ಮುಟ್ಟಿದವರು ಈ ವರ್ಗಕ್ಕೆ ಸೇರುತ್ತಾರೆ. ಇದಕ್ಕೆ ಹೊರತಾಗಿ ಏನೂ ತಪ್ಪನ್ನು ಮಾಡದವರೂ ಸಹ ದೈವದ ಸೇರಿಗೆಗೆ ಸೇರಿದ್ದನ್ನು ಸಬ್ಬಡ್ತೆರ್, ದಾರು ಭಿರ್ಮಕ್ಕ, ಕುಂಞ ಭೂತದ ಪ್ರಸಂಗಗಳನ್ನು ಉದಾಹರಿಸಿ ಅದರ ಹಿನ್ನೆಲೆಯನ್ನು ತಿಳಿಸುತ್ತಾರೆ. ಜೊತೆಗೆ ಸಾಮೂಹಿಕ ಆರಾಧನೆಯ ಕುರಿತಾಗಿ ಬರೆಯುತ್ತಾ ನೂತ್ತೊಂಜಿ ಮಲೆ ದೈವಗಳು, ಒಂಜಿ ಕುಂದು ನಲ್ಪ ಭೂತೊಳು (೧೦೧ ಮಲೆ ದೈವಗಳು, ೩೯ ಭೂತಗಳು) ನೇಮಗಳ ಕುರಿತಾಗಿ ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ.

ಮಾನವ ಮೂಲ ಭೂತಗಳು ಕೇವಲ ತುಳು ಅಥವಾ ಹಿಂದೂ ಧರ್ಮದವರು ಆಗಿರದೆ ಬೇರೆ ಧರ್ಮ ದೇಶಗಳಿಗೆ ಸೇರಿದವರೂ ಆಗಿದ್ದಾರೆ ಎಂಬುದು ಇಲ್ಲಿ ತಿಳಿಯುತ್ತದೆ. ಪರರಾಷ್ಟ್ರಗಳಿಂದ ಬಂದು ಇಲ್ಲಿ ಮರಣವನ್ನಪ್ಪಿ ದೈವಗಳಾಗಿ ಆರಾಧಿಸಲ್ಪಟ್ಟಿದ್ದಾರೆ ಎಂಬುದಕ್ಕೆ ಅರಬ್ಬೀ ಭೂತ, ಬ್ರಾಂದೀಭೂತ ಮತ್ತು ಚೇನೀ ಭೂತಗಳ ಬಗ್ಗೆ ಓದಬಹುದು. ಮುಸ್ಲಿಂ ಮೂಲದ ಭೂತಗಳಾದ ಬ್ಯಾರ್ದಿ, ಆಲಿಚಾಮುಂಡಿ ಮಾಪುಳಿ–ಮಾಪುಳ್ತಿ ಮುಂತಾದ ಭೂತಗಳ ಬಗ್ಗೆ ಸಾಕಷ್ಟು ಮಾಹಿತಿ ಈ ಕೃತಿಯಲ್ಲಿ ಲಭ್ಯವಿದೆ. ಅಚ್ಚುಬಂಗೇತಿ, ಅಕ್ಕಚ್ಚು ಭೂತ, ಬೊಟ್ಟಿ ಭೂತಗಳು ಜೈನ ಧರ್ಮದ ಮೂಲ ಹೊಂದಿವೆ ಮತ್ತು ತುಳು ನಾಡಿನ ಭಾಷೆ ತುಳು ಆದರೂ ಸಹ ಕನ್ನಡ

ಮೂಲದ ದೈವಗಳಿಗೇನೂ ಬರವಿಲ್ಲ. ಬಚ್ಚನಾಯಕ, ಕರಿಯಣ್ಣ ನಾಯಕ, ಬೈಸುನಾಯಕ, ಕನ್ನಡಬೀರ, ಕನ್ನಡ ಭೂತ, ಜೋಗಿಪುರುಷ ಮುಂತಾದ ಕನ್ನಡ ಮೂಲದ ದೈವಗಳ ಟಿಪ್ಪಣಿ ಸಿಗುತ್ತದೆ. ಸತ್ತ ನಂತರ ಆತ್ಮವು ಇನ್ನಾರದೋ ವ್ಯಕ್ತಿಯ ಮೈಮೇಲೆ ಬರುತ್ತದೆ ಎಂಬ ನಂಬಿಕೆ ತುಳು ಜನರಲ್ಲಿದೆ. ತುಳುವಿನಲ್ಲಿ ಗತಿಸಿದ ಆತ್ಮಗಳನ್ನು ಕುಲೆ ಎಂದು ಕರೆಯುತ್ತಾರೆ. ಕುಲೆಗಳು ದೈವತ್ವಕ್ಕೇರಿ 'ಕುಲೆಭೂತ' ಗಳಾಗಿವೆ ಎನ್ನುತ್ತಾ ಕುಲೆಭೂತೋ, ಕುಲೆಮಾಣಿಗ, ಜಕೆಕುಲೆ, ಗುರುಕಾರ್ನೂರು ಇವುಗಳ ಕುರಿತಾಗಿ ಬಣ್ಣಿಸುತ್ತದೆ. ಪೌರಾಣಿಕ ಮೂಲದ ಚಾಮುಂಡಿ ಪ್ರಧಾನ ದೈವವಾಗಿ ತುಳುನಾಡಿನಲ್ಲೆಡೆ ಪೂಜಿಸಲ್ಪಡುತ್ತಾಳೆಂದು ಸಾಕಷ್ಟು ಮಾಹಿತಿ ಸಿಗುತ್ತದೆ. ಅಗ್ನಿಚಾಮುಂಡಿ, ಕರಿಚಾಮುಂಡಿ, ರುದ್ರಚಾಮುಂಡಿ, ಕೋಮಾರುಚಾಮುಂಡಿ, ಒಲಿಚಾಮುಂಡಿ, ನಾಗಚಾಮುಂಡಿಗಳ ಆರಾಧನೆಯನ್ನು ವಿಶದವಾಗಿ ಲೇಖಕಿ ನಮೂದಿಸಿದ್ದಾರೆ. ಕಚ್ಚೆಭಟ್ಟ, ಭಟ್ರಭೂತ, ಭಟ್ಟಿಭೂತ, ಅಡಕತ್ತಾಯ, ನಾರಳಾತ್ತಾಯ ನಾರಾಯಣ ಮಾನಿಲು, ಚಾಮುಂಡಿ, ಬ್ರಾಣಭೂತ ಮತ್ತು ಮಾಣಿಭೂತ, ಬವನೋ, ಮರ್ಲುಮಾಣಿ, ಅಯ್ಯರಕೋಲ ಮುಂತಾದ ಬ್ರಾಹ್ಮಣ ಮೂಲ ಭೂತಗಳ ವರ್ಣನೆಗಳಿವೆ. ಹಾಗೆಯೇ ರಾಜಕುಮಾರ ದೈವತ್ವಕ್ಕೇರಿದ್ದು, ಧರ್ಮದೈವಗಳು, ತೋಟ ಕಾಯುವ ದೈವಗಳು, ಹಳ್ಳದಿಂದ ಎದ್ದುಬಂದ ದೈವಗಳು, ಪ್ರಧಾನ ದೈವ ಅಬ್ಬೆ ಜಲಾಯ, ಉರವ ಮತ್ತು ಎರುಬಂಟ ದೈವ ಅಜ್ಜಿಭೂತಗಳು ಮುಂತಾದ ಅನೇಕಾನೇಕ ದೈವಗಳ ಕುರಿತಾಗಿ ಲೇಖಕರು ಸಂಶೋಧನೆ ಮಾಡಿ ದಾಖಲಿಸಿದ್ದಾರೆ. ಕೇವಲ ಮನುಷ್ಯರೊಂದೇ ಅಲ್ಲದೆ ಹುಲಿ, ಹಂದಿ, ಸರ್ಪ, ಕೋಣ ಮುಂತಾದ ಪ್ರಾಣಿಗಳು ಸಹ ಭೂತಗಳಾಗಿರುವುದು ಕುತೂಹಲ ಹುಟ್ಟಿಸುತ್ತದೆ.

ತುಳುನಾಡಿನಲ್ಲಿ ಭೂತಾರಾಧನೆ ದೀಪಾವಳಿ ಹಬ್ಬದ ಅಮಾವಾಸ್ಯೆಯಂದು ಭೂತಗಳಿಗೆ ಕೋಲ ನೀಡುವುದರಿಂದ ಶುರುವಾಗುತ್ತದೆಯೆಂದು ಇಲ್ಲಿ ತಿಳಿಯುತ್ತದೆ. ಪ್ರಧಾನ ದೈವದೊಂದಿಗೆ ಆರಾಧನೆ ಪಡೆಯುವ ದೈವಗಳನ್ನು ತುಂಡು ಭೂತ, ಸೇರಿಗೆ ದೈವ, ಉಪದೈವಗಳೆಂದು ಕರೆಯಲ್ಪಡುತ್ತದೆ ಎಂದು ಲೇಖಕಿ ಪ್ರತ್ಯೇಕವಾಗಿ ಭೂತಗಳನ್ನು ವಿಂಗಡಿಸಿ ಯಾವ ಯಾವ ಭೂತ ಯಾವ ದೈವಕ್ಕೆ ಸೇರುತ್ತದೆ ಎಂಬುದನ್ನು ಓದುಗರಿಗೆ ಅರ್ಥವಾಗುವಂತೆ ನೀಡಿದ್ದಾರೆ. ಪ್ರತಿ ದೈವಕ್ಕೂ ಅದರ ಹಿಂದಿನ ಘಟನೆ, ಸಂದರ್ಭ, ಸನ್ನಿವೇಶ, ಹಿನ್ನೆಲೆ, ಕಥಾನಕಗಳನ್ನು ಅಭ್ಯಸಿಸಿ ದಾಖಲಿಸಿರುವುದು ಅವರ ಶ್ರಮ ಮತ್ತು ಚಿಂತನೆಯನ್ನು ತೋರಿಸುತ್ತದೆ. ಜೊತೆಗೆ ಪ್ರತಿ ಭೂತಪಾತ್ರಧಾರಿಗಳ ವೇಷಭೂಷಣ, ಅಲಂಕಾರಗಳ ಸಮಸ್ತ ವಿವರಣೆಗಳನ್ನು ಮನಮುಟ್ಟುವಂತೆ ಅರುಹಿದ್ದಾರೆ. ಆ ಭೂತಗಳ ವಿವರಣೆಗಳನ್ನು ಚಿತ್ರ (ದೃಶ್ಯ) ಸಮೇತ ನೀಡಿದ್ದಾರೆ, ಎಲ್ಲ ಭೂತಗಳ ಫೋಟೋಗಳೂ ಸಹ ಈ ಪುಸ್ತಕದಲ್ಲಿ ಗಮನ ಸೆಳೆಯುತ್ತವೆ. ಭೂತಗಳ ವಿವರಣೆ ಕವಿತೆ, ಪದ್ಯ, ಪಾಡ್ದನದ ರೂಪದಲ್ಲೂ ನೀಡಿರುವುದು ವಿಶೇಷವಾಗಿದೆ. ಅವರು ಮಾಡಿದ ಕ್ಷೇತ್ರಕಾರ್ಯದ

ವಿವರಣೆಯ ಪಟ್ಟಿಯನ್ನು ಮತ್ತು ಆಕರ ಗ್ರಂಥ ಸೂಚಿಯನ್ನು ಕೃತಿಯ ಕೊನೆಯಲ್ಲಿ ನೀಡಿದ್ದಾರೆ. ತುಂಬ ಸಂಕೀರ್ಣ ವಿಷಯದ ಮೇಲೆ ಸಂಶೋಧನೆ ಮತ್ತು ಕ್ಷೇತ್ರಕಾರ್ಯ ನಡೆಸುವುದು ತುಂಬಾ ತ್ರಾಸದಾಯಕವಾಗಿದೆ. ಆದರೂ ಸಹ ಈ ಸಾಹಸಕ್ಕೆ ಮುಂದಾಗಿ ಪ್ರಾಮಾಣಿಕ ಪ್ರಯತ್ನ ಮಾಡಿ ಯಶಸ್ಸನ್ನು ಕಂಡಿರುವುದು ಲೇಖಕಿಯ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಇನ್ನೂ ಅನೇಕ ದೈವಗಳು ಅವಜ್ಞೆಗೆ ಒಳಗಾಗಿವೆ, ಇನ್ನಷ್ಟು ಅಧ್ಯಯನ ಮತ್ತು ಕ್ಷೇತ್ರಕಾರ್ಯದ ಕೆಲಸ ಆಗಬೇಕಿದೆ ಎಂದು ಲೇಖಕಿ ತಮ್ಮ ಅಭಿಪ್ರಾಯವನ್ನು ಈ ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕೃತಿಯನ್ನು ಓದುತ್ತಾ ಆಳಕ್ಕೆ ಇಳಿದರೆ ಒಂದಷ್ಟು ಭೂತಗಳು ನಮ್ಮೆದುರಿಗೇ ಕುಣಿದಂತಹ ಅನುಭವವಾಗುತ್ತದೆ. ಜಾನಪದ ಲೋಕಕ್ಕೆ ಇದೊಂದು ಕೃತಿಯಾಗಿದ್ದು ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಬಲ್ಲುದು ಎಂಬುದರಲ್ಲಿ ಸಂಶಯವಿಲ್ಲ.

ಪದ್ಮಾಕೃಷ್ಣಮೂರ್ತಿ

ಜಾನಪದ ಮತ್ತು ಇತಿಹಾಸಗಳ ವ್ಯವಸ್ಥಿತ ಅಧ್ಯಯನ

*** ಮುಲ್ಕಿಯ ಸಾವಂತ ಅರಸರು – ಐತಿಹಾಸಿಕ, ಸಾಂಸ್ಕೃತಿಕ ನೋಟ :** ಲೇ. ಮುದ್ದುಮೂಡುಬೆಳ್ಳೆ: ಪ್ರ–ಮೂಲ್ಕಿ ಸೀಮೆ ಅರಮನೆ ಅಭಿವೃದ್ಧಿ ಸಮಿತಿ, ಪಡುಪಣಂಬೂರು – ೫೭೪ ೧೪೬. ಪುಟಗಳು: ೯೦+೧೦+೬. ಬೆಲೆ ರೂ. ೭೫/–

ಇದು ಶುದ್ಧ ಜಾನಪದ ಕೃತಿಯೇನಲ್ಲ. ಆದರೆ ಮೂಲ್ಕಿ ಸೀಮೆಯ ಅರಸು ಮನೆತನದ ಬೆಳವಣಿಗೆ, ಸಾಧನೆ, ಕಾರ್ಯವಿಧಾನಗಳನ್ನು ಅಚ್ಚುಕಟ್ಟಾಗಿ ಪರಿಚಯಿಸಿಕೊಡುವಾಗ ಅಲ್ಲಿನ ಅನೇಕ ರೀತಿ ರಿವಾಜುಗಳನ್ನು, ನಂಬಿಕೆ ನಡವಳಿಕೆ ಐತಿಹ್ಯಗಳನ್ನು ಗಮನಾರ್ಹ ಪ್ರಮಾಣದಲ್ಲಿ ಇಲ್ಲಿ ಸಂಗ್ರಹಿಸಿದ್ದಾರೆ. ಈ ದೃಷ್ಟಿಯಿಂದ ಮೂಲ್ಕಿ ರಾಜ್ಯದ ಸ್ಥಾಪನೆ, ಅರಸರ ವಂಶಾವಳಿ ಇವನ್ನೆಲ್ಲ ವಿವರಿಸುವಾಗ ಹಿಂದೆ ವಿದ್ವಾಂಸರು ಈ ಬಗ್ಗೆ ಬರೆದಿರುವ ಲೇಖನಗಳು, ಶಾಸನಗಳು, ಇಂಥ ಎಲ್ಲ ಆಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಅರಮನೆಯ ಸಂಪ್ರದಾಯಗಳು, ಅರಸರಿಗೆ ಪಟ್ಟವಾಗುವ ರೀತಿ, ಅಲ್ಲಿ ಈಗಲೂ ನಡೆದು ಬಂದಿರುವ ಸಾಮಾಜಿಕ ಸಂಬಂಧ– ಇತ್ಯಾದಿ ವಿಷಯಗಳನ್ನೆಲ್ಲ ತುಂಬ ಔಚಿತ್ಯಪೂರ್ಣವಾದ ರೀತಿಯಲ್ಲಿ ಸಾದರ ಪಡಿಸಿದ್ದಾರೆ. ತುಳುನಾಡಿನಲ್ಲಿ ಪ್ರಚಲಿತವಿರುವ ಮಾಗಣೆ, ಬರ್ಕೆ, ಸೀಮೆ, ಇವುಗಳ ಅರ್ಥವನ್ನೂ ವಿವರಿಸಿದ್ದಾರೆ. ಅಗತ್ಯವಾದ ಹತ್ತಿಪ್ಪತ್ತು ಛಾಯಾ ಚಿತ್ರಗಳೂ ಇವೆ. ಒಂದು ಸೀಮಿತ ವಿಷಯದ ಬಗ್ಗೆಯೂ ಎಷ್ಟು ವ್ಯವಸ್ಥಿತವಾಗಿ ಅಧ್ಯಯನ ಮಾಡಬಹುದೆಂಬುದಕ್ಕೆ ಈ ಕೃತಿ ಒಂದು ಉದಾಹರಣೆಯಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಅವಳೀ ವೀರರ ಕುರಿತು ವಿಸ್ತೃತ ಅಧ್ಯಯನ

* **ಕಾಂತಬಾರೆ ಬೂದಬಾರೆ – ಲೇ. ಮುದ್ದು ಮೂಡುಬೆಳ್ಳೆ.** ಪ್ರ: ಗೆಳೆಯರ ಬಳಗ ಪ್ರಕಾಶನ, ಸಿ–೨ ಆಕಾಶವಾಣಿ ಕ್ವಾರ್ಟರ್ಸ್, ಮಂಗಳೂರು – ೫೭೫ ೦೦೬. ಪುಗ೫+೪+೨೪೬. ಬೆಲೆ ರೂ. ೧೫೦/–

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ಪರಿಸರದಲ್ಲಿ ೧೭ನೇ ಶತಮಾನದಲ್ಲಿ ಬಾಳಿ ಬದುಕಿ ಅಲ್ಲಿನ ಅರಸರಿಗೆ ನಿಷ್ಠೆಯಿಂದ ಸೇವೆ ಮಾಡಿದ ಅವಳಿ ವೀರರ ಹೆಸರು– ಕಾಂತಬಾರೆ ಮತ್ತು ಬೂದಬಾರೆ. ಇವರು ಕೋಟಿ ಚೆನ್ನಯರಂತೆಯೇ ತಮ್ಮ ಶಕ್ತಿ, ನಿಷ್ಠೆಗಳಿಂದ ತುಳುನಾಡಿನ ಮೂಲ್ಕಿ ಜೈನ ಅರಸರ ಸಂಸ್ಥಾನಕ್ಕೆ ದುಡಿದರು. ಆ ಪ್ರದೇಶದಲ್ಲಿ ಗರಡಿಮನೆಗಳನ್ನೂ, ಕೆರೆಬಾವಿಗಳು, ಕೃಷಿ ಜಮೀನುಗಳನ್ನು ಅಭಿವೃದ್ಧಿಪಡಿಸಿದರು. ರಾಜ್ಯದ ಗಡಿಗಳನ್ನು ರಕ್ಷಿಸಲು ಹೋರಾಡಿದರು. ಅಪ್ರತಿಮ ಶೂರರಾದ ಇವರು ಬ್ರಹ್ಮಚಾರಿಗಳಾಗಿಯೇ ಉಳಿದು ತಮ್ಮ ಜೀವಿತಾವಧಿಯ ನಂತರ ದೇವತೆಗಳೆಂದು ತುಳುನಾಡಿನದಲ್ಲಿ ಆರಾಧ್ಯರಾದರು. ಇವರಿಗಾಗಿ ಮೂಲ್ಕಿ ಪ್ರದೇಶದಲ್ಲಿ ಗುಡಿಗಳಿವೆ. ಇವರ ಕುರಿತು ಪಾಡ್ದನಗಳು, ಐತಿಹ್ಯಗಳು, ಆರಾಧನೆಗಳು ಈಗಲೂ ನಡೆಯುತ್ತಿವೆ. ಒಂದೆರಡು ಯಕ್ಷಗಾನ ಪ್ರಸಂಗಗಳೂ ರಚಿತವಾಗಿ ಅನೇಕ ವರ್ಷಗಳಿಂದ ಮೇಳಗಳಿಂದ ಅಭಿನಯಿಸಲ್ಪಡುತ್ತಿವೆ.

ಆದರೆ ಈ ವೀರರ ಕುರಿತಾದ ತಲಸ್ಪರ್ಶಿ ಅಧ್ಯಯನ ಈವರೆಗೆ ನಡೆದಿರಲಿಲ್ಲ. ಪ್ರಸ್ತುತ ಕೃತಿಯ ಮೂಲಕ ಶ್ರೀ ಮುದ್ದು ಮೂಡುಬೆಳ್ಳೆ ಅವರು ಅದನ್ನು ಸಾಧಿಸಿದ್ದಾರೆ.

ಅನೇಕ ವರ್ಷಗಳ ಕ್ಷೇತ್ರಕಾರ್ಯದ ಮೂಲಕ ಈ ಕೃತಿಯ ಲೇಖಕರು ಈ ವೀರರಿಗೆ ಸಂಬಂಧಿಸಿದ ಪಾಡ್ದನ/ಐತಿಹ್ಯಗಳನ್ನು ಸಂಗ್ರಹಿಸಿದ್ದಾರೆ. ಅವರು ಜನಿಸಿದ, ಓಡಾಡಿದ ಸ್ಥಳಗಳನ್ನು ಗುರುತಿಸಿದ್ದಾರೆ. ಆ ವೀರರ ಆರಾಧನೆ ನಡೆಯುವ ಸ್ಥಳಗಳನ್ನೂ, ಅವರಿಗೆ ಸಂಬಂಧಿಸಿದ ಕತೆಗಳಲ್ಲಿ ಬರುವ ಮನೆತನಗಳನ್ನೂ ಪತ್ತೆ ಹಚ್ಚಿದ್ದಾರೆ. ಅವರ ಬಗ್ಗೆ ಬಲ್ಲವರಿಂದ ಮಾಹಿತಿ ಸಂಗ್ರಹಿಸಲು ಸಂದರ್ಶಿಸಿದ್ದಾರೆ. ಮೂಲ್ಕಿ ಅರಸರ ಈಗಿನ ಪಟ್ಟಾಧಿಕಾರಿಯವರನ್ನೂ ಸಂದರ್ಶಿಸಿ ಸಾಂಪ್ರದಾಯಿಕವಾಗಿ ಈ ವೀರರ ಬಗೆಗಿನ ಲಭ್ಯ ಮಾಹಿತಿ/ನಂಬಿಕೆ/ಐತಿಹ್ಯ/ಆಚರಣೆ ಇತ್ಯಾದಿಗಳ ವಿಷಯ ಕಲೆಹಾಕಿದ್ದಾರೆ. ಇದನ್ನೆಲ್ಲ ಕ್ರಮಬದ್ಧವಾಗಿ ನಿರೂಪಿಸಿ ಅನಂತರ ವಿಶ್ಲೇಷಿಸಿದ್ದಾರೆ.

ಈ ಎಲ್ಲ ಪರಿಶ್ರಮ ಮೆಚ್ಚುವಂಥಾದ್ದು. ಅಧ್ಯಯನ ಕ್ರಮಬದ್ಧವಾಗಿದೆ. ಪುಸ್ತಕದ ಕೊನೆಯಲ್ಲಿ ವೈಧಾನಿಕವಾದ ರೀತಿಯಲ್ಲಿ ಆಧಾರ ಗ್ರಂಥಗಳು ಹಾಗೂ ಮಾಹಿತಿದಾರರ ಪಟ್ಟಿಗಳಿವೆ. ವಿವಿಧ ವ್ಯಕ್ತಿಗಳ ಸಂದರ್ಶನದ ಪಾಠಗಳಿವೆ.

ಒಟ್ಟು ಐದು ಅಧ್ಯಾಯಗಳಿರುವ ಈ ಗ್ರಂಥದಲ್ಲಿ ಮೊದಲ ಅಧ್ಯಾಯದಲ್ಲಿ ಈ ವೀರರ ಕುರಿತ ಕತೆ/ಪಾಡ್ದನಗಳನ್ನು ನೀಡಿದ್ದಾರೆ. ಎರಡನೇ ಅಧ್ಯಾಯನದಲ್ಲಿ ಈ ವೀರರಿಗೆ ಸಂಬಂಧಿಸಿದ ವಿವಿಧ ಸ್ಥಳಗಳ ವಿವರ, ಅಲ್ಲಿನ ಭೌಗೋಳಿಕ ಸನ್ನಿವೇಶ-ಇತ್ಯಾದಿಗಳಿವೆ. ಮೂರನೆಯ ಅಧ್ಯಾಯವು ಈ ಬಾರೆಯರಿಗೂ ಕೋಟಿ ಚೆನ್ನಯರಿಗೂ ನಡೆಯಿತೆನ್ನಲಾದ ಕಾಳಗವನ್ನು ಕುರಿತ ಐತಿಹ್ಯದ ಬಗೆಗೆ ವಿವರ ನೀಡುವುದಲ್ಲದೆ ಅವರುಗಳನ್ನು ಕುರಿತ ಆರಾಧನೆಗಳು ಯಾವಾಗ ಎಲ್ಲೆಲ್ಲಿ ನಡೆಯುತ್ತವೆ ಎಂಬ ಮಾಹಿತಿಗಳೂ ಇವೆ. ಮುಂದಿನ ಎರಡು ಅಧ್ಯಾಯಗಳಲ್ಲಿ ಐತಿಹಾಸಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ವಿವಿದ ಆಕರಗಳ ಆಧಾರದ ಮೇಲೆ ಈ ವೀರರ ಕಾಲನಿರ್ಣಯ ಹಾಗೂ ಮೌಲ್ಯಮಾಪನ ಮಾಡಲು ಲೇಖಕರು ಪ್ರಯತ್ನಿಸಿದ್ದಾರೆ.

ವಿಶ್ಲೇಷಣೆಯ ಸಂದರ್ಭದಲ್ಲಿ ಲೇಖಕರು ಅಲ್ಲಲ್ಲಿ ಎಡವಿದ್ದಾರೆ. ಒಂದೇ ಸಂಗತಿ ಹಲವು ಕಡೆ ಪುನರಾವರ್ತಿತವಾಗಿರುವುದೂ ಉಂಟು. ಇಂಥವನ್ನು ಮುಂದಿನ ಅಧ್ಯಯನಕಾರರು ಸರಿಪಡಿಸಬಹುದು. ಆದರೆ ಮೌಖಿಕವಾಗಿ ಸಂಗ್ರಹಿಸಬೇಕಾಗಿದ್ದ ಮಾಹಿತಿಗಳನ್ನು ಸಂಗ್ರಹಿಸಿರುವುದು ಹಾಗೂ ಸ್ಥಳಗಳನ್ನು ನಿರ್ದಿಷ್ಟವಾಗಿ ಗುರುತಿಸಿರುವುದು ಇಲ್ಲಿ ನಡೆದಿರುವ ಬಹುಮುಖ್ಯ ಕೆಲಸ. ಇನ್ನೂ ಸ್ವಲ್ಪ ಕಾಲ ಕಳೆದಿದ್ದರೆ ಇಷ್ಟು ಮಾಹಿತಿಗಳು ಸಿಗುತ್ತಿದ್ದವೆಂದು ಹೇಳಲಾಗದು. ಮಾಹಿತಿ ಸಂಗ್ರಹ ಒಮ್ಮೆ ಆಯಿತೆಂದರೆ ನಂತರ ಎಷ್ಟು ಬೇಕಾದರೂ ವಿಶ್ಲೇಷಣೆ ನಡೆಸಬಹುದು. ಈ ಬುನಾದಿ ಕಾರ್ಯವನ್ನು ಮುದ್ದು ಮೂಡುಬೆಳ್ಳೆಯವರು ತುಂಬ ಶ್ರದ್ಧೆಯಿಂದ ಅಚ್ಚುಕಟ್ಟಾಗಿ, ಯಾವುದೇ ವೈಭವೀಕರಣವಿಲ್ಲದೆ ನಡೆಸಿದ್ದಾರೆ.

ಈ ಗ್ರಂಥ ಯಾವುದಾದರೂ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದ್ದರೆ ಹೆಚ್ಚು ಪ್ರಚಾರ ಸಿಗುತ್ತಿತ್ತು. ಲೇಖಕರು ಸ್ವಂತವಾಗಿ ಪ್ರಕಟಿಸಿರುವುದರಿಂದ ಇಂಥ ಮುಖ್ಯ ಕೃತಿಗಳೂ ಬಹುಜನರ ಕಣ್ಣಿಗೆ ಅಜ್ಞಾತವಾಗಿಯೇ ಉಳಿದುಬಿಡುವ ಸಾಧ್ಯತೆಯೇ ಹೆಚ್ಚು.

ಎಸ್.ಪಿ. ಪದ್ಮಪ್ರಸಾದ್

ಅನಗತ್ಯ ಮಾಹಿತಿಗಳ ಬೃಹತ್ ಕೃತಿ

*** ತುಮಕೂರು ಜಿಲ್ಲೆಯ ಜನಪದ ಕಲೆಗಳು ಮತ್ತು ಕಲಾವಿದರ ಪರಿಚಯ :** ಲೇ. ಕಂಟಲಗೆರೆ ಸಣ್ಣಹೊನ್ನಯ್ಯ, ಪ್ರ-ತುಮಕೂರು ವಿಶ್ವವಿದ್ಯಾಲಯ, ಪುಟಗಳು - ೫೮೧, ಬೆಲೆ ರೂ. ೨೨೫/-

ಒಂದು ಕೃತಿ ರಚನೆಯ ಬಗ್ಗೆ ಸ್ಪಷ್ಟ ಕಲ್ಪನೆ ಚಿಂತನೆಗಳಿಲ್ಲದೆ ಕೈಗೆ ಸಿಕ್ಕಿದ

ವಿಷಯಗಳನ್ನೆಲ್ಲ ಮನಸ್ಸಿಗೆ ಬಂದಂತೆ ಜೋಡಿಸಿ ಸರಿಯಾಗಿ ಕರಡು ತಿದ್ದದೆ ಪ್ರಕಟಿಸಿದರೆ ಒಂದು ಪುಸ್ತಕ ಹೇಗಿರುತ್ತದೆ ಎನ್ನುವುದಕ್ಕೆ ಉದಾಹರಣೆಯಂತಿದೆ ಈ ಕೃತಿ.

ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಜನಪದ ಕಲೆಗಳು ಹಾಗೂ ಕಲಾವಿದರ ಪರಿಚಯ ಎಷ್ಟು ಬೇಕೋ ಅಷ್ಟನ್ನು ಕೊಡಲಾಗಿರುತ್ತದೆ ಎಂಬ ನಿರೀಕ್ಷೆಯಿಂದ ಈ ಪುಸ್ತಕವನ್ನು ಕೈಗೆತ್ತಿಕೊಳ್ಳುವವರಿಗೆ ಇಲ್ಲಿ ಅನೇಕ ಆಶ್ಚರ್ಯಗಳು ಕಾದಿರುತ್ತವೆ. ತುಮಕೂರು ಜಿಲ್ಲೆಯಲ್ಲಿ ಎಲ್ಲಿಯೂ ಕಾಣಸಿಗದ ಅಂಟಿಕೆ-ಪಂಟಿಕೆ, ಡೊಳ್ಳುಮೇಳ, ಕಿನ್ನಾಳ ಕಲೆ, ಕಲಘಟಗಿಯ ತೊಟ್ಟಿಲು, ಚನ್ನಪಟ್ಟಣದ ಗೊಂಬೆ ಕೈಗಾರಿಕೆ, 'ರಾಷ್ಟ್ರಕೂಟರ ಶಿಲ್ಪಕಲೆ' ಕುರಿತ ೧೫ ಪುಟಗಳ ಲೇಖನ ಇಂಥ ಹಲವೆಂಟು ವಿವರಗಳೆಲ್ಲ ಕಂಡುಬರುತ್ತವೆ. ಇಲ್ಲಿ ವೀಣೆ, ಬುಲ್‌ಬಲ್ ತಾರಗಳನ್ನು, ಕ್ಯಾಸಿಯೋ ಹಾರ್ಮೋನಿಯಂಗಳನ್ನು ಜನಪದ ವಾದ್ಯಗಳೆಂದು ಪರಿಗಣಿಸಲಾಗಿದ್ದು ಅದನ್ನು ನುಡಿಸುವವರನ್ನು ಜನಪದ ಕಲಾವಿದರ ಪಟ್ಟಿಗೆ ಸೇರಿಸಲಾಗಿದೆ. (ಪುಟ.೩೭). ಜನಪದ ತಂತಿವಾದ್ಯವೆಂದು ವೀಣೆಯನ್ನು ಹೆಸರಿಸಿರು ವಾಕ್ಯದ ಪಕ್ಕದಲ್ಲೇ 'ಚರ್ಮವಾದ್ಯಗಳು ಇದರೊಳಗೆ ಹೆಣೆದುಕೊಂಡಿರುತ್ತವೆ' ಎಂಬ ಅದ್ಭುತ ವಾಕ್ಯವಿದೆ. ಆರತಿ, ಬಾಯಿಬೀಗಗಳನ್ನೂ ಜನಪದ ಕಲೆಗಳೆನ್ನಲಾಗಿದೆ. (ಪು.೩೮). ಜನಪದ ಜಾತ್ರೆಗಳನ್ನೂ ಜನಪದ ಕಲೆಗಳ ಒಂದು ಪ್ರಕಾರ ಎಂದಿದ್ದಾರೆ. (ಪು.೩೭,೩೮). ಜಾತ್ರೆಗಳು ಆಚರಣೆಗಳೇ ಹೊರತು ಇಡೀ ಜಾತ್ರೆಯೇ ಒಂದು ಕಲೆ ಅಲ್ಲ. 'ಕರಗವು ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಕಂಡುಬರುತ್ತದೆ' ಎಂದು ಸ್ಪಷ್ಟವಾಗಿ ಹೇಳುತ್ತಾ ತುಮಕೂರಿಗೆ ಸಂಬಂಧವೇ ಇಲ್ಲದ ಅದರ ಬಗ್ಗೆ ನಾಲ್ಕು ಪುಟ (೪೬–೪೯) ಬರೆಯುತ್ತಾರೆ. ಈ ಜಿಲ್ಲೆಯಲ್ಲಿ ಇಲ್ಲದ 'ಕೀಲುಕುದುರೆ ಕುಣಿತ'ದ ವರ್ಣನೆ ಸಹ ಇದರಲ್ಲಿದೆ (ಪು.೫೦).

'ಜನಪದ ಕಲೆಗಳ ಇತಿಹಾಸ' ಎಂಬೊಂದು ಶೀರ್ಷಿಕೆಯ ಬರಹ (ಇಲ್ಲಿನ ಲೇಖನಗಳನ್ನು ಅಧ್ಯಾಯ/ಆಶ್ವಾಸ/ಸಂಧಿ/ಸರ್ಗ/ ವಿಭಾಗ- ಇತ್ಯಾದಿ ಯಾವ ಹೆಸರಿನಿಂದಲೂ ಕರೆಯಲಾಗಿಲ್ಲ. ಪರಿವಿಡಿಯಲ್ಲಿಯೂ ಅಧ್ಯಾಯಗಳೆಂದು ಕರೆಯದೆ ಕೇವಲ ಕ್ರಮಸಂಖ್ಯೆ ಹಾಕಲಾಗಿದೆ. ಪುಸ್ತಕದೊಳಗಿನ ಇವೇ ಶೀರ್ಷಿಕೆಗಳಿರುವಲ್ಲಿ ಕ್ರಮಸಂಖ್ಯೆ ಸಹ ಹಾಕಿಲ್ಲ. ಅಧ್ಯಾಯಗಳೆಂದು ನಾವೇ ತಿಳಿದುಕೊಳ್ಳಬೇಕಷ್ಟೆ!) ಈ ಪುಸ್ತಕದಲ್ಲಿದೆ (ಪು.೭೨–೯೨). 'ಜನಪದ ಕಲೆಗಳ ಇತಿಹಾಸವನ್ನು ಶೋಧಿಸಿ ಬರೆಯುವ ಸಾಹಸಕ್ಕೆ ಕೈಹಾಕಿದ್ದಾರಲ್ಲ'- ಎಂಬ ಅಚ್ಚರಿಯಿಂದ ಓದಿದರೆ ಇಲ್ಲಿ ಕೆಲವು ಜನಪದ ಕಲೆಗಳ ಬಗ್ಗೆ ವಿವರಣೆ ಸಿಗುತ್ತದೆಯೇ ವಿನಃ ಅವುಗಳ ಉಗಮ ವಿಕಾಸಗಳನ್ನು ಕುರಿತ ಯಾವ ಮಾಹಿತಿಯೂ ಇಲ್ಲ. ಬಹುಶಃ ಜನಪದ ಕಲೆಯ ಬಗ್ಗೆ ಏನು ವಿವರಣೆ ಕೊಡುತ್ತೇವೋ ಅದೇ ಇತಿಹಾಸ ಎಂದು ಈ ಸಂಶೋಧಕರ ಭಾವನೆ

ಇರಬೇಕು. ಈ ಲೇಖನದಲ್ಲಿ ಒಂದೆರಡು ಕಡೆ 'ತಾಲ್ಲೂಕಿನಲ್ಲಿ ಈ ಕಲೆಯು.....' ಎಂದು ವಾಕ್ಯ ಆರಂಭವಾಗುತ್ತದೆ (ಪು.೮೭, ೯೩). ಆದರೆ ಯಾವ ತಾಲ್ಲೂಕು ಎಂದು ಹೇಳುವುದಿಲ್ಲ. ಆದರೆ ೯೩ ನೇ ಪುಟದ ಕೆಳಗೆ – "ಹೀಗೆ ಸಿರಾ ತಾಲ್ಲೂಕಿನಲ್ಲಿ.............' ಎಂದು ಒಂದು ಪ್ಯಾರಾ ಆರಂಭವಾದಾಗ ತಿಳಿಯುತ್ತದೆ – ಈ ಇಡೀ ೨೦ ಪುಟಗಳ ಲೇಖನ ಕೇವಲ ಸಿರಾ ತಾಲ್ಲೂಕಿಗೆ ಸಂಬಂಧಿಸಿದ್ದು, ಬಹುಶಃ ಇನ್ನಾವಾಗಲೋ ಪ್ರಕಟವಾಗಿದ್ದನ್ನು ಅನಾಮತ್ತು ಇಲ್ಲಿ ಸೇರಿಸಿರಬೇಕು ಎಂದು. ಇಲ್ಲಿಂದ ಮುಂದೆ ಈ ಉದ್ಗ್ರಂಥದಲ್ಲಿ 'ಜನಪದ ಆಚರಣೆಗಳು' ಎಂಬ ಭಾಗ ಇದೇ –'ಇತಿಹಾಸ' ಅಧ್ಯಾಯ(?) ದಲ್ಲಿದೆ. ಇದರಲ್ಲಿ ಸಿರಾದ ದರ್ಗಾ, ಕೋಟೆಗಳ ಇತಿಹಾಸ, ವರ್ಣನೆ, ವಿವರಗಳೆಲ್ಲ ಬರುತ್ತವೆ. ಅಷ್ಟೇ ಅಲ್ಲ – ಈ ತಾಲ್ಲೂಕಿನ ಪತ್ರಿಕೋದ್ಯಮ, ಸಾಹಿತ್ಯ ಪರಂಪರೆ, ಪ್ರೇಕ್ಷಣೀಯ ಸ್ಥಳಗಳು ಇವೆಲ್ಲದರ ವಿವರಣೆ ಇದೆ. ಪುಟ.೭೨ ರಿಂದ ೧೦೩ರವರೆಗಿನ ಅಷ್ಟೂ ಪುಟಗಳು ತುಮಕೂರು ಜಿಲ್ಲೆಯ ಜನಪದ ಕಲೆಗಳನ್ನು ಕುರಿತ ಈ ಗ್ರಂಥದಲ್ಲಿ (?) ಸೇರಿಕೊಂಡು ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವುದರ ಹಿಂದಿನ ಇತಿಹಾಸ ಬಹುಶಃ ಮತ್ತೊಂದು ಸಂಶೋಧನೆಯೇ ಆದೀತು.

ಮುಂದಿನ ಅಧ್ಯಾಯ (?) 'ಜನಪದ ಚಿತ್ರಕಲೆ' ಯಲ್ಲಿ ಮುಂದುವರಿದಿದೆ. ಇಲ್ಲಿ 'ಜನಪದ ಚಿತ್ರಕಲೆಯನ್ನು ಶಾಸ್ತ್ರೀಯಗೊಳಿಸುವ ನಿಟ್ಟಿನಲ್ಲಿ ಸಾಮಗ್ರಿ ಸಂಗ್ರಹ ಮತ್ತು ಸಂಗ್ರಹಿಸಿದ ಸಾಮಗ್ರಿಯನ್ನು ವಿಂಗಡಿಸಿಕೊಳ್ಳುವಲ್ಲಿ ವರ್ಗೀಕರಣದಲ್ಲೂ ಒಂದೊಂದು ಶಿಸ್ತಿಗೂ ತನ್ನದೇ ಆದ ಹಿತಾಸಕ್ತಿಗಳಿವೆ' (ಪು.–೧೧೧) ಎನ್ನುತ್ತಾರೆ. ಈ ವಿಚಿತ್ರ ಮಾತನ್ನು ಅರ್ಥಮಾಡಿಕೊಳ್ಳಲು ಹೆಣಗಬೇಕಾಗಿದೆ: ಜನಪದ ಕಲೆಗಳನ್ನು ಶಾಸ್ತ್ರೀಯಗೊಳಿಸುವುದು ಎಂದರೇನು? ಹಾಗೆ ಮಾಡಬೇಕಾದ ಅಗತ್ಯವೇನು? 'ವರ್ಗೀಕರಣದಲ್ಲಿ ಒಂದೊಂದು ಶಿಸ್ತಿಗೂ ತನ್ನದೇ ಆದ ಹಿತಾಸಕ್ತಿಗಳಿವೆ'– ಎಂಬ ಮಾತಿನ ಅರ್ಥವಾದರೂ ಏನು? 'ಶಿಸ್ತು' ಎಂದರೆ ಜ್ಞಾನ ಶಾಖೆ. ಅದಕ್ಕೆ ಗುರಿ, ಉದ್ದೇಶ ದೃಷ್ಟಿಕೋನಗಳಿರುತ್ತವೆ. ಹಿತಾಸಕ್ತಿ ಎಂಬ ಮಾತು ಕೊಡುವ ಅರ್ಥವೇ ಬೇರೆ. ಇದೆಲ್ಲ ಹಾಳಾಗಲಿ ಎಂದರೆ ಇಲ್ಲಿನ ಈ ಶೀರ್ಷಿಕೆಯಡಿಯ ೧೦೩ ರಿಂದ ೧೨೦ರ ವರೆಗಿನ ಪುಟಗಳು ತುಮಕೂರು ಜಿಲ್ಲೆಯ ಜನಪದ ಚಿತ್ರಕಲೆ ಬಗ್ಗೆ ಏನೂ ಹೇಳುವುದಿಲ್ಲ. ಇಲ್ಲಿಂದ ಮುಂದಿನ ಪುಟಗಳಿಗೆ 'ಯಕ್ಷಗಾನ–ದೊಡ್ಡಾಟಗಳಲ್ಲಿಯ ಚಿತ್ರಕಲೆ' ಎಂಬ ತಲೆಬರಹದಡಿಯಲ್ಲಿ ಆ ಬಗ್ಗೆ ಏನೂ ಹೇಳದೆ – ರಂಗೋಲಿ, ಗೋಕಾಕದ ಅಟಿಕೆಗಳು–ಹೀಗೆ ಇಂಥವುಗಳ ಬಗ್ಗೆ ಅನೇಕ ತಪ್ಪುಗಳ ಸಹಿತ ಉದಾರವಾಗಿ ವಿವರಿಸಲಾಗಿದೆ. 'ಮಾನವಿಕ ವಿಷಯಗಳನ್ನು ಕಾಲ್ಪನಿಕವಾಗಿ ಗಮನಿಸಿದಾಗ ಅವುಗಳಿಗಿರುವ ವ್ಯತ್ಯಾಸ ತಿಳಿಯುತ್ತದೆ' ಎಂಬೊಂದು ವಾಕ್ಯ ೭೦ನೇ ಪುಟದಲ್ಲಿದೆ.

ಮಾನವಿಕ ವಿಷಯಗಳನ್ನು ಕಾಲ್ಪನಿಕವಾಗಿ ಗಮನಿಸುವುದು ಎಂದರೇನರ್ಥ? ಇಂಥ ಅದೆಷ್ಟೋ ಅಸಂಬದ್ಧ ವಾಕ್ಯಗಳು ಈ ಬೃಹತ್ ಗಾತ್ರದ ಕೃತಿಯಲ್ಲಿವೆ.

ಈ ಜಿಲ್ಲೆಯ ಕಲಾವಿದರ ಪರಿಚಯ ಕೊಡುವಾಗಲೂ ನೂರೆಂಟು ಆಭಾಸಗಳಿವೆ. "ಕೊರಟಗೆರೆ ತುಮಕೂರು ಜಿಲ್ಲೆಯ ಪಕ್ಕದಲ್ಲಿದೆ'ಯಂತೆ (ಪು.೧೯೩)! ಹಾಗಾದರೆ ಅಲ್ಲಿನ ಕಲಾವಿದರ ಪರಿಚಯ ಯಾಕೆ ಬೇಕು ಇಲ್ಲಿ? ಸಿ.ಎನ್. ಹನುಮಯ್ಯ ಕಲಾವಿದ 'ತಾನೇ ಕಂತಿಗಳನ್ನು ಮಾಡಿಕೊಂಡರು' ಎನ್ನುತ್ತಾರೆ (ಪು.೧೯೪) ಇದು ಹೇಗೆ ಸಾಧ್ಯ? ಶಿಷ್ಟ ರಂಗಭೂಮಿಯ ಕಲಾವಿದರನ್ನೂ ಜನಪದ ಕಲಾವಿದರೆಂದು ಕರೆದು ಮಾರುದ್ದದ 'ಸಂಕ್ಷಿಪ್ತ ಪರಿಚಯ' ನೀಡಲಾಗಿದೆ! ಶಾಸ್ತ್ರೀಯ ಸಂಗೀತ ಬಲ್ಲ ಹರಿಕಥಾ ವಿದ್ವಾಂಸ ಡಾ॥ ಲಕ್ಷ್ಮಣದಾಸ್ ಅವರನ್ನು ಎರಡು ಅಧ್ಯಾಯಗಳಲ್ಲಿ ೩೪ ಪುಟಗಳ ವ್ಯಾಪ್ತಿಯಲ್ಲಿ 'ಸಂಕ್ಷಿಪ್ತವಾಗಿ' ಪರಿಚಯಿಸಲಾಗಿದೆ.

ಇದೆಲ್ಲ ಆದ ಬಳಿಕ ಜಿಲ್ಲೆಯ ಕಲಾವಿದರ ವಿಳಾಸಗಳನ್ನು ವರ್ಗೀಕರಿಸಲಾಗಿದೆ. ಇದೊಂದೇ ಈ ಗ್ರಂಥದ ಸರಿಯಾದ ಭಾಗ. ಇದಾದ ಮೇಲೆ ಪುನಃ ಪುಟ ೪೭೪ ರಿಂದ ೪೯೪ರವರೆಗೆ 'ದಸರಾ ಉತ್ಸವದಲ್ಲಿ ಭಾಗವಹಿಸಿದ್ದ ಕಲಾ ಪ್ರಕಾರಗಳ ಸಂಕ್ಷಿಪ್ತ ಪರಿಚಯ' ಎಂಬ ಶೀರ್ಷಿಕೆಯಡಿಯಲ್ಲಿ ಪುನಃ ಹಿಂದೆ ವಿವರಿಸಿರುವ ಜನಪದ ಕಲೆಗಳ ಬಗ್ಗೆಯೇ ಪುನರಾವರ್ತಿಸಲಾಗಿದೆ. ಅನಂತರ '೨೦೧೦ರಲ್ಲಿ ತುಮಕೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು' ಎಂಬ ಶೀರ್ಷಿಕೆಯಡಿಯಲ್ಲಿ ಜಾನಪದ ಕಲೆಗಳಿಗೆ ಏನೇನೂ ಸಂಬಂಧವಿಲ್ಲದ ಪತ್ರಿಕೋದ್ಯೋಗಿಗಳು, ಚಲನಚಿತ್ರ ರಂಗದವರು, ಛಾಯಾಚಿತ್ರಗ್ರಾಹಕರು, ನಿವೃತ್ತ ಶಿಕ್ಷಕರು, ಕಾರ್ಖಾನೆ ವ್ಯವಸ್ಥಾಪಕರು, ಸುಗಮ ಸಂಗೀತ ಗಾಯಕರು – ಹೀಗೆ ಹಲವಾರು ಜನರ ಪರಿಚಯಕ್ಕಾಗಿ ಸುಮಾರು ಒಂದು ನೂರು ಪುಟ ಮೀಸಲಿರಿಸಿದ್ದಾರೆ. ತಮಾಷೆ ಎಂದರೆ – ವಿಜ್ಞಾನ ಪ್ರಾಧ್ಯಾಪಕ ಹಾಗೂ ಲೇಖಕ ಎಚ್.ಎಸ್. ನಿರಂಜನಾರಾಧ್ಯರ ಪರಿಚಯವೂ ಇಲ್ಲಿದೆ!

ಇಷ್ಟೆಲ್ಲಾ ಅಸಂಬದ್ಧತೆಗಳಿರುವ, ಅರ್ಬುದ ರೋಗದ ಗೆಡ್ಡೆಯಂತೆ ಊದಿಕೊಂಡ ಒಂದು ಕೃತಿ ಪರಿಶೀಲನಾ ಸಮಿತಿಯಿಂದ ಹಾಗೂ ಒಂದು ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವುದು (ಅದೂ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಯ ಅಡಿಯಲ್ಲಿ) ತುಂಬ ಆಶ್ಚರ್ಯಕರವಾಗಿದೆ.

ಎಸ್.ಪಿ. ಪದ್ಮಪ್ರಸಾದ್

ತೃಪ್ತಿಕರ ಅಧ್ಯಯನ

* **ಜನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು:** ಲೇ: ಕುರುವ ಬಸವರಾಜ್, ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್, ೧೩೪, ೮ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಗೋವಿಂದರಾಜ ನಗರ, ಬೆಂಗಳೂರು – ೪೦, ಪುಟಗಳು ೧೯೦+೧೬. ಬೆಲೆ ರೂ. ೧೫೦/–

ಇದು ಈ ಲೇಖಕರ ಸಂಶೋಧನ ಮಹಾಪ್ರಬಂಧ. ಒಂದು ನಿಜವಾದ ಸಂಶೋಧನಾ ಪರಿಶ್ರಮ. ಹೊಸಬಗೆಯ ಸ್ವೋಪಜ್ಞ ಚಿಂತನೆ ಈ ಕೃತಿಯ ಉದ್ದಕ್ಕೂ ಎದ್ದು ಕಾಣುತ್ತದೆ. ಹಾಗೆ ನೋಡಿದರೆ ಈ ಕೃತಿಗೋಸ್ಕರವಾಗಿಯೇ ಲೇಖಕರು ಹಾಡು/ಕತೆಗಳನ್ನೇನೂ ಸಂಗ್ರಹಿಸಿಲ್ಲ. ಹೆಚ್ಚೆಂದರೆ ನಾಲ್ಕಾರು ಕಡೆ ಓಡಾಡಿ ಹಾಡುಗಾರರಿಂದ ಹಾಡುವ ರೀತಿ, ಸಂಪ್ರದಾಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರಷ್ಟೆ. ಈಗಾಗಲೇ ಅನ್ಯ ಜಾನಪದ ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸಿರುವ ಕನ್ನಡ ಜನಪದ ಮಹಾಕಾವ್ಯಗಳನ್ನು ಬಳಸಿಕೊಂಡು, ಪರಾಮರ್ಶನ ಗ್ರಂಥಗಳನ್ನು ಸರಿಯಾಗಿ ಅವಲೋಕಿಸಿ, ಈ ಜನಪದ ಮಹಾಕಾವ್ಯಗಳು ಹೇಗೆ ರೂಪುಗೊಳ್ಳುತ್ತವೆ ಹಾಗೂ ಪಠ್ಯದಲ್ಲೂ ಮಾರ್ಪಾಟು ಹೊಂದುತ್ತವೆ ಎಂಬ ಮೂಲಭೂತ ಅಂಶವನ್ನು ವಿಶ್ಲೇಷಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಈ ಕೃತಿಯ ಬೆಲೆ ಇರುವುದು ಚರ್ವಿತ ಚರ್ವಣದಂತಹ ವಿಷಯವನ್ನು ತೆಗೆದುಕೊಳ್ಳದೆ ಯಾರೂ ಗಮನಿಸದ ಅಂಶವೊಂದನ್ನು ಎತ್ತಿಕೊಂಡು ಸ್ವತಂತ್ರ ಚಿಂತನೆ ನಡೆಸಿರುವುದು.

ಈ ನಿಬಂಧದಲ್ಲಿ ಆರು ಅಧ್ಯಾಯಗಳಿವೆ. ಮೊದಲ ಅಧ್ಯಾಯ – "ವಾಕ್ ಪರಂಪರೆಯ ನೆಲೆಗಳು". ಈ ನೆಲೆಗಳನ್ನು ಬರಹವರಿಯದ 'ಮೂಲ ವಾಕ್ ಪರಂಪರೆ' ಹಾಗೂ ಬರಹ ಬಲ್ಲವರ ಮಾತು/ಹಾಡುಗಾರಿಕೆಯನ್ನು ಕುರಿತ 'ಉನ್ನತ ವಾಕ್ ಪರಂಪರೆ' ಎಂದು ಎರಡು ಬಗೆಯಾಗಿ ವಿಂಗಡಿಸಿಕೊಂಡು ಅದರ ಸ್ವರೂಪವನ್ನು ತುಂಬ ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ.

ಎರಡನೆಯ ಅಧ್ಯಾಯ– 'ಮಹಾಕಾವ್ಯ ನಿರ್ಮಾಣದ ಮನೋನೆಲೆಗಳು'. ಇಲ್ಲಿ ಲೇಖಕರು ಜನಪದರ ಬದುಕು ಮತ್ತು ಕಾವ್ಯ ನಿರ್ಮಾಣಕ್ಕಿರುವ ಸಂದರ್ಭವನ್ನು ಕುರಿತು ಅನೇಕ ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಈ ಸಂದರ್ಭದಲ್ಲೇ ಕೆಲವು ಶರಣರನ್ನು ಕುರಿತು ಜನಪದ ಕಾವ್ಯ ಏಕೆ ಹುಟ್ಟಿರಬಹುದು ಎಂಬುದನ್ನೂ ಕುರಿತು ಚಿಂತಿಸುತ್ತಾರೆ. ಮಂಟೇಸ್ವಾಮಿ, ಜುಂಜಪ್ಪ, ಮಾದೇಶ್ವರ– ಇಂಥ ವ್ಯಕ್ತಿಗಳು ದೈವವಾದದ್ದಕ್ಕೆ ಕಾರಣವಾದ ಜನಪದರ ಮನೋಭೂಮಿಕೆಯನ್ನು ಚರ್ಚಿಸಿದ್ದಾರೆ. ಇಂಥ ಎಲ್ಲ ಚರ್ಚೆಗಳ ಹಿಂದೆ ಆ ಜನಾಂಗಗಳು/ಹಾಡುಗಾರರ ತಂಡಗಳೊಂದಿಗಿನ ನಿಕಟ ಸಂಪರ್ಕ ಬಲವಾಗಿ ಕೆಲಸ ಮಾಡಿರುವಂತೆ ಕಾಣುತ್ತದೆ. ಇಲ್ಲದಿದ್ದರೆ ಇಲ್ಲಿನ ವಿಶ್ಲೇಷಣೆಗೆ ಇಷ್ಟೊಂದು ಸ್ಪಷ್ಟತೆ

ಮತ್ತು ಖಚಿತತೆ ಸಾಧ್ಯವಾಗುತ್ತಿರಲಿಲ್ಲ. ಹಾಡುಗಾರರ ಸಂಪ್ರದಾಯಗಳನ್ನು ಅಗತ್ಯವಾದಷ್ಟು ಉಲ್ಲೇಖಿಸುತ್ತ ಹಾಡುಗಳ ನಿರ್ಮಾಣದ ಹಿಂದಿರುವ ಅವರ ಮನೋಭೂಮಿಕೆಯನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ **'ಜನಪದ ಕಾವ್ಯಗಳ ರಾಚನಿಕ ಸ್ವರೂಪದ ಅಧ್ಯಯನ'**ವನ್ನು ಎಂಬತ್ತು ಪುಟಗಳಷ್ಟು ವಿಸ್ತಾರವಾಗಿ ನಡೆಸಿದ್ದಾರೆ. ಇದೇ ನಿಬಂಧದ ಬಹುಮುಖ್ಯಭಾಗ. ಇಲ್ಲಿ ಮೊದಲಿಗೆ ಜನಪದ ಮಹಾಕಾವ್ಯಗಳ ಕುರಿತು ಖಚಿತವಾದ ವ್ಯಾಖ್ಯೆ ನೀಡಿ, ಅದರ ಲಕ್ಷಣಗಳನ್ನು ಪಟ್ಟಿಮಾಡಿದ್ದಾರೆ. ಈ ವ್ಯಾಖ್ಯೆ ಮತ್ತು ಲಕ್ಷಣಗಳ ನಿರೂಪಣೆ ಸರಿಯಾಗಿಯೇ ಇದೆ. ಕನ್ನಡದಲ್ಲಿ ಬಹುಶಃ ಮೊದಲ ಬಾರಿಗೆ ಇಂಥ ವಿವೇಚನೆ ಇಲ್ಲಿ ನಡೆದಿರುವಂತೆ ಕಾಣುತ್ತದೆ. ಅನಂತರ ಈ ಮಹಾಕಾವ್ಯಗಳಲ್ಲಿ ಕಥನ ಕ್ರಮದ ವಿನ್ಯಾಸವನ್ನು ಕುರಿತು ವಿಶ್ಲೇಷಿಸಿದ್ದಾರೆ. ಅನಂತರ ಜ. ಮಹಾಕಾವ್ಯಗಳ ರಚನೆಯಲ್ಲಿ ಕಂಡುಬರುವ ಸಾಮಾನ್ಯ ಅಂಶಗಳು, ಕಾವ್ಯ ಗಾಯನ ಶೈಲಿ, ವಾಕ್ ಪರಂಪರೆಯಲ್ಲಿ ಶಬ್ದಶಕ್ತಿ, ಪ್ರದರ್ಶನದ ವಿಭಿನ್ನ ನೆಲೆಗಳು, ಇವುಗಳ ಪ್ರಸಾರದ ನೆಲೆಗಳನ್ನು ಕುರಿತು ಚಿಂತಿಸಿದ್ದಾರೆ.

ನಾಲ್ಕನೆಯ ಅಧ್ಯಾಯವನ್ನು **'ಸೂತ್ರರೂಪಿಕೆ'** ಎಂದು ಕರೆದಿದ್ದಾರೆ. ಜನಪದ ಕಾವ್ಯಗಳಲ್ಲಿ ಪದೇ ಪದೇ ಪುನರಾವರ್ತಿತವಾಗುವ ಭಾಗಗಳನ್ನು ಈ ಹೆಸರಿನಿಂದ ಕರೆದು ಅವುಗಳ ಸ್ವರೂಪ ಪ್ರಯೋಜನಗಳನ್ನು ವಿವರಿಸಿದ್ದಾರೆ. ಹೀಗೆ ಮಾಡುವಾಗ ಮಾದೇಶ್ವರ, ಹರಿಯಾಲಮ್ಮ ಮೊದಲಾದ ಕಾವ್ಯಗಳಲ್ಲಿ ಬಳಕೆಯಾಗಿರುವ ಇಂಥ ಸೂತ್ರರೂಪಿಕೆಗಳನ್ನೂ ಉದಾಹರಿಸಿ ಒಂದು ಕಾವ್ಯದಿಂದ ಇನ್ನೊಂದಕ್ಕೆ, ಒಂದು ಸಂದರ್ಭದಿಂದ ಮತ್ತೊಂದಕ್ಕೆ ಅವು ಅಳವಡುವಾಗ ಗಾಯಕರು ಮಾಡಿಕೊಳ್ಳುವ ಮಾರ್ಪಾಟುಗಳನ್ನು ತುಂಬ ಸ್ಪಷ್ಟವಾಗಿ ಗುರುತಿಸಿದ್ದಾರೆ. ಇವುಗಳು ಕಾವ್ಯದ ಆಸರೆಯ ರೂಪಗಳಾಗಿ, ಪರಿಣಾಮ ಸಾಧಕಗಳಾಗಿ, ಸವೆದ ಪದಗಳ ಬಳಕೆಯ ನಿಯಂತ್ರಣಕ್ಕೆ, ಕೇಳುಗನ ಆಸಕ್ತಿಯನ್ನು ಉಳಿಸಿಕೊಳ್ಳಲಿಕ್ಕೆ ಹೀಗೆ ವಿವಿಧ ಕಾರಣಗಳಿಗಾಗಿ ಹೇಗೆ ಅನಿವಾರ್ಯ ಎಂಬುದನ್ನು ವಿವರಿಸಿದ್ದಾರೆ.

ಐದನೆಯ ಅಧ್ಯಾಯದಲ್ಲಿ **ಜನಪದ ಮಹಾಕಾವ್ಯಗಳ ವಸ್ತು ವಿವೇಚನೆ** ನಡೆಸಿದ್ದಾರೆ. ಕನ್ನಡದ ಪ್ರಮುಖ ಜನಪದ ಮಹಾಕಾವ್ಯಗಳಲ್ಲಿ ವಸ್ತುವನ್ನು ರೂಪಿಸುವ, ಒಂದೇ ಕಾವ್ಯದ ವಿವಿಧ ಪಾಠಗಳಲ್ಲಿ ಅದು ಮಾರ್ಪಾಟಾಗುವ, ಹಲವು ಕಾವ್ಯಗಳಲ್ಲಿ ವಸ್ತುವಿಗೆ ಹೋಲಿಕೆ ವ್ಯತ್ಯಾಸವಿರುವ – ಇಂಥ ಗಂಭೀರ ಅಂಶಗಳನ್ನು ತುಲನಾತ್ಮಕವಾಗಿ ವಿವೇಚಿಸುತ್ತಾ, ಅವುಗಳು ಸಾಮಾಜಿಕವಾಗಿ ಉಂಟು ಮಾಡಿದ ಪರಿಣಾಮ, ಪ್ರಭಾವ, ಹಾಗೂ ಆಯಾ ಕಾಲದ ಆಯಾ ಸಮುದಾಯಗಳ ಸ್ಥಿತಿಯ ಚಿತ್ರಣ ಅಲ್ಲಿ ಅಡಗಿರುವುದನ್ನು

ಸೊಗಸಾಗಿ ವಿಶ್ಲೇಷಿಸುತ್ತಾ ಈ ಜನಪದ ಕಾವ್ಯಗಳ ಹಾಡುಗಾರರು ಹೇಗೆ 'ಇತಿಹಾಸ ಕಟ್ಟುತ್ತಾರೆ' ಎಂಬುದು ಮನದಟ್ಟಾಗುವಂತೆ ಮಾಡುತ್ತಾರೆ.

ಕೊನೆಯ ಅಧ್ಯಾಯವೇ 'ಸಮಾರೋಪ'. ಕೇವಲ ನಾಲ್ಕು ಪುಟಗಳ ಈ ಭಾಗ ಈವರೆಗಿನ ವಿಶ್ಲೇಷಣೆಯನ್ನು ಸಂಗ್ರಹಿಸುತ್ತಾ ಜನಪದ ಮಹಾಕಾವ್ಯಗಳು ಹೇಗೆ ಸಂಸ್ಕೃತಿಯ ಜೀವಂತ ಸ್ಮೃತಿಗಳಾಗಿವೆ ಎಂಬುದನ್ನು ಮನಗಾಣಿಸಿದ್ದಾರೆ. ತುಂಬ ಕುತೂಹಲಕರ ಅಂಶವೆಂದರೆ ಸಾಮಾನ್ಯವಾಗಿ ಅನೇಕ ನಿಬಂಧಗಳಲ್ಲಿ ಮಾಡುವಂತೆ ಇಲ್ಲಿ ಮುಂದಿನ ಸಂಶೋಧಕರಿಗೆ, ಸಂಶೋಧನೆಗೆ ಯಾವ ಸೂಚನೆಗಳನ್ನೂ ಕೊಟ್ಟಿಲ್ಲ. ಇದು ತುಂಬ ಧ್ವನಿಪೂರ್ಣವಾದ ನಡೆ ಎನಿಸುತ್ತದೆ.

ಕುರುವ ಬಸವರಾಜ್ ಅವರ ಈ ಕೃತಿ ಇತರ ಅಧ್ಯಯನ ಕೃತಿಗಳಿಗಿಂತ ಅನೇಕ ರೀತಿಯಲ್ಲಿ ಭಿನ್ನವಾಗಿ ಗಮನ ಸೆಳೆಯುವಂತಿದೆ. ಮೊದಲನೆಯದಾಗಿ ಇವರು ನಿರೂಪಿಸಲು ತೊಡಗಿರುವ ವಿಷಯವೇ ಈವರೆಗೂ ಯಾರೂ ನೇರವಾಗಿ ಕೈಗೆತ್ತಿಕೊಳ್ಳದೆ ಇರುವಂಥದು. ಕಾವ್ಯ ನಿರ್ಮಾಣದ ಮೂಲಭೂತ ನೆಲೆಗಳನ್ನು ವಾಕ್ ಪರಂಪರೆಯ ಆಧಾರದ ಮೇಲೆ ಶೋಧಿಸುವಾಗ ಯಾವೆಲ್ಲ ಎಚ್ಚರ, ಸಿದ್ಧತೆ, ಚರ್ಚೆಗಳನ್ನು ನಡೆಸಬೇಕೋ ಅದೆಲ್ಲವನ್ನೂ ಇವರು ನಡೆಸಿಯೇ ಈ ಬರವಣಿಗೆಗೆ ಇಳಿದಿದ್ದಾರೆ. ಎರಡನೆಯ ಮುಖ್ಯ ಅಂಶವೆಂದರೆ – ಇಡೀ ಕೃತಿಯಲ್ಲಿ ಕಂಡುಬರುವ ಸಂಗ್ರಹ ಗುಣ ಹಾಗೂ ಸ್ಪಷ್ಟತೆ. ಎಲ್ಲಿಯೂ ಅನಗತ್ಯ ಲಂಬಿಸುವಿಕೆ ಇಲ್ಲ. ಈ ನಿಬಂಧದ ಒಂದು ಪುಟವನ್ನಾದರೂ ಅನಗತ್ಯ ಎಂದು ತೆಗೆದು ಹಾಕುವಂತೆ ಇಲ್ಲ. ಇಷ್ಟು ಪ್ರಬುದ್ಧವಾದ ಗಟ್ಟಿ ಬರವಣಿಗೆ ಇದ್ದರೂ ಈ ಕೃತಿಯಲ್ಲಿ ಎಲ್ಲಿಯೂ ಲೇಖಕನ ಅಹಮಿಕೆ ಒಂದಿಷ್ಟಾದರೂ ಕಾಣುವುದಿಲ್ಲ. ಈ ನಮ್ರತೆ ಇತರ ಲೇಖಕರಿಗೆ ಮಾದರಿಯಾಗುವಂತಿದೆ. ಅನೇಕ ವಿದ್ವಾಂಸರ ಚಿಂತನೆಗಳ ನೆರವನ್ನು ಪಡೆದಿದ್ದಾರಾದರೂ ಅದನ್ನೆಲ್ಲ ತುಂಬ ಎಚ್ಚರಿಕೆಯಿಂದ ತೂಗಿ ಬಳಸಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಕನ್ನಡದಲ್ಲಿ ಎಂಥ ಅಧ್ಯಯನಗಳು ಜಾನಪದಕ್ಕೆ ಸಂಬಂಧಿಸಿದಂತೆ ನಡೆಯಬೇಕೆಂಬುದನ್ನು ಮೌನವಾಗಿ ಸೂಚಿಸುವಂತೆ ಈ ಸಣ್ಣಗಾತ್ರದ ಪುಸ್ತಕವಿದೆ.

ಎಸ್.ಪಿ. ಪದ್ಮಪ್ರಸಾದ್

ಮುದ್ದಾದ ಪುಟ್ಟ ಕೃತಿಗಳು

* **ಬಲೀಂದ್ರ:** ಲೇ. ಸ.ಚಿ. ರಮೇಶ್, ಪು.೪+೩೬, ಬೆಲೆ ರೂ. ೨೦/–
* **ಗೆದರೆ ಬೆಟ್ಟ ಮತ್ತು ಗುರುಮಕ್ಕಳು: ಒಂದು ತೌಲನಿಕ ಜಾನಪದ ಅಧ್ಯಯನ:** ಲೇ. ಮ.ನಾ. ಕೃಷ್ಣಮೂರ್ತಿ; ಪು. ೪+೨೮, ಬೆಲೆ ರೂ. ೨೦/–
* **ಪಾಂಚಾಳರ ಬದುಕು ಮತ್ತು ಸಂಸ್ಕೃತಿ:** ಲೇ. ಶೇಖರಾಚಾರಿ ಕೆ. ಪು. ೪+೪೨; ಬೆಲೆ ರೂ. ೨೦/–
* **ಮೂರು ಜಾವಿ ದೇವರ ಪರಂಪರೆ:** ಲೇ॥ ಮನೋಹರ ಎಸ್. ದೊಡ್ಡಮನಿ. ಪು.೪+೩೨; ಬೆಲೆ ರೂ ೨೦/–
* **ಮರೇಗುದ್ದಿ ಅಡವಿ ಸಿದ್ದೇಶ್ವರ ಮಠದ ಪರಂಪರೆ:** ಲೇ. ಅಶೋಕ ನೆರೋಡೆ. ಪು.೪+೩೨; ಬೆಲೆ ರೂ. ೨೦.

ಈ ನಾಲ್ಕು ಕೃತಿಗಳನ್ನು ತನ್ನ **ಮಂಟಪ ಮಾಲೆ**ಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿದೆ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ, ಮಂಟಪ ಮಾಲೆಯ ಬಲೀಂದ್ರ ಪುಟ್ಟ ಪುಸ್ತಕ ಮಳೆದೇವತೆಯಾದ **ಬಲೀಂದ್ರ**ನ ಬಗೆಗಿನ ಜಾನಪದೀಯ ಅಧ್ಯಯನವಾಗಿದೆ. ಕೃಷಿ ಸಂಬಂಧಿ ಆಚರಣೆಯ ಹಿನ್ನೆಲೆಯಲ್ಲಿ ರೂಢಿಗತವಾಗಿರುವ ಬಲೀಂದ್ರ. ಮಲೆನಾಡಿಗರ ಸಂಭ್ರಮದ ಆಚರಣೆ. ಜನಪದರ ನಂಬಿಕೆ, ಸಂಪ್ರದಾಯಗಳ ರೂಪವಾಗಿ, ದೀಪಾವಳಿಯ ಸ್ವರೂಪದಲ್ಲಿ ರೈತಾಪಿ ಜನ ಆಚರಿಸುವ ಬಲೀಂದ್ರ ಜನಪದ, ಪುರಾಣಗಳೊಂದಿಗೆ ವರ್ತಮಾನದ ಹಲವು ಬಗೆಯ ಆಚರಣೆ ಹಾಗೂ ಆ ಸಂಬಂಧಿ ನಂಬಿಕೆಯನ್ನು ಈ ಪುಟ್ಟ ಕೃತಿ ವಿಶ್ಲೇಷಿಸಿರುವುದು; ಪೂರಕ ಜನಪದ ಗೀತೆಗಳ ಸಂಗ್ರಹದ ಮಾದರಿಗಳನ್ನು ಸಾಂದರ್ಭಿಕವಾಗಿ ಒದಗಿಸಿರುವುದು ಕೂಡ ಈ ಗ್ರಂಥಕ್ಕೆ ಬನಿ ತಂದಿದೆ.

ಪುರಾಣಗಳಲ್ಲಿ ಬಲಿಯನ್ನು ಕೆಟ್ಟದಾಗಿ ಬಿಂಬಿಸುವುದನ್ನು ಮೌಖಿಕ ಪರಂಪರೆ ಒಪ್ಪುವುದಿಲ್ಲ. ಬದಲಾಗಿ, ಸುಗ್ಗಿ, ಸಂಭ್ರಮದ ಆಚರಣೆಯ ಮೂಲಕ ಬಲೀಂದ್ರನನ್ನು ಅನ್ನದ ದೇವತೆಯಾಗಿ ಪರಿಭಾವಿಸುವುದು, ಬಲೀಂದ್ರನನ್ನು ಭೂಮಿಯ ಮಗನೆಂದು ಒಪ್ಪಿಕೊಂಡಿರುವುದುನ್ನು ಪಿತೃ ಪರಂಪರೆಯ ಹಿನ್ನೆಲೆಯಲ್ಲಿಯೂ ಲೇಖಕರು ವಿಚಾರ ಮಾಡಿದ್ದಾರೆ. ಪುರಾಣಗಳು ಬಲಿಯನ್ನು 'ಅಸುರ' ಎಂದು ಪರಿಭಾವಿಸಿದರೆ, ಜನಪದರು ದೈವಸಂಬಂಧಿಯಾಗಿ ಕಾಣುತ್ತಾರೆ. ಋತುಮಾನದ ಸಂಕೇತವಾಗಿ ಮಳೆ ದೇವತೆಯಾಗಿ ಕಾಣಿಸಿಕೊಳ್ಳುವುದು ಇಲ್ಲಿನ ವಿಶೇಷ. ಮಲೆನಾಡಿನಲ್ಲಿ ಪಾಡ್ಯದ ಸಂದರ್ಭದಲ್ಲಿ ನಾಲ್ಕು ದಿನಗಳ ಕಾಲ ನಡೆಯುವ ಬಲೀಂದ್ರ ಪೂಜೆ; ತಾವು ವರ್ಷಪೂರಾ ಪಟ್ಟ ಪರಿಶ್ರಮಕ್ಕೆ

ಬೆಳೆ ಕೈಗೆ ಬಂದ ಸಡಗರವಾಗಿ ಬಲೀಂದ್ರ ಮೈತಾಳುವುದು ಇಲ್ಲಿನ ರೂಢಿ. ಮಣ್ಣಿನ ಕೃತಕ ಮೂರ್ತಿ ರಚನೆ, ಪೂಜೆ, ದೀಪಾಲಂಕಾರ, ವರ್ಷದ ಹೊಸ ಬೆಳೆಗಳಿಂದ ಮಾಡುವ ವಿಶೇಷ ತಿಂಡಿ ಪದಾರ್ಥ, ಕೃಷಿ ಉಪಕರಣಗಳು, ದನಕರುಗಳ ವಿಶೇಷ ಅಲಂಕಾರ, ಪೂಜೆ, ಆಹಾರ ನೀಡಿಕೆ, ಬಯಲು ಸೀಮೆಯ ಬಸವಜಯಂತಿ ಸಡಗರವನ್ನು ಹೋಲುತ್ತದೆ. ಜೊತೆಗೆ ಹಬ್ಬದ ನಂತರದ ದಿನದಂದು ತಯಾರಿಸುವ ಕರಿ-ಮಾಂಸಾಹಾರ, ಸಾರ್ವತ್ರಿಕ ಭೋಜನದ ಒಂದು ಭಾಗವಾಗಿ ರೂಢಿಯಲ್ಲಿರುವುದನ್ನು ಲೇಖಕರು ಖಚಿತವಾಗಿ ಗುರುತಿಸುತ್ತಾರೆ. ಕರಾವಳಿ ಭಾಗದಲ್ಲಿ ಹಿರಿಯರ ಹಬ್ಬವಾಗಿ, ಪಿತೃ ಸಂತೃಪ್ತಿಯ ಭಾಗವಾದ ಆಚರಣೆಯ ಹಿನ್ನಲೆ, ಆರ್ಯ-ದ್ರಾವಿಡ ಜನಾಂಗಿಕ ಕಲಹ, ದ್ರಾವಿಡರ ವಿಜಯೋತ್ಸವ, ಆರ್ಯರು ಬಲಿಚಕ್ರವರ್ತಿಯ ನಾಶದ ವಿವರಗಳೊಂದಿಗೆ ಮಲೆಯಾಳದ ಬೋವಿ ಜನಾಂಗ, ತುಳುವರಲ್ಲಿ ಸಹಿತ ಬಲೀಂದ್ರ ಆಚರಣೆ, ಅಲ್ಲಿಯೂ ಕೃಷಿ ಕಾಯಕದ ಹಿನ್ನಲೆ; ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ, ಕರೆಒಕ್ಕಲಿಗ, ಗ್ರಾಮೊಕ್ಕಲು, ಗೊಂಡರು, ಮರಾಠಿನಾಯ್ಕ, ಹರಿಕಾಂತರು; ಮುಕ್ರಿಯರು; ಹಸಲರು, ಇವರೆಲ್ಲರು ಬಲೀಂದ್ರನ ಆರಾಧನೆಯ ಸ್ವರೂಪವನ್ನು ಲೇಖಕರು ಆಯಾಯ ಜನಾಂಗಿಕ ಆಚರಣೆ, ಕಲಾ ಉತ್ಸವ, ಒಕ್ಕಲುತನ, ಮಳೆ-ಬೆಳೆಯ ಪ್ರತಿರೂಪದ ಬಲೀಂದ್ರ, ಕೃಷಿ ಹಾಗೂ ಭೂಮಿ ಮೂಲತನಗಳಿಂದ ದೇಶಿಯತೆಯ ಸಾಂಸ್ಕೃತಿಕ ಆಯಾಮ, ಸಾಂಸ್ಕೃತಿಕ ವೈವಿಧ್ಯತೆಯನ್ನು ಬಲೀಂದ್ರನ-ಆಚರಣೆ ಯೊಂದಿಗೆ ಹೇಗೆ ಮುಖಾಮುಖಿಗೊಂಡು ಸಾಂಸ್ಕೃತಿಕ ಅನನ್ಯತೆ, ಜನಾಂಗಿಕ ಅನುಸಂಧಾನಗಳೊಂದಿಗೆ ರೂಪುಗೊಂಡಿದೆ ಎಂಬುದನ್ನು ಲೇಖಕರು ಸೊಗಸಾಗಿ ನಿರೂಪಿಸಿದ್ದಾರೆ. ವ್ಯಾಪಕ ಕ್ಷೇತ್ರ ಕಾರ್ಯದ ಪ್ರತಿರೂಪವಾದ ಜನಪದ ಹಾಡುಗಳ ಅನುಬಂಧವೂ ಉಪಯುಕ್ತವಾಗಿದೆ. ಪೂರಕವಾಗಿ ಲೇಖಕರು ಬಲೀಂದ್ರನ ಬಗೆಗಿನ ಸಾಮಗ್ರಿಯ ವಿವರಿಸುವ ಪುರಾಣ, ಇಂಗ್ಲೀಷ್ ಭಾಷೆಗಳ ಲೇಖನ-ಗ್ರಂಥಸೂಚಿಯೂ ಹೆಚ್ಚಿನ ವ್ಯಾಸಂಗಕ್ಕೆ ತೋರುಗಂಬ ನಿರ್ಮಿಸಿದೆ.

ಗೆದರೆ ಬೆಟ್ಟ ಮತ್ತು ಗುರು ಮಕ್ಕಳು; ಒಂದು ತೌಲನಿಕ ಜಾನಪದ ಅಧ್ಯಯನ ಇದೊಂದು ಪ್ರಾದೇಶಿಕ ಅಧ್ಯಯನ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ- ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿರುವ ಗೆದರೆ ಬೆಟ್ಟದ-ಸ್ಥಳದ ಸಾಂಸ್ಕೃತಿಕ ಐತಿಹ್ಯದ ಒಂದು ರೂಪ. ವಾಸ್ತವವಾಗಿ ಇಲ್ಲಿ ಯಾವ ತೌಲನಿಕ ಅಧ್ಯಯನವೂ ನಡೆದಿಲ್ಲ. ಗೆದರೆ ಬೆಟ್ಟದ ಜನಜೀವನ, ಅಲ್ಲಿನ ಧಾರ್ಮಿಕ ಆಚರಣೆ, ಜನಾಂಗಿಕ ವಿವರ, ಗುರುಬೋಧನೆಯ ಸ್ವರೂಪ ಈ ವಿವರಗಳಿಗೆ ಮಾತ್ರ ಕೃತಿ ಸೀಮಿತವಾಗಿದೆ.

ಗೇಗರೆ ಎಂಬ ಹಳ್ಳಿಗೆ ತೀರಾ ಸಮೀಪದಲ್ಲಿಯೇ ಪ್ರಕೃತಿ ರಮಣೀಯವಾದ ಒಂದು ತಪ್ಪಲು ಪ್ರದೇಶ. ಈ ಕಾರಣದಿಂದಾಗಿಯೇ ಈ ಬೆಟ್ಟಕ್ಕೆ ಗೆದರೆ ಬೆಟ್ಟ ಎಂತಲೇ ಕರೆಯುವುದು ವಾಡಿಕೆಯಾಗಿದೆ. ಇಪ್ಪತ್ತೇಳು ಪುಟಗಳಲ್ಲಿ ಈ ಬೆಟ್ಟದ ಪೌರಾಣಿಕ, ಐತಿಹಾಸಿಕ, ಇವುಗಳ ಜೊತೆಗೆ ಜನಪದ ಐತಿಹ್ಯಗಳ ಒಂದಿಷ್ಟು ಭಾಗವನ್ನು ಸೇರಿಸಿ ಲೇಖಕರು ಈ ಪುಸ್ತಕವನ್ನು ವಿಸ್ತರಿಸಿದ್ದಾರೆ. ಈ ಬೆಟ್ಟ-ಹಲವು ಬೆಟ್ಟಗಳ ತಪ್ಪಲು ಪ್ರದೇಶ. ಹಾಗಾಗಿ ಇಲ್ಲಿ ಜನಸಂಖ್ಯೆ ವಿರಳ. ಇಂಥ ವಿರಳ ನೆಲೆಯಲ್ಲಿ ಆಶ್ರಯ ಪಡೆದ ಸಾಧು-ಸಿದ್ಧರು, ಬೈರಾಗಿಗಳು, ಇಲ್ಲಿ ತಂಗುತ್ತಾ ಈ ಭಾಗದ ಹಲವಾರು ಹಳ್ಳಿಗಳಲ್ಲಿ ಭಿಕ್ಷಾಟನೆ ಮಾಡುತ್ತಾ ಬದುಕುತ್ತಿರುವ ಚಿತ್ರ ಒಂದು ಕಡೆಯಾದರೆ ಮತ್ತೊಂದು ಕಡೆ ಬೈರಾಗಿಗಳು ಇಲ್ಲಿ ಹಿರಿಯ ಸನ್ಯಾಸಿಗಳಿಂದ ದೀಕ್ಷೆ ಸ್ವೀಕರಿಸುವ, ದೀಕ್ಷೆ ನೀಡುವ ಅತಿ ಸರಳ, ನೇರ, ಸಾಂಸ್ಕೃತಿಕ ಮಾಹಿತಿಯನ್ನು ಲೇಖಕರು ಸೊಗಸಾಗಿ ನಿರೂಪಿಸುತ್ತಾರೆ. ಹೀಗೆ ಸನ್ಯಾಸ ದೀಕ್ಷೆ ಪಡೆಯುವವರಲ್ಲಿ ದಲಿತರು, ಅಸಹಾಯಕರು, ಕೆಳಜಾತಿಯ ಅಸಂಘಟಿತರ ಧಾರ್ಮಿಕ ಆಸಕ್ತಿಗಳ ಒಂದು ನೆಲೆ ಎಂಬುದನ್ನು ವಿವರಿಸುತ್ತಾರೆ. ಜಾತಿಯಿಂದ ಯಾವುದೇ ಮೂಲವಾದರೂ, ಗೆದರೆ ಬೆಟ್ಟ ತಲುಪುತ್ತಿದ್ದಂತೆ ಜಾತ್ಯಾತೀತರಾಗಿಬಿಡುವ ಪ್ರಮುಖ ಮಾನವೀಯ ಆಯಾಮವನ್ನು ಲೇಖಕರು ಇಲ್ಲಿ ಗುರುತಿಸುತ್ತಾರೆ. ಜೊತೆಗೆ ಮಾಂಸಾಹಾರ ವಿರೋಧಿಸುವ ಪ್ರಯತ್ನ ಇಲ್ಲಿ ಇದೆಯಾದರೂ, ಅದೊಂದು ಕಡ್ಡಾಯ ನಿಯಮವಾಗಿ ರೂಢಿಗತವಾಗಿಲ್ಲ ಎಂಬುದನ್ನು ಲೇಖಕರು ವಿವರಿಸುತ್ತಾರೆ. ತೊಂಡೇಬಾವಿ, ಗೌರಿಬಿದನೂರು ಈ ಭಾಗಗಳಲ್ಲಿ ತಿರುಗಾಡುವ, ಭಿಕ್ಷಾಟನೆಗೆ ಬರುವ ಯಾರೇ ಸಾಧುವನ್ನು ಗೆದರೆ ಬೆಟ್ಟದಿಂದ ಗುರುತಿಸುವ, ಆತನೂ 'ಗೆದರೆ ಬೆಟ್ಟದ ಸನ್ಯಾಸಿ' ಎಂದು ಹೇಳಿಕೊಳ್ಳುವ ಸಂಪ್ರದಾಯವನ್ನು ಲೇಖಕರು ವಿವರಿಸಿದ್ದಾರೆ.

ಕೊನೆಯ ಭಾಗದಲ್ಲಿ ಗೆದರೆ ಬೆಟ್ಟದ ಸನ್ಯಾಸಿಗಳ ಜೀವನ ಕ್ರಮ, ದೀಕ್ಷಾ ಸಂಹಿತೆ, ವಸ್ತ್ರಸಂಹಿತೆ, ಆಹಾರ ಸಂಹಿತೆ, ಭಾಷಾ ಸಂಹಿತೆ, ನೀತಿ ಸಂಹಿತೆ, ಭಜನಾ ಸಂಹಿತೆ, ನಂಬಿಕೆ, ನಡಾವಳಿ- ಈ ಎಲ್ಲವುಗಳ ಕುರಿತ ಕಿರುಪರಿಚಯ ಈ ಪುಸ್ತಕದಲ್ಲಿದೆ. ಇದೊಂದು ಪಾರಂಪರಿಕ ಗುರುಮತ ಎಂಬುದನ್ನು ವಿವರಿಸುವ ಲೇಖಕರು ಗೆದರೆ ಬೆಟ್ಟದಲ್ಲಿರುವ ಸಮಾಧಿಗಳು, ಅಲ್ಲಿನ ಕಲ್ಯಾಣಿ, ಅಲ್ಲಿನ ದೈವೀ ಆಚರಣೆ, ಧಾರ್ಮಿಕ ಅದಿದೇವತೆ, ಈ ಎಲ್ಲ ಚಿತ್ರಗಳನ್ನು ಕಿರಿದಾಗಿ ನೀಡುತ್ತಾರೆ.

ಪಾಂಚಾಳರ ಬದುಕು ಮತ್ತು ಸಂಸ್ಕೃತಿ- ಅವರ ಒಂದು ಜನಾಂಗಿಕ ಅಧ್ಯಯನ. ಇದರ ಜೊತೆಗೆ 'ಮೂರು ಜಾವಿ ದೇವರ ಪರಂಪರೆ' ಎಂಬ ಕೃತಿಯೂ ಇದೇ ಮಾಲೆಯಲ್ಲಿ ಪ್ರಕಟವಾಗಿದೆ. ಈ ಎರಡೂ ಗ್ರಂಥಗಳು ವಿಶ್ವಕರ್ಮ ಜನಾಂಗದ ಜನಾಂಗಿಕ

ವಿಕಾಸ, ಬದುಕು, ಸಾಂಸ್ಕೃತಿಕ, ಐತಿಹಾಸಿಕ ಮಹತ್ವವನ್ನು ಹೇಳುವ ಕೃತಿಗಳು. ಪಾಂಚಾಳರು ಯಾರು ಎಂಬುದನ್ನು ಲೇಖಕರು ಹೀಗೆ ವಿವರಿಸುತ್ತಾರೆ. 'ಕಬ್ಬಿಣ, ಕಟ್ಟಿಗೆ, ಬೆಳ್ಳಿ, ಕಂಚು, ಬಂಗಾರ– ಈ ಬಗೆಯ ವಸ್ತುಗಳ ಕಾಯಕ ನಿರತ ಅಥವಾ ಕುಲ ಕರ್ಮಿಗಳೇ– ಪಾಂಚಾಳರು. ಈ ಪಾಂಚಾಳರು ಗ್ರಾಮ ಸಮುದಾಯದ ರೈತಾಪಿ ಬದುಕಿನಿಂದ ಆರಂಭಿಸಿ, ಚಿನ್ನದ ಆಭರಣಗಳ ಮೂಲಕ ಸಮುದಾಯಾಧಾರಿತ ಜೀವನ ವಿಧಾನಗಳಿಂದ ಬದುಕುವುದು ಪಾಂಚಾಳರ ಕಾಯಕ' ಮಾತ್ರವಲ್ಲ ಸದಾ ರಚನಾತ್ಮಕ ಕಾಯಕದಲ್ಲಿ ತೊಡಗುತ್ತಾ, ಸಮುದಾಯಾಧಾರಿತ ರಕ್ಷಣೆ, ದಾನ, ಈ ಬಗೆಯ ಕೆಲಸದ ದಾಖಲಾತಿಗಾಗಿ ಶಿಲ್ಪ, ಶಾಸನ, ಇವುಗಳ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಪಾಂಚಾಳರ ಬದುಕಾಗಿದೆ. ಈ ಸಂಬಂಧಿ ಸುಮಾರು ೨೮ ಶಾಸನಗಳಲ್ಲಿ ಪಾಂಚಾಳರ ಮಹತ್ವದ ಜನೋಪಕಾರಿ ಕೆಲಸಗಳನ್ನು ಆಯಾಯ ಶಾಸನಗಳ ಸಾರವನ್ನು ಲೇಖಕರು ಉಲ್ಲೇಖಿಸಿ, ಪಾಂಚಾಳರ ಸಮಾಜ ಮುಖಿ ಬದುಕಿನ ಮಾದರಿಗಳನ್ನು ಪರಿಚಯಿಸುವುದು ಈ ಗ್ರಂಥದ ವಿಶೇಷವಾಗಿದೆ. ಜೊತೆಗೆ ಶಿಷ್ಟ ಪರಂಪರೆಯ ಸಾಹಿತ್ಯ ಕೃತಿಗಳಲ್ಲೂ ಕಂಡುಬರುವ ಪಾಂಚಾಳರ ಶಕ್ತಿ, ಸಾಮರ್ಥ್ಯ, ಪ್ರತಿಭೆ, ಪಾಂಡಿತ್ಯದ ವಿವರಗಳನ್ನು ಒದಗಿಸುವ ಲೇಖಕರು ಪಾಂಚಾಳ ಜನಾಂಗಿಕ ವಿವರ ನೀಡುತ್ತಾ ಆರಂಭದಲ್ಲಿ ಪಾಂಚಾಳ ಶಬ್ದ ನಿಷ್ಪತ್ತಿ, ಜನಾಂಗಿಕ ರೂಪಾಂತರ, ವೃತ್ತಿಸೂಚಕ ಪದ ಪ್ರಯೋಗಗಳನ್ನು ವಿವರಿಸುತ್ತಾರೆ. ಲೇಖಕರು, ಕೊನೆಯ ಭಾಗದಲ್ಲಿ ಪಾಂಚಾಳರ ಕರುಳು ಬಳ್ಳಿ ಸಂಬಂಧವಾದ ಉಪಪಂಗಡಗಳ ವಿವರ, ಕಾಯಕ, ಬದುಕಿನ ಮಾದರಿ, ಇವುಗಳನ್ನು ಖಚಿತವಾದ ನೆಲೆಯಲ್ಲಿ ಪರಿಚಯಿಸಿರುವುದು ವಿಶೇಷವಾಗಿದೆ. ಆ ಹಿನ್ನೆಲೆಯಲ್ಲಿ–ಪಾಂಚಾಳ ಸಮುದಾಯ ಆರಂಭಿಕ ಹಂತದಿಂದ – ಕೌಶಲ್ಯಾಧಾರಿತವಾದ ವೃತ್ತಿಗಳನ್ನು ಅವಲಂಬಿಸಿ, ಅದರಲ್ಲೇ ಪರಿಣತಿ ಪಡೆದು, ಪ್ರಸಿದ್ಧರಾದ ಬಗೆಯನ್ನು ಕುತೂಹಲ ಕಾರಿಯಾಗಿ ಪರಿಚಯಿಸುತ್ತಾರೆ. ವೃತ್ತಿಯಾಧಾರಿತ ಜಾತಿಗಳಾದ, ಕಮ್ಮಾರ, ಬಡಿಗೇರ, ಅಕ್ಕಸಾಲಿಗ, ಶಿಲ್ಪಕಾರ, ಕಂಚುಗಾರ– ಈ ಐದು ಜನಾಂಗಿಕ ವಿವರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ನಿರೂಪಿಸುವ ಲೇಖಕರು ಈ ಒಂದೊಂದೂ ಜಾತಿಗಳಾಗಿ ಪ್ರತ್ಯೇಕತೆ ಪಡೆದು, ಒಂದು ಜಾತಿಗೂ ಮತ್ತೊಂದು ಜಾತಿಗೂ ಸಂಬಂಧವೇ ಇಲ್ಲದಂತೆ ಸ್ವತಂತ್ರ ಅಸ್ತಿತ್ವ ಪಡೆದುಕೊಂಡ ಬಗೆಯನ್ನು, ಈ ಜಾತಿಗಳ ಪದ ನಿಷ್ಪತ್ತಿಯ ಮೂಲಕ ವಿವರಿಸುತ್ತಾ ಹೋಗುತ್ತಾರೆ. ಉದಾ: ಅಕ್ಕಸಾಲಿಗ ಎಂಬುದು ಒಂದು ಚಿನ್ನದ ಕೆಲಸ ಮಾಡುವ ಸಮುದಾಯ. ಆದರೂ ಆ ಶಬ್ದ ವೃತ್ತಿಗೂ ಬಾರದೆ 'ಅರ್ಕ' ಮೂಲದಿಂದ ಬಂದಿದೆ ಎನ್ನುತ್ತಾರೆ. ಅರ್ಕ ಎಂದರೆ ಅರಗು, ಅಥವಾ ಅರಗನ್ನು ಕರಗಿಸುವ ವಸ್ತು. ಅರ್ಕಸಾಲೆಗೆ 'ಇಗ' ಪ್ರತ್ಯಯ ಸೇರಿಸಿ ಅಕ್ಕಸಾಲಿಗ ಆಗಿದೆ ಎಂದು ವಿವರಿಸುವ ಲೇಖಕರು, ಕೌಟಿಲ್ಯನ ಉಲ್ಲೇಖವನ್ನು ಒದಗಿಸುತ್ತಾರೆ. ಇದೇ ಬಗೆಯ ಜಾತಿ ಸೂಚಕ ವಿವರಣೆ ಪಾಂಚಾಳ ಜನಾಂಗದ ಉಳಿದ

ಕಮ್ಮಾರ, ಬಡಿಗೇರ, ಶಿಲ್ಪಗಾರ, ಕಂಚುಗಾರ– ಇವರ ಬಗೆಗೂ ನೀಡಿರುವುದು ಕುತೂಹಲ ಕಾರಿಯಾಗಿದೆ.

ಜನಾಂಗಿಕ ಹಿನ್ನೆಲೆಯ ಜಾತಿಯೊಂದರ ವಿಕಾಸ, ಉಪಪಂಗಡಗಳಾಗಿ ವರ್ಗೀಕರಣಗೊಂಡ ಸಂಗತಿಗಳಿಗೆ ಸಂಬಂಧಿಸಿದಂತೆ, ವಿವರವಾದ ಆಕರಗಳನ್ನು ಈ ಪಟ್ಟ ಪುಸ್ತಕದಲ್ಲಿ ಒದಗಿಸಿರುವ ಲೇಖಕರು, ಜಾನಾಂಗಿಕ ಅಧ್ಯಯನಕ್ಕೆ ತೋರುಗಂಬ ನಿರ್ಮಿಸಿದ್ದಾರೆ.

ಮೂರು ಜಾವಿ ದೇವರ ಪರಂಪರೆ ಸಹ ಒಂದು ಜನಾಂಗಕ್ಕೆ ಸಂಬಂಧಿಸಿದ ಅಧ್ಯಯನ. ವಿಶ್ವಕರ್ಮ ಜನಾಂಗವೇ ಮೂರು ಜಾವಿ ದೇವರ ಪರಂಪರೆಯವರು. ಎಲ್ಲ ಧರ್ಮವನ್ನು, ಎಲ್ಲ ದೇವರುಗಳನ್ನು ತಮ್ಮೊಳಗೆ ಮೇಳೈಸಿಕೊಂಡು ಬೆಳೆದ ಜನಾಂಗವೇ ಮೂರು ದೇವರ ಪರಂಪರೆಯವರು. 'ಮೂರು ಜಾವಿ ದೇವರ' ಎಂದರೇನು? ಇದೊಂದು ಅಪರೂಪದ ಬಳಕೆ. ವಿಶ್ವಕರ್ಮ ಜನಾಂಗಕ್ಕೂ, ಈ ಶಬ್ದಕ್ಕೂ ಇರುವ ಸಂಬಂಧ ಎಂತಹುದು ಎಂಬುದಕ್ಕೆ ಲೇಖಕರು ಪುರಾಣ ಮೂಲದಿಂದ ಮಾಹಿತಿ ಒದಗಿಸುವುದು ವಿಶೇಷವಾಗಿದೆ. ಆಚಾರ್ಯ ಅಥವಾ ವಿಶ್ವಕರ್ಮ ಪರಂಪರೆಯ ಮೂಲ ಪುರುಷರಲ್ಲೊಬ್ಬರಾದ ಶ್ರೀ ಚಿಕ್ಕೇಶ್ವರ ಎಂಬುವವರು ಸೂರ್ಯ ದೇವನೊಂದಿಗೆ ಒಡನಾಟ ಹೊಂದಿದ್ದು, ಸೂರ್ಯದೇವರನ್ನು ಮೂರು ಜಾವ (ಸಮಯ)ಕ್ಕೆ ತಂದು ನಿಲ್ಲಿಸಿದರೆಂದೂ, ಅಂದಿನಿಂದ ಅವರನ್ನು 'ಮೂರು ಜಾವಾಧೀಶ್ವರ' ಎಂದು ಕರೆದು, ವಿಶ್ವಕರ್ಮ ಜನಾಂಗದ ಸಂಸ್ಕಾರ, ಆಚಾರ ವಿಚಾರಗಳಿಗೆ ಪ್ರೇರಕವಾದರೆಂದು ಲೇಖಕರು ವಿವರ ಒದಗಿಸಿದ್ದಾರೆ.

ಶ್ರೀ ಚಿಕ್ಕೇಶ್ವರರು ಮಾನವೀಯ ನೆಲೆಯ ಒಡನಾಟ, ಜೀವನ ಕ್ರಮಗಳನ್ನು ಅನುಸರಿಸಿದರೂ, ತಮ್ಮ ಅಪೂರ್ವ ಹಾಗೂ ವಿಶಿಷ್ಟ ಪವಾಡ ಶಕ್ತಿಯಿಂದ ಅಪರೂಪದ ವ್ಯಕ್ತಿತ್ವ ರೂಢಿಸಿಕೊಂಡವರು. ಜೊತೆಗೆ ಹಲವಾರು ಪವಾಡಗಳನ್ನು ಮಾಡಿದವರು. ಇದಕ್ಕೆ ಸಂಬಂಧಿಸಿದ, ಐತಿಹ್ಯ, ಶಾಸನ, ಸಾಹಿತ್ಯಕ ಆಧಾರಗಳನ್ನು ಸಾಕಷ್ಟು ಗಟ್ಟಿಯಾಗಿಯೇ ಹೇಳಿದ್ದಾರೆ. ಹನ್ನೆರಡನೇ ಶತಮಾನದ ರಾಜಕೀಯ, ಧಾರ್ಮಿಕ ಸ್ಥಿತ್ಯಂತರ, ಪಲ್ಲಟಗಳನ್ನು ಪುಟ್ಟದಾಗಿಯೇ ಚರ್ಚಿಸಿರುವ ಲೇಖಕರು ಜೈನ–ವೈದಿಕ ಧರ್ಮ ತನ್ನ ಸಮನ್ವಯತೆ ಕಳೆದುಕೊಂಡ ಬಗೆ, ಚೋಳ, ಚಾಲುಕ್ಯ, ರಾಷ್ಟ್ರಕೂಟ, ಶಿಲ್ಪ ಬ್ರಾಹ್ಮಣರ ವರ್ಚಸ್ಸನ್ನು ಇಳಿಮುಖಗೊಳಿಸುವ ಹುನ್ನಾರು; ಬೇರೆ ಬೇರೆ ಘಟನೆಗಳು ಈ ಎಲ್ಲವುಗಳ ಪುಟ್ಟ ವಿವರಣೆ ಈ ಕಿರು ಹೊತ್ತಿಗೆಯಲ್ಲಿದೆ. ಈ ಸಂದರ್ಭದಲ್ಲೇ ಏಕಾಂತ ರಾಮಯ್ಯನ ಪವಾಡದ ಉಲ್ಲೇಖವೂ ಪ್ರಸ್ತಾಪವಾಗಿದ್ದು, ಅಲೂರು ಬ್ರಹ್ಮೇಶ್ವರ ದೇವಾಲಯದ ಭಕ್ತ

ಸ್ತೋಮ, ಅವರ ಮನಸ್ಥಿತಿ, ಅಂಥವರ ಮುಂದೆ ಏಕಾಂತ ರಾಮಯ್ಯ ತನ್ನ ತಲೆ ಕತ್ತರಿಸಿಕೊಂಡದ್ದು, ಇದಕ್ಕೆ ಪವಾಡದ ಚಿಕ್ಕೇಶ್ವರರ ಕೃಪೆಯಿಂದಾಗಿ ಕಡಿದ ಮುಂಡ ಕೂಡಿಕೊಂಡು ಮರು ಜೀವ ಪಡೆದ ವಿವರವನ್ನು ಲೇಖಕರು ಆತ್ಮೀಯವಾಗಿ ವಿವರಿಸುತ್ತಾರೆ. ಈ ಮೂಲಕ ಶಿವಭಕ್ತಿ ಪಾರಮ್ಯ ಅಧಿಕವಾದ ಸಾಂದರ್ಭಿಕ ಉದಾಹರಣೆಗಳನ್ನು ಲೇಖಕರು ಒದಗಿಸಿದ್ದಾರೆ.

ಮೂರು ಜಾವಿ ಪಂಥ ಲಾಕುಳಶೈವ, ಕಾಳಾಮುಖ, ಕಾಪಾಲಿಕರು, ಶಾಕ್ತಮತಗಳೊಂದಿಗೆ ಸಂಬಂಧ ಹೊಂದಿರುವ ಬಗೆಗಳನ್ನು ವಿವರಿಸುತ್ತಾರೆ. ಕರ್ನಾಟಕದಲ್ಲಿ ಮೂರು ಜಾವಿ ಮಠಪರಂಪರೆಯ ಪಟ್ಟಿ ನೀಡಿರುವ ಲೇಖಕರು, ಒಟ್ಟು ೨೨ ಮಠಗಳು ಹಾಗೂ ೯ ಮಠಾಧಿಪತಿಗಳ ಹೆಸರನ್ನು ಉಲ್ಲೇಖಿಸಿ, ಅವರ ಕಾಯಕ, ಮಠಧರ್ಮ ಸಂಘಟನೆ, ಅನ್ನ, ಅಕ್ಷರ ದಾಸೋಹ, ಧಾರ್ಮಿಕ ಆಚರಣೆ ಈ ಎಲ್ಲವುಗಳ ವಿವರಣೆಯನ್ನು ಒದಗಿಸುತ್ತಾರೆ. ವೇದ ಕಾಲಕ್ಕೂ ಮುಂಚಿನ ಐತಿಹಾಸಿಕ ಪರಂಪರೆ ಹೊಂದಿರುವ ವಿಶ್ವಕರ್ಮರು ಕಾಳಿಮಾತೆ ಅಥವಾ ವಿಶ್ವಕರ್ಮನನ್ನು ಆರಾಧಿಸುತ್ತಾ ಕುಲದೈವವನ್ನಾಗಿಸಿಕೊಂಡಿರುವ ಈಜನಾಂಗ, ರಾಜಾಧಿರಾಜರುಗಳಿಗೆ, ಮಠ ಮಂದಿರಕ್ಕೆ ಮಾರ್ಗದರ್ಶಕರಾಗಿ ಆದರ್ಶ ಬದುಕು ಬಾಳಿದವರು ಎಂದು ಹೆಮ್ಮೆ ಪಡುತ್ತಲೇ – ಪ್ರಸ್ತುತ ವಿಶ್ವಕರ್ಮ ಜನಾಂಗದ ಅಸಂಘಟನೆ, ವೃತ್ತಿಗಳಲ್ಲಿ ಹಂಚಿಹೋದ ಬಗೆ, ಅಶಾಂತಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರೋತ್ಸಾಹ ದೊರೆಯದ ಬಗೆಗೆ ವಿವರಿಸುವ ಒಂದು ಮಾಹಿತಿ ಕೋಶವಾಗಿದ್ದು; ವಿಷಯ ಮಂಡನೆಯಲ್ಲಿ ತುಸು ಗೋಜಲುತನವಿದೆ.

ಮರೇಗುದ್ದಿ ಅಡವಿಸಿದ್ದೇಶ್ವರ ಮಠದ ಪರಂಪರೆ– ಇದು ಅಶೋಕ ನರೋಡೆಯವರ ಪುಸ್ತಕ. ವೀರಶೈವ ಮಠವೊಂದರ ಸಂಕ್ಷಿಪ್ತ ಪರಿಚಯದ ಪುಸ್ತಕ ರೂಪ ಇದಾಗಿದ್ದು, ಮಠದ ಧಾರ್ಮಿಕ ಪರಂಪರೆ, ಪೀಠ ಪರಂಪರೆ, ಗುರು ಪರಂಪರೆಯ ಸಂಕ್ಷಿಪ್ತ ವಿವರ, ಮಠದ ಸಾಹಿತ್ಯ ಪ್ರಕಟಣೆಗಳ ವಿವರವನ್ನು ಒದಗಿಸಲಾಗಿದೆ. ವಿರಕ್ತ ಪೀಠ ಪರಂಪರೆಗೆ ಸೇರಿದ ಈ ಮಠ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ, ಮರೇಗುದ್ದಿ ಎಂಬ ಗ್ರಾಮದಲ್ಲಿದೆ. ಇದನ್ನು ಅಂಕಲಗಿ ಅಡವಿಸಿದ್ದೇಶ್ವರ ಮಠ ಎಂತಲೂ ಕರೆಯಲಾಗುವುದು. ಶ್ರೀ ಅಡವಿ ಸಿದ್ಧೇಶ್ವರರು ಈ ಮಠದ ಪ್ರೇರಕರಾಗಿದ್ದು, ಅಲ್ಲಿಂದ ಪೀಠಪರಂಪರೆ ಬೆಳೆದು ಬಂದಿದೆ. ಲೇಖಕರು ಆರಂಭದಲ್ಲಿ ಅಡವಿಸಿದ್ದೇಶ್ವರ ಸ್ವಾಮಿಗಳ ಬಗೆಗೆ ವಿವರವಾಗಿ ಬರೆದಿದ್ದಾರೆ. ಈ ಮಠವನ್ನು ಹೆಚ್ಚು ಬೆಳೆಸಿ, ಪ್ರಸಿದ್ಧ ಪಡಿಸಿದವರು ಶ್ರೀ ಮಡಿವಾಳೇಶ್ವರರು ಎಂಬುದನ್ನು ವಿವರಿಸುವ ಲೇಖಕರು, ಕ್ರಿ.ಶ. ೧೭೮೦ರಲ್ಲಿ ಜನಿಸಿದ ಮಡಿವಾಳೇಶ್ವರರು ಮೂಲತಃ ಸಂಸಾರಿಗಳಾಗಿದ್ದು, ತದನಂತರ ಸಂಸಾರ ತ್ಯಜಿಸಿ ಮೊದಲು ಜಮಖಂಡಿಯ ಕಲ್ಯಾಣಮಠದ ಶ್ರೀಗಳಿಂದ ದೀಕ್ಷೆ ಹಾಗೂ ಪ್ರೇರಣೆ

ಹೊಂದಿ, ನಂತರ ಮರೇಗುದ್ದಿ ಮಠದ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡವರು. ಲೇಖಕರು ಇವರ ಸಾಧನೆ, ಅಭಿವೃದ್ಧಿ ಕಾರ್ಯ, ಇವರ ಪವಾಡ ಕಾರ್ಯಗಳ ಜೊತೆಗೆ ಬೇರೆ ಬೇರೆ ಸಮಾಜ ಮುಖಿ ಕಾರ್ಯಗಳಿಂದಾಗಿ ಪಡೆದ ಗೌರವ ಸನ್ಮಾನಗಳ ವಿವರವನ್ನು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಇದೇ ಮಾದರಿಯಲ್ಲಿ ಮರೇಗುದ್ದಿ ಪೀಠ ಪರಂಪರೆಯಲ್ಲಿ ಬಂದ ಶ್ರೀಪರಯ್ಯಸ್ವಾಮಿ, ರಾಚಯ್ಯಸ್ವಾಮಿ, ಗುರುಪಾದಸ್ವಾಮಿ, ನಿರುಪಾದಿ ಸ್ವಾಮಿ ಹೀಗೆ ಶ್ರೀಮಠದ ಗುರು ಪರಂಪರೆಯನ್ನು ಅನುಕ್ರಮಣಿಕೆಯಲ್ಲಿ ಪರಿಚಯಸಿದ್ದಾರೆ.

ಶ್ರೀ ಮರೇಗುದ್ದಿ ಅಡವಿ ಸಿದ್ಧೇಶ್ವರ ಪರಂಪರೆಯ ಅಕ್ಷರ ಸಂಸ್ಕೃತಿ ಪ್ರಕಟಣೆ, ಪ್ರಸಾರ ಈ ಪುಸ್ತಕದಲ್ಲಿ ವಿಶೇಷ ಗಮನ ಸೆಳೆಯುತ್ತದೆ. ವಿಶೇಷವಾಗಿ ಈ ಪೀಠಕ್ಕೆ ಪೀಠಾಧಿಕಾರಿಗಳಾಗಿ ೧೯೬೬ರಲ್ಲಿ ಅಧಿಕಾರ ವಹಿಸಿಕೊಂಡ ಶ್ರೀ ನಿರುಪಾದಯ್ಯ ಸ್ವಾಮಿಗಳು ಲೌಕಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಸಂಪಾದಿಸಿರುವ ನಿರುಪಾದರು ಆಯುರ್ವೇದ, ವೈದ್ಯಕೀಯ ಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಈ ವಿಚಾರಗಳಲ್ಲಿ ಶಾಸ್ತ್ರೀಯ ಅಧ್ಯಯನದ ಜೊತೆಗೆ ಸಂಗೀತ ಶಾಸ್ತ್ರದ ಬಗೆಗೂ ಪರಿಜ್ಞಾನ ಹೊಂದಿದ್ದವರು. ಮರೇಗುದ್ದಿಯ ಶ್ರೀ ಮಡಿವಾಳೇಶ್ವರ ಚರಿತ್ರೆ, ಗಣೇಶ ಪುರಾಣ, ಗುರುಪಾದೇಶ್ವರ ಚಿದ್ವಿಲಾಸ, ಚಿನ್ಮಯ ಜ್ಞಾನಿ ಚನ್ನಬಸವ ವಿಜಯ– ಮೊದಲಾದ ಆರು ಷಟ್ಪದಿ ಕಾವ್ಯಗಳು, ಹದಿನೆಂಟು ವಚನ ಸಂಕಲನಗಳು, ಸಂಪಾದನೆಯ ಗ್ರಂಥಗಳು, ಹಿಂದಿಯಲ್ಲೂ ರಸಗೀತ, ಸಪ್ತತೀರ್ಥ, ಅಷ್ಟದಳ ಮೊದಲಾದ ಕೃತಿಗಳನ್ನು ಪ್ರಕಟಿಸಿರುವುದು ವಿಶೇಷವಾಗಿದೆ. ಗ್ರಂಥ ಪ್ರಕಟಣೆಗಳಿಗಾಗಿಯೇ ಶ್ರೀ ಅಡವೀಶ ಪ್ರಕಾಶನ ಸಂಸ್ಥೆಯನ್ನು ತೆರೆದ ಶ್ರೀಮಠ ಒಂದು ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವುದನ್ನು ಲೇಖಕರು ವರ್ಗೀಕರಣ ಮಾದರಿಯಲ್ಲಿ ರೂಪಿಸುತ್ತಾರೆ. ಮಠದ ಸಾಂಸ್ಕೃತಿಕ ಉತ್ಸವ; ಸಾಂಪ್ರದಾಯಕ ಆಚರಣೆ, ಸಾಮೂಹಿಕ ವಿವಾಹ, ಶೈಕ್ಷಣಿಕ ಚಟುವಟಿಕೆ. ಮಠದ ಶಾಖಾ ಪರಂಪರೆ ಇವುಗಳ ವಿವರವನ್ನು ಕಿರುದಾಗಿ ಉಲ್ಲೇಖಿಸುವ ಲೇಖಕರು; ಗ್ರಾಮೀಣ ಪರಿಸರದ ಈ ಮಠ ಧಾರ್ಮಿಕ, ಸಾಮಾಜಿಕ–ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಜನಮುಖಿಯಾಗಿರುವುದನ್ನು ಉಲ್ಲೇಖಿಸುತ್ತಾರೆ.

ಚಿಕ್ಕಣ್ಣ ಯಣ್ಣೆಕಟ್ಟೆ

ಐತಿಹಾಸಿಕ ಲಾವಣಿಗಳ ಕ್ರಮಬದ್ಧ ಅಧ್ಯಯನ

* **ಕನ್ನಡದಲ್ಲಿ ಐತಿಹಾಸಿಕ ಜನಪದ ಲಾವಣಿಗಳು:** ಲೇ. ಜಯಲಕ್ಷ್ಮೀ ಸೀತಾಪುರ: ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು – ೧೮; ಪುಟಗಳು: ೬+೨೭೮; ಬೆಲೆ ರೂ. ೧೧೫.

– ಇದು ಲೇಖಕಿಯ ಪಿಎಚ್.ಡಿ. ಮಹಾಪ್ರಬಂಧ. ಆರು ಅಧ್ಯಾಯಗಳ ಈ ಗ್ರಂಥದಲ್ಲಿ–ಜಾನಪದ ಮತ್ತು ಇತಿಹಾಸಗಳ ನಡುವಿನ ಸಂಬಂಧ, ಜಾನಪದದಲ್ಲಿ ಚಾರಿತ್ರಿಕ ರೂಪಗಳು, ಕನ್ನಡ ಐತಿಹಾಸಿಕ ಕಾವ್ಯಗಳ ಸಂಗ್ರಹ ಮತ್ತು ಅಧ್ಯಯನ, ಕನ್ನಡ ಲಾವಣಿಗಳ ಐತಿಹಾಸಿಕ ವಿವೇಚನೆ, ಕನ್ನಡ ಜನಪದ ಕಾವ್ಯಗಳ ಐತಿಹಾಸಿಕ ವಿವೇಚನೆ ಹಾಗೂ ಐತಿಹಾಸಿಕ ಕಾವ್ಯಗಳ ಸಾಹಿತ್ಯಿಕ ವಿವೇಚನೆ ಎಂಬ ಆರು ಅಧ್ಯಾಯಗಳಿವೆ. 'ಜಾನಪದದಲ್ಲಿ ಚಾರಿತ್ರಿಕ ರೂಪಗಳು' ಎಂಬ ಅಧ್ಯಾಯ ಶೀರ್ಷಿಕೆ ಅಷ್ಟೊಂದು ಸೂಕ್ತವೆನಿಸದು. 'ಜಾನಪದದಲ್ಲಿ ಚರಿತ್ರೆಯ ರೂಪಗಳು' ಎಂದಿದ್ದರೆ ಸಾಕಿತ್ತು.

ಇದೊಂದು ಶಿಸ್ತಿನಿಂದ ಕೂಡಿದ, ಸಾಧ್ಯವಾದ ಮಟ್ಟಿಗೂ ತಲಸ್ಪರ್ಶಿ ವಿವೇಚನೆಯನ್ನು ಒಳಗೊಂಡ ಗ್ರಂಥ. ಅಲ್ಲಲ್ಲಿ ಕೆಲವು ಸಣ್ಣ ತಪ್ಪುಗಳು, ಕೊರತೆಗಳು ಕಾಣುತ್ತವೆ ನಿಜ. ಉದಾಹರಣೆಗೆ ಪುಟ ಐದರಲ್ಲಿ 'ಜನಪದ ಗೀತೆಯ ಮುಖ್ಯೋದ್ದೇಶ ದೈನಂದಿನ ಕೆಲಸಗಳಿಗೆ ಚಾಲನೆ ನೀಡುವುದೆಂದರೆ ತಪ್ಪಿಲ್ಲ. ಕೆಲಸಕ್ಕೆ ಹಾಡು ನೆರವಾಗುತ್ತದೆ. ಕೃಷಿಯ ಕೆಲಸ ನಡೆಯಬೇಕಾದರೆ ಹಾಡು ಬೇಕಾಗುತ್ತೆ.......' ಎಂದಿತ್ಯಾದಿಯಾಗಿ ವರ್ತಮಾನಕಾಲದ ಶೈಲಿಯಲ್ಲಿ ಬರೆಯುತ್ತಾರೆ. ಈಗೆಲ್ಲಿದೆ ಆ ಸ್ಥಿತಿ ? ಅದೇ ರೀತಿ ಪುಟ ೨೯ರಲ್ಲಿ 'ವಿರಳವಾದ ಕೆಲವು ಕಥನಗೀತೆಗಳು ಕೋಲು ಪದಗಳಾಗಿ ಬಳಕೆಯಾಗುತ್ತವೆ' ಎನ್ನುತ್ತಾರೆ. ಅದು ವಿರಳವೇನಲ್ಲ. ಕೋಲುಪದವಾಗಿ ಬಳಕೆಯಾಗುವ ಸಾಕಷ್ಟು ಕಥನಗೀತೆಗಳಿವೆ.

ಇಂಥ ಕೆಲವು ಸಣ್ಣ ಸ್ವರೂಪದ ಜಾರುವಿಕೆ (slips) ಗಳನ್ನು ಬಿಟ್ಟರೆ ಇಡೀ ಅಧ್ಯಯನ ಗಂಭೀರವೂ ಪ್ರಶಂಸಾರ್ಹವೂ ಆದ ರೀತಿಯಲ್ಲಿ ನಡೆದಿದೆ. ಈ ವಿಷಯಕ್ಕೆ ಸಂಬಂಧಿಸಿದ ಸಾಕಷ್ಟು ಸಾಮಗ್ರಿಗಳನ್ನು ಸಂಶೋಧಕಿ ತಡಕಾಡಿ ನೋಡಿದ್ದಾರೆ. ತೌಲನಿಕವಾಗಿ ವಿವೇಚಿಸಿದ್ದಾರೆ. ಈವರೆಗೆ ಆಗಿರುವ ಐತಿಹಾಸಿಕ ಲಾವಣಿಗಳ ಸಂಗ್ರಹಗಳನ್ನು ಅವಲೋಕಿಸಿದ್ದಾರೆ. ಎರಡನೇ ಅಧ್ಯಾಯದಲ್ಲಿ ಲಾವಣಿಯ ಸ್ವರೂಪ, ಐತಿಹಾಸಿಕ ಲಾವಣಿಗಳ ವಿಧಗಳನ್ನು ಕುರಿತ ವಿವರಣೆ ಚೆನ್ನಾಗಿದೆ. ಮೂರನೇ ಅಧ್ಯಾಯದಲ್ಲಿ ಕನ್ನಡ ಐತಿಹಾಸಿಕ ಕಾವ್ಯಗಳ ಸಂಗ್ರಹ ಮತ್ತು ಅಧ್ಯಯನ ಕುರಿತಾದ ವಿವರವಾದ ನಿರೂಪಣೆಯಿದೆ. ಹಲಗಲಿಯ ಬೇಡರು, ಕಿತ್ತೂರು ಸಂಸ್ಥಾನ, ಸಂಗೊಳ್ಳಿ ರಾಯಣ್ಣ–ಇವರುಗಳ ಬಗೆಗಿನ ಲಾವಣಿಗಳ ಸವಿಸ್ತಾರ ವಿವೇಚನೆ ಇಲ್ಲಿದೆ. ಈ ವಿವೇಚನೆ ತೃಪ್ತಿಕರವಾಗಿಯೇ ಇದೆ. ಪವನಂಜಯ ಚೌಗುಲೆ ಎಂಬ ಅಥ್ಲೀಟ್, ಯುರೋಪಿನ ಮೊದಲ ಮಹಾಯುದ್ಧ–ಮೊದಲಾದವುಗಳ ಬಗ್ಗೆ ದ್ವಾರಪಾಲನೆಂಬ ಕವಿ ಬರೆದ ಹಾಡುಗಳ ವಿವರವಿದೆ. ವೀರ ಸಿಂಧೂರ ಲಕ್ಷ್ಮಣ, ಮುಂಡರಗಿಯ

ನಾಡಗೌಡ ಭೀಮರಾಯ, ಚಿತ್ರದುರ್ಗದ ವೀರ ಮದಕರಿ ನಾಯಕ, ಈರಬಡಪ್ಪ, ಗೊಲ್ಲರ ದೇವತೆ ಎನಿಸಿಕೊಂಡ ನಿಂಗಣ್ಣ– ಇಂಥ ಅನೇಕರ ಬಗೆಗಿನ ಲಾವಣಿಗಳನ್ನು ಕುರಿತು ಇಲ್ಲಿ ಸಮತೂಕದ ಚರ್ಚೆಯಿದೆ. ಸಂಶೋಧಕಿ ಇವುಗಳ ಬಗ್ಗೆ ವಸ್ತುನಿಷ್ಠತೆ ಮತ್ತು ತಾಳ್ಮೆಯಿಂದ ವಿವೇಚಿಸಿರುವುದು ಸಂತೋಷಕರವಾದ ಅಂಶವಾಗಿದೆ. ಕರ್ನಾಟಕದ ವಿವಿಧ ಭೌಗೋಳಿಕ ವಿಭಾಗಗಳಾದ ಕರಾವಳಿ, ಮಲೆನಾಡು, ಬಯಲುಸೀಮೆ ಹಾಗೂ ವಿವಿಧ ಸಮುದಾಯಗಳು – ಹೀಗೆ ಯಾವುದನ್ನೂ ಬಿಡದೆ ಅವಕ್ಕೆ ಸಂಬಂಧಿಸಿದಂತೆ ಸಿಗುವ ಐತಿಹಾಸಿಕ ಲಾವಣಿಗಳ ವಿವೇಚನೆ ನಡೆಸಿ ಸಂಶೋಧಕಿ ತಾವು ಆರಿಸಿಕೊಂಡ ವಸ್ತುವಿಗೂ ಲಾವಣಿಗಳ ರಚನಕಾರ ಹಾಡುಗಾರರಿಗೂ ಸೂಕ್ತವಾದ ನ್ಯಾಯ ಒದಗಿಸಿದ್ದಾರೆ.

ನಾಲ್ಕನೆಯ ಅಧ್ಯಾಯ ಹೆಚ್ಚೂ ಕಡಿಮೆ ಮೂರನೆಯ ಅಧ್ಯಾಯದ ಮಾದರಿಯಲ್ಲೇ ಮುಂದುವರಿದಿದೆ. ಇಲ್ಲಿ–ಬೇಲೂರು ಬಳಿಯ ಐಗೂರಿನ ಪಾಳೇಗಾರ ವೆಂಕಟಾದ್ರಿ ನಾಯಕ, ಕೋನಸಾಗರದ ಪಾಪನಾಯಕ–ಇವರುಗಳ ಬಗೆಗೆ, ಕರಾವಳಿ ಪ್ರದೇಶದಲ್ಲಿನ ಐತಿಹಾಸಿಕ ವೀರರಿಗೆ ಸಂಬಂಧಿಸಿದಂತೆ, ಇರುವ ಲಾವಣಿಗಳ ಉತ್ತಮ ವಿವೇಚನೆ ಇಲ್ಲಿದೆ.

ಐದನೆಯ ಅಧ್ಯಾಯದಲ್ಲಿ – ಕನ್ನಡ ಜನಪದ ಕಾವ್ಯಗಳ ಐತಿಹಾಸಿಕ ವಿವೇಚನೆ ಮಾಡಲಾಗಿದ್ದು – ಇಲ್ಲಿ ಕುಮಾರರಾಮ, ಹೈದರಾಲಿ, ಮದಕರಿನಾಯಕ, ಟಿಪ್ಪುಸುಲ್ತಾನ್, ಮಾಗಡಿ ಕೆಂಪೇಗೌಡ ಮೊದಲಾದವರನ್ನು ಕುರಿತ ಲಾವಣಿಗಳು, ಗೀತೆಗಳಲ್ಲಿನ ವಿಷಯವು ಎಷ್ಟರ ಮಟ್ಟಿಗೆ ಇತಿಹಾಸದ ದೃಷ್ಟಿಯಿಂದ ನಿಜವಾದುದು ಎಂಬುದರ ವಿವೇಚನೆ ನಡೆದಿದೆ. ಈ ಅಧ್ಯಾಯದ ಶೀರ್ಷಿಕೆಯಲ್ಲೂ ಅಷ್ಟೆ– 'ಐತಿಹಾಸಿಕ ವಿವೇಚನೆ' (historical analysis) ಎನ್ನುವುದಕ್ಕಿಂತ – 'ಇತಿಹಾಸದ ವಿವೇಚನೆ' (Analysis of history) ಎಂದಿದ್ದರೆ ಚೆನ್ನಾಗಿತ್ತು. ಇಲ್ಲಿ ಅನ್ಯಾನ್ಯ ಆಧಾರಗಳ ಮೇಲಿಂದ ಗೀತೆ/ ಲಾವಣಿಗಳಲ್ಲಿನ ಇತಿಹಾಸದ ಅಂಶಗಳನ್ನು ತರ್ಕಬದ್ಧವಾಗಿ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಆಸಕ್ತಿ, ಪರಿಶ್ರಮ ಹಾಗೂ ವಿಷಯ ನಿರೂಪಣೆಯಲ್ಲಿನ ನಿರ್ಮೋಹತ್ವ ಮೆಚ್ಚುವಂಥದು. 'ಪಿರಿಯಾ ಪಟ್ಟಣದ ಕಾಳಗ'ದಂತಹ ಯುದ್ಧಗಳನ್ನು ಕುರಿತ ಆಕರಗಳ ವಿವೇಚನೆ ಸಹ ಉತ್ತಮವಾಗಿದೆ.

ಈ 'ಐತಿಹಾಸಿಕ ಕಾವ್ಯ(?) ಗಳ ಸಾಹಿತ್ಯಿಕ ವಿವೇಚನೆ'ಗಾಗಿ ಆರನೇ ಅಧ್ಯಾಯ ಮೀಸಲು. ಇದರಲ್ಲಿ–ಬಳಸುವ ವಾದ್ಯಗಳು, ಗಾಯಕ ಸಮುದಾಯಗಳು ಇವುಗಳ ಬಗೆಗೆ ವಿವರ ನೀಡಲಾಗಿದ್ದು ನಂತರ ಕಾವ್ಯಗಳ ಭಾಷೆ ಮತ್ತು ಶೈಲಿಗಳ ಬಗ್ಗೆ ವಿವೇಚಿಸಲಾಗಿದೆ. ಕೊನೆಯ 'ಪರಿಸಮಾಪ್ತಿ' ಅಧ್ಯಾಯ ಇನ್ನಷ್ಟು ಕಿರಿದಾಗಬಹುದಿತ್ತು.

ಈ ಮಹಾಪ್ರಬಂಧ ಉತ್ತಮವೆಂಬುದೇನೋ ನಿಜ. ಒಂದು ಒಳ್ಳೆಯ ಮಹತ್ವಪೂರ್ಣ ವಿಷಯವನ್ನು ಹಲವು ಮಗ್ಗುಲುಗಳಿಂದ ಪರಿಶೀಲಿಸಲು ಸಂಶೋಧಕಿ ಇಲ್ಲಿ ಶ್ರಮಿಸಿದ್ದಾರೆ. ಅನುಬಂಧದಲ್ಲಿ 'ಗ್ರಂಥಋಣ' ದ ಪಟ್ಟಿ ನೀಡಲಾಗಿದೆ. ಆದರೆ ಅನುಬಂಧದಲ್ಲಿ ಈ ಮಹಾಪ್ರಬಂಧದಲ್ಲಿ ಪ್ರಸ್ತಾಪಿಸಿರುವ ಲಾವಣಿಗಳ ಹಾಗೂ ಅವುಗಳಲ್ಲಿನ ಬರುವ ಮುಖ್ಯಪಾತ್ರಗಳ ಒಂದು ಪಟ್ಟಿ ಇದ್ದಿದ್ದರೆ ಚೆನ್ನಾಗಿತ್ತು. ಒಟ್ಟಾರೆ ಇದೊಂದು ಪ್ರಶಂಸಾರ್ಹ ಕೃತಿ.

ಎಸ್.ಪಿ. ಪದ್ಮಪ್ರಸಾದ್

ಕೆರೆಯನ್ನು ಕುರಿತ ಗಂಭೀರ ಅಧ್ಯಯನ

* **ಡಣಾಯಕನ ಕೆರೆ:** ಎಂ. ಸೋಮೇಶ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦೦೧೮. ಪುಟಗಳು:೧೭೪+೮, ಬೆಲೆ ರೂ. ೭೦–

ಹೊಸಪೇಟೆ ತಾಲ್ಲೂಕಿನಲ್ಲಿರುವ **'ಡಣಾಯಕನ ಕೆರೆ'** ಎಂಬ ದೊಡ್ಡ ಕೆರೆಯೊಂದನ್ನು ಕೇಂದ್ರವಾಗಿಟ್ಟುಕೊಂಡು ಎಂ. ಸೋಮೇಶ ಅವರು ತಮ್ಮ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ಪ್ರಬಂಧವೇ ಈ ಕೃತಿ. ಸಂಶೋಧನ ಪ್ರಬಂಧಗಳು ಪೇಲವವಾಗಿ ಹೊರಬರುತ್ತಿರುವ ಈ ದಿನಗಳಲ್ಲಿ ಪ್ರಾಮಾಣಿಕ ಸಂಶೋಧನೆಯಲ್ಲಿ ಆಸಕ್ತಿ ಇರುವವರಿಗೆ ತುಂಬ ಸಮಾಧಾನ ಉಂಟುಮಾಡುವಂಥದು.

ತಮ್ಮ ಪ್ರಬಂಧವನ್ನು ಸೋಮೇಶ ಅವರು ಆರು ಅಧ್ಯಾಯಗಳಾಗಿ ನಿಭಾಗಿಸಿಕೊಂಡಿದ್ದಾರೆ. ಮೊದಲ ಅಧ್ಯಾಯವು ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿಗಳನ್ನು ಸ್ಪಷ್ಟಪಡಿಸುತ್ತದೆ. ಎರಡನೇ ಅಧ್ಯಾಯವಾದ 'ಐತಿಹಾಸಿಕ ಹಿನ್ನೆಲೆ'ಯಲ್ಲಿ – ಪೀಠಿಕೆ, ಕೆರೆಗಳ ನಿರ್ಮಾಣದಲ್ಲಿ ರಾಜಮನೆತನಗಳ ಪಾತ್ರ, ಡಣಾಯಕನ ಕೆರೆ ಎಲ್ಲಿದೆ ಎಂಬ ವಿವರ ಹಾಗೂ ಆ ಹೆಸರಿನ ನಿಷ್ಪತ್ತಿಯನ್ನು ಕುರಿತು ವಿಶ್ಲೇಷಿಸಲಾಗಿದೆ. ಮೂರನೆಯ ಅಧ್ಯಾಯಕ್ಕೆ 'ಕೆರೆ ಜಾನಪದ' ಎಂದು ಹೆಸರಿಸಿದ್ದಾರೆ. ಇಲ್ಲಿ ಈ ಕೆರೆಗೆ ಸಂಬಂಧಿಸಿದಂತೆ ಇರುವ ಜಾನಪದ ಕತೆಗಳು, ಐತಿಹ್ಯಗಳು, ಹಾಡುಗಳು, ನಂಬಿಕೆ, ಆಚರಣೆಗಳು– ಇತ್ಯಾದಿಗಳನ್ನು ಪರಿಚಯಿಸಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಕೆರೆಯ ಭೌತಿಕ ವಿವರಗಳನ್ನು ನೀಡುತ್ತಾ – ಅದರ ಭೌಗೋಳಿಕ ಪರಿಸರ, ಜಲಾನಯನ ಪ್ರದೇಶ, ಕೆರೆ ಅಂಗಳ, ಅಚ್ಚುಕಟ್ಟು ಪ್ರದೇಶ, ಏರಿ, ತೂಬುಗಳು, ಕೋಡಿಗಳು, ಹರದೋಟಿಗಳು, ಮದಗ – ಇತ್ಯಾದಿಗಳ ವಿವರ ನೀಡಿದ್ದಾರೆ. ಐದನೆಯ ಅಧ್ಯಾಯದಲ್ಲಿ ಕೆರೆಯ ನಿರ್ವಹಣೆ ಹಿಂದಿನ ಕಾಲದಲ್ಲಿ ಮತ್ತು ಈಗ ಹೇಗೆ ನಡೆಯುತ್ತಿದೆ ಎಂಬ ವಿವರ ನೀಡುತ್ತಾ ಅಲ್ಲಿರುವ ಅವ್ಯವಸ್ಥೆಗಳನ್ನು ಹೇಳಿದ್ದಾರೆ. ಕೊನೆಯಲ್ಲಿ ಒಂದೂವರೆ ಪುಟದ ಸಮಾರೋಪ ಲೇಖನವಿದೆ.

ಈ ಮುಖ್ಯ ಪ್ರಬಂಧಕ್ಕೆ ಅಷ್ಟೇ ವಿಸ್ತಾರವಾದ, ಅಷ್ಟೇ ಅನಿವಾರ್ಯವಾದ ಉಪಯುಕ್ತ ಅನುಬಂಧಗಳನ್ನು ಕ್ರಮಬದ್ಧವಾಗಿ ಜೋಡಿಸಿದ್ದಾರೆ. ಇಲ್ಲಿ ಈ ಕೆರೆಯನ್ನು / ಕೆರೆಯ ದೇವತೆಯನ್ನು ಕುರಿತಂತೆ ಮಂಗಳಾರತಿ ಪದಗಳು, ಕನ್ನೀರಾಂಬೆಯ ಕಥೆ, ನೀರಾವರಿ ಇಲಾಖೆಯ ದಾಖಲೆಗಳು, ಕೆರೆಯ ನಕಾಶೆ, ಚಿತ್ರಗಳು, ಆಧಾರಗ್ರಂಥಗಳ ವಿವರ– ಇವೆಲ್ಲವನ್ನೂ ನೀಡಿದ್ದಾರೆ.

ಈ ಎಲ್ಲ ವಿವರಗಳಿಂದ ಈ ಅಧ್ಯಯನವನ್ನು ಶ್ರೀ ಸೋಮೇಶ ಅವರು ಅದೆಷ್ಟು ತನ್ಮಯತೆ ಪರಿಶ್ರಮಗಳಿಂದ ನಡೆಸಿದ್ದಾರೆಂಬುದನ್ನು ತಿಳಿಯಬಹುದು. ಕರ್ನಾಟಕದ ಕೆರೆಯೊಂದನ್ನು ಕುರಿತಂತೆ ಇಷ್ಟೊಂದು ಸಮಗ್ರವಾದ, ವಿಸ್ತಾರವೂ ವೈಧಾನಿಕವೂ ಆದ ಅಧ್ಯಯನ ನಡೆದಂತಿಲ್ಲ. ಒಂದು ಜಲಮೂಲವನ್ನು ಕೇಂದ್ರವಾಗಿಟ್ಟುಕೊಂಡು ವಿಸ್ತೃತವಾದ ಅಧ್ಯಯನವನ್ನು ಹೇಗೆ ನಡೆಸಬೇಕೆಂಬುದಕ್ಕೆ ಇದೊಂದು ಮಾದರಿಯಂತಿದೆ. ಸಂಶೋಧಕರು ಬಳಸಿರುವ ಭಾಷೆಯೂ ಸಹ ಅತಿಕ್ಲಿಷ್ಟತೆ ಅಥವಾ ಅರ್ಥಸಂದಿಗ್ಧತೆಯಿಂದ ಕೂಡಿಲ್ಲ. ನಿರ್ಣಯಕ್ಕೆ ಬರುವಲ್ಲಿ ಅವರು ತಪ್ಪು ಮಾಡಿರುವ ಸಂದರ್ಭಗಳೂ ಕಡಮೆಯೇ. ಈ ಪ್ರಬಂಧಕ್ಕೆ ಅವರಿಗೆ ಮಾರ್ಗದರ್ಶನ ಮಾಡಿರುವ ಪ್ರಾಧ್ಯಾಪಕರೂ ಈ ಕೃತಿಯ ಶ್ರೇಯಸ್ಸಿನಲ್ಲಿ ಭಾಗಿಯಾಗಿದ್ದಾರೆ. ಅಧ್ಯಾಪಕರ ಸೂಚನೆಗಳನ್ನು ಭಕ್ತಿಯಿಂದ ಸ್ವೀಕರಿಸಿ ಪರಿಶ್ರಮದ ಕೆಲಸ ಮಾಡುವ ವಿದ್ಯಾರ್ಥಿಗಳು ಇಂದು ಅಪರೂಪ. ಶ್ರೀ ಸೋಮೇಶ ಅವರಿಗೆ ಸಂಶೋಧನೆಯ ಸರಿಯಾದ ಹಾದಿ ಅರ್ಥವಾಗಿದೆ ಎಂದು ಈ ಕೃತಿಯಿಂದ ಸಾಬೀತಾಗುತ್ತದೆ. ಇದೇ ಹಾದಿಯಲ್ಲಿ ಅವರು ಮುಂದುವರೆಯಲಿ. ಕೃತಿಯನ್ನು ಸುಂದರವಾಗಿ ಪ್ರಕಟಿಸುವ ಕ.ಸಾ.ಪ. ಕೂಡ ಅಭಿನಂದನಾರ್ಹ.

ಎಸ್.ಪಿ. ಪದ್ಮಪ್ರಸಾದ್

ಕುರುಬರ ಬಗ್ಗೆ ಮಾಹಿತಿ ಗ್ರಂಥ

* **ಕುರುಬರ ಕುರುಹುಗಳು:** ಲೇ. ಹೆಚ್. ಚಂದ್ರಪ್ಪ, ಅಜ್ಜಂಪುರ, ಪ್ರ: ವಿದ್ಯಾನಿಧಿ ಪ್ರಕಾಶನ, ಗದಗ; ಪು-೩೪೬: ಬೆಲೆ ರೂ. ೧೫೦/–

ಇದು ಕುರುಬ ಜನಾಂಗದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ನೀಡುವ ಒಂದು ಆಕರ ಗ್ರಂಥ. ಇಲ್ಲಿನ ವಿಷಯವ್ಯಾಪ್ತಿ ಒಂದು ಸಂಶೋಧನ ವಿಧಾನದ ಕ್ರಮಬದ್ಧ ಅನುಸರಣೆ ಇಲ್ಲದಿರುವ ಕಾರಣಕ್ಕಾಗಿ ಆ ಸ್ಥಾನವನ್ನು ಕೊಡುವುದು ಕಷ್ಟವಾಗುತ್ತದೆ. ಆದರೆ ಇಲ್ಲಿನ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ಪಟ್ಟಿರುವ ಶ್ರಮ, ಅದನ್ನು ಅಧ್ಯಾಯಗಳಾಗಿ ಸರಿಯಾಗಿ ವಿಂಗಡಿಸಿ ಜೋಡಿಸುವಲ್ಲಿ ಕಂಡುಬರುವ ಶಿಸ್ತು, ಆ ಮಾಹಿತಿಗಳ ಉಪಯುಕ್ತತೆ – ಇವನ್ನೆಲ್ಲ ನೋಡಿದಾಗ ಕುರುಬ ಜನಾಂಗದ ಬಗ್ಗೆ ಅಧ್ಯಯನ ಮಾಡುವವರಿಗೆ ಇದರಿಂದಾಗುವ ಉಪಕಾರ ಖಂಡಿತಾ ನಗಣ್ಯವಲ್ಲ.

ಒಟ್ಟು ೨೨ ಅಧ್ಯಾಯಗಳಿರುವ ಈ ಕೃತಿಯ ಆರಂಭದಲ್ಲಿ ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆಯನ್ನು ನಿರೂಪಿಸಿದ್ದಾರೆ. ಇಲ್ಲಿ ಲೇಖಕರು ಈ ಜನಾಂಗವು ಅತಿ ಪ್ರಾಚೀನ ಕಾಲದಿಂದಲೂ ಇತ್ತು ಎಂದು ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ದಕ್ಷಿಣಭಾರತ ಹಾಗೂ ಕರ್ನಾಟಕವನ್ನಾಳಿದ ಅನೇಕ ರಾಜವಂಶಗಳು ಮೂಲತಃ ಕುರುಬರು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕೆಲವು ವಿದ್ವಾಂಸರು ಹಾಗೆ ಹೇಳಿದ್ದಾರೆಂದೂ ಉಲ್ಲೇಖಿಸಿದ್ದಾರೆ. ಆದರೆ ಮೂಲ ಆಕರಗಳನ್ನು ಖಚಿತವಾಗಿ ತಿಳಿಸಿಲ್ಲವಾದ್ದರಿಂದ ಇವರ ಮಾತುಗಳನ್ನು ಹಾಗೆಯೇ ಒಪ್ಪುವುದು ಕಷ್ಟ. ಇವರ ವಾದದ ಪ್ರಕಾರ ಕದಂಬರು ಪಲ್ಲವರು ರಾಷ್ಟ್ರಕೂಟರು, ಶಿವಾಜಿ ಎಲ್ಲರೂ ಕುರುಬ ಮೂಲದವರೇ. ಅಡಿಟಿಪ್ಪಣಿಗಳಾಗಲೀ, ಆಧಾರ ಗ್ರಂಥಗಳ ಪಟ್ಟಿಯಾಗಲೀ ಇಲ್ಲದ ಇಂಥ ಮಾತುಗಳನ್ನು ಒಪ್ಪುವುದು ಕಷ್ಟವಾಗುತ್ತದೆ.

ಆದರೆ ಮುಂದಿನ ಅಧ್ಯಾಯಗಳಲ್ಲಿನ ಬಹುಪಾಲು ಅಂಶಗಳನ್ನು ಒಪ್ಪುವಲ್ಲಿ ಇಂಥ ತೊಂದರೆ ಎದುರಾಗುವುದಿಲ್ಲ. ಅವೆಲ್ಲ ಕ್ಷೇತ್ರಕಾರ್ಯಾಧಾರಿತ ಮೌಖಿಕ ಪರಂಪರೆಯ ಮಾಹಿತಿಗಳು. ಈ ಅಧ್ಯಾಯಗಳಲ್ಲಿ ಲೇಖಕರು ಕುರುಬರ ಕುಲಗೋತ್ರಗಳು, ಸಂಪ್ರದಾಯಗಳು ಮತ್ತು ಆಚರಣೆಗಳು, ಅವರ ಆರಾಧ್ಯ ದೈವಗಳು, ವೀರ–ಬೀರ ಶಬ್ದದ ನಿಷ್ಪತ್ತಿ, ಡೊಳ್ಳು, ಪೌರಾಣಿಕ ಹಾಗೂ ಐತಿಹಾಸಿಕ ಕತೆಗಳು, ಜಾತ್ರೆಗಳು, ಕುರುಬರ ಮುಖ್ಯ ಪಂಗಡಗಳು, ಅವುಗಳ ಉತ್ಪತ್ತಿಗೆ ಕಾರಣಗಳು, – ಇಂಥ ಅನೇಕ ತುಂಬ ಉಪಯುಕ್ತವಾದ ಜನಪದೀಯ ಅಂಶಗಳನ್ನು ಕ್ರಮಬದ್ಧವಾಗಿ ವಿಂಗಡಿಸಿ ಸಾದರಪಡಿಸಿದ್ದಾರೆ. ಮಾಹಿತಿ ಸಂಗ್ರಹಿಸುವಲ್ಲಿ ಇವರು ತೋರಿರುವ ಶ್ರದ್ಧೆ ಹಾಗೂ ಅವನ್ನು ಸಿದ್ಧಾಂತವಾಗಿಸುವ ಕಾಳಜಿ– ಇವು ಉದ್ದಕ್ಕೂ ಎದ್ದು ಕಾಣುತ್ತವೆ. ಒಂದೆಡೆ ತಾಮ್ರಶಾಸನಗಳ ಸಾರಾಂಶವನ್ನೂ ಸಂಗ್ರಹಿಸಿ ಕೊಟ್ಟಿದ್ದಾರೆ. ಅದೇ ರೀತಿ 'ಹಾಲುಮತ ಪುರಾಣ' ಹಾಗೂ 'ರಟ್ಟಮತ ಶಾಸ್ತ್ರ'ಗಳ ಸಾರಾಂಶವೂ ಇಲ್ಲಿದೆ. ಕೊನೆಯಲ್ಲಿ ಕೆಲವು ಅನುಬಂಧಗಳೂ, ವಿಷಯಕ್ಕೆ ಸಂಬಂಧಿಸಿದ ಚಿತ್ರಗಳೂ ಇವೆ. ಈ ಎಲ್ಲ ಕಾರಣಗಳಿಂದ ಇದೊಂದು ಉಪಯುಕ್ತ ಆಕರ ಗ್ರಂಥವಾಗಿದೆ.

ಆದರೆ ಇಂಥ ಒಂದು ಮಹತ್ವದ ಕೃತಿಯನ್ನು ವಿಶ್ವಸನೀಯವೆಂಬಂತೆ ರೂಪುಗೊಳಿಸುವಲ್ಲಿ ಅನುಸರಿಸಬೇಕಾದ ಶಾಸ್ತ್ರೀಯ ಶಿಸ್ತಿನ ಕೊರತೆ ಎದ್ದು ಕಾಣುತ್ತದೆ. ಉದ್ದಕ್ಕೂ ಭಾಷಾ ದೋಷಗಳು (ಉದಾ–ಧೀಕ್ಷೆ, ವಿಧಿತ, ಪ್ರತ್ಯೈಕ) ಕಾಣಸಿಗುತ್ತವೆ. ಪುಟ–೧೬೩ರಲ್ಲಿ. 'ರೇವಣಸಿದ್ಧರು ೧೩೦ ವರ್ಷ ಬದುಕಿದ್ದರು' ಎಂದು ಬರೆದರೆ ಮುಂದಿನ ಪುಟದಲ್ಲಿ 'ಒಂದು ಶತಮಾನ ಪೂರ್ತಿ ಬದುಕಿದ್ದರು' ಎಂದು ಬರೆದಿದ್ದಾರೆ. ಆದ್ದರಿಂದ ಮೂಲ ಮಾಹಿತಿಗಳ ಕುರಿತಾಗಿ ಈ ಗ್ರಂಥ ನಮಗೆ ಉಪಯುಕ್ತವಾಗುವಷ್ಟು

ಕಾಲ, ಮೂಲ, ಪ್ರಭಾವದಂತಹ ಬೌದ್ಧಿಕ ವಿಶ್ಲೇಷಣೆಗಳ ವಿಚಾರದಲ್ಲಿ ಸಹಾಯಕವಾಗಲಾರದು. ಆದರೂ-ತನ್ನಲ್ಲಿನ ಜಾನಪದ ಮಾಹಿತಿಗಳಿಂದಾಗಿ ಈ ವಿಸ್ತೃತ ಕೃತಿ ನಮಗೆ ಮುಖ್ಯವಾಗುತ್ತದೆ.

ಎಸ್.ಪಿ. ಪದ್ಮಪ್ರಸಾದ್

ಒಳ್ಳೆಯ ಕೆಲಸ; ಇನ್ನಷ್ಟು ಶಿಸ್ತು ಬದ್ಧವಾಗಿದ್ದರೆ...........!

* **ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ತತ್ವಪದಕಾರರು :** ಲೇ. ನಟರಾಜ್ ಬೂದಾಳ್, ಪ್ರ- ತುಮಕೂರು ವಿಶ್ವವಿದ್ಯಾಲಯ, ಪು. ೧೬+೩೪೨; ಬೆಲೆ ರೂ. ೧೩೦/-

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಜನರ ನಡುವೆ ಬಳಕೆಯಲ್ಲಿರುವ ತತ್ವಪದಗಳನ್ನು ನಟರಾಜ್ ಬೂದಾಳ್ ಅವರು ಅಲೆದಾಡಿ ಸಂಗ್ರಹಿಸಿ ಅವುಗಳಲ್ಲೊಂದಷ್ಟನ್ನು ಆಯ್ದು ಹನ್ನೊಂದು ಪುಟಗಳ ಒಂದು ಪ್ರಸ್ತಾವನೆ ಸಹಿತ ಪ್ರಕಟಿಸಿದ್ದಾರೆ. ಗೀತೆಗಳ ಸಂಪಾದನೆ, ಮುದ್ರಣದಲ್ಲಿ ಎಲ್ಲಿಯೂ ಭಾಷಾದೋಷಗಳು ನುಸುಳದಂತೆ ನೋಡಿಕೊಂಡಿದ್ದಾರೆ. ಈ ಸಂಪುಟದ ಮೂಲಕ ಬಹುಶಃ ಮೊದಲಬಾರಿಗೆ ದಕ್ಷಿಣ ಕರ್ನಾಟಕದ ಬಯಲು ಸೀಮೆಯ ತತ್ವಪದಕಾರರ ರಚನೆಗಳು ದೊಡ್ಡ ಪ್ರಮಾಣದಲ್ಲಿ ಒಂದೆಡೆ ಸಿಗುವಂತಾಗಿವೆ. ಶಂಕರಾನಂದ ಯೋಗಿ, ಹೊನ್ನಗಂಗ, ಚೆನ್ನವೀರಸ್ವಾಮಿ, ಗುಬ್ಬಿ ಚೆನ್ನಬಸವೇಶ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಪುರದ ನಾಗಣ್ಣ- ಹೀಗೆ ಕೆಲವರ ಮತ್ತೆ ಕೆಲವು ಅಜ್ಞಾತ ತತ್ವಪದಕಾರರ ಆಯ್ದ ಕೃತಿಗಳನ್ನು ಇಲ್ಲಿ ಸಂಕಲಿಸಿ ಕೊಟ್ಟಿದ್ದಾರೆ. ಇದಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ಈ ಜಿಲ್ಲೆಗಳಲ್ಲಿ ಆಗಿ ಹೋದ ತತ್ವಪದಕಾರರ ಬಗ್ಗೆ ಭಾರತದಲ್ಲಿ ಬೆಳೆದ ವೈದಿಕೇತರ ತಾತ್ವಿಕ ಪಂಥಗಳ ಬಗ್ಗೆ, ಅವರ ತಾತ್ವಿಕತೆಯ ಬಗ್ಗೆ, ಈ ತತ್ವಪದಗಳ ಸ್ವರೂಪ-ಲಕ್ಷಣಗಳ ಬಗ್ಗೆ ಕೆಲವು ಉಪಯುಕ್ತವಾದ ಮಾಹಿತಿಗಳನ್ನು ನೀಡಿದ್ದಾರೆ. ಪ್ರತಿಯೊಬ್ಬ ಗೀತಕಾರನ ಪದಗಳನ್ನು ಕೊಡುವ ಮುನ್ನ ಲಭ್ಯವಿದ್ದಷ್ಟು ಮಾಹಿತಿಗಳನ್ನು ಸಂಗ್ರಹರೂಪದಲ್ಲಿ ಕೊಟ್ಟಿದ್ದಾರೆ.

ಆದರೆ ಈ ಸಂಪುಟವನ್ನು ಇನ್ನಷ್ಟು ಪರಿಷ್ಕರಿಸಿ ಉತ್ತಮ ರೂಪದಲ್ಲಿ ಕೊಡಬಹುದಿತ್ತು ಎನಿಸುತ್ತದೆ. ಮುಖ್ಯವಾಗಿ ಇಲ್ಲಿ ಎಷ್ಟು ತತ್ವಪದಗಳಿವೆ ಎಂಬ ಸಂಖ್ಯೆಯೇ ಇಲ್ಲ! ಪ್ರತಿಯೊಬ್ಬ ತತ್ವಪದಕಾರನ ಹೆಸರಿನ ಕೆಳಗೆ ಕೊಡಲಾಗಿರುವ ಗೀತೆಗಳಿಗೆ ಕ್ರಮಸಂಖ್ಯೆ ಕೊಡಬಹುದಿತ್ತು. ಆ ಕ್ರಮಸಂಖ್ಯೆ ಮೊದಲಿಂದ ಕೊನೆವರೆಗೆ ನಿರಂತರವಾಗಿ ಸಾಗಿರಬಹುದಿತ್ತು. ಆಗ ಸಂಗ್ರಹದಲ್ಲಿರುವ ಹಾಡುಗಳ ಒಟ್ಟು ಸಂಖ್ಯೆ ಸುಲಭವಾಗಿ ಸಿಕ್ಕುತ್ತಿತ್ತು. ಅದೇ ರೀತಿ-ಅನುಬಂಧದಲ್ಲಿ ಹಾಡುಗಳ ಅಕಾರಾದಿ ಪಟ್ಟಿ, ಪಾರಿಭಾಷಿಕ ಪದಗಳ ಪಟ್ಟಿಯನ್ನು ಕೊಟ್ಟಿದ್ದರೆ ಅಧ್ಯಯನಕಾರರಿಗೆ ಸುಲಭವಾಗುತ್ತಿತ್ತು. ತಮ್ಮ

ಪ್ರಸ್ತಾವನೆಯ ಕೊನೆಯಲ್ಲಿ ನಟರಾಜ್ ಅವರು–"ಈ ಪ್ರಬಂಧಕ್ಕೆ ಅಗತ್ಯವಿರುವಷ್ಟು ಮಾತ್ರ ಸಂದರ್ಭೋಚಿತವಾಗಿ ಎತ್ತಿಕೊಂಡಿದ್ದೇನೆ" (ಪು.೧೧) ಎಂದಿದ್ದಾರೆ. ಈ ಪ್ರಸ್ತಾವನೆ ಮತ್ತು ಶಂಕರಾನಂದ ಯೋಗಿಯ ಬಗೆಗೆ ಬರೆದಿರುವ ನಾಲ್ಕಾರು ಪುಟಗಳ ಹೊರತಾಗಿ ಈ ಸಂಪುಟದಲ್ಲಿ ಪ್ರಬಂಧವೆನ್ನುವುದು ಇರುವುದಾದರೂ ಎಲ್ಲಿ? ಗೀತೆಗಳನ್ನು ಸಂಗ್ರಹಿಸಿರುವ ಇವರು ತಮ್ಮನ್ನು ಇಲ್ಲಿ 'ಲೇಖಕ'ರೆಂದು ಕರೆದುಕೊಳ್ಳಬೇಕಿತ್ತೋ 'ಸಂಪಾದಕ'ರೆಂದುಕೊಳ್ಳಬೇಕಿತ್ತೋ?

ಇವೆಲ್ಲ ಏನೇ ಇರಲಿ, ಈ ಸಂಪಾದನಾಕಾರ್ಯ ಬಹುಮಟ್ಟಿಗೆ ಸಮಾಧಾನಕರ ಹಾಗೂ ಉಪಯುಕ್ತ. ಇದರ ಹಿಂದಿನ ಶ್ರಮವನ್ನು, ಆಸಕ್ತಿಯನ್ನು ನಾವು ಮೆಚ್ಚಬೇಕು.

ಜಿಲ್ಲೆಯ ಜಾನಪದ ನೆಲೆಗಳ ಗಂಭೀರ ಅಧ್ಯಯನ

* **ತುಮಕೂರು ಜಿಲ್ಲಾ ಜಾನಪದೀಯ ನೆಲೆಗಳು**– ಲೇ. ಚಿಕ್ಕಣ್ಣ ಯಣ್ಣೆಕಟ್ಟೆ, ಪ್ರ: ತುಮಕೂರು ವಿಶ್ವವಿದ್ಯಾಲಯ, ತುಮಕೂರು. ಪುಟಗಳು ೧೬+೪೧೨. ಬೆಲೆ ರೂ. ೧೬೦–

ಸಂಸ್ಕೃತಿಯು ಮಾನವನ ಅಂತಃಸತ್ವದ ನೇರ ಅಭಿವ್ಯಕ್ತಿ. ಇದು ಮಾನವನ ಸ್ಥಿತಿಗತಿಯನ್ನು ಸಹಜವಾಗಿಯೇ ಹೇಳುತ್ತದೆ. "ಅಂತರಂಗದ ನೆಲೆಯಲ್ಲಿ ಸಂಸ್ಕೃತಿಯನ್ನು ಕಾಣುವ ದೃಷ್ಟಿ ಮತ್ತು ಹಳೆಯ ಆಕೃತಿಗಳ ನಡುವಣ ನೇರ ಸಂಬಂಧದ ಶೋಧನೆಯೂ ಆಗಿದೆ. ಇಂಥ ಸಂಸ್ಕೃತಿ ನಮ್ಮ ಜನಪದ ಸಂಸ್ಕೃತಿಯನ್ನೇ ಆವರಿಸಿದೆ. ಮನುಷ್ಯ ತನ್ನ ಸೋಪಜ್ಞತೆಯನ್ನು ಜನಪದದ ಮೂಲಕವೇ ಹೊರ ಚೆಲ್ಲಿದ್ದಾನೆ' ಎಂಬ ಡಿ.ವಿ.ಜಿ. ಅವರ ಅಭಿಪ್ರಾಯ ಜನಪದ ಸಂಸ್ಕೃತಿ, ಜೀವಂತ ಹಾಗೂ ನಿರಂತರ ಎಂಬ ಅಂಶವನ್ನು ಹೇಳುತ್ತದೆ.

ತುಮಕೂರು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ತಲೆಬಾಗಿಲಿನಂತೆ. ಸಾಂಸ್ಕೃತಿಕ ವೀರ ಜುಂಜಪ್ಪನಂಥ ಜನಪದ ಮಹಾಕಾವ್ಯದ ಜೊತೆಗೆ ಜನಪದ ಹಾಡು, ಖಂಡಕಾವ್ಯ ಮೊದಲಾದ ಜನಪದ ಸಂಸ್ಕೃತಿಯ ಶ್ರೀಮಂತ ನೆಲೆ. ಇಂಥ ಒಂದು ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು, ಅಲ್ಲಿಯ ಜಾನಪದದ ವಿವಿಧ ಮಗ್ಗಲುಗಳನ್ನು ಪ್ರಾಮಾಣಿಕವಾಗಿ ಸಂಗ್ರಹಿಸುವ, ವಿಶ್ಲೇಷಿಸುವ ಮತ್ತು ನಿರೂಪಿಸುವ ಕಾರ್ಯವನ್ನು ಚಿಕ್ಕಣ್ಣ ಯಣ್ಣೆಕಟ್ಟೆ ಮಾಡಿದ್ದಾರೆ. ತಮ್ಮ ಹುಟ್ಟು ಜಿಲ್ಲೆಯೂ ಇದೇ ಆಗಿರುವುದರಿಂದ ಗ್ರಹಿಕೆಗೆ ವಿಸ್ತೃತತೆ ಲಭ್ಯವಾಗಿದೆ. ಜನಪದ ಸಂಸ್ಕೃತಿ ಕುರಿತ ಪಿಎಚ್.ಡಿ. ವಿದ್ಯಾರ್ಥಿಗಳಿಗೂ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ ಜಾನಪದದ ನಿಜ ಅಂತಸ್ಸತ್ವ ಸಿದ್ಧಿಸಿದೆ. ಇದು ಈ ಗ್ರಂಥದ ಪುಟ ಪುಟದಲ್ಲೂ ಎದ್ದು ಕಾಣುತ್ತದೆ. ತುಮಕೂರು

ಜಿಲ್ಲೆಯ ಜಾನಪದ ಸಂಸ್ಕೃತಿಯ ವೈವಿಧ್ಯದ ನೆಲೆಗಳನ್ನು ೫೦೦ ಪುಟಗಳಲ್ಲಿ ವಿಸ್ತಾರವಾಗಿ ಗುರುತಿಸುವ, ವಿಶ್ಲೇಷಿಸುವ ಮೂಲಕ ಇತರ ಜಿಲ್ಲೆಗಳ ಜಾನಪದ ಕುರಿತ ಅಧ್ಯಯನ ಹೇಗಿರಬೇಕು ಎಂಬುದಕ್ಕೆ ಮಾರ್ಗದರ್ಶಿ ರೂಪ ನೀಡಿದ್ದಾರೆ. ಇಲ್ಲಿ ಒಂಭತ್ತು ಅಧ್ಯಾಯದ ಜೊತೆಗೆ ಕೊನೆಯಲ್ಲಿ ನೀಡಿರುವ ೧೦೦ ಪುಟಗಳ ಅನುಬಂಧ ಇವರ ವಿಸ್ತೃತ ಕ್ಷೇತ್ರಕಾರ್ಯ, ಸಂಗ್ರಹ, ವಿಶ್ಲೇಷಣೆಯ ಮಹತ್ವ ಹೇಳಿದರೆ, ಕ್ಷೇತ್ರ ಕಾರ್ಯದಲ್ಲಿ ಉಪಲಬ್ಧ ಮಾಹಿತಿಯನ್ನು ಅನ್ಯ ಜ್ಞಾನಶಿಸ್ತುಗಳೊಂದಿಗೆ ಹೇಗೆ ಸಂಸ್ಕೃತಿ–ಸಾಹಿತ್ಯಕ ರೂಪ ಪಡೆಯಬಲ್ಲದು ಎಂಬುದರ ಒಂದು ಮಾದರಿಯ ತೋರುಗಂಬ ನಿರ್ಮಿಸಿದ್ದಾರೆ.

ಮೊದಲ ಅಧ್ಯಾಯ ತುಮಕೂರು ಜಿಲ್ಲೆಯ ಭೌಗೋಳಿಕ, ಪ್ರಕೃತಿ, ಪರಿಸರ, ಇತಿಹಾಸ, ಐತಿಹ್ಯ ಪರಂಪರೆಯ ಜೊತೆಗೆ; ಮೌಖಿಕ ಪರಂಪರೆಯ ಸಾಹಿತ್ಯ, ಕಲೆ, ಸಂಸ್ಕೃತಿಯ ರೂಪಗಳ ನೆಲೆಗಳ ಗಡಿಯನ್ನು ಅದರ ದಿಕ್ಕು ದಿಸೆಗಳನ್ನು ಪರಿಣಾಮಕಾರಿಯಾಗಿ ಗುರುತಿಸುತ್ತಾರೆ. ಎರಡನೇ ಅಧ್ಯಾಯ ವಿಸ್ತೃತವಾಗಿದ್ದು ತುಮಕೂರು ಜಿಲ್ಲೆಯ ಸಮಗ್ರ ಜನಪದ, ಅದರ ಸ್ವರೂಪ ಪ್ರಭೇದಗಳನ್ನು ಗುರುತಿಸಿ, ಇಂಥ ಜಾನಪದದ ಅಧ್ಯಯನ, ಸಂಗ್ರಹ ಕಾರ್ಯ ಯಾವಾಗಿನಿಂದ ಆರಂಭವಾಯಿತು. ಸಂಶೋಧನೆ ಯಾವ ಯಾವ ವಿಷಯಗಳ ಮೇಲೆ ನಡೆದಿದೆ, ಕ್ಷೇತ್ರಕಾರ್ಯದ ಮೂಲಕ ಪ್ರಕಟವಾಗಿರುವ ಜಾನಪದ ಸಂಬಂಧಿ ಕೃತಿ ಲೇಖಕರ ಸಮಗ್ರ ವಿವರಗಳನ್ನು ನೀಡಿದ್ದಾರೆ. ಈ ಜಿಲ್ಲೆಯ ಜನಪದ ಮಹಾಕಾವ್ಯಗಳಾದ ಜುಂಜಪ್ಪ, ಚಿತ್ರದೇವರು; ಕಾಟಂಲಿಂಗ ಖಂಡಕಾವ್ಯ, ಕಥನ ಗೀತೆ, ಗಾದೆ, ಒಗಟು ಇತರ ಕಲಾ ಪ್ರಕಾರ ಕುರಿತ ಗ್ರಂಥಗಳ ಸ್ಥೂಲ ಪರಿಚಯವೂ ಇಲ್ಲಿದೆ. ಕರ್ನಾಟಕದ ಜನಪದ ಮಹಾಕಾವ್ಯಗಳಲ್ಲಿ ಬಯಲು ಸೀಮೆಯ ಬುಡಕಟ್ಟು ಕಾವ್ಯವಾಗಿ ಜುಂಜಪ್ಪನ ಸ್ಥಾನಮಾನ, ಕಾವ್ಯ ಸಂಗ್ರಹ (ಚಲುವರಾಜ್) ಜುಂಜಪ್ಪ ಕಥಾವಳಿ (ಗದ್ಯ ಸಂಗ್ರಹ ಚಿಕ್ಕಣ್ಣ ಯಣ್ಣೆಕಟ್ಟೆ) ಕೃತಿಗಳ ಸ್ಥೂಲಪರಿಚಯ; ಇದರ ಜೊತೆಗೆ ವಡ್ಡಗೆರೆ ವೀರನಾಗಮ್ಮ, ಜಂಗಮರಹಳ್ಳಿ ವೀರನಾಗಪ್ಪ, ಕಂಬದರಂಗ, ಚಿತ್ರದೇವರು, ಈ ಮೊದಲಾದ ಕಾವ್ಯಗಳ ಹಾಗೂ ಈವರೆಗೆ ಪ್ರಕಟವಾಗಿರುವ ಜಾನಪದ ಕಲಾಪ್ರಕಾರ, ಧಾರ್ಮಿಕ, ಲೌಕಿಕ ಕಲಾಪರಂಪರೆ, ಅವುಗಳ ಸ್ವರೂಪ ಬೆಳೆದು ಬಂದ ನಂಬಿಕೆ – ಮತ್ತು ಸಂಪ್ರದಾಯ, ಇವುಗಳ ಕುರಿತ ವಿವರವೂ ಸೊಗಸಾಗಿದೆ. ಹಿರಿಯ ಕಲಾವಿದರ ಸಾಧನೆಯ ವಿವರ, ಕಲಾವಿದನ ಸಾಮರ್ಥ್ಯ ಅರಿಯಲು ಪ್ರೇರಕ. ಆಧ್ಯಾತ್ಮಿಕ ವಾತಾವರಣ, ಒಂದು ಮಿತಿಯ ಒಳಗೂ ಜಾನಪದತನದಿಂದಾಗಿ ನಂಬಿಕೆ, ಆಚರಣೆಯ ಕಾರಣವಾಗಿ ಜಿಲ್ಲೆ ಪ್ರವಾಸಿ ತಾಣವಾಗುತ್ತಿದೆ ಎಂಬುವುದನ್ನು ವಿವರಿಸಿ, ತುಮಕೂರು ಜಿಲ್ಲೆಯ ಪ್ರವಾಸಿ ನೆಲೆಗಳು–ಜಾತ್ರೆ; ಜಾನಪದೀಯ ಅಂಶಗಳ ನಿರೂಪಣೆ; ಮತ್ತೊಂದು ಅಧ್ಯಯನಕ್ಕೆ ಮಾರ್ಗಸೂಚಿ ಇವೆಲ್ಲ ಇಲ್ಲಿವೆ.

ಈಗಾಗಲೇ ಪ್ರಸಿದ್ಧ ಮಾದರಿಯಾಗಿರುವ ಸಿದ್ಧಗಂಗೆ, ಉಜ್ಜನಿ ಚೌಡಮ್ಮ, ಮಧುಗಿರಿ, ನಾಗಲಮಡಿಕೆ ಈ ಬಗೆಯ ಪ್ರಸಿದ್ಧ ಸ್ಥಳಗಳನ್ನಷ್ಟೇ ಅಲ್ಲದೆ ಜಿಲ್ಲೆಯ ಅಲಕ್ಷಿತ ಸಾಂಸ್ಕೃತಿಕ ಗ್ರಾಮಗಳಾದ ಕಳುವರಹಳ್ಳಿ, ಗಂಡಿಹಳ್ಳಿ, ಮಣ್ಣೆ, ಕ್ಯಾಮೇನಹಳ್ಳಿ, ಚೇಳೂರು, ಮಾಗೋಡು, ಸೀಬಿ, ಚಿ.ನಾ. ಹಳ್ಳಿ, ಈ ಬಗೆಯ ಸ್ಥಳಗಳ ಅಧ್ಯಯನ, ಸಾಂಸ್ಕೃತಿಕವಾಗಿ ವಿಶೇಷ ಗಮನ ಸೆಳೆಯುತ್ತವೆ. ಜಿಲ್ಲೆಯ ಕೃಷಿ ಸಂಬಂಧಿ ಜನಪದ ಆಚರಣೆ, ಅಡಿಗೆ, ಸಂಪ್ರದಾಯ, ಜನಪದ ಕ್ರೀಡೆ ಇವುಗಳ ಅಧ್ಯಯನ ಎಲ್ಲ ಜಿಲ್ಲೆಗಳ ಸಂಸ್ಕೃತಿಯ ಭಾಗವಾಗಿಯೇ ಪ್ರಕಟವಾದರೂ ಜನಪದ ಕ್ರೀಡೆಗೆ ಸಂಬಂಧಿಸಿದ, ವಿವರಣೆ ಪರಿಣಾಮಕಾರಿಯಾಗಿದೆ. ಜನಪದದ ಜೀವಸತ್ವದ ಭಾಗವಾಗಿ ನಿಲ್ಲುವ ಜನಪದ ಆಟಗಳ ಪರಿಚಯ, ಪ್ರತಿ ಆಟ ಸಾಂಸ್ಕೃತಿಕ ಮಹತ್ವ ದೈಹಿಕವಾಗಿಯೂ ಇವುಗಳ ಮಹತ್ವ, ಆಟದ ಸಂದರ್ಭ; ಇವುಗಳ ವಿವರಣೆ ಪರಿಣಾಮಕಾರಿಯಾಗಿದೆ. ಈ ಸಂಶೋಧನೆಗೆ ಪೂರಕವಾದ ಪ್ರತ್ಯೇಕ ಅನುಬಂಧವನ್ನು ನೀಡಲಾಗಿದೆ. ಇಲ್ಲಿ ಪ್ರತಿ ಅಧ್ಯಾಯಕ್ಕೂ ನಿದರ್ಶನ ಎಂಬಂತೆ ಪ್ರಾದೇಶಿಕ ಗಾದೆ, ಹಾಡು, ಒಗಟು, ಬೈಗುಳ, ನಂಬಿಕೆಗಳ ವಿಶಿಷ್ಟ ಭಾಷಾ ಪ್ರಯೊಗ ನೀಡಲಾಗಿದೆ. ಎಲ್ಲವೂ ತುಮಕೂರು ಜಿಲ್ಲೆಗೆ ಸೀಮಿತವಾದ ಜಾನಪದ ವಿಶೇಷ ಎಂಬುದನ್ನು ಲೇಖಕರು ಕ್ಷೇತ್ರ ಕಾರ್ಯದ ಆಧಾರದಲ್ಲಿ ನಿರೂಪಿಸಿದ್ದಾರೆ. ಚಿಕ್ಕಣ್ಣನವರು ೨೦೦೧ರಲ್ಲಿ 'ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ' ಎಂಬ ಕೃತಿಯನ್ನು ಪ್ರಕಟಿಸಿದ್ದರು. ಇದರ ಪರಿಷ್ಕೃತ ಹಾಗೂ ಮುಂದುವರಿದ ಕ್ಷೇತ್ರಕಾರ್ಯ ಬಂದಿರುವ ಕೃತಿ ಕಲಾವಿದರ ವಿಸ್ತೃತ ಪರಿಚಯ ಈ ಗ್ರಂಥದಲ್ಲಿ ಆಗಿದೆ. ಹೀಗಾಗಿ ಇದೊಂದು ತುಮಕೂರು ಜಿಲ್ಲೆಯ ಜಾನಪದ ವಿದ್ಯಾರ್ಥಿಗಳಿಗೆ ಸಂಶೋಧನಾರ್ಥಿಗಳಿಗೆ ಅತ್ಯುತ್ತಮ ಆಕರ ಗ್ರಂಥವಾಗಿದೆ. ತುಮಕೂರು ವಿಶ್ವವಿದ್ಯಾನಿಲಯ ಶಾಸ್ತ್ರೀಯ ಭಾಷಾ ಅಧ್ಯಯನ ಪ್ರಕಟಣಾ ಮಾಲೆಯಲ್ಲಿ ಪ್ರಕಟಿಸಿರುವ ಕೃತಿಗಳ ಪೈಕಿ ಅನ್ವಯಿಕ ಕ್ಷೇತ್ರಕಾರ್ಯ, ಸ್ಥಳೀಯ ಸಂಸ್ಕೃತಿಯ ಅಧ್ಯಯನ– ಕುರಿತ ಅತ್ಯಂತ ಮಹತ್ವದ ಕೃತಿ ಇದಾಗಿದೆ.

ಡಿ.ಜಿ. ರಮೇಶ್

ಪರಂಪರೆಯೊಂದರ ವಿವರವಾದ ಅಧ್ಯಯನ

* **ದಳವಾಯಿ–** ಲೇ. ಡಾ. ಲಿಂಗದಹಳ್ಳಿ ಹಾಲಪ್ಪ, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೧೫+೧೪೪; ರೂ. ೧೦೦/–

'ದಳವಾಯಿ' ಎಂಬುದು ಕುರುಬ ಸಮುದಾಯದಲ್ಲಿರುವ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಮುಖ್ಯವಾದ ಒಂದು ಪದವಿ. ದಳವಾಯಿ ಪಟ್ಟವನ್ನಲಂಕರಿಸಿದ ವ್ಯಕ್ತಿ ತನ್ನ ಪಂಗಡದವರಿಂದ ತುಂಬ ಗೌರವಿಸಲ್ಪಡುತ್ತಾನೆ. ಅದಕ್ಕೆ ತಕ್ಕ ಹಾಗೆ ಆ ವ್ಯಕ್ತಿ ಅನುಸರಿಸಬೇಕಾದ ಕೆಲವು ನಿಯಮಗಳು ಇರುತ್ತವೆ. ಸೈನ್ಯದಲ್ಲಿನ ದಳವಾಯಿ ಹುದ್ದೆಗಿಂತ

ಇದು ಭಿನ್ನವಾದದ್ದು. ಈ ದಳವಾಯಿ ಪರಂಪರೆಯ ವಿವರವಾದ ಅಧ್ಯಯನವನ್ನು ಪ್ರಸ್ತುತ ಕೃತಿ ಸಾದರಪಡಿಸುತ್ತದೆ.

ಈ ಕೃತಿಯಲ್ಲಿ ಕುರುಬ ಜನಾಂಗದ ಇತಿಹಾಸ, ಪರಂಪರೆ, ಕುರುಬರ ಕುಲದೈವ ಬೀರಪ್ಪ, ದಳವಾಯಿ ಪಟ್ಟದ ದೀಕ್ಷಾ ಪದ್ಧತಿ, ಅವರ ಕೌಟುಂಬಿಕ ಮತ್ತು ಸಾಮಾಜಿಕ ಜೀವನ, ಧಾರ್ಮಿಕ ಜೀವನ ಮತ್ತು ಆಚರಣೆಗಳು, ದಳವಾಯಿ ಕುಣಿತ, ಕುರುಬರ ಧಾರ್ಮಿಕ ಪರಂಪರೆಯಲ್ಲಿ ದಳವಾಯಿಯ ಸ್ಥಾನ, ಆಧುನಿಕ ಕಾಲದಲ್ಲಿ ದಳವಾಯಿಯ ಸ್ಥಿತಿಗತಿಗಳು ಈ ವಿಷಯವನ್ನು ವಿವಿಧ ಅಧ್ಯಾಯಗಳಲ್ಲಿ ಚರ್ಚಿಸಿದ್ದಾರೆ. ಈ ಕೃತಿಗಾಗಿ ಲೇಖಕರು ಸಾಕಷ್ಟು ಓದು ಮತ್ತು ಕ್ಷೇತ್ರಕಾರ್ಯ ನಡೆಸಿದ್ದಾರೆ. ಕುರುಬ ಸಮುದಾಯಕ್ಕೆ ಸಂಬಂಧಿಸಿದ ಅನೇಕ ಸಾಂಸ್ಕೃತಿಕ ಪದಗಳಿಗೆ ಇಲ್ಲಿ ಸರಿಯಾದ ವಿವರಣೆ ಸಿಗುತ್ತದೆ– ಗುಡಿಕಟ್ಟು, ಬೆಡಗು, ಮುಳ್ಳುಪಲ್ಲಕ್ಕಿ ಇತ್ಯಾದಿ ಇತ್ಯಾದಿ. ಹಲವು ಮಂದಿ ದಳವಾಯಿಗಳನ್ನು ಸಂದರ್ಶಿಸಿ ಮಾಹಿಸಿ ಪಡೆದಿದ್ದು ಆ ಸಂದರ್ಶನಗಳನ್ನು ಅನುಬಂಧವಾಗಿ ಕೊಟ್ಟಿರುವುದೂ ಕೂಡ ಒಳ್ಳೆಯ ಅಂಶ.

ಆದರೆ ಲೇಖಕರು ಅಲ್ಲಲ್ಲಿ ವ್ಯಕ್ತಪಡಿಸುವ ಕೆಲವು ಅಭಿಪ್ರಾಯಗಳನ್ನು ಅಂಗೀಕರಿಸುವುದು ಸದ್ಯಕ್ಕಂತೂ ಕಷ್ಟವಾಗುತ್ತದೆ. ಉದಾ. ಗೆ– 'ವಲ್ಲಭ' ಎಂಬ ಬಿರುದು ಹೊಯ್ಸಳರಿಗೂ ಪುಲಕೇಶಿಗೂ ಇತ್ತು ಎಂದು ಹೇಳಿ 'ವಲ್ಲಭ ಎಂದರೆ ಗೋವಳರ ಮುಖ್ಯಸ್ಥ ಎಂಬ ಅರ್ಥವಿದೆ ಎಂದು ಹೇಳಿ ಆ ರಾಜವಂಶಗಳು ಹಾಲುಮತಸ್ಥರು ಅಥವಾ ಕುರುಬರಿಂದಾದದ್ದು ಎನ್ನಲು ಅದನ್ನೂ ಒಂದು ಕಾರಣವಾಗಿ ಕೊಡುತ್ತಾರೆ. ವಲ್ಲಭ ಎಂದು ಬಹುತೇಕ ಎಲ್ಲ ರಾಜರನ್ನೂ ಸಂಬೋಧಿಸಲಾಗಿದೆ. ಅದು ರಾಜನಿಗಿರುವ ಒಂದು ಪರ್ಯಾಯ ಶಬ್ದವೇ ಎಂಬಂತೆ ಪ್ರಯೋಗವಾಗಿದೆ. ಇದು ಎಲ್ಲರಿಗೂ ತಿಳಿದಿರುವ ವಿಷಯ. ಇದಕ್ಕೆ 'ಪಶುಪಾಲಕರ ಮುಖ್ಯಸ್ಥ' ಎಂದು ಅರ್ಥ ಮಾಡುವುದಾದರೂ ಹೇಗೆ? ಆ ಶಬ್ದವನ್ನು ಪ್ರಯೋಗಿಸಿ ಕರೆದಿದ್ದಾರೆಂಬ ಮಾತ್ರಕ್ಕೆ ಒಂದು ರಾಜವಂಶವನ್ನು ಕುರುಬರೆಂದು ನಿರ್ಧರಿಸುವುದಾದರೂ ಹೇಗೆ?

ಇದೇ ರೀತಿ ಇವರು ಸುಧಾಕರ ಅವರು – 'ಕುರುಬರಲ್ಲಿನ ಅಸಲು ಎಂಬ ಬೆಡಗಿನವರ ಹೆಸರಿನಿಂದಲೇ ಹೊಯ್ಸಳರು ಎಂದಾಯಿತು ಎಂದಿದ್ದಾರೆ' ಎಂದು ಹೇಳುತ್ತಾರೆ. (ಪು.೧೮) ಪದಗಳಲ್ಲಿ ಕ್ಲಿಷ್ಟತೆಯಿಂದ ಸರಳತೆಗೆ ಪಲ್ಲಟ ವಾಗುವುದು ರೂಢಿಯೇ ವಿನ ಸರಳತೆಯಿಂದ ಕ್ಲಿಷ್ಟರೂಪಕ್ಕೆ ಹೋಗುವುದು ಅಸಹಜ. ಸುಧಾಕರ ಅವರ ಮಾತಿನ ಆಕರವನ್ನು ಲೇಖಕರು ಉಲ್ಲೇಖಿಸಿಲ್ಲ.

ಹೀಗೆ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಅಂಶಗಳಲ್ಲಿ ಈ ಲೇಖಕರ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ. ವಿವರಗಳು ತುಂಬ ಗಮನಾರ್ಹವಾಗಿದ್ದು ಅವುಗಳನ್ನು

ಬಹುಮಟ್ಟಿಗೆ ಅಂಗೀಕರಿಸಬಹುದು. ಜಾನಪದ ಅಧ್ಯಯನದ ದೃಷ್ಟಿಯಿಂದ ಆ ಎಲ್ಲ ಮಾಹಿತಿಗಳು ಹಾಗೂ ಅವುಗಳ ವಿಶ್ಲೇಷಣೆ ತುಂಬ ಸ್ವಾಗತಾರ್ಹವಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಉಪಯುಕ್ತ ಲೇಖನಗಳು

* **ಲೋಕ ಸಂಸ್ಕೃತಿ:**– ಲೇ. ಬಸವರಾಜ ಪೋಲೀಸಪಾಟೀಲ, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್, ಪು–೧೪+೧೦೬; ಬೆಲೆ ರೂ. ೭೦/–

ಈ ಪ್ರಬಂಧ ಸಂಗ್ರಹದಲ್ಲಿ ಒಟ್ಟು ಒಂಭತ್ತು ಲೇಖನಗಳಿವೆ. ಮೊದಲ ಪ್ರಬಂಧವಾದ 'ಲೋಕ ಸಂಸ್ಕೃತಿ' ಕೆಲವು ಒಳ್ಳೆಯ ಒಳನೋಟವನ್ನು ಒಳಗೊಂಡ ವಿಶ್ಲೇಷಣಾತ್ಮಕ ಲೇಖನ. ಇದು ಸಂಶೋಧನ ಲೇಖನವಲ್ಲದಿದ್ದರೂ ಆಲೋಚನಾತ್ಮಕವಂತೂ ಹೌದು. ಜನಪದ ಕತೆಗಳನ್ನು ಕುರಿತ ಲೇಖನವು ಕೇವಲ ಪರಿಚಯಾತ್ಮಕ ವಾಗಿದ್ದು ಅದರಲ್ಲಿನ ಎಲ್ಲ ವಿಷಯಗಳೂ ಎಷ್ಟೋ ವರ್ಷಗಳ ಹಿಂದೆ ರಾಗೌರಂಥ ವಿದ್ವಾಂಸರು ತಮ್ಮ 'ಜನಪದ ಕತೆಗಳು' ಗ್ರಂಥದ ಪ್ರಸ್ತಾವನೆಯಲ್ಲಿ ಹೇಳಿರುವುದೇ ಆಗಿದೆ. ಬಹುಶಃ ಆ ಲೇಖನದ ಉದ್ದೇಶವೇ ಸೀಮಿತವಾದದ್ದಿರಬಹುದು. ಆದರೆ ಈ ಸಂಕಲನದಲ್ಲಿನ ಕಲ್ಗಿ–ತುರಾಯಿ, ಅಪ್ರಕಟಿತ ಸಣ್ಣಾಟಗಳು, ಸ್ಥಳೀಯ ಐತಿಹ್ಯಗಳು–ಈ ಲೇಖನಗಳು ಬೆಲೆಯುಳ್ಳವು. 'ಓಕುಳಿ' ಮತ್ತು 'ಸಿಡಿ ಮತ್ತು ಸಿಡಿತಲೆ' ಲೇಖನಗಳೂ ಕೂಡಾ ಒಳ್ಳೆಯ ವಿಶ್ಲೇಷಣಾತ್ಮಕ ಲೇಖನಗಳು. ಅಪ್ರಕಟಿತ ಸಣ್ಣಾಟಗಳು ಹಾಗೂ ಸ್ಥಳೀಯ ಐತಿಹ್ಯಗಳನ್ನು ಕುರಿತ ಪ್ರಬಂಧಗಳು ಒಳ್ಳೆಯ ಸಂಪ್ರಬಂಧಗಳ ಲಕ್ಷಣಗಳನ್ನು ಹೊಂದಿವೆ. 'ಕಲಬುರ್ಗಿ ಜಿಲ್ಲೆಯ ಜನಪದ ಕಲಾವಿದರು' ಕೇವಲ ಮಾಹಿತಿ ಕೊಡುವ ಲೇಖನ ಎನಿಸಿದರೂ ಇಪ್ಪತ್ತೈದು ಮಂದಿ ಜಾನಪದ ಕಲಾವಿದರ ಮಾಹಿತಿ ಕಲೆಹಾಕುವುದು ಸುಲಭವಲ್ಲ ಹಾಗೂ ಇಂಥ ಮಾಹಿತಿಗಳೇ ಮುಂದಿನ ಕ್ಷೇತ್ರಕಾರ್ಯ ಮತ್ತು ಸಂಶೋಧನೆಗೆ ಅಗತ್ಯವಾಗುತ್ತವೆ.

'ಹೈದ್ರಾಬಾದ್ ಕರ್ನಾಟಕದ ಜನಪದ ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನೆ' ಲೇಖನದಲ್ಲಿ ಆ ವಿಷಯ ಕುರಿತ ಅನೇಕ ಒಳ್ಳೆಯ ಮಾಹಿತಿಗಳಿವೆ. ಆದರೆ ಪ್ರಕಟಣೆಗೆ ಮುನ್ನ ಆ ಲೇಖನದ ಪರಿಷ್ಕರಣೆ ಅಗತ್ಯವಿತ್ತು. ಯಾಕೆಂದರೆ ಅಲ್ಲಿನ ಕೆಲವು ಮಾಹಿತಿಗಳು ಅದೇ ಹಳೆಯ ರೂಪದಲ್ಲೇ ಉಳಿದುಬಿಟ್ಟಿವೆ. ಇಂಥ ಕೆಲವು ಲೋಪಗಳಿದ್ದರೂ ಸಹ ಇಲ್ಲಿನ ಲೇಖನಗಳು ಪ್ರಾಮಾಣಿಕ ಅಧ್ಯಯನ, ಕ್ಷೇತ್ರಕಾರ್ಯ ಹಾಗೂ ಚಿಂತನೆಯ ಫಲಗಳಾದ್ದರಿಂದ ಇದನ್ನೂ ಮೆಚ್ಚಬೇಕಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಜಾನಪದ ಸಡಗರ

* ಜಾನಪದ ಸಡಗರ–ಲೇ. ಸಿ.ಕೆ. ನಾವಲಗಿ, ಪು: ೨೪೦/– ಬೆಲೆ ರೂ. ೧೨೦/೯ ಪ್ರ: ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯರಸ್ತೆ, ೮೦ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ, ೨ನೇ ಹಂತ, ಬೆಂಗಳೂರು – ೫೬೦ ೦೭೨

ಕಾಲಮಾನದ ಜೊತೆಗೆ ಜಾನಪದವನ್ನು ಗ್ರಹಿಸುವ, ಅರ್ಥೈಸುವ ವಿಧಾನಗಳು ಬದಲಾಗುತ್ತಿವೆ. ಅಂಥ ಮನೋಭಾವದ ಸಿ.ಕೆ. ನಾವಲಗಿಯವರ ಇತ್ತೀಚಿನ ಕೃತಿ 'ಜಾನಪದ ಸಡಗರ'. ಸಾಹಿತ್ಯ ಕ್ಷೇತ್ರದ ಬಹುಮುಖ ಪ್ರತಿಭೆ ಅವರದು. ಪ್ರಸ್ತುತ ಕೃತಿಯಲ್ಲಿ ಜಾನಪದ ಸಂಬಂಧಿಯಾದ ೨೮ ಪ್ರಬಂಧಗಳಿದ್ದು, ವಿಮರ್ಶೆ ಸಂಶೋಧನೆಯ ವೈವಿಧ್ಯದಿಂದ ಕೂಡಿವೆ.

ಕೃತಿ ಸಮೀಕ್ಷೆಯ ದೃಷ್ಟಿಯಿಂದ ಇಲ್ಲಿನ ಪ್ರಬಂಧಗಳನ್ನು ಜಾನಪದ ಮರುವಿಚಾರ, ಕೃತಿವಿಮರ್ಶೆ, ವ್ಯಕ್ತಿ ವಿಷಯ, ಚಿಂತನ, ಸಂಪಾದನೆ ಎಂದು ಸ್ಥೂಲವಾಗಿ ವಿಭಾಗ ಮಾಡಿಕೊಳ್ಳಬಹುದು.

ಈ ಕೃತಿಯ ಮೊದಲನೇ ಪ್ರಬಂಧ 'ಜಾನಪದ: ಒಂದು ಮರು ಚಿಂತನೆ' ಮತ್ತು ಕೊನೆಯ ಪ್ರಬಂಧ 'ಜಾನಪದ ಉಳಿವು ಏಕೆ? ಹೇಗೆ?: ಅಭಿಪ್ರಾಯ' ದಲ್ಲಿ ಲೇಖಕರು ಜಾನಪದವನ್ನು ಅಂದು–ಇಂದುಗಳ ನೆಲೆಯಲ್ಲಿರಿಸಿ ನೋಡುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಜಾನಪದವನ್ನು ಗ್ರಾಮಕ್ಕೆ ಸೀಮಿತಗೊಳಿಸುವ, ಆಧುನಿಕತೆಗೆ ವಿರುದ್ಧವಾದುದು ಎಂದು ನಿರ್ಣಯಿಸುವ ಪರಿಕಲ್ಪನೆ ಮೊದಲಿಗೆ ರೂಪಗೊಂಡದ್ದು ಉಂಟು. ಆದರೆ ಪುನರ್ ಮೌಲೀಕರಣಕ್ಕೆ ಜಾನಪದವನ್ನು ಒಳಗು ಮಾಡಿರುವ ನಾವಲಗಿಯವರು "ಜಾನಪದ ಅತ್ಯಂತ ವರ್ತಮಾನವಾದುದು. ಅದರಲ್ಲಿ ಆಧುನಿಕತೆಯ ಮಿಲನ ಇದೆ. ಜಾನಪದ ನಾಶವಾಗುವಂಥದಲ್ಲ, ಅದು ನಿರಂತರವಾದುದು, ಮಹಾಚಲನಶೀಲವಾದುದು. ಬದಲಾವಣೆ ಅದರ ಮೂಲ ಗುಣ" ಎಂಬ ಹೊಸ ನೋಟವನ್ನು ನೀಡಿದ್ದಾರೆ. ಇದಕ್ಕೆ ಪೂರಕವಾಗುವ ಮತ್ತೊಂದು ಪ್ರಬಂಧ 'ಕರಕುಶಲ ಕಲೆಗಳ ಮೇಲೆ ತಂತ್ರಜ್ಞಾನದ ಪ್ರಭಾವ'. ಜಾಗತೀಕರಣದ ಪ್ರಭಾವದಿಂದ ಏನೆಲ್ಲ ಆಗಿ ಹೋಗುತ್ತಿದೆ ಎಂದು ಆರೋಪಿಸುವವರಿಗೆ "ನಾನು ನಮ್ಮ ಜನಪದ ತಂತ್ರಜ್ಞಾನದೊಂದಿಗೆ ಆಧುನಿಕವಾದುದನ್ನು ವಿದೇಶೀಯವಾದುದನ್ನು ಸಮನ್ವಯಗೊಳಿಸಿಕೊಳ್ಳುತ್ತ ದೇಸೀಕರಣ, ಜಾನಪದೀಕರಣ ಮಾಡಿಕೊಳ್ಳಬೇಕಾಗಿದೆ" ಎಂದು ಹೇಳುವ ಮೂಲಕ ಕಾಲಮಾನ–ಕಲಾಮಾನಗಳನ್ನು ಒಂದೆಡೆಗೆ ತಂದು ಹೊಸದನ್ನು ಸೃಷ್ಟಿಸಲು ಅವಕಾಶವಿದೆ ಎಂಬ ಸಲಹೆಯನ್ನು, ಸೂಚನೆಯನ್ನು ನೀಡಿದ್ದಾರೆ.

ನಮ್ಮ ದೇಶದ ಇತಿಹಾಸ ರಚಿಸುವಾಗ ವಿದ್ವಾಂಸರು, ಇತಿಹಾಸಕಾರರು, ಮೌಖಿಕವಾಗಿ ಚಾಲ್ತಿಯಲ್ಲಿರುವ ಚಾರಿತ್ರಿಕ ವಿಚಾರಗಳನ್ನು ಗಮನಿಸಿಲ್ಲ. ಜಾನಪದದಲ್ಲಿರುವ ಗೀತೆ, ಲಾವಣಿಗಳನ್ನು ಅಗತ್ಯವಾಗಿ ಗಮನಿಸಬೇಕಾಗಿತ್ತು. ಈ ವಿಚಾರವನ್ನು ಪ್ರತಿಪಾದಿಸಲೆಂದೇ 'ಜನಪದ ಕವಿ ಕಂಡ ರಾಣಿ ಚೆನ್ನಮ್ಮ' ಮತ್ತು 'ಕಿತ್ತೂರು ನಾಡ ಸಂಸ್ಕೃತಿ' ಯಂಥ ಪ್ರಬಂಧಗಳು ರೂಪಗೊಂಡಿವೆ ಅಂತೆಯೇ 'ಒಕ್ಕುಂದ ನಾಡಿನ ಸೊಗಡು' ಪ್ರಬಂಧವೂ ಗಮನ ಸೆಳೆಯುವಂಥದು. 'ತಿರುಳ್ಗನ್ನಡ' ದ ಸಾರಸರ್ವಸ್ವವನ್ನೂ ತಿಳಿಸುವಂತೆ, ಸಾಂಸ್ಕೃತಿಕ ಮತ್ತು ಭೌಗೋಳಿಕ ವಿಚಾರಗಳನ್ನೂ ವ್ಯಕ್ತಗೊಳಿಸುವ ನಾವಲಗಿ ಅವರು "ಇವರೆಲ್ಲ ಶುದ್ಧ ಕನ್ನಡಿಗರೇ, ಇಲ್ಲಿ ಜೈನ, ಮುಸಲ್ಮಾನ, ಮರಾಠರೂ ಇದ್ದಾರೆ. ಇವರಿಗೆಲ್ಲ ಕನ್ನಡದ ಸಂಸ್ಕಾರವಿದೆ. ಮುಸ್ಲಿಂ ಹೆಣ್ಣುಮಕ್ಕಳಿಗೆ ಗಂಗವ್ವ, ಬಾಳವ್ವ ಎಂಬ ಹೆಸರನ್ನಿಡಲಾಗಿದೆ" ಎಂದು ಹೇಳುವ ಮೂಲಕ ವೈವಿಧ್ಯದಲ್ಲೂ ಏಕತೆಯ ಅಂಶವಿರುವುದನ್ನು, ಆ ಭಾಗದ ಜನರ ಆದರ್ಶವನ್ನು, ಬಿಂಬಿಸಿದ್ದಾರೆ.

'ಬೆಳಗಾವಿ ಜಿಲ್ಲೆ ಜನಪದ ಕಲೆಗಳು' 'ಗೋಕಾವಿ ನಾಡಿನ ಜನಪದ ಸಾಹಿತ್ಯ ಒಂದು ಇಣಕು ನೋಟ' ಮತ್ತು 'ವಿಜಯ ನಗರ ಕಾಲದ ಜಾನಪದ'– ಈ ಪ್ರಬಂಧಗಳಲ್ಲಿ ಕಂಡುಬರುವ ವಿವಿಧ ಕಲೆಗಳ ಒಳನೋಟ, ಮಹಾನ್ ಸಾಮ್ರಾಜ್ಯವಾಗಿದ್ದ ವಿಜಯನಗರ ಕಾಲದ ಜಾನಪದದ ಮೂಲಕ ಅಂದಿನ ಕಲೆಗಳು, ಸಂಸ್ಕೃತಿ, ಆಚರಣೆಗಳು, ಹಬ್ಬ ಹರಿದಿನಗಳನ್ನು ನೆನಪು ಮಾಡಿಕೊಡುತ್ತಾರೆ. 'ಉತ್ತರ ಕರ್ನಾಟಕದ ಭಜನೆ ಹಾಡುಗಳು' ಲೇಖಕರ ಪಾಂಡಿತ್ಯ, ಕ್ಷೇತ್ರಕಾರ್ಯ. ಸಂಶೋಧನಾ ವಿಧಾನಗಳನ್ನು ಪ್ರತಿಫಲಿಸುತ್ತದೆ. ಅವರ ವಿಷಯ ವಿಶ್ಲೇಷಣಾ ಸಾಮರ್ಥ್ಯಕ್ಕೆ ಕನ್ನಡಿಯಂತಿರುವ ಈ ಪ್ರಬಂಧದಲ್ಲಿ ಭಜನೆಯ ಇತಿಹಾಸವನ್ನು ಕಟ್ಟಿಕೊಡಲಾಗಿದೆ. "ನಿಜವಾದ ಭಕ್ತನೊಬ್ಬ ಏಕಾಗ್ರತೆಯಿಂದ ಭಗವಂತನನ್ನು ಹಾಡಿಹೊಗಳುವ ಭಕ್ತಿ ಪೂರ್ಣ ಗೀತೆಗಳನ್ನು 'ಭಜನೆ' ಗಳೆಂದು ಹೇಳಬಹುದು" ಎಂಬ ವಿವರಣೆಯೊಂದಿಗೆ ಭಜನೆ ಸಂಪ್ರದಾಯ ಹುಟ್ಟು, ಬೆಳವಣಿಗೆ, ಅವುಗಳ ಸ್ವರೂಪ ಲಕ್ಷಣಗಳು, ಅವುಗಳ ಹಾಡುಗಾರಿಕೆ, ಅವುಗಳ ವಿವಿಧ ಬಗೆಗಳು, ವಾದ್ಯಪರಿಕರಗಳು– ಹೀಗೆ ಭಜನೆಗೆ ಸಂಬಂಧಪಟ್ಟ ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸುವ, ವ್ಯಾಖ್ಯಾನಿಸುವ ಲೇಖಕರು ಉಪಯುಕ್ತವಾದ, ಎಲ್ಲವನ್ನೂ ಒಳಗೊಂಡಿರುವ ಪ್ರಬಂಧವನ್ನು ನೀಡುವ ಮೂಲಕ, ಭಕ್ತಿಭಾವದೊಂದಿಗೆ ಮಿಳಿತವಾಗಿರುವ ತತ್ವನೀತಿಬೋಧನೆ, ಮನರಂಜನೆಯ ವಿಚಾರಗಳ ಬಗೆಗೂ ಗಮನ ಹರಿಸಿರುವುದನ್ನು ಕಾಣಬಹುದು.

'ಜಾಗತೀಕರಣದಲ್ಲಿ ನಲುಗುತ್ತಿರುವ ಭಾರತದ ಕೃಷಿ' ಪ್ರಬಂಧ ಹೊಸ ವಿಚಾರಗಳನ್ನು ಮೈಗೂಡಿಸಿಕೊಂಡಿದೆ. ಕೃಷಿಯ ಬಹುಭಾಗ ಯಂತ್ರಗಳಿಂದಲೇ ನಡೆಯುತ್ತಿದೆ. ಇದರಿಂದ

ಏತದ ಹಾಡುಗಳು, ಹಂತಿ ಹಾಡುಗಳು, ಬಲೋರಿ ಹಾಡುಗಳು ನಿಂತುಹೋದುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರಲ್ಲದೆ "ಕೃಷಿಯನ್ನು ಒಂದು ಉದ್ದಿಮೆಯಾಗಿ ಪರಿವರ್ತಿಸಲು ಪ್ರಯತ್ನ ನಡೆಸಿರುವ ಬಹುರಾಷ್ಟ್ರೀಯ ಕಂಪೆನಿಗಳಿಂದ ಕೃಷಿ ಸಂಸ್ಕೃತಿ ಸುಟ್ಟು ಬೂದಿಯಾಗುವ ದಿನಗಳು ದೂರವಿಲ್ಲ ಎನಿಸುತ್ತದೆ" ಎಂಬ ಎಚ್ಚರಿಕೆ ನುಡಿಯನ್ನಾಡಿದ್ದಾರೆ.

'ದು.ನಿಂ. ಬೆಳಗಲಿ ಅವರ ಕಾದಂಬರಿಗಳು–ದೇಸಿ ನೆಲೆ', 'ಜನಪದ ಕ್ಷೇತ್ರಜ್ಞ ಎಂ.ಎನ್. ವಾಲಿ'– ಈ ಪ್ರಬಂಧಗಳು ಲೇಖಕರ ವಿಸ್ತಾರವಾದ ಅಧ್ಯಯನ, ವ್ಯಕ್ತಿಗಳೊಂದಿಗೆ ಇರುವ ಸಹೃದಯ ಸಂಬಂಧವನ್ನು ತಿಳಿಸುತ್ತವೆ. ಅಲ್ಲದೆ 'ಬಹುಮುಖಿ ಜಾನಪದ, ಬಸವರಾಜ ಸಬರದ', 'ಬಿ.ಜಿ. ಚನ್ನೇಶ ಹೊನ್ನಾಳಿಯವರ ಜಂಗಮ ಕವಿ ಸರ್ವಜ್ಞ', 'ಸರೋಜಿನಿ ಚವಲಾರರ ಸಮಾಹಿತ' ಎಂಬ ಗ್ರಂಥಗಳನ್ನು ಕುರಿತ ಅವರ ಸಮದರ್ಶಿತ್ವದ ವಿಮರ್ಶೆ ಮೆಚ್ಚುವಂಥದು. ವಿಮರ್ಶೆ ಎಂದರೆ ಹೇಗಿಬೇಕೆಂಬುದಕ್ಕೆ ಈ ಪ್ರಬಂಧಗಳನ್ನು ಉದಾಹರಿಸಬಹುದು. ಜನಪದ ರಂಗಭೂಮಿಗೆ ಸಂಬಂಧಿಸಿದ 'ಶ್ರೀಕೃಷ್ಣ ಪಾರಿಜಾತದ ಯಕ್ಷಿ ಕೌಜಲಗಿ ನಿಂಗಮ್ಮ' 'ಸಣ್ಣಾಟಗಳ ಅದ್ವಿತೀಯ ನಟಿ ಲಲಿತಾ ಪಾತ್ರೋಟ' ಎಂಬ ಪ್ರಬಂಧಗಳಲ್ಲಿ ವ್ಯಕ್ತಿ ಚಿತ್ರಣಗಳೊಂದಿಗೆ ಕೆಲವು ಮುಖ್ಯ ವಿಚಾರಗಳನ್ನು ಹೇಳುತ್ತಾರೆ.

ಒಟ್ಟಾರೆ ಈ ಗ್ರಂಥದ ಎಲ್ಲ ಪ್ರಬಂಧಗಳು ಲೇಖಕರ ಸಂಶೋಧನಾ ದೃಷ್ಟಿ, ಅನ್ವೇಷಣಾ ಮನೋಭಾವ, ವಿದ್ವತ್ತನ್ನು ಎತ್ತಿತೋರುತ್ತದೆ. ಕೃತಿಕಾರರ ಪರಿಶ್ರಮದಿಂದ ಪಕ್ವವಾದ ವಿಚಾರಗಳು ಜಾನಪದ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಲಭ್ಯವಾಗಿವೆ.

ದೇಜಗೌ ಅವರು ಈ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ "ಆತ್ಮಶ್ರದ್ಧೆ, ಆತ್ಮಗೌರವ, ಆತ್ಮಪ್ರತ್ಯಯವುಳ್ಳವರು, ಪರಾವಲಂಬಿಗಳಲ್ಲದ ಸ್ವಾಭಿಮಾನಿಗಳು ನಾವಲಗಿಯವರಂಥ ಬುದ್ಧಿಜೀವಿಗಳ, ಚಿಂತಕರ, ವಿವೇಕ ವಾಣಿಯ ಕಡೆಗೆ ಗಮನ ಹರಿಸಬೇಕು....." ಎಂದು ಹೇಳಿರುವ ಅಭಿಪ್ರಾಯದೊಂದಿಗೆ ನಾವೂ ದನಿಗೂಡಿಸಬಹುದು.

ಎಂ.ಎಲ್. ನರಸಿಂಹಮೂರ್ತಿ

ಸಾಮಾನ್ಯ ಮಟ್ಟದಲ್ಲಿ ನಿಲ್ಲುವ ಪ್ರಬಂಧಗಳು

* **'ಕನ್ನಡ ಜಾನಪದ ಸಾಹಿತ್ಯ'**– ಲೇ. ಬಿ.ಎಸ್. ಸ್ವಾಮಿ, ಪು:೮+೨೭೨=೨೮೦. ಬೆ. ರೂ. ೧೫೦/– ಪ್ರ. ಚೇತನ ಬುಕ್ ಹೌಸ್, 'ಅಂಜನಾದ್ರಿ', ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮೀಟಾಕೀಸ್ ಹಿಂಭಾಗ, ಮೈಸೂರು – ೫೭೦ ೦೨೪.

'ಚೇತನಾ ಯುಗಾಂತರ ಕನ್ನಡ ಸಾಹಿತ್ಯ' ಯೋಜನೆಯ ಅಡಿಯಲ್ಲಿ ವಿಶೇಷತಃ ವಿದ್ಯಾರ್ಥಿಗಳು ಮತ್ತು ಸಂಶೋಧಕರನ್ನು ಗಮನದಲ್ಲಿರಿಸಿಕೊಂಡು ಜಿ.ಎಸ್. ಭಟ್ಟರ

ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದಿರುವ ಬಿ.ಎಸ್. ಸ್ವಾಮಿ ಅವರ '**ಕನ್ನಡ ಜಾನಪದ ಸಾಹಿತ್ಯ**'– ಈ ಕೃತಿಯಲ್ಲಿ ಜಾನಪದಕ್ಕೆ ಸಂಬಂಧಿಸಿದ ಹದಿನೈದು ಪ್ರಬಂಧಗಳಿವೆ.

ಮೊದಲ ಐದು ಪ್ರಬಂಧಗಳಾದ 'ಜಾನಪದ ಅಧ್ಯಯನ ಬೆಳೆದು ಬಂದ ದಾರಿ', 'ಗಾದೆಗಳು', 'ಒಗಟುಗಳು', 'ಒಡಪುಗಳು' ಮತ್ತು ಕಥೆಗಳಲ್ಲಿ ಆ ವಿಷಯಕ್ಕೆ ಸಂಬಂಧಿಸಿದಂಥ ಉದಾಹರಣೆಗಳನ್ನು ನೀಡಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ವಿಷಯಗಳು ಪ್ರವೇಶಿಕೆಯ ಮಿತಿಯಲ್ಲೇ ನಿಂತುಬಿಡುತ್ತವೆ. ಮೊದಲನೇ ಪ್ರಬಂಧದಲ್ಲಿ ಈ ಹಿಂದೆ ಪ್ರಕಟವಾಗಿರುವ ಜಾನಪದ ಕುರಿತ ಪುಸ್ತಕ ಮತ್ತು ಲೇಖಕರ/ಸಂಗ್ರಹಕಾರರ ಬಗೆಗೆ ಸ್ಪಷ್ಟವಾದ ಪರಿಚಯವಿದ್ದು, ಸಾಮಾನ್ಯ ಓದುಗರಿಗೆ ಮಾಹಿತಿ ಒದಗಿಸುವಷ್ಟಕ್ಕೆ ಸೀಮಿತವಾಗಿದೆ.

'ಮಹಿಳೆಯರ ಹಾಡುಗಳು'– ಈ ಪ್ರಬಂಧದಲ್ಲಿ ಹಾಡುವ ಸಂದರ್ಭಗಳನ್ನು ತಿಳಿಸಿ, ಹಾಡಿನ ಕೆಲವು ತುಣುಕುಗಳನ್ನು ಉದಾಹರಿಸಿ, ಸ್ಥೂಲವಾದ ವಿವರಣೆ ನೀಡುವ ಲೇಖಕರು ಪ್ರಾದೇಶಿಕವಾಗಿ ಕೊಡಗಿನ, ಉತ್ತರ ಕರ್ನಾಟಕದ, ಮಹಿಳೆಯರ ಹಾಡುಗಳ ಬಗೆಗೆ ಪ್ರಸ್ತಾಪ ಮಾಡಿದ್ದಾರೆ. 'ಗಂಡಸರ ಜನಪದಗೀತೆಗಳು' ಎಂಬ ಪ್ರಬಂಧದಲ್ಲಿ ಕೋಲಾಟ ಪದಗಳು, ಸ್ತುತಿ ಪದಗಳು, ಹಂತಿ ಹಾಡುಗಳು, ತತ್ವಪದಗಳು, ಭಜನೆ ಮತ್ತಿತರ ವಿಭಜನೆ ಮಾಡಿ, ಅವಕ್ಕೆ ತೆಳುವಾದ ವಿವರಣೆ ನೀಡಿದ್ದಾರೆ. ಕೃತಿಕಾರರಿಂದ ಹೆಚ್ಚು ನಿರೀಕ್ಷಿಸುವವರಿಗೆ ಸಮಜಾಯಿಸುವ ಅವರು 'ನನ್ನ ನುಡಿ'ಯಲ್ಲಿ "ಹುಡುಕುತ್ತಾ ಹೋದಂತೆ ಹಲವಾರು ವಿಷಯಗಳು ನಮಗೆ ವಿಸ್ಮಯವನ್ನುಂಟು ಮಾಡುತ್ತವೆ. ಸಮಗ್ರವಾಗಿ ಒಂದು ಕೃತಿಯಲ್ಲಿ ತರುವುದು ಸಾಧ್ಯವಿಲ್ಲದ ಕೆಲಸ...... ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಬರೆಯಲಾಗಿದೆ" ಎಂಬ ಸ್ವರಕ್ಷಣೆಯ ಮಾತುಗಳನ್ನು ಬರೆದುಕೊಂಡಿದ್ದಾರೆ.

'ಜನಪದ ಮಹಾಕಾವ್ಯಗಳು'–ಈ ಪ್ರಬಂಧ (ಪು.೬೫–೧೪೮) ಐವತ್ತ ನಾಲ್ಕು ಪುಟಗಳಷ್ಟು ದೀರ್ಘವಾಗಿದ್ದು, ಕೃತಿಕಾರರು ಕರ್ನಾಟಕ ಜನಪದ ಮಹಾ ಕಾವ್ಯಗಳು, ಪಾಶ್ಚಾತ್ಯ ಮಹಾಕಾವ್ಯಗಳು ಎಂಬ ಉಪಶೀರ್ಷಿಕೆಗಳ ಅಡಿಯಲ್ಲಿ ಆ ಕಾವ್ಯಗಳ ಸ್ಥೂಲವಾದ ವಿವರಣೆ ನೀಡುತ್ತಾ ಮಧ್ಯೆ ಮಧ್ಯೆ ಕೆಲವು ಸಾಲುಗಳಲ್ಲಿ ವಿಚಾರ–ವಿಮರ್ಶೆಯನ್ನು ನೀಡಿದ್ದಾರೆ. ಜಾನಪದವನ್ನೂ ಹೊಸದಾಗಿ ಪ್ರವೇಶಿಸು ವವರಿಗೆ ಕುತೂಹಲ ಹುಟ್ಟಿಸುವಂಥ ವಿಚಾರಗಳು ಅಲ್ಲಲ್ಲಿ ಇಣುಕು ಹಾಕುತ್ತವೆ. ಅಲ್ಲದೆ ಈ ಪ್ರಬಂಧದ ಮೊದಲಲ್ಲಿ ಜನಪದ ಮಹಾಕಾವ್ಯವನ್ನು ಕುರಿತು ಪಾಶ್ಚಾತ್ಯ ಮತ್ತು ಕರ್ನಾಟಕದ ವಿದ್ವಾಂಸರು ವ್ಯಕ್ತಪಡಿಸಿರುವ ವಾಕ್ಯಗಳನ್ನು ನೀಡುವ ಮೂಲಕ ಚರ್ಚೆಗೆ ದಾರಿಮಾಡಿಕೊಟ್ಟಿದ್ದಾರೆ. ಮಲೆಯ ಮಾದೇಶ್ವರ, ಮಂಟೆಸ್ವಾಮಿ ಮಹಾಕಾವ್ಯ, ಹಾಲುಮತ

ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ, ಜನಪದ ಬಸವಪುರಾಣದ ಕಥೆಗಳನ್ನು ಒಂದೆಡೆಯೆ ನೀಡಿರುವುದರಿಂದ ಸಾಮಾನ್ಯ ಓದುಗರು ಆಸಕ್ತಿ ಮತ್ತು ಕುತೂಹಲದಿಂದ ಸಹಜವಾಗಿಯೇ ಓದುವುದುಂಟು. ವಿಶೇಷವೆಂದರೆ, ಜನಪದ ಮಹಾಭಾರತವನ್ನು ಕುರಿತು ಹೇಳುವಾಗ ವಸ್ತು ಮತ್ತು ವಿಶ್ಲೇಷಣೆ, ಮಹಾಭಾರತಕ್ಕೂ, ಜನಪದ ಮಹಾಭಾರತಕ್ಕೂ ಇರುವ ವ್ಯತ್ಯಾಸಗಳನ್ನು ಕುರಿತು ವಿಚಾರ ಮಾಡಿರುವುದರಿಂದ ಈ ಭಾಗ ಮೆಚ್ಚುಗೆಗೆ ಒಳಗಾಗುತ್ತದೆ. ಇದರೊಂದಿಗೆ ತುಳುನಾಡಿನ 'ಸಿರಿ', 'ಕೋಟಿ ಚೆನ್ನಯ' ಎಂಬ ಜನಪದ ಮಹಾಕಾವ್ಯಗಳ ವಿಚಾರ-ವಸ್ತು ಪರಿಚಯವಾಗುತ್ತವೆ. ಪಾಶ್ಚಾತ್ಯರ 'ಕಲೇವಾಲ', 'ಗಿಲ್ಗಮಿಷ್' ಜನಪದ ಮಹಾಕಾವ್ಯಗಳನ್ನು ಕುರಿತ ಟಿಪ್ಪಣಿ ರೂಪದ ವಿಷಯಗಳು ಕಾಣಸಿಗುತ್ತವೆ.

'ಜನಪದ ಪ್ರದರ್ಶನಾತ್ಮಕ ಕಲೆಗಳು' (ಪು.೧೪೯-೧೯೬) – ಎಂಬ ದೀರ್ಘವಾದ ಪ್ರಬಂಧದಲ್ಲಿ ಕರ್ನಾಟಕವನ್ನು ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲೆನಾಡು, ಬಯಲು ಸೀಮೆ ಎಂದು ಪ್ರಾದೇಶಿಕವಾಗಿ ವಿಭಾಗಿಸಿಕೊಂಡು ಆ ಪ್ರದೇಶದ ವಿಶಿಷ್ಟವಾದ ಪ್ರದರ್ಶನಾತ್ಮಕ ಕಲೆಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಆದಿವಾಸಿಯರ ಹಾಡು, ಕುಣಿತಗಳ ಬಗ್ಗೆ ಕೂಡ ವಿವರಣೆ ಮಾತ್ರ ಕಂಡುಬರುತ್ತದೆ.

'ಜಾನಪದ ಪ್ರೌಢಪ್ರಬಂಧಗಳು'- ಸಂಶೋಧನೆ ಮಾಡಲು ಮೊದಲ ಬಾರಿಗೆ ತೊಡಗಿಸಿಕೊಳ್ಳುವವರಿಗೆ ಅಲ್ಲಿಯವರೆಗೆ ನಡೆದಿರುವ ಪಿಎಚ್.ಡಿ. ಪ್ರಬಂಧಗಳ ಹೆಸರು, ಲೇಖಕರು, ಪ್ರಕಾಶಕರು, ಪ್ರಕಟಿತವರ್ಷಗಳ ಮಾಹಿತಿ ಒದಗಿಸಿದ್ದಾರೆ. ಈ ಪ್ರಬಂಧದ ಮೊದಲ ಭಾಗದಲ್ಲಿ ಸಂಶೋಧನೆಯ ಬಗ್ಗೆ ಕೆಲವು ಉಪಯುಕ್ತ ವಾದ ವಿಚಾರಗಳು ಪ್ರಸ್ತಾಪವಾಗಿರುವುದರಿಂದ ಒಮ್ಮೆ ಕಣ್ಣಾಡಿಸಬಹುದು.

'ಬುಡಕಟ್ಟು ಅಧ್ಯಯನ' ಮಾಡುವ ಮುನ್ನ ನಡೆಸಬೇಕಾದ ತಯಾರಿಗಳು, ಅಧ್ಯಯನ ಮಾಡುವಾಗ ಅವರೊಂದಿಗೆ ಹೇಗೆ ವರ್ತಿಸಬೇಕು, ವ್ಯವಹರಿಸಬೇಕು, ವಿಷಯ ಸಂಗ್ರಹಿಸಬೇಕು ಎಂಬುದರ ಬಗೆಗೆ ಕೆಲವು ವಿಷಯಗಳನ್ನು ತಿಳಿಸುವುದಲ್ಲದೆ, ಭಾರತದ ಯಾವ ಯಾವ ಭಾಗದಲ್ಲಿ ಯಾವ ಯಾವ ಬುಡಕಟ್ಟಿನ ಜನರಿದ್ದಾರೆ ಎಂಬ ಮಾಹಿತಿ ನೀಡುವುದಲ್ಲದೆ ಈವರೆಗೆ ನಡೆದಿರುವ ಕೆಲವು ಬುಡಕಟ್ಟಿನ ಅಧ್ಯಯನ, ಅಧ್ಯಯನಕಾರರ ಬಗೆಗೆ ಪ್ರಸ್ತಾಪ ಮಾಡಿರುವ ಲೇಖಕರು ತಮ್ಮ ವಿಸ್ತಾರವಾದ ಅಧ್ಯಯನವನ್ನು ತೋರಿಸಿಕೊಟ್ಟಿದ್ದಾರೆ. 'ಜಾನಪದ ವಿದ್ವಾಂಸರು ಮತ್ತು ಜಾನಪದಕ್ಕೆ ದುಡಿದವರು' (ಪು.೨೧೧-೨೭೧) ಪ್ರಬಂಧ ಅರುವತ್ತು ಪುಟಗಳ ವ್ಯಾಪ್ತಿಯಲ್ಲಿದ್ದು ಆ ವಿದ್ವಾಂಸರ ಸ್ಥೂಲವಾದ ಪರಿಚಯವನ್ನೊಳಗೊಂಡಿದೆ.

ಒಟ್ಟಾರೆ, ಈ ಕೃತಿಯಲ್ಲಿ ಬರುವ ವಿಷಯಗಳ ಬಗೆಗೆ ಹೊಸ ಹೊಳಹುಗಳಾಗಲಿ, ಸಂಶೋಧನಾತ್ಮಕ ವಿಚಾರಗಳಾಗಲೀ ಎಲ್ಲಿಯೂ ಕಂಡು ಬರುವುದಿಲ್ಲ. ಜನಪದ ಸಾಹಿತ್ಯದ ಬಗೆಗೆ ಈವರೆಗೆ ಪ್ರಕಟವಾಗಿರುವ ಕೃತಿಗಳ ಪಟ್ಟಿಯಲ್ಲಿ ಈ ಕೃತಿ ಕೂಡ ಸೇರಿಕೊಂಡು ಬಿಡುತ್ತದೆ. ಬಿ.ಎಸ್. ಸ್ವಾಮಿಯವರು ಈ ಕೃತಿಯಲ್ಲಿ ಪ್ರಸ್ತಾಪಗೊಳ್ಳುವ ವಿಚಾರಗಳನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ನೋಡಬಹುದಾಗಿತ್ತು. ಆಗ ಈ ಕೃತಿಗೆ ಹೊಸತನದ ಸ್ಪರ್ಶವಾದರೂ ಉಂಟಾಗುತ್ತಿತ್ತು. ಕಾಲವೇ ಕೃತಿಗಳ ಸಮೀಕ್ಷೆ ಮಾಡುತ್ತದೆ.

ಎಂ.ಎಲ್. ನರಸಿಂಹಮೂರ್ತಿ

* **ದಾವಣಗೆರೆ ಜಿಲ್ಲಾ ಜಾನಪದ:** ಪ್ರಧಾನ ಸಂಪಾದಕರು ಡಾ॥ ಆರ್.ಕೆ. ನಲ್ಲೂರು ಪ್ರಸಾದ್, ಸಂಪಾದಕರು–ಬಿ.ಎಂ. ಸದಾಶಿವಪ್ಪ ಶ್ಯಾಗಲೆ, ಎಸ್.ಟಿ. ಶಾಂತಗಂಗಾಧರ, ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ. ಪುಟಗಳು೧೮+೧೦೨: ಬೆಲೆ ರೂ.೫೨–

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ೨೦೧೧ರಲ್ಲಿ ನಡೆದಾಗ ಅದರ ನೆನಪಿಗಾಗಿ ಪ್ರಕಟವಾದ ಕೃತಿಗಳಲ್ಲಿ ಇದೊಂದು. ೧೨೦ ಪುಟಗಳ ಈ ಕೃತಿಯಲ್ಲಿ ಹೊಸದಾಗಿ ಸಂಗ್ರಹಿತವಾದ ಎರಡು ಜಾನಪದ ಗೀತೆಗಳಿವೆ. ಈ ಸುಂದರ ಜನಪದ ಕತೆಗಳಿವೆ. ಹನ್ನೊಂದು ಜಾನಪದ ಲೇಖನಗಳಿವೆ. ಈ ಲೇಖನಗಳ ಪೈಕಿ 'ದಾವಣಗೆರೆ ಜಿಲ್ಲೆಯ ಕೆಲವು ಜನಪದ ಕಲಾವಿದರು' ಎಂಬ ಲೇಖನದಲ್ಲಿ ಜಿಲ್ಲೆಯ ಒಂಭತ್ತು ಮಂದಿ ಜನಪದ ಕಲಾವಿದರ ಪರಿಚಯವನ್ನು ಸಾಕಷ್ಟು ವಿವರವಾಗಿ ಮಾಡಿಕೊಡಲಾಗಿದೆ. ಮತ್ತೊಂದು ಲೇಖನವು ಡಾ. ಮುದೇನೂರು ಸಂಗಣ್ಣನವರನ್ನು ಪರಿಚಯಿಸುತ್ತದೆ.

ಉಳಿದ ಲೇಖನಗಳ ಪೈಕಿ ಎಂ.ಜಿ. ಈಶ್ವರಪ್ಪನವರ 'ಜಾನಪದ ಕಲೆಗಳು–ಒಂದು ಮುನ್ನೋಟ' ಲೇಖನ ಜನಪದ ಕಲೆಗಳ (ವಿಶೇಷವಾಗಿ ಪ್ರದರ್ಶನ ಕಲೆಗಳ) ಪ್ರಸ್ತುತ ಸ್ಥಿತಿ, ಅವು ಬದಲಾಗುತ್ತಿರುವ ಬಗೆಯನ್ನು ಕುರಿತ ಚಿಂತನ ಪ್ರಧಾನ ಲೇಖನ. ಎಂ. ಚಿದಾನಂದ ಮೂರ್ತಿಯವರ 'ಜೋಕುಮಾರ' ಲೇಖನ ಈ ಸಂಗ್ರಹದ ಅತ್ಯುಪಯುಕ್ತ ಲೇಖನ. 'ಅನುಭಾವ ಶಿಖಾಮಣಿ'ಯಲ್ಲಿ ಬರುವ ಜೋಕುಮಾರನ ವೃತ್ತಾಂತದೊಂದಿಗೆ ಜನಪದ ಕತೆಗಳಲ್ಲಿ ಬರುವ ವೃತ್ತಾಂತವನ್ನು ಹೋಲಿಸುತ್ತಾ ಅವುಗಳಲ್ಲಿರುವ ಸಾಮ್ಯ ವೈಷಮ್ಯಗಳ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಅಲ್ಲದೆ ದ್ರಾವಿಡರ ದೇವತೆಯಾಗಿದ್ದು ತಮಿಳರಲ್ಲಿ ವಿಶೇಷವಾಗಿ ಪೂಜೆಗೊಳ್ಳುತ್ತಿರುವ 'ಮುರುಗ'ನ ಇನ್ನೊಂದು ರೂಪವೇ ಜೋಕುಮಾರನಿರಬಹುದೇ ಎಂಬ ಕಡೆಗೂ ತಮ್ಮ ಚಿಂತನೆಯನ್ನು ಹೊರಳಿಸುತ್ತಾರೆ. ಕೊನೆಯಲ್ಲಿ ತಮ್ಮ ಸಂಗ್ರಹದಲ್ಲಿನ ಒಂದು ದೀರ್ಘವಾದ

ಜೋಕುಮಾರನ ಹಾಡನ್ನೂ ಕೊಟ್ಟು ಅದನ್ನು ಹೇಗೆ ಸಂಗ್ರಹಿಸಲಾಯಿತೆಂಬುದರ ಬಗ್ಗೆ ಒಂದು ಅಡಿ ಟಿಪ್ಪಣಿಯನ್ನೂ ಕೊಟ್ಟಿದ್ದಾರೆ. ಒಟ್ಟಾರೆ ಇದೊಂದು ಸರಳಶೈಲಿಯಲ್ಲಿರುವ ಮೌಲಿಕ ವಿದ್ವತ್ ಲೇಖನವಾಗಿದೆ.

'ಸೂಳೆಕೆರೆ ಜಾತ್ರೆ' ಎಸ್.ಟಿ. ಶಿವಪ್ಪನವರು ಬರೆದಿರುವ ಒಂದು ವಿಸ್ತಾರವೂ ಮಾಹಿತಿಪೂರ್ಣವೂ ಆದ ಲೇಖನ. ಇಲ್ಲಿ ಆ ಕೆರೆ ಬಗೆಗಿನ ಐತಿಹ್ಯ, ಆ ಕೆರೆಯ ಸ್ಥಳ, ಸ್ವರೂಪ, ಆ ಬಗೆಗಿನ ದಾಖಲೆಗಳು, ಜಾತ್ರೆಯ ಕ್ರಮ ಎಲ್ಲವನ್ನೂ ಸಾಕಷ್ಟು ವಿವರವಾಗಿ ಕ್ರಮಬದ್ಧವಾಗಿ ನಿರೂಪಿಸಿದ್ದಾರೆ. ಆ ಕೆರೆಯ ಬಗೆಗಿನ ಒಳ್ಳೆಯ ಆಕರ ಲೇಖನವೆನ್ನಿಸಿಕೊಳ್ಳುವ ಯೋಗ್ಯತೆ ಈ ಲೇಖನಕ್ಕಿದೆ.

ಉಳಿದಂತೆ 'ಕುಂಭಕಲೆ' (ಬಸವರಾಜ ಕುಂಚೂರು) ಲೇಖನ ಆ ಬಗೆಗೆ ಸಾಕಷ್ಟು ವಿವರ, ಮಡಿಕೆಗಳ ವೈವಿಧ್ಯ, ಇವನ್ನೆಲ್ಲ ತಿಳಿಸಿದರೂ ಅದರಲ್ಲಿ ಈ ಜಿಲ್ಲೆಗೇ ವಿಶಿಷ್ಟವಾದದ್ದೆಂದು ಗುರುತಿಸಲಾದ ಯಾವ ಅಂಶವೂ ಇಲ್ಲ. ಈ ವಿಷಯದ ಬಗ್ಗೆ ಮೂಲಭೂತವಾದ ಹಲವು ಮಾಹಿತಿಗಳನ್ನು ನೀಡುತ್ತದೆ ಅದು.

ಹಿ.ಗೂ. ದುಂಡ್ಯಪ್ಪ ಅವರ 'ಜನಪದರ ಊರಮ್ಮ' ಲೇಖನವು ಹರಿಹರದ ಈ ಗ್ರಾಮದೇವತೆಯ ಬಗೆಗಿನ ಐತಿಹ್ಯಗಳು, ಆಕೆಯನ್ನು ಸುತ್ತಲಿನ ಹಳ್ಳಿ, ಸೀಮೆಗಳಿಗೆ ಕೊಂಡೊಯ್ದು ಪೂಜೆ ಸಲ್ಲಿಸಿಕೊಂಡು ಬರುವ ಪದ್ಧತಿ, ಇದಕ್ಕೆ ಅಂಟಿಕೊಂಡ ಸಂಪ್ರದಾಯಗಳು, ಸಂಬಂಧಿಸಿದ ಜನಪದ ಗೀತೆ– ಇವೆಲ್ಲವನ್ನೂ ಈ ಲೇಖನದಲ್ಲಿ ಕೊಟ್ಟಿದ್ದಾರೆ. ಪರಿಶ್ರಮಪೂರ್ವಕವಾಗಿ ಸಿದ್ಧಪಡಿಸಿದ ಲೇಖನವಿದು.

ಇವಲ್ಲದೆ ಈ ಸಂಕಲನದಲ್ಲಿ 'ದಾವಣಗೆರೆ ಜಿಲ್ಲೆಯಲ್ಲಿ ವೀರಗಾಸೆ– ಒಂದು ಟಿಪ್ಪಣಿ' (ನಾ. ಲೋಕೇಶ ಒಡೆಯರ್), 'ಯಕ್ಷಗಾನ ಸೂತ್ರದ ಗೊಂಬೆ' (ಬದನಗೋಡು ಶ್ರೀನಿವಾಸಯ್ಯ), 'ದಾವಣಗೆರೆಯ ಜಾನಪದ ಸ್ತ್ರೀ ದೈವಗಳು' (ರುದ್ರಮುನಿ ಹಿರೇಮಠ), ಇವುಗಳನ್ನು ಕುರಿತಾದ ಚಿಕ್ಕ ಲೇಖನಗಳಿವೆ. ಇವು ಚಿಕ್ಕದಾದರೂ ಮಾಹಿತಿಪೂರ್ಣವಾಗಿವೆ. ಹೊನ್ನಾಳಿಯ ಚನ್ನೇಶ್‌ನನ್ನು ಕುರಿತ ಜನಪದ ಗೀತೆಯೊಂದನ್ನು ಕತ್ತಿಗೆ ಪರಮೇಶ್ವರಪ್ಪನವರು ಸಂಗ್ರಹಿಸಿದ್ದು ಅದನ್ನೂ ಇಲ್ಲಿ ಪ್ರಕಟಿಸಲಾಗಿದೆ.

ಇದರಲ್ಲಿ ಸೇರ್ಪಡೆಯಾಗಿರುವ 'ತಟ್ಟಿಮಲ್ಲಿ ಕಥೆ', ಮಣ್ಣಿನ ಕುದುರೆಗಳು' ಹಾಗೂ 'ದಾನಪಕ್ಕ ರಾಜ್ನ ಮಗಾ ಸುರೇಕಾಂತ' ಈ ಜಾನಪದ ಕತೆಗಳು ತುಂಬ ಸೊಗಸಾಗಿವೆ. ವ್ಯಕ್ತಿಗಳನ್ನು ಕುರಿತ ಎರಡು ಲೇಖನಗಳಲ್ಲಿ ಅವರವರ ಬದುಕು, ಸಾಧನೆಗಳ ವಿಷಯ ಪರಿಣಾಮಕಾರಿಯಾಗಿ ಬಂದಿದೆ.

ಕೊನೆಯಲ್ಲಿ ಅನುಬಂಧವಾಗಿ ಒಂದಷ್ಟು ಚಿರಪರಿಚಿತ ತ್ರಿಪದಿಗಳನ್ನು ಕೊಡಲಾಗಿದೆ. ಅದಿಲ್ಲದಿದ್ದರೂ ನಡೆಯುತ್ತಿತ್ತು. ಆದರೆ ವಿವಿಧ ಲೇಖನಗಳನ್ನು ಬರೆದವರ ವಿಳಾಸಗಳ ಒಂದು ಪಟ್ಟಿ ಇರಬೇಕಿತ್ತು.

ಒಟ್ಟಾರೆ–ಈ ಗ್ರಂಥ ಪುಟ್ಟದಾಗಿದ್ದರೂ ಅಚ್ಚುಕಟ್ಟಾಗಿದ್ದು, ಉಪಯುಕ್ತವಾಗಿದೆ. ಪುಟದಲ್ಲಿ ಅಲ್ಲಲ್ಲಿ ಖಾಲಿಬಿದ್ದ ಜಾಗಗಳಲ್ಲಿ ಜಿಲ್ಲೆಯಲ್ಲಿನ ಗಾದೆ, ಒಗಟುಗಳನ್ನು ಮುದ್ರಿಸಲಾಗಿದೆ.

ಸಂಪಾದಕರಾದ ಶ್ರೀ ಬಿ.ಎಂ. ಸದಾಶಿವಪ್ಪ ಶ್ಯಾಗಲೆ ಹಾಗೂ ಎಸ್.ಟಿ. ಶಾಂತಗಂಗಾಧರ ಇವರ ಶ್ರಮವನ್ನು ಖಂಡಿತಾ ಮೆಚ್ಚಿಕೊಳ್ಳಬಹುದು.

ಇಂದಿನ ದಾವಣಗೆರೆ ಜಿಲ್ಲೆಯ ಚೆನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು ಹಿಂದೆ ಶಿವಮೊಗ್ಗ ಜಿಲ್ಲೆಗೆ ಸೇರಿದ್ದವು. ಆದ್ದರಿಂದ ಆ ತಾಲ್ಲೂಕಿಗೆ ಸಂಬಂಧಿಸಿದ ಜಾನಪದ ಲೇಖನಗಳು ಶಿವಮೊಗ್ಗ ಜಿಲ್ಲೆಗೆ ಸೇರಿದ ಅಧ್ಯಯನ/ಸಂಕಲನಗಳಲ್ಲೂ ಕಂಡುಬರುವ ಸಾಧ್ಯತೆ ಇದೆ. ಮುಂದಿನ ತಲೆಮಾರಿಗೆ ಮರೆತೇ ಹೋಗುವ ಈ ಅಂಶವನ್ನು ಓದುವವರ ಮಾಹಿತಿಗಾಗಿ ಪುಸ್ತಕದಲ್ಲಿ ಎಲ್ಲಾದರೂ ಒಂದು ಕಡೆ ನಮೂದಿಸಬೇಕಿತ್ತು.

ಎಸ್.ಪಿ. ಪದ್ಮಪ್ರಸಾದ್

ಹೊಸ ಚಿಂತನೆಯ ಪ್ರಬಂಧಗಳು

* **ಜಾನಪದ ಸೆಲೆ:**ಸಂ. ಸ.ಚಿ. ರಮೇಶ, ಪ್ರ: ಅಖಿಲ ಭಾರತ ಜಾನಪದ ಸಮ್ಮೇಳನ ಸ್ವಾಗತ ಸಮಿತಿ. ಕರ್ನಾಟಕ ಸಂಘದ ಕಟ್ಟಡ, ಡಾ॥ ಅಂಬೇಡ್ಕರ್ ವೃತ್ತ, ಬೀದರ್. ಪುಟಗಳು: ೧೬+೧೦೮=೧೨೪: ಬೆಲೆ ರೂ. ೭೦/–

ಇದು ಸ.ಚಿ. ರಮೇಶ ಅವರ ಸಂಪಾದಕತ್ವದಲ್ಲಿ ಸಿದ್ಧಗೊಂಡ ಹದಿಮೂರು ಪ್ರಬಂಧಗಳ ಸಂಗ್ರಹ. ೨೦೧೧ರ ಏಪ್ರಿಲ್ ತಿಂಗಳಲ್ಲಿ ಬೀದರಿನಲ್ಲಿ ನಡೆದ ಪ್ರಪ್ರಥಮ ಅಖಿಲ ಭಾರತ ಜಾನಪದ ಸಮ್ಮೇಳನದ ನೆನಪಿಗಾಗಿ ಹೊರತರಲಾದ ಹಲವು ಕೃತಿಗಳ ಪೈಕಿ ಇದೊಂದು.

ಇಲ್ಲಿನ ಲೇಖನಗಳ ಪೈಕಿ ಕೆಲವಂತೂ ತುಂಬ ಉಪಯುಕ್ತವಾದವುಗಳಾಗಿದ್ದು, ಅಧ್ಯಯನಾಸಕ್ತರು ಗಮನಿಸಬೇಕಾದವು ಆಗಿವೆ. **ಜಾನಪದ ಪರಿಕಲ್ಪನೆ ಮತ್ತು ರಾಜಕಾರಣ** (ತೀ.ನಂ. ಶಂಕರನಾರಾಯಣ), **ಕರ್ನಾಟಕ ಜಾನಪದ ಸಂಶೋಧನೆ, ಮುಂದೇನು?** (ಅಂಬಳಿಕೆ ಹಿರಿಯಣ್ಣ), **ಜಾನಪದ ರಂಗಭೂಮಿಯ ಶಿಲ್ಪ** (ಕಂಬಾರ), **ಕಾಡಿನ**

ಸಂಸ್ಕೃತಿಂಯೂ ಕಾಂಕ್ರೀಟ್ ಸಂಸ್ಕೃತಿಯೂ (ಹಿ.ಚಿ. ಬೋರಲಿಂಗಯ್ಯ), ಮಲೆನಾಡು ಕರ್ನಾಟಕದ ಆಹಾರ ವೈಶಿಷ್ಟ್ಯಗಳು (ಶ್ರೀಕಂಠ ಕೂಡಿಗೆ), ಜನಪದ ಆಚರಣೆಗಳು ಮತ್ತು ಕೃಷಿ ತಂತ್ರಜ್ಞಾನ (ಟಿ.ಎಸ್. ಚನ್ನೇಶ್), ಅಲೆಮಾರಿಗಳ ಭಾಷೆ (ಡಿ. ಪಾಂಡುರಂಗ ಬಾಬು), ಕಲ್ಯಾಣ ಕರ್ನಾಟಕದ ಪ್ರದರ್ಶನ ಕಲೆ–ಜಾತ್ರೆಗಳು (ಜಗನ್ನಾಥ ಹೆಬ್ಬಾಳೆ) – ಇವು ಅಂಥ ಲೇಖನಗಳು. ಜೇಡನನ್ನು ಕುರಿತ ಸ.ಚಿ. ರಮೇಶರ ಲೇಖನ ಹಾಗೂ ವೃಕ್ಷಾರಾಧನೆಯನ್ನು ಕುರಿತ ಎಸ್. ಮೋಹನ್ ಅವರ ಲೇಖನ ಸಾಮಾನ್ಯ ಸ್ವರೂಪದವು. ಆದರೂ ಇಲ್ಲಿಯೂ ಕೆಲವು ಹೊಸ ಅಂಶಗಳು ಇವೆ. ತುಳುನಾಡಿನ ಧಾರ್ಮಿಕ ಆಚರಣೆಗಳನ್ನು ಕುರಿತ ಕೆ. ಮೋಹನ್ ಕೃಷ್ಣ ರೈ ಅವರ ಲೇಖನ ಅವರ ಗಂಭೀರ ಚಿಂತನೆಯ ಫಲವೇ ಆದರೂ ಚಿಂತನೆ ಏಕಮುಖಿ ಎನ್ನಿಸುತ್ತಿದ್ದು ಕೆಲವು ಅಂಶಗಳನ್ನು ಒಪ್ಪುವುದು ಕಷ್ಟವಾಗುತ್ತದೆ.

ಪುಸ್ತಕ ಸುಂದರವಾಗಿ ಅಚ್ಚಾಗಿದೆ. ಮುದ್ರಣ ದೋಷ ಎಲ್ಲಿಯೂ ಕಾಣುವುದಿಲ್ಲ. ಒಂದು ಒಳ್ಳೆ ಪುಸ್ತಕವನ್ನು ಸಂಪಾದಿಸಿದ್ದಕ್ಕಾಗಿ ಸಂಪಾದಕರನ್ನು ಅಭಿನಂದಿಸಬಹುದು. ಆದರೆ ಹೇಳಬೇಕಾದ ಒಂದು ಮಾತೆಂದರೆ ಇಲ್ಲಿನ ಹಲವು ಲೇಖನಗಳು ಆಯಾ ಲೇಖಕರಿಂದ ಬಹು ಹಿಂದೆಯೇ ಬೇರೆಡೆ ಪ್ರಕಟವಾಗಿದ್ದು ನೆನಪಾಗುತ್ತದೆ (ಉದಾಹರಣೆಗೆ – ಇಲ್ಲಿನ ಬಹುಮುಖ್ಯ ಲೇಖನಗಳಲ್ಲಿ ಒಂದಾದ ಹಿ.ಚಿ. ಬೋರಲಿಂಗಯ್ಯನವರ ಲೇಖನ ಹದಿನಾರು ವರ್ಷಗಳ ಹಿಂದೆಯೇ ಪ್ರಕಟವಾಗಿದೆ). ಹೀಗಿದ್ದಾಗ ಪುಸ್ತಕ ಅಷ್ಟೊಂದು ಮೌಲ್ಯಯುತ ಎನಿಸುವುದಿಲ್ಲ.

ಎಸ್.ಪಿ. ಪದ್ಮಪ್ರಸಾದ್

ಕ್ಷೇತ್ರಕಾರ್ಯಾಧಾರಿತ ಪ್ರಬಂಧಗಳು

* **ಧರಿ ಜಾನಪದ :** ಜಗನ್ನಾಥ ಹೆಬ್ಬಾಳೆ; ಪ್ರ–ಸ್ವಾಗತ ಸಮಿತಿ, ಅಖಿಲಭಾರತ ಜಾನಪದ ಸಮ್ಮೇಳನ, ಬೀದರ್, ಪು:೧೨+೧೦೦; ಬೆಲೆ ರೂ. ೭೦/-

ಇದು ಏಳು ಪ್ರಬಂಧಗಳ ಒಂದು ಸಂಕಲನ. 'ಬೀದರ್ ಜಿಲ್ಲೆಯ ಜನಪದ ವೃತ್ತಿ ಕಲಾವಿದರು'– ಹೆಸರೇ ಹೇಳುವಂತೆ ಆ ಜಿಲ್ಲೆಯಲ್ಲಿ ಜನಪದ ವೃತ್ತಿ ಕಲಾವಿದರ ಪರಿಚಯ ಮಾಡಿಕೊಡುವ ಲೇಖನ. ಇದು ಆ ಜಿಲ್ಲೆಯಲ್ಲಿನ ಜನಪದ ಕಲೆಗಳ, ವೃತ್ತಿ ಕಲಾವಿದರ ಪರಿಚಯವನ್ನು ಸಾಕಷ್ಟು ತೃಪ್ತಿಕರವಾಗಿ ಮಾಡಿ ಕೊಡುತ್ತದೆ.

'ಒಂದು ಗ್ರಾಮದ ಜಾನಪದ ನೋಟ' ಪ್ರಬಂಧ ಕೂಡ ಕ್ಷೇತ್ರ ಕಾರ್ಯಾಧಾರಿತವಾದ ಒಂದು ವಿಶಿಷ್ಟ ಪ್ರಬಂಧ. ಮೊದಲು ಬೀದರ್ ನಗರದ ಹೊರಗಿದ್ದು ಈಗ ಅದರ ತೆಕ್ಕೆಯಲ್ಲಿ ಸೇರಿಕೊಂಡಿರುವ 'ಧರಿ ನಾವದ ಗೇರಿ' ಎಂಬ ಗ್ರಾಮದ ಸಾಮಾಜಿಕ,

ಜಾನಪದೀಯ ಚಿತ್ರಣ ಇಲ್ಲಿದೆ. ಆ ಹೆಸರಿನ ನಿಷ್ಪತ್ತಿ, ಅಲ್ಲಿನ ಭೂವಿವರಣೆ, ವೃತ್ತಿ, ಭಾಷೆ, ನಂಬಿಕೆ ನಡವಳಿಕೆಗಳು, ಹಾಡುಗಳು, ವೃತ್ತಿ, ಪೂಜೆ, ಸಂಪ್ರದಾಯಗಳು– ಇಂಥ ಎಲ್ಲ ಸಂಗತಿಗಳನ್ನು ಇಲ್ಲಿ ಕ್ರಮಬದ್ಧವಾಗಿ ನಿರೂಪಿಸಿದ್ದಾರೆ. ೩೪ ಪುಟಗಳ ಈ ಲೇಖನ ಇಲ್ಲಿನ ಅತ್ಯಂತ ದೊಡ್ಡ ಪ್ರಬಂಧ. ನಗರವೊಂದು ಬೆಳೆದಂತೆ ಸುತ್ತಲಿನ ಗ್ರಾಮಗಳು ಅದರಲ್ಲಿ ವಿಲೀನಗೊಳ್ಳುವುದೊಂದು ಸಾಮಾನ್ಯ ಪ್ರಕ್ರಿಯೆ. ಅಂಥ ಪ್ರದೇಶಗಳ ಅಧ್ಯಯನವನ್ನು ಹೇಗೆ ಮಾಡಬೇಕೆಂಬುದಕ್ಕೆ ಈ ಪ್ರಬಂಧವೊಂದು ಮಾದರಿ.

'ಜಾತ್ರೆಗಳು–ಸಾಂಸ್ಕೃತಿಕ ನೋಟ' ೧೫ ಪುಟಗಳ ಒಂದು ವಿಶ್ಲೇಷಣಾತ್ಮಕ ಲೇಖನ. ಹೈದರಾಬಾದ್ ಕರ್ನಾಟಕದ ಜಾತ್ರೆಗಳ ಸಾಮಾನ್ಯ ಸ್ವರೂಪವನ್ನು ಲೇಖಕರು ಇಲ್ಲಿ ಚೆನ್ನಾಗಿ ವಿಶ್ಲೇಷಿಸಿದ್ದಾರೆ. 'ಜಾನಪದ ಕಲೆಗಳ ಸಂವರ್ಧನೆ'– ಲೇಖನದಲ್ಲಿ ಲೇಖಕರು ಆ ಬಗೆಗಿನ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

'ಸತ್ತವರ ಹಾಡುಗಳು', ಆ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳು, ವಿಧಿ ವಿಧಾನಗಳು, ನಂಬಿಕೆಗಳನ್ನು ವಿಶ್ಲೇಷಿಸುವ ಲೇಖನ. 'ಬುಲಾಯಿ– ಒಂದು ವಿವೇಚನೆ'– ಹೈದ್ರಾಬಾದ್ ಕರ್ನಾಟಕದಲ್ಲಿ ಪ್ರಚಲಿತವಿರುವ ಬುಲಾಯಿ ಹಾಡುಗಳೆಂಬ ಜನಪದ ಗೀತೆಗಳನ್ನು ಕುರಿತ ವಿಶ್ಲೇಷಣಾತ್ಮಕ ಲೇಖನ.

ಒಟ್ಟಾರೆ ಇಲ್ಲಿನ ಪ್ರಬಂಧಗಳು ಸಂಖ್ಯೆಯಲ್ಲಿ ಕಡಿಮೆಯಾಗಿದ್ದರೂ ವಿಷಯ ಸಂಪತ್ತಿನಿಂದ, ಕ್ಷೇತ್ರಕಾರ್ಯ ಹಾಗೂ ಅಧ್ಯಯನದ ಶಿಸ್ತಿನಿಂದ ಉಪಯುಕ್ತವಾದವು ಗಳಾಗಿದ್ದು, ಜಾನಪದ ಅಧ್ಯಯನಾಸಕ್ತರಿಗೆ ಪ್ರಯೋಜನಕಾರಿಯಾಗಿವೆ.

ಎಸ್.ಪಿ. ಪದ್ಮಪ್ರಸಾದ್

ಜಾನಪದ ದರ್ಪಣ: ಒಂದು ಅವಲೋಕನ

* **ಜಾನಪದ ದರ್ಪಣ:** ಲೇ. ವೃಷಭಕುಮಾರ್, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್. ಪುಟಗಳು – ೧೪+೩೬; ಬೆಲೆ ರೂ. ೭೦/–

ಬೀದರ್ ಜಿಲ್ಲೆಯಲ್ಲಿ ನಡೆದ ಅಖಿಲಭಾರತ ಪ್ರಥಮ ಜಾನಪದ ಸಮ್ಮೇಳನದಲ್ಲಿ ಬಿಡುಗಡೆಗೊಂಡ ೧೨ ಕೃತಿಗಳಲ್ಲಿ ವೃಷಭಕುಮಾರ್ ಅವರು ಸಂಪಾದಿಸಿರುವ 'ಜಾನಪದ ದರ್ಪಣ' ಕೃತಿಯು ಒಂದಾಗಿದೆ. ನಾಡಿನ ಪ್ರಸಿದ್ಧ ಜಾನಪದ ತಜ್ಞರು ರಚಿಸಿದ ೧೨ ಲೇಖನಗಳನ್ನು ಕ್ರೋಢೀಕರಿಸಿ ಈ ಕೃತಿಯನ್ನು ಹೊರತಂದಿದ್ದಾರೆ. ೧೩೪ ಪುಟಗಳಿರುವ ಕೃತಿ ಜಾನಪದದ ವಿಭಿನ್ನವಾದ ವಸ್ತು, ಪರಿಕಲ್ಪನೆಗಳನ್ನೊಳಗೊಂಡು ನಿರ್ಮಾಣಗೊಂಡಿದೆ.

ಈ ಕೃತಿಯಲ್ಲಿನ ಲೇಖನಗಳು ಜನಪದ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿದವುಗಳಾಗಿವೆ. ಜಾನಪದ ಕ್ಷೇತ್ರ ಬಹುರೂಪಿಯಾಗಿ ಬೆಳೆದಿರುವುದರಿಂದ

ಆಸಕ್ತರು ಕ್ಷೇತ್ರಕಾರ್ಯ, ಸಂಶೋಧನೆ, ಸಂಗ್ರಹಣೆ, ಸಂಪಾದನೆ, ವಿಶ್ಲೇಷಣೆ ಮಾಡುತ್ತಾ ಅದರ ಉಳಿವಿಗಾಗಿ ಬದ್ಧರಾಗಬೇಕಾಗಿದೆ. ಅದರ ಫಲವಾಗಿ ಈ ರೀತಿಯ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿವೆ. ಈ ಕೃತಿಯಲ್ಲಿ ಪ್ರಕಟಗೊಂಡಿರುವ ಪ್ರತಿ ಲೇಖನದಲ್ಲೂ ಜಾನಪದದ ಮಹತ್ವವಾದ ಅಂಶಗಳನ್ನು ಕಟ್ಟಿಕೊಡಲಾಗಿದೆ. ಈ ಲೇಖನಗಳು ನಾಡಿನ ಸಂಸ್ಕೃತಿಯ ಬೃಹತ್ತಾದ ಅಡಿಪಾಯವನ್ನು ಹಾಕುವುದರೊಂದಿಗೆ ವಿಶಿಷ್ಟ ಕೃತಿಯಾಗಿ ಜಾನಪದ ಕ್ಷೇತ್ರಕ್ಕೆ ಸೇರ್ಪಡೆಗೊಂಡಂತಾಗಿದೆ.

ನಾಡಿನಲ್ಲಿ ಜಾನಪದ ಕ್ಷೇತ್ರದಲ್ಲಿ ಒಂದು ವೈಜ್ಞಾನಿಕ ತಿರುವು ನೀಡಿದ ವಿದ್ವಾಂಸರಲ್ಲಿ ಕಾಳೇಗೌಡ ನಾಗವಾರರವರು ಪ್ರಸಿದ್ಧರು. ಇವರು ಬರೆದ 'ಜಾನಪದ ಅಧ್ಯಯನ'ವು ಕನ್ನಡ ನಾಡಿನ ಜಾನಪದ ಪರಂಪರೆಯ ಹಾದಿಯ ಮಜಲುಗಳನ್ನು ವಿಶ್ಲೇಷಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ನಾಡಿನಲ್ಲಿ ಜಾನಪದ ವಿಷಯವಾಗಿ ಅಧ್ಯಯನಕ್ಕೆ ನಾಂದಿ ಹಾಡಿದರು. ಮುಂದೆ ಸಂಗ್ರಹ, ಸಂಪಾದನೆ, ಸಂಶೋಧನೆ, ವಿಶ್ಲೇಷಣೆಗಳು ಅಧ್ಯಯನದ ವಸ್ತುವಾದವು. ಹಾಗೆಯೇ ಪರಂಪರೆಯಲ್ಲಿ ವಿಶಿಷ್ಟ ಭೌತಿಕ ವಸ್ತುಗಳನ್ನು ಸಂರಕ್ಷಣೆಯ ಜಾಗೃತಿ ಮೂಡಿಸಿದ್ದು, ಮಾನವ ಸಂಸ್ಕೃತಿಯ ಎಲ್ಲಾ ಆಯಾಮಗಳು ಜಾನಪದ ಸಂಸ್ಕೃತಿಯೆಂದು ಸ್ವೀಕರಿಸುವವರಿಗೆ ಹೇಗೆಲ್ಲ ಜಾನಪದವು ನಾಡಿನಲ್ಲಿ ನೆಲೆಯೂರಿ ತಾತ್ವಿಕವಾಗಿ ಚರ್ಚೆಗೆ ಗ್ರಾಸವಾಯಿತೆಂಬ ವಿವರಗಳನ್ನು ನೀಡಿದ್ದಾರೆ.

ಆಗ್ನಿಯಸ್ ಸುಂದರಂ ಪ್ರಸಿದ್ಧ ದ್ರಾವಿಡ ಭಾಷಾ ತಜ್ಞರು. ದ್ರಾವಿಡ ಭಾಷೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದವರು. ಇವರು 'ದಕ್ಷಿಣ ಭಾರತೀಯ ಜಾನಪದ' ಲೇಖನ ಬರೆಯುವುದರೊಂದಿಗೆ ಜಾನಪದದಲ್ಲಿ ಇದುವರೆಗೂ ಆಗಿರದ ವಿಷಯಗಳನ್ನು ಚರ್ಚಿಸುವುದು ಆದ್ಯ ಕರ್ತವ್ಯವಾಗಬೇಕೆಂದು ಹೇಳುವುದರೊಂದಿಗೆ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ಜಾನಪದ ವೈವಿಧ್ಯತೆಯನ್ನು ಹೋಲಿಸುತ್ತಾ ಭಾಷೆಗಳಲ್ಲಿನ ಸಾಮ್ಯತೆ ಮತ್ತು ವೈರುದ್ಯಗಳನ್ನು ಗುರುತಿಸಿದ್ದಾರೆ. ಜನಪದ ಸಾಹಿತ್ಯ ಗಾದೆ, ಗೀತೆ, ಶಿಶುಗೀತೆ, ಒಗಟುಗಳನ್ನೂ ದ್ರಾವಿಡದ ಪ್ರಮುಖ ಭಾಷೆಗಳಲ್ಲಿ ತೌಲನಿಕ ವಿಶ್ಲೇಷಣೆ ಮಾಡುತ್ತಾರೆ. ಜೊತೆಗೆ ಜಾನಪದ ನಂಬಿಕೆಗಳನ್ನು ಬದುಕಿನ ಮುಖ್ಯವಾಗವಾಗಿ ಹೇಗೆ ಈ ಭಾಷಿಕರು ನಂಬಿದ್ದಾರೆಂಬುದನ್ನು ತಿಳಿಸಿದ್ದಾರೆ.

ಇತ್ತೀಚಿಗೆ ಜಾನಪದ ವಿಮರ್ಶಕರಲ್ಲಿ ವೃಷಭಕುಮಾರ್‌ರವರದು ಚಾಲ್ತಿಯಲ್ಲಿದೆ. ಇವರ ಲೇಖನ 'ಭಾರತದ ಬುಡಕಟ್ಟು ನೃತ್ಯಗಳು' ಎಂಬುದರಲ್ಲಿ ಭಾರತದ ದಕ್ಷಿಣ, ಮಧ್ಯ, ಈಶಾನ್ಯ ಭಾಗಗಳಲ್ಲಿ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಜೀವಂತಿಕೆಯ ಭಾಗವಾಗಿರುವ ನೃತ್ಯಗಳು ಪಾರಂಪರಿಕವಾಗಿ ರೂಢಿಯಲ್ಲಿವೆಂಬುದನ್ನು ಕೂಲಂಕಷವಾಗಿ ವಿವರಿಸಿದ್ದಾರೆ. ಇವರು ನೃತ್ಯಗಳನ್ನು ತುಂಬಾ ವೈಜ್ಞಾನಿಕವಾಗಿ ತಾತ್ವಿಕ ನೃತ್ಯ ಮತ್ತು

ಸಾಮಾಜಿಕ ನೃತ್ಯವೆಂದು ವಿಂಗಡಿಸಿ, ಪ್ರಾಮುಖ್ಯವಾದ ಬುಡಕಟ್ಟುಗಳ ನೃತ್ಯವನ್ನು ವಿವರಿಸಿದ್ದಾರೆ. ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾಗಿರುವ ಅಂಬಳಿಕೆ ಹಿರಿಯಣ್ಣರವರು 'ಬುಡಕಟ್ಟು ಪರಿಸರ ದೇಸಿ ವೈದ್ಯಜ್ಞಾನ' ಲೇಖನದಲ್ಲಿ ಕಾಡಿನೊಟ್ಟಿಗೆ ಬದುಕಿದ ರೀತಿ ಅವರು ಬದುಕುವ ಸ್ವಾಭಾವಿಕ ನೆಲೆ. ಪ್ರಕೃತಿಯನ್ನು ಆರಾಧಿಸುತ್ತಾರೆಂಬ ಆಪ್ತತೆಯಿಂದ ಹಲವು ನಂಬಿಕೆಗಳೊಂದಿಗೆ ಧಾರ್ಮಿಕ ಭಕ್ತಿ ಭಾವಗಳನ್ನೊಳಗೊಂಡಂತೆ ಕಾಡಿಗೆ ಚ್ಯುತಿಗೊಳಿಸದಂತೆ ಕಾಪಾಡುವ ಮನೋಧರ್ಮವನ್ನು ಹೇಗೆ ಒಳ ಗೊಂಡಿದ್ದಾರೆಂಬುದನ್ನು ತಿಳಿಸಿದ್ದಾರೆ. ಪ್ರತಿಯೊಂದು ಗಿಡ, ಮರಗಳನ್ನೂ, ಕಾಡಿನ ಸಂಪನ್ಮೂಲವನ್ನೂ ತಮ್ಮ ಜೀವನದ ಭಾಗವಾಗಿಸಿಕೊಂಡು ಬದುಕಿಗೆ ಪೂರಕ ಮಾಡಿಕೊಂಡಿದ್ದಾರೆಂಬುದನ್ನು ತಿಳಿಸಿದ್ದಾರೆ.

ಜನಪದ ಸಾಹಿತ್ಯವನ್ನು ವಿಶ್ಲೇಷಣೆಗೆ ಎಂ. ನಂಜಯ್ಯ ಹೊಂಗನೂರು ಅವರು 'ಸಾಂಸ್ಕೃತಿಕ ನೆಲೆಯಲ್ಲಿ ಕನ್ನಡ ಜನಪದ ಮಹಾಕಾವ್ಯಗಳು' ಎಂಬ ಲೇಖನದಲ್ಲಿ ತುಂಬ ಉತ್ಕೃಷ್ಟವಾಗಿ, ತಾತ್ವಿಕವಾಗಿ ಒಳಪಡಿಸಿದ್ದಾರೆ. ಕನ್ನಡ ಜಾನಪದ ಮಹಾಕಾವ್ಯಗಳೆಲ್ಲ ಜಾಗತಿಕ ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲುವಂಥವು. ಇಲ್ಲಿ ಬರುವ ಪ್ರತಿ ಸಾಂಸ್ಕೃತಿಕ ವೀರನೂ ತನ್ನ ಅಸಮಾನ್ಯ ವ್ಯಕ್ತಿತ್ವ, ಆದರ್ಶನೀಯ ಮೌಲ್ಯಪರತೆಯ ವ್ಯಕ್ತಿಯಾಗಿ ಆರಾಧ್ಯಪುರುಷನಾಗಿ ಪೌರಾಣಿಕೃತ ಪುರುಷನಾಗಿ ಬದಲಾಗುತ್ತಾನೆಂಬುದನ್ನು, ಮತ್ತು ಮಹಾಭಾರತ, ರಾಮಾಯಣ ಕಾವ್ಯಗಳ ನಾಯಕರಿಗಿಂತ ಈ ಸಮುದಾಯದ ಸಾಂಸ್ಕೃತಿಕ ನಾಯಕರು ಹೇಗೆ ಭಿನ್ನವೆಂಬುದನ್ನೂ ತಿಳಿಸಿದ್ದಾರೆ. ನಗುವನಹಳ್ಳಿ ಪಿ. ರತ್ನರವರು 'ಜನಪದ ಸಾಹಿತ್ಯ ಮತ್ತು ಹದಿಬದೆಯ ಧರ್ಮದಲ್ಲಿ ಗರತಿ' ಎಂಬ ಲೇಖನದಲ್ಲಿ ಇದುವರೆಗೂ ಜನಪದ ಸಾಹಿತ್ಯದಲ್ಲಿ ದಾಂಪತ್ಯದ ಬಗೆಗಿನ ಗೀತೆಗಳನ್ನೂ ಮತ್ತು ಸಂಚಿಹೊನ್ನಮ್ಮಳ (ಹದಿಬದೆಯ ಧರ್ಮ) ದಾಂಪತ್ಯದ ಸರಸ-ವಿರಸದ ಗೀತೆಗಳನ್ನು ತೌಲನಿಕವಾಗಿ ಮನಮುಟ್ಟುವಂತೆ ವಿಶ್ಲೇಷಿಸಿದ್ದಾರೆ. ಹಾಗೆಯೇ ವಿಜಯಾ ದಬ್ಬೆಯವರ 'ಲಿಂಗವ್ಯವಸ್ಥೆಯ ವಾಹಕಗಳಾಗಿ ಗಾದೆಗಳು' ಕನ್ನಡ ನಾಡಿನ ಜನಪದ ಗಾದೆಗಳ ಸಂಗ್ರಹದಲ್ಲಿರುವ ಹೆಣ್ಣಿಗೆ ಸಂಬಂಧಿಸಿದವುಗಳ ವಿಶ್ಲೇಷಣೆ ನಡೆಸಿದೆ. (ಸಮಾಜ/ಪುರುಷ) ವ್ಯವಸ್ಥೆ ಹೇಗೆ ಹೆಣ್ಣಿಗಾಗಿಯೇ ನಿರ್ಮಿಸಿ ಅಂಕೆಯಲ್ಲಿಡಲು ಪ್ರಯತ್ನಸಿತೆಂಬು ದನ್ನೂ ಲಿಂಗ ವ್ಯವಸ್ಥೆಯಲ್ಲಿರುವ ದೋಷವನ್ನೂ ಎತ್ತಿ ಹಿಡಿದಿದ್ದಾರೆ.

ಪದ್ಮಾಶೇಖರ್ 'ಹುಳಿಯಾರು ಕೆಂಚಮ್ಮ, ಅಣಜಿಹೊನ್ನಮ್ಮ ಮತ್ತು ಒಡ್ಡರ ಬೋಯಿ ಕಥನ ಕವನಗಳು: ತೌಲನಿಕ ದೃಷ್ಟಿ' ಲೇಖನದಲ್ಲಿ ಮೂರು ಪ್ರದೇಶಕ್ಕೆ ಸಂಬಂಧಿಸಿದ ಸಮುದಾಯಗಳ ಹಿನ್ನೆಲೆಯನ್ನು ತಿಳಿಸುತ್ತಾ, ಹೆಣ್ಣಿಗೆ ಕೊಡುವ ಸ್ಥಾನ ಮಾನಗಳು ಸಮಾಜ ವ್ಯವಸ್ಥೆಯಲ್ಲಿ ಹೇಗೆ ರೂಢಿಸಿಕೊಂಡು ಬರಲಾಗಿದೆ ಎಂಬುದನ್ನು ತಿಳಿಸಿದ್ದಾರೆ. ಹಾಗೆಯೇ ಮೂರು ಮಹಿಳೆಯರು ಬಲಿಯಾಗುವುದರ ಹಿಂದಿರುವ

ವ್ಯವಸ್ಥೆಯ ಕುರೂಪತೆಯ ವಿವರಣೆಗಳನ್ನು ವಿಶದವಾಗಿ ಹೇಳಿದ್ದಾರೆ. 'ಮೈಸೂರು ಜಿಲ್ಲೆಯ ಜಾನಪದ ಕಲೆಗಳು' ಲೇಖನದಲ್ಲಿ ಸಿ. ನಂಜುಂಡಪ್ಪನವರು ಅವನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಚಾಮರಾಜನಗರ, ಮೈಸೂರು ಸುತ್ತಮುತ್ತ ಭಾಗಗಳಲ್ಲಿರುವ ಜನಪದ ಕಲೆ, ನೃತ್ಯಗಳನ್ನೂ, ಧಾರ್ಮಿಕ ಮತ್ತು ಲೌಕಿಕ ಹಿನ್ನೆಲೆಯಲ್ಲಿ ಪ್ರದರ್ಶನಗೊಳ್ಳುವುದನ್ನೂ ಸವಿವರವಾಗಿ ಹೇಳಿದ್ದಾರೆ. ಕಲೆ, ನೃತ್ಯಗಳು ಯಾವ ಭಾಗದಲ್ಲಿ, ಯಾವ ಉತ್ಸವದ ಸಂದರ್ಭದಲ್ಲಿ, ಯಾವ ಜಾತಿಯವರು, ಎಷ್ಟು ಜನ, ಯಾವ್ಯಾವ ಉಡುಪು ವಾದ್ಯಗಳೊಂದಿಗೆ ನೆರವೇರಿಸುತ್ತಾರೆಂಬುದನ್ನು ವಿಶದವಾಗಿ ವಿವರಿಸಿದ್ದಾರೆ.

ಕ್ಯಾತನಹಳ್ಳಿ ರಾಮಣ್ಣನವರು 'ಭೂತೇರು' ಎಂಬ ಉತ್ತರ ಕರ್ನಾಟಕದ ವೃತ್ತಿಗಾಯಕರ ಬಗೆಗೆ ಇರುವ ತೊಡಕುಗಳನ್ನು ಆಕರ, ಆಧಾರಗಳೊಂದಿಗೆ ಚರ್ಚಿಸಿ, 'ಭೂತೇರು' ಜನಾಂಗ ಮತ್ತು ಅವರ ವೃತ್ತಿಯನ್ನು ವಿವರಿಸುತ್ತಾರೆ. ಭೂತೇರರು ಎಲ್ಲಮ್ಮನನ್ನು ಆರಾಧಿಸುತ್ತಾ ಕಾವ್ಯವನ್ನು ಚೌಡಿಕೆ ಹಿಡಿದು ಐದು ಮಂದಿಯ ಮೇಳದೊಂದಿಗೆ ಹಾಡುತ್ತಾರೆ. ಇವರಲ್ಲಿನ ನಂಬಿಕೆ, ಸಂಪ್ರದಾಯಗಳನ್ನು, ಕಾವ್ಯ ಹೇಳುವಾಗಿನ ವೇಷಭೂಷಣಗಳನ್ನು ತಿಳಿಸುತ್ತಾ ಎಲ್ಲಮ್ಮನ ಕಾವ್ಯವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸುತ್ತಾರೆ. ಅಲ್ಲದೆ ಯಲ್ಲಮ್ಮನನ್ನು ಆರಾಧಿಸುವ 'ಭೂತೇರು' ಸಮುದಾಯವನ್ನು ಯಾವ್ಯಾವ ಭಾಗದಲ್ಲಿ ಜೀವಿಸುತ್ತಾರೆ, ಅವರ ಪ್ರಧಾನ ವೃತ್ತಿ ಏನು ಎಂಬುದನ್ನು ತಿಳಿಸುತ್ತಾರೆ.

ಮಹಾದೇವಿ ಹೆಬ್ಬಾಳೆಯವರು 'ಜನಪದ ನಂಬಿಕೆಗಳು' ಲೇಖನದಲ್ಲಿ ಜನರ ಬದುಕಿನ ಭಾಗವಾಗಿರುವ ಜನಪದ ನಂಬಿಕೆಗಳು ಹಾಸು ಹೊಕ್ಕಾಗಿ ಹೇಗೆ ಅಳವಡಿಕೆಯಾಗುತ್ತವೆಂಬುದನ್ನೂ ಗುರುತಿಸಿದ್ದಾರೆ. ನಂಬಿಕೆಗಳು ವೈಜ್ಞಾನಿಕ, ವೈಚಾರಿಕ ಅಂಶಗಳಾಗಿ ಕಂಡಿರುವಂತೆ ಅವೈಜ್ಞಾನಿಕ, ಅವೈಚಾರಿಕವಾಗಿರುವಂತೆಯೂ ಕಾಣುವುದನ್ನು ವಿವರಿಸಿದ್ದಾರೆ. ಕೊನೆಯ ಲೇಖನ ಜಗನ್ನಾಥ ಹೆಬ್ಬಾಳೆಯವರ 'ಗುರುಶ್ರೇಷ್ಠ ಡಾ. ಲಠ್ಠೆಯವರು' ಎಂಬ ವಿಷಯದ್ದು. ಸಮಾಜದಲ್ಲಿ ತಾಯಿ-ಗುರು ಇವರಿಬ್ಬರು ಶ್ರೇಷ್ಠ ಕಣ್ಮಣಿಗಳು. ತಾಯಿ ಸ್ಥಾನದಲ್ಲಿ ನಿಲ್ಲುವ ಗುರು ಜಾನಪದ ತಜ್ಞರು ಡಾ. ಲಠ್ಠೆಯವರು. ಇವರು ಗುರುಪರಂಪರೆಯಲ್ಲಿ ವಿದ್ಯಾರ್ಥಿ ಸಮುದಾಯದ ಶ್ರೇಯೋಭಿವೃದ್ಧಿಗೆ ದುಡಿಯುವುದರೊಂದಿಗೆ ಜಾನಪದ ಕ್ಷೇತ್ರದಲ್ಲಿ ನಿಸ್ಪೃಹ ಸೇವೆಯನ್ನು ಮಾಡಿ, ಸಂಗ್ರಹ, ಸಂಪಾದನೆ, ವಿಶ್ಲೇಷಣೆ, ಸಂಶೋಧನೆ ಹೀಗೆ ಬಹುಮುಖಿಯಾಗಿ ಕೆಲಸ ನಿರ್ವಹಿಸಿದ್ದಾರೆಂಬುದನ್ನು ಹೆಬ್ಬಾಳೆಯವರು ಆಪ್ತತೆಯಿಂದ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಇಲ್ಲಿ ಸಂಪಾದನೆಗೊಂಡಿರುವ ಲೇಖನಗಳು ನಾಡಿನ ಜನಪದ ಸಂಸ್ಕೃತಿಯ ಸಂಕರತೆಯ ಸಂಮಿಶ್ರಣದಿಂದ ಕೂಡಿದವುಗಳಾಗಿದ್ದು, 'ಜಾನಪದ ದರ್ಪಣ'

ಕೃತಿಯು ಅಧ್ಯಯನಕಾರರಿಗೆ, ಸಂಶೋಧಕರಿಗೆ ತುಂಬಾ ಉಪಯುಕ್ತ ಆಕರವಾಗಬಲ್ಲದು. ಇಲ್ಲಿನ ಪ್ರತಿಯೊಂದು ಲೇಖನದ ವಸ್ತುವು ನಾಡಿನ ಜಾನಪದ ವೈವಿಧ್ಯತೆ, ವೈಶಿಷ್ಟ್ಯತೆಯನ್ನು ಸಾರುತ್ತವೆ. ಜಾನಪದದ ಸಾರಸತ್ವವನ್ನು ದರ್ಶನಾತ್ಮಕವಾಗಿ ವಿಮರ್ಶಿಸುವುದರಿಂದ ಉತ್ತಮ ಕೃತಿಯಾಗಿ ನಿಂತಿದೆ.

ಕೆ.ವಿ.ಎಂ.

ಸಂಸ್ಕೃತಿ ಸಾರುವ ದೇವರೋತ್ಸವಗಳು

* **ಲೇ. ಡಾ. ಮಹಾದೇವಿ ಮುಲಗೆ;** ಪ್ರ-ಸ್ವಾಗತ ಸಮಿತಿ, ಅ.ಭಾ. ಜಾನಪದ ಸಮ್ಮೇಳನ, ಬೀದರ್. ಪ.ಗ. ೧೨+೭೬; ಬೆಲೆ ರೂ. ೭೦/-

ಮಹಾದೇವಿ ಮುಲಗೆಯವರು ಬರೆದಿರುವ 'ಬೀದರ್ ಜಿಲ್ಲೆಯ ದೇವರೋತ್ಸವಗಳು' ಕೃತಿಯು ದೇಶದಲ್ಲಿ ಪ್ರಥಮವೆನಿಸಿಕೊಂಡು ಬೀದರ್‌ನಲ್ಲಿ ನಡೆದ ಅಖಿಲ ಭಾರತ ಪ್ರಥಮ ಜಾನಪದ ಸಮ್ಮೇಳನದಲ್ಲಿ ಬಿಡುಗಡೆಗೊಂಡಿದೆ. ಈ ಕೃತಿಯಲ್ಲಿ ಬೀದರ್ ಜಿಲ್ಲೆಯ ವೈಭವಯುತ ಜಾನಪದ ಸಂಸ್ಕೃತಿಯ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ತುಂಬಾ ಮೌಲ್ಯಯುತವಾದ ಕೃತಿಯಾಗಿದೆ. ಗಾತ್ರದಲ್ಲಿ ಕೃತಿಯು ಚಿಕ್ಕದಿದ್ದರೂ (ಅಂದರೆ ೭೬ ಪುಟದಷ್ಟು) ಕ್ಷೇತ್ರಕಾರ್ಯದಲ್ಲಿ ಮಾಹಿತಿಯ ಶೋಧನೆ ಅದರ ಶಾಸ್ತ್ರೀಯ ವಿಶ್ಲೇಷಣೆಯಲ್ಲಿ ಮೇಲ್ಪಂಕ್ತಿಯಲ್ಲಿದೆ. ಸಂಗ್ರಹಿಸಿದ ಅಮೂಲ್ಯವಾದ ವಿಷಯಗಳನ್ನು ಸಂಶೋಧನಾತ್ಮಕ ನೆಲೆಗಟ್ಟಿನಲ್ಲಿ ವಿಭಾಗೀಕರಿಸಿ ಕೊಟ್ಟಿರುವುದು ನಿಜಕ್ಕೂ ಶ್ಲಾಘನೀಯ.

ಬೀದರ್ ಜಿಲ್ಲೆ ಕರ್ನಾಟಕ ರಾಜ್ಯದ ಮುಕುಟಪ್ರಾಯವೆನಿಸಿದ ಜಿಲ್ಲೆಯಾಗಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳ ಗಡಿಯೊಂದಿಗೆ ಮರಾಠಿ-ತೆಲುಗು-ಉರ್ದು ಭಾಷೆಗಳೊಂದಿಗೆ ಬೆಸೆದುಕೊಂಡಿರುವ ಈ ಜಿಲ್ಲೆ ಹಲವು ಧರ್ಮಿಯರ, ಹಲವು ಭಾಷಿಕರ, ಹಲವು ಸಂಸ್ಕೃತಿಗಳ ಸಮ್ಮಿಶ್ರವೆನಿಸಿದ ಅಪ್ಪಟ 'ದೇಶಿ' ಎನಿಸಿಕೊಂಡಿದೆ. ಈ ಜಿಲ್ಲೆಯು ಹೈದರಾಬಾದ್-ಕರ್ನಾಟಕದ ಹಿಂದುಳಿದ ಜಿಲ್ಲೆಯೆನಿಸಿಕೊಂಡಿದ್ದರು ಜಾನಪದ ಸಂಸ್ಕೃತಿಯಲ್ಲಿ ಹಿಂದುಳಿದಿಲ್ಲ. ಇಂದು ಜಾಗತೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ಜನಪದರ ಜೀವನದಲ್ಲಿ ಏರಿಳಿತಗಳು ಕಂಡುಬಂದಿದ್ದರೂ ಬದುಕಿನ ಭಾಗವೆನಿಸಿರುವ ಜನಪದ ಉತ್ಸವಗಳಿಗೆ ಧಕ್ಕೆಯೊದಗಲಿಲ್ಲ. ಇಂತಹ ಸಂದರ್ಭದಲ್ಲಿ ವೈವಿಧ್ಯಮಯವೆನಿಸುವ ಬೀದರ್ ಜಿಲ್ಲೆಯ ದೇವರೋತ್ಸವಗಳು ನಡೆಯುವ ಕ್ಷೇತ್ರಗಳಿಗೆ ಲೇಖಕಿ ಭೇಟಿ ನೀಡಿ ಆ ಉತ್ಸವಗಳ ನಿಜವಾದ ಕ್ರಮ, ಸ್ವರೂಪವನ್ನು ಇಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಮಹಾದೇವಿ ಮುಲಗೆಯವರ ಈ ಕೃತಿ ಜನಪದ ಸಂಶೋಧನೆಯ ಕೃತಿಯಾಗಿದ್ದು, ವೈಜ್ಞಾನಿಕ ಹಾಗೂ ಶಾಸ್ತ್ರೀಯವಾಗಿ ಅಧ್ಯಾಯಗಳ ವಿಂಗಡನೆ, ಹಾಗೆಯೇ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆಯೊಂದಿಗೆ ಮೈತಳೆದಿದೆ.

ಕೃತಿಯ ಕೊನೆಯಲ್ಲಿ (ಅನುಬಂಧ) ದೇವರೋತ್ಸವಗಳ ಕುರಿತ ಹಾಡುಗಳನ್ನು ೧೬ ಪುಟಗಳಷ್ಟು ಕೊಟ್ಟಿರುವುದು ಸಮಂಜಸವೆನಿಸಿದೆ. ಒಟ್ಟು ಐದು ಅಧ್ಯಾಯಗಳನ್ನು ಮಾಡಿಕೊಂಡು ಮೊದಲ ಅಧ್ಯಾಯದಲ್ಲಿ ದೇವರೋತ್ಸವಗಳ ಅಧ್ಯಯನದ ಅವಶ್ಯಕತೆ ಮತ್ತು ವ್ಯಾಪ್ತಿಯನ್ನು ಹೇಳುತ್ತಾ ಮನುಷ್ಯನ ಬದುಕಿನಲ್ಲಿ ಜೀವಂತ ನಾಡಿಮಿಡಿತವಾಗಿ ಬರುವ ದೇವರ ಉತ್ಸವಗಳು ಹಲವು ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಆಯಾಯ ಧಾರ್ಮಿಕ ನೆಲೆಗಟ್ಟಿಗೆ ಅನುಸಾರವಾಗಿ ನಡೆಯುತ್ತವೆ. ಇದೇ ರೀತಿ ಮನರಂಜನೆಗಾಗಿ ಜನಪದ ಕಲೆಗಳು, ದನಗಳ ಜಾತ್ರೆ, ಪದಾರ್ಥಗಳಲ್ಲಿ ಕೊಂಡುಕೊಳ್ಳುವಿಕೆಯಲ್ಲಿ ವ್ಯಾಪಾರ ವಹಿವಾಟುಗಳು ಉತ್ಸವಗಳಲ್ಲಿ ಹೆಚ್ಚು ಪ್ರಾಧಾನ್ಯತೆ ಪಡೆಯುತ್ತವೆಂದು ಲೇಖಕರು ಹೇಳುತ್ತಾರೆ.

ಎರಡನೇ ಅಧ್ಯಾಯ 'ದೇವರೋತ್ಸವಗಳ ಉಗಮ ಮತ್ತು ವಿಕಾಸ'ದಲ್ಲಿ ಮತ್ತೆ ವಿಭಾಗೀಕರಿಸಿ ದೇವರೋತ್ಸವಗಳ ಸ್ವರೂಪ-ಲಕ್ಷಣಗಳು, ಪ್ರಾಮುಖ್ಯ, ಪ್ರಯೋಜನ ಕುರಿತು ಚರ್ಚಿಸಿದ್ದಾರೆ. ದೇವರುಗಳ ಉತ್ಸವಗಳು ನಡೆಯುವ ಬಗೆ, ಅದರಲ್ಲಿ ಭಾಗವಹಿಸುವ ಸಮುದಾಯಗಳ ಭಕ್ತಿಯ ಆರ್ದ್ರತೆ, ವಿಧಿವತ್ತಾಗಿ ನಡೆಯುವ ಆಚರಣೆಗಳು, ಹಲವು ಪ್ರದರ್ಶಿತ ಕಲೆಗಳು ಇವುಗಳ ವಿವರಣೆ ನೀಡಿದ್ದಾರೆ. ಮೂರನೇ ಅಧ್ಯಾಯಗಳಲ್ಲಿ ದೇವರೋತ್ಸವಗಳ ವರ್ಗೀಕರಣ ಮಾಡಿಕೊಂಡು ಐತಿಹಾಸಿಕ ಹಾಗೂ ಪೌರಾಣಿಕ ದೇವರೋತ್ಸಗಳೆಂದು ವಿಭಾಗಿಸಿಕೊಂಡಿದ್ದಾರೆ. ಇದರಲ್ಲಿ ಐತಿಹಾಸಿಕ ದೇವರೋತ್ಸವಗಳಾದ ದಿಗಂಬರ ಮಾನಿಕೇಶ್ವರ ಶಿವಯೋಗಿಗಳ ಉತ್ಸವ, ಗುರುನಾನಕರ ಉತ್ಸವ, ಅಷ್ಟೂರಿನ ಅಲ್ಲಮಪ್ರಭುಗಳ ಉತ್ಸವ, ಬಕ್ಕಪ್ರಭು ಉತ್ಸವ, ಸಂತ ಮಡಿವಾಳೇಶ್ವರ ಉತ್ಸವ, ಮೌನಿಶ್ರೀಗಳ ಉತ್ಸವ, ಮುಲ್ತಾನಿ ಪಾಶಾ ಉರುಸ್, ಬಸವಣ್ಣನ ಉತ್ಸವ, ಚನ್ನಬಸವೇಶ್ವರ ಶಿವಯೋಗಿಗಳ ಉತ್ಸವ ಹೀಗೆ ಹಲವು ಉತ್ಸವಗಳು ವಾರ್ಷಿಕ, ದ್ವೈವಾರ್ಷಿಕವಾಗಿ ನಡೆಯುತ್ತವೆ. ಪಾರಂಪರಿಕವಾಗಿ ನಡೆದು ಬರುವ ಪ್ರತಿಯೊಂದು ಆಚರಣೆಗಳನ್ನೂ ಯಥಾವತ್ತಾಗಿ ವಿವರಿಸಿದ್ದಾರೆ. ಸಮುದಾಯದಲ್ಲೇ ಬದುಕಿ, ಅವುಗಳ ಉದ್ಧಾರಕ್ಕಾಗಿ ಕೊನೆಯವರೆಗೂ ಮುಡಿಪಾಗಿಟ್ಟು ಅಸಮಾನ್ಯ ವ್ಯಕ್ತಿಯಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನಾಯಕರಾಗಿ ಜನರ ಮನಸ್ಸು ಗೆದ್ದು ದೈವತ್ವಕ್ಕೇರಿದವರಾಗಿ ಪೂಜೆಗೆ, ಉತ್ಸವಕ್ಕೆ ಅರ್ಹರಾದರೆಂದು ಹೇಳುತ್ತಾ ದೇವರೋತ್ಸವದ ವಿಶಿಷ್ಟತೆಗಳನ್ನು ಹೇಳಿದ್ದಾರೆ. ಪೌರಾಣಿಕ ದೇವರುಗಳು ದೇವಲೋಕದಿಂದ ಭೂಲೋಕದಲ್ಲಿಗೆ ಬಂದು, ಧಾರ್ಮಿಕ ಮಹಿಮಾ ಪುರುಷರಾದ ಶಿವ, ವಿಷ್ಣು, ಶಕ್ತಿದೇವತೆಗಳ ಮಹೋತ್ಸವಗಳ ವಿವರಣೆ ನೀಡಿದ್ದಾರೆ.

ಈ ಕೃತಿಯ ಅಂತರಂಗದಲ್ಲಿ ಚಿತ್ರಿತಗೊಂಡಿರುವ ಬೀದರ ಜಿಲ್ಲೆಯ ದೇವರೋತ್ಸವಗಳು ಇಲ್ಲಿನ ಬಹುತೇಕ ವಿಭಿನ್ನ ಸಮುದಾಯಗಳ ಜೀವಂತ ಬದುಕಿನ ಜನಪದ ಸಂಸ್ಕೃತಿಯನ್ನು ಲೇಖಕರು ಕಟ್ಟಿಹಿಡಿಯುವ ಪ್ರಯತ್ನ ಮಾಡಿಕೊಟ್ಟಿದ್ದಾರೆ. ಇಲ್ಲಿ ರೂಢಿಗೊಂಡಿರುವ ಪ್ರಮುಖ ಆಚರಣೆಗಳಾದ ಕೀರ್ತನೆ–ಗಾಯನ, ಉಚ್ಚಾಯಿ ಮೆರವಣಿಗೆ, ಆನೆ ಮೆರವಣಿಗೆ, ಅಗ್ನಿ ಪೂಜೆ, ರಥೋತ್ಸವ, ಕುಸ್ತಿಯಾಟ, ಸಮಯ ರೋಶನಿ, ದರಬಾರ ಹೀಗೆ ಹಲವು ಧಾರ್ಮಿಕಾಚರಣೆಗಳ ವಿಶ್ಲೇಷಣೆ ಮಾಡಿದ್ದಾರೆ. ನಂಬಿಕೆ, ಮೌಢ್ಯಗಳು, ಹರಕೆಗಳ ಮುಖಾಂತರ ಧಾರ್ಮಿಕ ಆಚರಣೆಗಳಿಂದಾಗಿ ಸೃಷ್ಟಿಯಾಗಿರುವ ಹಿಂಸೆ, ಕ್ರೌರ್ಯಗಳು ಇಲ್ಲಿ ತೆರೆದುಕೊಳ್ಳುತ್ತವೆ.

ನಾಲ್ಕನೇ ಅಧ್ಯಾಯ 'ಬೀದರ್ ಜಿಲ್ಲೆಯ ದೇವರೋತ್ಸವಗಳಲ್ಲಿನ ಜನಪದ ಪ್ರದರ್ಶನ ಕಲೆಗಳು'. ಇದರಲ್ಲಿ ಜಿಲ್ಲೆಯಲ್ಲಿ ನಡೆಯುವ ದೇವರೋತ್ಸವಗಳ ಸಮಯದಲ್ಲಿ ಧಾರ್ಮಿಕ, ಲೌಕಿಕ ಹಿನ್ನೆಲೆಯಿಂದ ಕಲೆಗಳು ಹೇಗೆ ಪ್ರದರ್ಶನ ಗೊಳ್ಳುತ್ತದೆ ಎಂಬುದನ್ನು ವಿವರಿಸುತ್ತಾರೆ. ಜಿಲ್ಲೆಯ ಸ್ಮರಣೀಯ ಕಲೆಗಳಾದ ಭೂತೇರು, ಜಾತಗಾರರು, ಬಾಳಸಂತೂರ, ಪುರವಂತರ ಕುಣಿತ, ಬುರ್‌ಬುರ್ ಬೋಚಮ್ಮ, ಬಹುರೂಪಿ ಮುಂತಾದವು ಪ್ರಾಮುಖ್ಯ ಪಡೆಯುತ್ತವೆ. ನಾಡಿನಲ್ಲಿ ಸರ್ವೇ ಸಾಮಾನ್ಯವಾಗಿ ಪ್ರದರ್ಶನವಾಗುವ ಹಲಗೆಮೇಳ, ಕೋಲಾಟ, ಭಜನಾಮೇಳ, ಬುಡಬುಡಿಕೆ, ಡೊಂಬರು, ಹಾವಾಡಿಗರು, ನಂದಿಕೋಲು ಕುಣಿತ, ಕರಡಿಕೋಲು ಕುಣಿತದ ಕಲೆಗಳ ಬಗೆಗೆ ವಿಸ್ತೃತವಾದ ವಿವರಣೆಯಿದೆ.

ಐದನೇ ಅಧ್ಯಾಯ 'ಸಮಾರೋಪ'ದಲ್ಲಿ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದ ಅಂಶಗಳಲ್ಲಿ ಕಂಡುಕೊಂಡ ಹೊಳವುಗಳ ಬಗೆಗೆ ಚಿತ್ರಣ ನೀಡಿದ್ದಾರೆ. ಹಲವು ಧರ್ಮಗಳ, ಜಾತಿಗಳ, ಭಾಷೆಗಳ, ಸಂಸ್ಕೃತಿಗಳ ಮಿಶ್ರಣದ ವೈವಿಧ್ಯತೆಯಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನ ಮೌಲ್ಯ ಎತ್ತಿ ಹಿಡಿಯುವುದಾಗಿದೆಂಬುದನ್ನು ವಿವರಿಸಿದ್ದಾರೆ.

ಮಹಾದೇವಿ ಮುಲಗೆಯವರ ಬೀದರ್ ಜಿಲ್ಲೆಯ ದೇವರೋತ್ಸವಗಳು ಕೃತಿಯಲ್ಲಿ ಜನರು ಈ ಉತ್ಸವಗಳಲ್ಲಿ ಯಾವುದೇ ಭೇದವಿಲ್ಲದೆ ಎಲ್ಲಾ ಜಾತಿ, ಧರ್ಮ, ಭಾಷೆ, ಸಂಸ್ಕೃತಿಗರು ಒಟ್ಟಿಗೆ ಸೇರಿ ಸಮನ್ವಯತೆಯ, ಭಾವೈಕ್ಯತೆಯ, ಸಹಮನಸ್ಸಿನಿಂದ ಪಾಲ್ಗೊಂಡು ಅರ್ಥಪೂರ್ಣವಾದ ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ನೆರವೇರಿಸಿ, ತಮ್ಮ ಹರಕೆ ತೀರಿಸುತ್ತಾ ಭಕ್ತಿ ಪೂರ್ವಕವಾಗಿ ನಡೆದುಕೊಳ್ಳುವ, ಈ ಉತ್ಸವಗಳಲ್ಲಿ ಜನಪದ ಕಲೆಗಳು ಜನ ಸಮುದಾಯಗಳಿಗೆ ಮನರಂಜನೆ ನೀಡುವ ದನಗಳ ಜಾತ್ರೆ ವ್ಯಾಪಾರದ ಬಹು ಮುಖ್ಯ ಕೇಂದ್ರವಾಗಿರುವುದನ್ನು ಹೇಳುತ್ತಾ ಹೀಗೆ ದೇವರೋತ್ಸವಗಳಲ್ಲಿ

ಜನಸಂದಣಿ ಪ್ರಧಾನತೆಯಾಗಿದ್ದು, ಪ್ರಾಥಮಿಕ ಹಂತದಿಂದ ಅಂತ್ಯದವರೆಗೆ ಸೃಜನಾತ್ಮಕವಾಗಿ, ಸಾಂಸ್ಕೃತಿಕವಾಗಿ ಸಾಗಿ ಎಲ್ಲರ ಆಕರ್ಷಣೆಗೆ ಪಾತ್ರವಾಗಿರುವ ವಿಷಯಗಳನ್ನು ಮಹಾದೇವಿ ಮುಲಗೆಯವರು ಈ ಕೃತಿಯಲ್ಲಿ ವಿಶದವಾಗಿ ವಿವರಿಸಿದ್ದಾರೆ.

ಕೆ.ವಿ. ಮುದ್ದವೀರಪ್ಪ

ಜನಪದ ಸಾಹಿತ್ಯ ಚಿಂತನೆ: ಒಂದು ನೋಟ

* **ಜನಪದ ಸಾಹಿತ್ಯ ಚಿಂತನೆ:** ಲೇ. ಲಿಂಗಪ್ಪ ಗೋನಾಲ, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಕರ್ನಾಟಕ ಸಂಘದ ಕಟ್ಟಡ, ಡಾ. ಅಂಬೇಡ್ಕರ್ ವೃತ್ತ, ಬೀದರ್, ಪು.೧೪+೧೧೪. ಬೆಲೆ ರೂ. ೭೦/-

ಕರ್ನಾಟಕದಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಚಿರಕಾಲ ಉಳಿಯುವಂತಹ ಪ್ರಾತಃಸ್ಮರಣೀಯ ವಿಚಾರಗಳೆಂದರೆ ಒಂದು- ದೇಶದಲ್ಲಿಯೇ ಪ್ರಥಮವೆನಿಸುವ ರೀತಿಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿರುವುದು. ಮತ್ತೊಂದು- ಬೀದರ್ ಜಿಲ್ಲೆಯಲ್ಲಿ ೨೦೧೧ರಲ್ಲಿ ಅಖಿಲ ಭಾರತ ಪ್ರಥಮ ಜಾನಪದ ಸಮ್ಮೇಳನ ಜರುಗಿದ್ದು. ಜಾನಪದ ವಿಶ್ವವಿದ್ಯಾಲಯ ಸ್ಥಾಪಿಸಿರುವುದು ನಿಜಕ್ಕೂ ಉತ್ತಮ ಕೆಲಸ. ಇದುವರೆಗೂ ಕನ್ನಡ ನಾಡಿನಲ್ಲಿ ನಡೆದಿರುವ ಜಾನಪದ ಅಧ್ಯಯನವನ್ನು ನಿರ್ಲಕ್ಷಿಸದೇ ನಡೆಯಬೇಕಿರುವ ಕೆಲಸವನ್ನು ಜರೂರಾಗಿ ಕೈಗೆತ್ತಿಕೊಂಡು ಮೂರ್ತರೂಪ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕುಲಪತಿಯವರು ವಿಶ್ವವಿದ್ಯಾನಿಲಯದಿಂದ ಗ್ರಾಮ ಸಂಸ್ಕೃತಿ ಚರಿತ್ರೆ ತರುವಲ್ಲಿ ಪ್ರಮುಖ ಆಸ್ಥೆ ವಹಿಸಿರುವುದು ಮತ್ತು ಜಂಗಮ ಸ್ಪರ್ಶ ನೀಡುತ್ತಿರುವುದು ಆಶಾದಾಯಕವಾಗಿದೆ.

ದೇ. ಜವರೇಗೌಡರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ಅಖಿಲ ಭಾರತ ಜಾನಪದ ಸಮ್ಮೇಳನವು ಚರಿತ್ರಾರ್ಹ ರೀತಿಯಲ್ಲಿ ನಾಡಿನ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಸುದೀರ್ಘವಾಗಿ ಅರ್ಥಪೂರ್ಣವಾಗಿ ಚರ್ಚಿಸಿದೆ. ಇಂತಹ ಸಂದರ್ಭದಲ್ಲಿ ಅಮೂಲ್ಯವೆನಿಸುವ ೧೨ ಕೃತಿಗಳ ಬಿಡುಗಡೆಯಾಗಿದ್ದು ದಾಖಲಾರ್ಹ. ಲಿಂಗಪ್ಪಗೋನಾಲರವರು ಸಂಪಾದಿಸಿರುವ 'ಜನಪದ ಸಾಹಿತ್ಯ ಚಿಂತನೆ' ಕೃತಿಯು ಇದರಲ್ಲಿ ಒಂದಾಗಿದೆ. ಈ ಕೃತಿಯಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆರು ಲೇಖನಗಳಿದ್ದು ಇನ್ನುಳಿದ ಏಳು ಲೇಖನಗಳು ಸಂಸ್ಕೃತಿ, ಜನಪದ ವಕ್ತೃಗಳು ಹಾಗೂ ತಜ್ಞರನ್ನು ಕುರಿತದ್ದಾಗಿವೆ. ಈ ಲೇಖನಗಳು ಬಿ.ಎಸ್. ಗದ್ದಗಿಮಠರವರಂತಹ ಶ್ರೇಷ್ಠ ಜಾನಪದ ತಜ್ಞರಿಂದ ಹಿಡಿದು ಇದುವರೆಗಿನ ವಿದ್ವಾಂಸರೆಲ್ಲರ ಲೇಖನಗಳು ಇಲ್ಲಿ ವಿಭಿನ್ನವಾಗಿ ಚಿಂತನೆಗಳ ರಸಚಿತ್ರಣ ನೀಡಿರುವುದನ್ನು ಕಾಣಬಹುದು.

ಈ ಕೃತಿಯ ಮೊದಲ ಲೇಖನ ಲಿಂಗಪ್ಪ ಗೋನಾಲರವರ 'ಜಾನಪದ ಹಾಡುಗಳಲ್ಲಿ ದಾಂಪತ್ಯ'. ಇದುವರೆಗೂ ಜಾನಪದದಿಂದ ಸಂಗ್ರಹಿಸಿ, ಸಂಪಾದಿಸಿದ ಹಾಡುಗಳಲ್ಲಿ ದಾಂಪತ್ಯವು ಸಮತ್ವದ ಸಾರವತ್ತಾದ ಅನನ್ಯದ ಜೀವನ ಪ್ರೀತಿಯೊಳಗೊಂಡ ಪವಿತ್ರವಾದ ವಿಚಾರಗಳು ಚರ್ಚಿತವಾಗಿವೆ. ಸರಸ–ವಿರಸ– ಸಮರಸವಾಗಿ ಮಧುರ ಬಾಂಧವ್ಯ ಸೇರುವುದರೊಂದಿಗೆ ದಾಂಪತ್ಯ ಹೊಸ ಸೊಬಗು ನಿರಂತರವಾಗಿ ದೊರೆಯುವುದೆಂದು 'ಗರತಿ ಹಾಡುಗಳು' ಕೃತಿಯ ತ್ರಿಪದಿಗಳನ್ನು ವಿಶ್ಲೇಷಿಸಿದ್ದಾರೆ. ಎರಡನೇ ಲೇಖನ ಮೃತ್ಯುಂಜಯ ಹೊರಕೇರಿಯವರ 'ಜೋಗುಳ ಪದಗಳು'. ಇವರು ಜೋಗುಳ ಪದದ ನಿಷ್ಪತ್ತಿ, ಅದರ ಅರ್ಥವಿವರಣೆ ನೀಡುತ್ತಾ, ಶಾಸ್ತ್ರಬದ್ಧವಾಗಿ ಹೆಸರಿಡುವ ಕಾರ್ಯದಿಂದ ಹಿಡಿದು ಪ್ರತಿಯೊಂದು ಹಂತದಲ್ಲಿನ ಮಗುವಿನ ಜೋಗುಳ ಪದಗಳನ್ನು ಕಟ್ಟಿದ್ದಾರೆ. ಆ ರೀತಿಯ ಅನೇಕ ಪದಗಳನ್ನು ನೀಡುತ್ತಾ ಅವುಗಳ ಸಾರವನ್ನು ವಿಶ್ಲೇಷಿಸಿದ್ದಾರೆ. ಮೂರನೇ ಲೇಖನ ಜಗನ್ನಾಥ ಹೆಬ್ಬಾಳೆಯವರ 'ನಾಗಪಂಚಮಿ ಹಾಡುಗಳು'. ಇದರಲ್ಲಿ ಲೇಖಕರು ಹೆಣ್ಣುಮಕ್ಕಳ ಹಬ್ಬವೆಂದೇ ಕರೆಯುವ 'ನಾಗಪಂಚಮಿ' ಹಬ್ಬದಲ್ಲಿ ಹೆಣ್ಣುಮಕ್ಕಳು ಗಂಡನ ಮನೆಯಿಂದ ತಮ್ಮ ತವರು ಮನೆಗೆ ಬಂದು ಪಾಲ್ಗೊಂಡು ತಮ್ಮ ಎಲ್ಲ ನೋವನ್ನು ಮರೆತು ತಂದೆ ತಾಯಿಗಳೊಂದಿಗೆ ಬೆರೆತು ಸಂತೋಷದಿಂದ ಕುಣಿದು ಕುಪ್ಪಳಿಸುವುದು 'ಹಾಡುಗಳಲ್ಲಿ ವ್ಯಕ್ತವಾಗಿರುವುದನ್ನು ವಿಶ್ಲೇಷಿಸುತ್ತಾರೆ.

ಮೂರು ಮತ್ತು ನಾಲ್ಕನೇ ಲೇಖನಗಳು ದೇವೇಂದ್ರಕುಮಾರ ಹಕಾರಿ ಅವರ 'ಕುಟ್ಟುವ ಹಾಡುಗಳು' ಬಿ.ಎಸ್. ಗದ್ದಿಗಿಮಠರವರ 'ಬೀಸುವ ಹಾಡುಗಳು' ಶ್ರಮ ಸಂಸ್ಕೃತಿಯಲ್ಲಿ ಜನ್ಮ ತಾಳಿರುವ ಪದಗಳೆಂಬುದನ್ನು ಈ ಲೇಖನಗಳಲ್ಲಿ ವ್ಯಕ್ತವಾಗಿರುವ ಆಶಯಗಳಿಂದ ತಿಳಿಯಬಹುದು. ಒನಕೆ, ಒಳಕಲ್ಲು, ಧಾನ್ಯ ಈ ಮೂರರಿಂದ ಒಂದು ನಿಯತವಾದ ಗತಿ ಸೃಷ್ಟಿಯಾಗುತ್ತದೆ. ಇವುಗಳಲ್ಲಿ ಒಂದಿಲ್ಲದಿದ್ದರೂ ಆ ಗತಿ ವ್ಯಕ್ತವಾಗುವುದಿಲ್ಲ. ಇಲ್ಲಿ ಕುಟ್ಟುವಾಗಿನ ಶಬ್ದಕ್ಕೆ ಅನುಸರಿಸಿ ಹೆಣ್ಣು ಹಾಡು ಕಟ್ಟಿದ್ದಾಳೆ. ಅಂತಹ ಹಾಡುಗಳನ್ನು ಬಳಸಿ ಹಕಾರಿಯವರು ಚಿತ್ರಿಸಿದ್ದಾರೆ. ಬಿ.ಎಸ್. ಗದ್ದಿಗಿಮಠರವರು ಜಾನಪದದಲ್ಲಿ ಮೊದಲಿಗೆ ಪಿಎಚ್.ಡಿ. ಮಾಡುವುದರೊಂದಿಗೆ ಸಂಶೋಧನಾತ್ಮಕ ಅಧ್ಯಯನಕ್ಕೆ ಎಡೆಮಾಡಿಕೊಟ್ಟರು. ಉತ್ತರ ಕರ್ನಾಟಕದ ಬಹುಪಾಲು ಹಾಡುಗಳನ್ನೂ ಸಂಗ್ರಹಿಸಿ ವಿವರಿಸಿದ್ದಾರೆ. ಅದರಲ್ಲಿ 'ಬೀಸುವ ಹಾಡುಗಳು' ಲೇಖನ ಮುಖ್ಯವಾಗಿದೆ. ಗದ್ದಿಗಿಮಠರವರು ಬೇಸತ್ತ ಹೆಣ್ಣು ನೋವನ್ನು ಮರೆಯಲು ಬೆಳಗಿನಿಂದಲೇ ಎದ್ದು ಬೀಸಲು ಶುರು ಮಾಡುತ್ತಾಳೆಂದು ಹೇಳುವುದರೊಂದಿಗೆ ಬೀಸುವ ಕಲ್ಲಿನ ಸಪ್ಪಳ ಮತ್ತು ಹೆಣ್ಣಿನ ಬಳೆಗಳ ಸಪ್ಪಳ, ಹಾಗೆಯೇ ಬೀಸುವಾಗಿನ ಲಯ ಇವೆಲ್ಲವೂ ಒಂದೇ ತೆರನಾಗಿ ಹೇಗೆ ಬರುತ್ತದೆಂಬುದನ್ನೂ ವಿವರಿಸಿದ್ದಾರೆ. ಗರತಿಯಾದವಳು ತನಗಾದವರ, ಆಗುವವರ ಬಗೆಗೆ ತುಂಬು ಮನಸ್ಸಿನಿಂದ ನೆನೆಯುವ ಕ್ರಮವನ್ನು ಹಾಡುಗಳೊಂದಿಗೆ ಚರ್ಚಿಸಿದ್ದಾರೆ.

ವೀರಣ್ಣ ದಂಡೆಯವರ 'ಗೋವಿನಹಾಡು – ಆಕಳ ಹಾಡು' ಲೇಖನದಲ್ಲಿ ಕನ್ನಡ ನಾಡಿನ ಜನರ ಮನಸ್ಸು ಗೆದ್ದಿದ್ದ ಗೋವಿನ ಹಾಡಿನ ಪುಣ್ಯಕೋಟಿಯ ಸತ್ಯದ ಕಥನವನ್ನು ಮನೋಜ್ಞವಾಗಿ ವಿಶ್ಲೇಷಿಸಿದ್ದಾರೆ. ಒಂದು ಕ್ರೂರ ವ್ಯಾಘ್ರನ ಮನಸ್ಥಿತಿಯನ್ನು ಬದಲಾಯಿಸುವ ಶಕ್ತಿ ಸಾಮಾಜಿಕ ಮೌಲ್ಯ ಪ್ರತಿಪಾದಿಸಿದ ಗೋವಿಗಿದೆ ಎನ್ನುವ ವಿವರಣೆ ಹಾಗೂ ಆಕಳು ಮುಗ್ಧತೆಯ ಸ್ವಭಾವವಿದ್ದರೂ ಅದನ್ನು ಒಪ್ಪಿಸುವ ದಿಟ್ಟತನ ತಾಯಿ ಗೋವಿಗಿರುವ ಧೈರ್ಯವಂತಿಕೆ ಸತ್ಯ ಮತ್ತು ಭಾಷೆಯಲ್ಲಿನ ಮೌಲ್ಯ ಪ್ರತಿಪಾದನೆ ಪ್ರಧಾನವಾಗಿರುವುದನ್ನು ಲೇಖಕರು ಹಾಡಿನೊಂದಿಗೆ ವಿಶ್ಲೇಷಿಸಿದ್ದಾರೆ.

ಚೆನ್ನಣ್ಣವಾಲೀಕಾರರ ಹೊಸ ಶೋಧವಾಗಿರುವ "ಕಡ್ಲಿಮಟ್ಟಿ ಕಾಶೀಬಾಯಿ ಗೀಗೀ ಪದದ ಕರ್ತೃ ಆಲಗೂರ ಪಿಂಜಾರ" ಲೇಖನವು ಒಬ್ಬ ಸೃಜನಶೀಲ, ಕಲಾತ್ಮಕ ಮನಸ್ಸು ಯಾವುದಾದರೂ ಒಂದು ಹೊಸದನ್ನು ಹೇಗೆ ಕಟ್ಟಬಲ್ಲದು ಎಂಬುದಕ್ಕೆ ಆಲಗೂರು ಪಿಂಜಾರರಿಗೆ ಆದ ಘಟನೆಯೇ ಕಡ್ಲಿಮಟ್ಟಿಕಾಶೀ ಬಾಯಿ ಗೀಗೀ ಪದ ಹುಟ್ಟಲು ಸಾಧ್ಯವಾಗಿದೆ. ಇಂತಹ ಸೀಮಾಪುರುಷನ ಅಸಮಾನ್ಯ ವ್ಯಕ್ತಿತ್ವದ ವಿವರಣೆಗಳನ್ನು ಹಲವು ರೂಪಕಗಳೊಂದಿಗೆ ವಿಶ್ಲೇಷಿಸಿದ್ದಾರೆ. ಟಿ.ಎಂ. ಭಾಸ್ಕರ್ ಅವರು 'ಒಗಟುಗಳ ವೈವಿಧ್ಯತೆ' ಎಂಬ ಲೇಖನದಲ್ಲಿ ಬೌದ್ಧಿಕ ಕಸರತ್ತಿಗಾಗಿಯೇ ಇರುವ ಒಗಟುಗಳು ಗೂಢಾರ್ಥಗಳ ಕಣಜವಾಗಿರುತ್ತವೆ. ಜ್ಞಾನದ ಬಲದಿಂದಲೇ ಒಗಟುಗಳನ್ನೂ ರಚಿಸಬೇಕಾಗಿರುತ್ತದೆ. ತುಂಬ ಸಮಯ ತೆಗೆದು ಕೊಳ್ಳುವ, ಬಿಡಿಸುವ ವ್ಯಕ್ತಿಯು ಆಶಾದಾಯಕವಾಗಿಯೇ ಬಿಡಿಸುತ್ತೇನೆಂಬ ಮನಸ್ಸು ಮಾಡುವ, ಬಿಡಿಸಲಾಗದಿದ್ದಾಗ ಎದುರು ವ್ಯಕ್ತಿ ಮತ್ತೊಂದು ಒಗಟು ಒಡ್ಡುವ, ಹೀಗೆ ಹೆಚ್ಚಿನ ಅನುಭವ ಒರೆಗೆ ಹಚ್ಚಿಕೊಳ್ಳುವ ಪ್ರಯತ್ನವನ್ನು ಲೇಖಕರು ಹಲವು ಒಗಟುಗಳೊಂದಿಗೆ ವಿವರಿಸಿದ್ದಾರೆ.

ಪಿ.ಕೆ. ಖಂಡೋಬಾರವರ 'ಆರ್ಯ ಸಂಸ್ಕೃತಿ ಮತ್ತು ಲಂಬಾಣಿಗರು' ಲೇಖನದಲ್ಲಿ ಆರ್ಯರ ಸಂಸ್ಕೃತಿ ಮತ್ತು ಲಂಬಾಣಿಗರ ಸಂಸ್ಕೃತಿಯಲ್ಲಿ ಸಾಮ್ಯತೆ ಮತ್ತು ವೈರುಧ್ಯಗಳನ್ನು ಚರ್ಚಿಸಿದ್ದಾರೆ. ಗ್ರಾಮೀಣ ಸಮುದಾಯಗಳು ತಮ್ಮೊಳಗೆ ನಡೆಯುವ ತಪ್ಪು–ತಕುಗಳು, ಗಲಾಟೆ– ಗದ್ದಲಗಳನ್ನು ತಾವೇ ಯಾವುದೇ ಮನಸ್ತಾಪವಿಲ್ಲದೆ ಮಾನವೀಯ ನೆಲೆಯಲ್ಲಿ ಬಗೆಹರಿಸಿಕೊಳ್ಳುವ ವಿಧಾನವನ್ನು ಕೆ.ಆರ್. ದುರ್ಗಾದಾಸ್‌ರವರ 'ಜನಪದರ ನ್ಯಾಯ ತೀರ್ಮಾನ ದೃಷ್ಟಿ'ಯಲ್ಲಿ ವಿವರಿಸಿರುವುದನ್ನು ಕಾಣಬಹುದು. ಶ್ರೀ ಗೋನವಾರ ಕಿಶನ್‌ರಾವ್ ಅವರು 'ದೈನಂದಿನ ಜೀವನದಲ್ಲಿ ಜಾನಪದ' ಲೇಖನವನ್ನು ಪಾರಂಪರಿಕವಾಗಿ ರೂಢಿಸಿ ಕೊಂಡು ಬಂದಿರುವ ಬದುಕಿನ ಎಲ್ಲಾ ಮಗ್ಗುಲುಗಳಲ್ಲಿ ಹೇಗೆ ಹಾಸುಹೊಕ್ಕಾಗಿ, ಬದುಕಿನ ಭಾಗವಾಗಿ ಜಾನಪದ ನಮ್ಮೊಳಗೆ ಮೂರ್ತ ರೂಪಗೊಂಡಿರುವುದನ್ನು ಹಲವು ಚರ್ಚೆಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಹಾಗೆಯೇ

ಮುದೆನೂರು ನಿಂಗಪ್ಪರವರ "ಜಾನಪದ ಸಾಹಿತ್ಯ: ಇವತ್ತಿನ ಆಗು ಹೋಗುಗಳು" ಲೇಖನದಲ್ಲಿ ಜಾಗತೀಕರಣ, ಉದಾರೀಕರಣ ಖಾಸಗೀಕರಣದ ಪ್ರಭಾವದಿಂದಾಗಿ ನಮ್ಮಲ್ಲಿನ ಮೂಲ ಸಂಸ್ಕೃತಿಯ ಬೇರುಗಳು ಹೇಗೆಲ್ಲಾ ಒಂದೊಂದಾಗಿ ಸಡಿಲಗೊಂಡಿವೆಂಬು ದನ್ನು ಹಲವು ಸಾದೃಶ್ಯಗಳನ್ನು ಇಟ್ಟುಕೊಂಡು ಆಧುನಿಕತೆಯ ವಿರಾಡ್ರೂಪ, ವಿಕೃತ ಸ್ಥಿತಿಯನ್ನು ಎಳೆ ಎಳೆಯಾಗಿ ಬಿಡಿಸಿ ಚಿತ್ರಿಸಿದ್ದಾರೆ. ಸಂಸ್ಕೃತಿಯ ಅವಸ್ಥಾಂತರದಲ್ಲಿ ಸಂಸ್ಕೃತೀಕರಣಗೊಂಡ ಸ್ಥಿತಿ ಹೇಗೆ ಜನಸಮುದಾಯವನ್ನು ಆಳುತ್ತಿದೆ ಎಂಬುದನ್ನು ವಿವರಿಸಿದ್ದಾರೆ.

ಕೊನೆಯ ಲೇಖನ ಜ್ಯೋತಿ ಎಂ. ನಾಯಕರವರ 'ಜಾನಪದ ಕ್ಷೇತ್ರಕ್ಕೆ ಎನ್.ಆರ್. ನಾಯಕ ಅವರ ಕೊಡುಗೆ'. ಈ ಲೇಖನದಲ್ಲಿ ತುಂಬಾ ಸಾವಧಾನದಿಂದ ತಮ್ಮ ಪಾಡಿಗೆ ತಾವು ಜಾನಪದ ಅಧ್ಯಯನವನ್ನು ಸುದೀರ್ಘ ಸಮಯದವರೆಗೆ ನಿಸ್ವಾರ್ಥದ ಹಿನ್ನೆಲೆಯಲ್ಲಿ ಸೇವೆ ಸಲ್ಲಿಸಿದವರು, ಅಜಾತ ಶತ್ರುವೆಂದೇ ಬಿಂಬಿತವಾದವರು ಎನ್.ಆರ್. ನಾಯಕರು. ಜಾನಪದದ ಅಧ್ಯಯನವನ್ನು ಬಹುಮುಖಿಯಾಗಿ, ಸಮಷ್ಟೀ ಪ್ರಜ್ಞೆಯಿಂದ ನೋಡುವ ಸೂಕ್ಷ್ಮ ಮನಸ್ಸುಳ್ಳ ಶ್ರೀಯುತರು ಉತ್ತರ ಕನ್ನಡ ಜಿಲ್ಲೆಯ ಉದ್ದಗಲಕ್ಕೂ ಓಡಾಟ ಮಾಡಿ 'ಕ್ಷೇತ್ರಕಾರ್ಯ'ಕ್ಕೆ ಹೊಸ ಹಾದಿಯ ನಡೆಯನ್ನು ತಂದುಕೊಟ್ಟರು. ಇಂತವರ ಬದುಕಿನ ಎಲ್ಲಾ ಮಜಲುಗಳನ್ನು ಸವಿವರವಾಗಿ ಜ್ಯೋತಿಯವರು ವಿಷಯವಾರಾಗಿ ವಿಭಾಗಿಸಿಕೊಂಡು ಚರ್ಚಿಸಿರುವುದನ್ನು ಈ ಲೇಖನದಲ್ಲಿ ಕಾಣಬಹುದು.

ಒಟ್ಟಾರೆ ಜಾನಪದವು ಮನುಷ್ಯನ ಬದುಕಿನಲ್ಲಿ ತನಗೆ ಅರಿವಿಲ್ಲದೆಯೇ ತಾನೇ ತಾನಾಗಿ ತನ್ನೊಳಗೆ ಗುಪ್ತಗಾಮಿನಿಯಾಗಿರುವಂಥದ್ದು. ಇದು ಯಾರ ಒತ್ತಾಯದ ಮರ್ಜಿಗೆ ಒಳಗಾಗಿ ರೂಢಿಗೆ ಬರುವಂತದ್ದಲ್ಲ. ಹಾಗೆ ಒಂದು ಕಾಲಕ್ಕೆ ಬೆದರಿಕೆಯಿಂದ ನಿಂತು ಹೋಗುವಂತದ್ದಲ್ಲ. ಅದೊಂದು ಜೀವಗಂಗೆಯ ರೀತಿಯಲ್ಲಿ ನಿರಂತರವಾಗಿ ಸಮುದಾಯಗಳ ನರನಾಡಿಯಲ್ಲಿ ಹರಿಯುವ ಪ್ರವಾಹೀ ಶಕ್ತಿಯಾಗಿದೆ. ಇಂತಹ ಜೀವದ್ರವ್ಯವಿರುವ 'ಜನಪದ ಸಾಹಿತ್ಯ ಚಿಂತನೆ' ಕೃತಿಯನ್ನು ಮುಂದಿನ ಜಾನಪದ ಅಧ್ಯಯನಕ್ಕೆ ಉತ್ತಮ ಆಕರ ಕೃತಿಯಾಗಿಸಿ ಸಂಪಾದಿಸಿರುವ ಡಾ॥ ಲಿಂಗಪ್ಪ ಗೋನಾಲರವರ ಶ್ರಮ ಅಭಿನಂದನೀಯವಾಗಿದೆ.

ಕೆ.ವಿ. ಮುದ್ದವೀರಪ್ಪ

ಕೋಲಾರ ಜಿಲ್ಲೆಯ ಜಾನಪದದ ಸಮೀಕ್ಷೆ

* **ಜಾನಪದ ಸುಗ್ಗಿ:** ಸಂ.ಎಂ. ಬೆಳ್ಳಾರಪ್ಪ, ನರಸಿಂಹೇಗೌಡ ನಾರಣಾಪುರ; ಪ್ರ: ಜಿಲ್ಲಾ ಕ.ಸಾ.ಪ ಕೋಲಾರ. ಪುಟಗಳು: ೮+೧೨೬, ಬೆಲೆ ರೂ. ೮೦/–

ಕೋಲಾರ ಜಿಲ್ಲೆಯ 'ಜಾನಪದ' ವನ್ನು ಸಂಪಾದಿಸಿ ಪ್ರಕಟಿಸಿದ "ಜಾನಪದ ಸುಗ್ಗಿ" ಎಂಬ ಪುಸ್ತಕವು ಜಾನಪದ ಕ್ಷೇತ್ರದಲ್ಲಿ ಉತ್ತಮವೆನಿಸಿದ ಕೃತಿಯಾಗಿದೆ.

೨೦೧೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಲ್ಲೂರು ಪ್ರಸಾದ್ ಮತ್ತು ಆರ್.ಕೆ. ಪ್ರಹ್ಲಾದ್‌ರಾವ್‌ರವರ ಪ್ರಧಾನ ಸಂಪಾದಕತ್ವದಲ್ಲಿ ಎಂ. ಬೆಳ್ಳಾರಪ್ಪ, ನರಸಿಂಹೇಗೌಡ ನಾರಣಾಪುರ ಅವರು ಸಂಪಾದಿಸಿ ಪ್ರಕಟಿಸಿದ ಈ ಕೃತಿಯು ಕೋಲಾರ ಜಿಲ್ಲೆಯ ಸಮಗ್ರ ಜಾನಪದವನ್ನು ಜಾನಪದ ಲೋಕಕ್ಕೆ ಪರಿಚಯಿಸಿದ್ದಾರೆ.

ಜಾನಪದ ಸುಗ್ಗಿಯು ಒಟ್ಟು ಹದಿಮೂರು ಲೇಖನಗಳಿಂದ ಕೂಡಿದ್ದು ಒಂದೊಂದು ಲೇಖನವೂ ವಿಭಿನ್ನವಾದವು. ಸ. ರಘುನಾಥರವರ "ಜಾನಪದಕ್ಕೆ ಎದೆ ಹಾಲು ಕೊಡದಿದ್ದರೂ ವಿಷ ಉಣಿಸುವುದು ಬೇಡ" ಲೇಖನವು ಅತ್ಯಂತ ಗಮನ ಸೆಳೆಯುವ ವೈಚಾರಿಕ ಲೇಖನವೆಂಬಂತೆ ಮೂಡಿ ಬಂದು ಜನಪದ ಕಲೆಗಳನ್ನು ಅವಲಂಬಿಸಿ ಬದುಕುವವರ ಸ್ಥಿತಿ, ಅದಕ್ಕೆ ಕಾರಣ ಮತ್ತು ಕಲೆಯ ಉಳಿಸುವಿಕೆ ಹೇಗೆಂಬುದರ ಅರಿವು ಮೂಡಿಸುವ ಪ್ರಯತ್ನ ಮಾಡಿದೆ. ಕೋನಿಗನ ಕಲೆ, ರಾಜಮ್ಮನ ಗಾಯನದ ಕಾಯಕಗಳ ಉದಾಹರಣೆಗಳೊಂದಿಗೆ ವಿಸ್ತಾರವಾಗಿ ಕಟ್ಟಿಕೊಡುತ್ತಾರೆ.

ಸಂಗೀತಾಭ್ಯಾಸ ಮಾಡದಿದ್ದರೂ ಜನಪದರು ಹೊಸ ಹೊಸ ರಾಗಗಳಲ್ಲಿ ಜಾನಪದವನ್ನು ಹಾಡುವ ರೀತಿ, 'ಒಣಗಿದ ತೊಗಲಿಗೆ ಜೀವ ತುಂಬುವ ಕಲೆ' ಎಂಬ ಭಾಗದಲ್ಲಿ ತೊಗಲು ಗೊಂಬೆಯಾಟದ ವಿಸ್ತಾರ, ಖಂಡೇ ಕುಳ್ಳಾಯಪ್ಪನ ಗೊಂಬೆಯಾಡಿಸುವ ಪ್ರೀತಿ, ಶಂಕರಪ್ಪನ ಜೊತೆಯಲ್ಲಿ ಸುಮಾರು ೬೦-೭೦ ಕುಟುಂಬಗಳು ಕಲೆಯಲ್ಲಿ ತೊಡಗಿ ಕಲೆಯನ್ನು ಪೋಷಿಸುತ್ತಾ ಬಂದಿರುವುದನ್ನು ತಿಳಿಸಿಕೊಡುತ್ತವೆ.

'ಕೋಲಾರ ಜಿಲ್ಲೆಯ ಜಾನಪದ ಸಂಸ್ಕೃತಿಯು' ಸುತ್ತ ಮುತ್ತಲಿನ ಊರುಗಳ ಕಡೆ ಗಮನ ಸೆಳೆಯುತ್ತದೆ. ಶಾಸನಗಳ ಪ್ರಾಚೀನತೆಯನ್ನು ಸಾರುತ್ತದೆ. ಬಂಗಾರ ಪೇಟೆಯ ತಾಲ್ಲೋಕಿನ ಹುನಗುಂದ, ಬೂದಿಕೋಟೆ, ಸೂಲಿಕುಂಟೆ ಮಾಲೂರು ತಾಲ್ಲೋಕಿನ ಬನಹಳ್ಳಿ ಗ್ರಾಮಗಳನ್ನು ಹೆಸರಿಸಬಹುದು. ಕೋಲಾರ ಜಿಲ್ಲೆಯು ಜಾನಪದದ ತವರೂರಾಗಿದೆ ಎನ್ನುವುದಕ್ಕೆ ಜನಪದ ಕಲೆಗಳನ್ನು ಗಾಯನಗಳನ್ನು, ಮೇಳಗಳನ್ನು, ಸಂಪ್ರದಾಯಗಳನ್ನು, ಚೌಡಿಕೆ, ಕೋಲಾಟ, ಪಂಡರಿ ಭಜನೆ ಮೊದಲಾದವುಗಳನ್ನು ಇಂದಿಗೂ ಉಳಿಸಿಕೊಂಡು ಮುಂದುವರೆಯುತ್ತಿವೆ. ಅನೇಕ ಭಾಷೆ, ಧರ್ಮ, ಮತ ಹೊಂದಿರುವ ಈ ಜಿಲ್ಲೆಯು ಸಾಂಸ್ಕೃತಿಕ ಮಹತ್ವವನ್ನು ಮತ್ತು ಸಂಪ್ರದಾಯಗಳನ್ನು ತಿಳಿಸುವುದಾಗಿದೆ.

ಅಲ್ಲದೆ ಅನೇಕ ಪದ್ಧತಿಗಳು, ಜಾತ್ರೋತ್ಸವಗಳು, ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು ಮನುಷ್ಯನ ಹುಟ್ಟಿನಿಂದ ಹಿಡಿದು ಸಾಯುವವರೆಗೂ

ನಡೆಯುವ ಆಚರಣೆಗಳು, ವಿವಿಧ ವರ್ಗದವರಲ್ಲಿ ಆಚರಣೆ ಭಿನ್ನವಾಗಿರುವುದು, ಗಿಡಮೂಲಿಕೆ ಔಷಧಿಗಳು (ಜನಪದ ವೈದ್ಯ), ಮಂತ್ರ ಹಾಕುವ ಪದ್ಧತಿ, ಜನಪದರ ಆಟಗಳು, ಶೈವ ವೈಷ್ಣವ ಶಾಕ್ತ ವಿಧಿಗಳಿಗೆ ಅನುಸಾರವಾದ ಆರಾಧನೆ ಹೀಗೆ ಒಟ್ಟು ವಿಷಯಗಳನ್ನು ತಿಳಿಸಿಕೊಡುತ್ತಲೇ ಒಂದೊಂದು ವಿಷಯದ ಸಮಗ್ರ ಅಧ್ಯಯನಕ್ಕೆ ಸೂಚನೆಯನ್ನು ನೀಡುವಲ್ಲಿ ಸಾಗುವ ನರಸಿಂಹೇಗೌಡ ನಾರಣಾಪುರ ಅವರ ಬರಹ ಗಮನಾರ್ಹವಾದುದು.

'ಅಚ್ಚರಿಯ ಗೊಂಬೆಗಳ ಮಾಂತ್ರಿಕ ಸಂಜೀವ ರೆಡ್ಡಿ'ಯವರ ಗೊಂಬೆಯಾಟ ಆಡಿಸುವ ಅಪ್ಪಟ ದೇಸಿ ತಂತ್ರಜ್ಞಾನ ಮತ್ತು ಕೈಚಳಕದ ಪರಿಚಯ ಮಾಡುತ್ತ ಪ್ರದರ್ಶನ ನಡೆವ ಚಾವಡಿ, ಗೊಂಬೆಗಳ ಅಭಿನಯ ಹಾಡುಗಳ ವಿವರವನ್ನು ನೀಡುವ ಟಿ. ಗೋವಿಂದರಾಜುರವರು ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಗೊಂಬೆಯಾಟದ ಬಗ್ಗೆ ಬೆರಗು ಮೂಡಿಸುತ್ತಾರೆ.

ಜಲ ಸಂಸ್ಕೃತಿಯನ್ನು ಪ್ರಧಾನ ಕೇಂದ್ರವಾಗಿ ಬರೆದಿರುವ 'ನೀರು ಮತ್ತು ಜಾನಪದ ಪರಂಪರೆ' ವೈಚಾರಿಕ ಮತ್ತು ವಿವರಣಾತ್ಮಕವಾಗಿದೆ. ವ್ಯಾಪಾರಿ ಮನಸ್ಸಿನ ಆಧುನಿಕ ಮನುಷ್ಯನ ಧೂರ್ತತೆಯಿಂದಾದ ಚರಿಗೆ ಹಳ್ಳದ ಕತೆಯು ಪ್ರತಿಬಿಂಬಿಸಿದೆ. 'ನೀರು' ಎಂಬುದು ಮನುಷ್ಯನ ಹುಟ್ಟು, ಮದುವೆ, ಸಾವುಗಳ ಸಂದರ್ಭದಲ್ಲಿ ಬಳಕೆಯಾಗುವ ಮತ್ತು ಅದರ ಶ್ರೇಷ್ಠತೆಯನ್ನು ವಿವರಿಸುವ ಪ್ರಯತ್ನವಿಲ್ಲಿ ಜಲದೇವತೆಯಾಗಿ, ನದಿ, ತೀರ್ಥ, ಗಂಗೆ, ಮಳೆ ರೂಪಗಳಾಗಿ ಜೀವದ್ರವ್ಯವೆನ್ನಿಸಿ ಸಕಲ ಜೀವಿಗೂ ಜೀವಾಳವಾದ ನೀರಿನ ಶ್ರೇಷ್ಠತೆಯನ್ನು ವಿವರಿಸುವ ಕೆ.ವೈ. ನಾರಾಯಣಸ್ವಾಮಿಯವರು ಪ್ರಜ್ಞಾವಂತರನ್ನು ಚಿಂತನೆಗೆ ಹಚ್ಚುತ್ತಾರೆ.

ಶ್ರೀವಾಣಿ ಪ್ರಹ್ಲಾದರಾವ್‌ರವರ 'ಜಿಲ್ಲೆಯ ಗ್ರಾಮದೇವತೆಗಳು' ಮಾತೃದೇವತೆಗಳ ಆರಾಧನೆ ಕಣ್ಮರೆಯಾಗುತ್ತಿರುವ ನಾಗರಿಕತೆಯ ಸಮಾಜದಲ್ಲಿ 'ಗ್ರಾಮದೇವತೆಗಳು' ಉಳಿಸುವ ಪ್ರಯತ್ನವಾಗಿದೆ. ಮಾತೃದೇವೋಭವ ಅಮ್ಮ, ಜಗನ್ಮಾತೆ, ಅಭಯೆ, ಅನ್ನಪೂರ್ಣೆ, ಮಂಗಳೆ, ಕಲ್ಯಾಣಿ, ಶಿವೆ, ವೇದಗಳಲ್ಲಿ ಋಗ್ವೇದದಲ್ಲಿ ಬುಡಕಟ್ಟಿನಲ್ಲಿ ಗ್ರಾಮದೇವತಾ ಪರಿಕಲ್ಪನೆ, ಸಪ್ತಮಾತೃಕೆಯರು ಶಕ್ತಿ ಪೀಠಗಳ ಹಿನ್ನಲೆ, ಕೋಲಾರದಮ್ಮ, ಚೇಳೂರಮ್ಮ ದೇವತೆಗಳ ಬಗ್ಗೆ ತಿಳಿಸಿಕೊಡುತ್ತವೆ.

'ಕೋಲಾರ ಜಿಲ್ಲೆಯ ಜನಪದ ಕಲೆಗಳು' ಮುಖ್ಯವಾಗಿ ಜನಪದ ಸಂಗೀತ, ನೃತ್ಯ, ನಾಟಕ, ಸಾಹಿತ್ಯ ಮೊದಲಾದವುಗಳಾಗಿವೆ. ಸಿಡೀರಣ್ಣನ ನೃತ್ಯ, ಏಕತಾರಿ, ಪಂಡರಿಭಜನೆ, ಕೀಲುಕುದುರೆ, ಕರಗ ನೃತ್ಯ, ಗಾರುಡಿಗೊಂಬೆ ಕುಣಿತ, ಮರಗಾಲು

ಕುಣಿತ, ಕೊರವಂಜಿ, ವೃತ್ತಿಗಾಯನ, ಜಂಗೀವೇಷ, ಬುರ್ರಕಥೆ, ತೊಗಲು ಗೊಂಬೆಯಾಟ, ಡಿಕಾಂಬರಿ ವೇಷ, ಲಂಬಾಣಿ ಕುಣಿತ ಬೆಂಕಿಮಾರಿ ಕುಣಿತ, ಮುತ್ಯಾಲಮ್ಮನ ಪೂಜಾಕುಣಿತ, ಕಾವಟಿ ನೃತ್ಯ, ದಾಸಯ್ಯನ ಜೋಗಿಗಳು. ವೀರಭದ್ರ ಕುಣಿತ, ಮೋಡಿವೀರರು, ಬೀರದೇವರ ಡೊಳ್ಳು, ಮನರಂಜನೆಯ ಕುಣಿತಗಳಾದ ತಮಟೆವಾದನ ಕೋಲೆ ಬಸವ, ಕೊಂಡಮಾಮ (ಕುರುಮಾಮ) ಕಲೆಗಳ ಕುರಿತಾದ ಸಮಗ್ರವಾದ ಪರಿಚಯವನ್ನು ಒದಗಿಸುತ್ತದೆ.

ಕೈಪು ಲಕ್ಷ್ಮೀ ನರಸಿಂಹಶಾಸ್ತ್ರಿಯವರ 'ಗುಂಡು ಕಲ್ಲಿನ ತಾಯಿ ಲಕ್ಷ್ಮಕ್ಕ' ತಾಯ್ತನದ ಸಿರಿಯ ಸಂಪ್ರದಾಯ ಮತ್ತು ತಾಯ್ತನದ ಮಹತ್ವವನ್ನು ಸಾರುತ್ತದೆ. ಅರವಿಂದ ಕಟ್ಟಿಯವರ 'ಜನಪದ ಕಲಾ ಸಂಪದ'ವು ಗುಹೆಗಳು, ದೊಡ್ಡ ಬಂಡೆಗಲ್ಲುಗಳ ಮೇಲೆ ಮೂಡಿದ ವಿವಿಧ ಚಿತ್ರ ಲಿಪಿಗಳನ್ನು ಬಹು ವಿಧವಾಗಿ ವಿವರಿಸುತ್ತದೆ. ರಂಗಾರೆಡ್ಡಿ ಕೋಡಿರಾಂಪುರವರರ 'ಜನಪದ ನೃತ್ಯಗಳು' ಲೇಖನದಲ್ಲಿ ಮನರಂಜನೆಯ ಪ್ರಧಾನ ಕುಣಿತಗಳಾದ ಕಂಸಾಳೆ, ವೀರಗಾಸೆ, ಗೊರವರ ಕುಣಿತ, ನವಿಲು ಕಿನ್ನರಿ ನೃತ್ಯ, ಬಾಣ ದೇವರ ಕುಣಿತ, ಹೋಳಿಕುಣಿತ, ರಂಗದ ಕುಣಿತ, ಮರಗಾಲು ಕುಣಿತ, ಹೆಜ್ಜೆ ಮೇಳ, ಕೋಲಾಟ, ಲಂಬಾಣಿ ಕುಣಿತ ಮುಂತಾದ ನೃತ್ಯಗಳ ಸಂಕ್ಷಿಪ್ತವಾದ ಪರಿಚಯವಾಗುತ್ತದೆ.

ಋತುಮಾನಕ್ಕೆ ಅನುಗುಣವಾದ 'ಜನಪದ ಅಡುಗೆಗಳು' ಇಂದಿಗೂ ಪ್ರಸ್ತುತವೆನ್ನಿಸುತ್ತದೆ. ಜನಪದರು ತಯಾರು ಮಾಡುವ ನುಚ್ಚಿನುಂಡೆ, ಹಾಲ್ ಬಾಯಿ, ಹುಣುಸೇ ಚಿಗುರು–ಬದನೆಕಾಯಿ ಹುಳಿ. ಒತ್ತು ಶಾವಿಗೆ, ರಾಗಿ ಹುರಿಹಿಟ್ಟು, ಗುಲ್‌ಪಾವಟೆ, ನೆಲ್ಲಿಕಾಯಿ ಗೊಜ್ಜು, ಬಾಳೆದಿಂಡಿನ ಮೊಸರು ಬಜ್ಜಿ, ವರಳು ಚಿತ್ರಾನ್ನ ಮುಂತಾದ ಆರೋಗ್ಯಕರವಾದ ತಿನಿಸುಗಳ ಬಗ್ಗೆ ತಿಳಿಸುವ ವಾಣಿಶ್ರೀ ಎಸ್.ಎನ್., ಕೆಲವು ತಿನಿಸುಗಳನ್ನು ತಯಾರಿಸುವ ವಿಧಾನವನ್ನು ನೀಡಿರುವುದು ಸೂಕ್ತವೆನಿಸುತ್ತದೆ.

ಕೋಲಾರ ಶ್ರೀನಿವಾಸ್‌ರವರ 'ಕೋಲಾಟಗಾರರ ಕುಣಿತ'ವು ವಿಸ್ತಾರವಾದ ಮಾಹಿತಿಯುನ್ನು ಒಳಗೊಳ್ಳದ ಪರಿಚಯವನ್ನಷ್ಟೇ ನೀಡುತ್ತದೆ. ವೈ.ಎಲ. ಹನುಮಂತರಾವ್‌ರವರ 'ಬಾರಪೋ ಮಳೆರಾಯ' ಇದೇ ರೀತಿಯಲ್ಲಿರುವಂತಹದ್ದು.

ಹೆಣ್ಣುಮಕ್ಕಳ ಜನಪದ ಕ್ರೀಡೆಗಳು ಕುಂಟೋಬಿಲ್ಲೆ, ಚೌಕಾಬಾರ, ಕಣ್ಣ ಮುಚ್ಚಾಲೆ, ಕಲ್ಲಾಟ, ಅಚ್ಚಗುಳಿಯಾಟ, ಗಟ್ಟಾಬಾರ, ಪಗಡೆ, ಹುಣುಸೆ ಬೀಜದಾಟ, ಹುಲಿ ಹಸುವಿನಾಟ, ಮುಟ್ಟುವಾಟ ಇನ್ನೂ ಮೊದಲಾದ ಗ್ರಾಮೀಣ ಹೆಣ್ಣು ಮಕ್ಕಳು ಆಡುವ ಆಟಗಳನ್ನು ಪ್ರತ್ಯೇಕಿಸಿ ಅಧ್ಯಯನ ಮಾಡುವಂತಹವರಿಗೆ ಬಿ.ಕೆ. ಮಂಜುಳರವರ ಬರಹವು ಮುಖ್ಯವೆನ್ನಿಸಿದೆ.

ಚಿಂತನಶೀಲರಾದ ಬರಗೂರು ರಾಮಚಂದ್ರಪ್ಪನವರು ಹೇಳುವಂತೆ "ಜಾನಪದವು ನಿಂತ ನೀರಲ್ಲ. ಅದು ಜಡ ಸಂಪ್ರದಾಯಗಳ ಸಮೂಹವಲ್ಲ, ವಿಕಸನಶೀಲ ಶಕ್ತಿಯನ್ನು ಒಳಗೊಂಡ ಒಂದು ಪರಿ ಕಲ್ಪನೆಯೆಂಬ ಅಂಶ. ಆರಂಭಿಕ ನಿರ್ವಚನಗಳ ಆಂತರ್ಯದಲ್ಲೇ ಅಡಗಿದೆ. ಆದ್ದರಿಂದ ಜಾನಪದವೆನ್ನುವುದು ಒಂದು ಚಲನಶೀಲ ಪರಂಪರೆ" ಎಂಬುದನ್ನು ಸ್ಮರಿಸಬಹುದು. ಇವರ ಮಾತು "ಜಾನಪದ ಸುಗ್ಗಿ"ಗೆ ಪುಷ್ಟಿಯನ್ನು ನೀಡುತ್ತದೆ.

ಪ್ರಸಿದ್ಧ ಮಾನವ ಶಾಸ್ತ್ರಜ್ಞ 'ಬೋಯಾಸ್' ದೃಷ್ಟಿಯಲ್ಲಿ "ಜಾನಪದವು ಸಂಸ್ಕೃತಿಯ ಪ್ರತಿಬಿಂಬ" ಒಂದು ಊರಿನ, ಒಂದು ಗ್ರಾಮದ ಸಂಸ್ಕೃತಿಯು ಆ ಊರಿನ ಆಚರಣೆಗಳು, ನಂಬಿಕೆಗಳು, ಚಾರಿತ್ರಿಕ, ಧಾರ್ಮಿಕ, ಇತಿಹಾಸವನ್ನು ಅವಲಂಬಿಸಿರುವುದಲ್ಲದೆ ಜನಪದರು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತಾ ಬಂದಿರುವುದರ ಫಲವೇ ಆಗಿರುತ್ತದೆಯೆಂಬುದು ನಿಜ.

ಒಟ್ಟಾರೆ ಕೋಲಾರ ಜಿಲ್ಲೆಯ 'ಜಾನಪದ ಸುಗ್ಗಿ"ಯು ಅಧ್ಯಯನ ನಡೆಸುವ ಸಂಶೋಧಿಸುವಂತಹವರಿಗೆ ಒಂದು ಸಮಗ್ರವಾದ ಜಾನಪದವನ್ನು ಕುರಿತು ಮಾಹಿತಿಯನ್ನು ನೀಡುವ ಲೇಖನಗಳ ಸಂಗ್ರಹವಾಗಿದೆ. ಒಂದೊಂದು ಕಲೆಯ ಕುರಿತಾದ ಸಮಗ್ರ ಅಧ್ಯಯನ ಅವಶ್ಯಕವಾಗಿ ಆಗಬೇಕಾಗಿದೆ. ಜಾನಪದ ಕಲೆಗಳನ್ನು ಉಳಿಸಿ, ಬೆಳೆಸಿ, ಪೋಷಿಸುವ ಪ್ರಯತ್ನ ಪ್ರತಿಯೊಬ್ಬ ಪ್ರಜ್ಞಾವಂತನ ಆದ್ಯ ಕರ್ತವ್ಯವಾಗಲಿ.

ಆರ್. ಶಾಂತ ಕಂಪಾರಹಳ್ಳಿ

ದೇಶೀಯ ಕೃಷಿ ಕುರಿತ ಚಿಂತನೆ

* **ಕೃಷಿ: ಪಾರಂಪರಿಕ ಜ್ಞಾನ**– ಸಂ. ಸ.ಚಿ. ರಮೇಶ್, ಪ್ರ–ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ಪು.೧೦+೨೦೦. ಬೆಲೆ ರೂ. ೧೨೦/–

ಇದು–ಕನ್ನಡ ವಿ.ವಿ.ಯು ನಡೆಸಿದ ಕೃಷಿ ಕುರಿತ ವಿಚಾರ ಸಂಕಿರಣವೊಂದರಲ್ಲಿ ಮಂಡಿತವಾದ ಪ್ರಬಂಧಗಳು/ಭಾಷಣಗಳ ಸಂಗ್ರಹ. ಒಟ್ಟು ಮೂವತ್ತು ಮಂದಿಯ ಬರಹ/ಭಾಷಣ/ಟಿಪ್ಪಣಿಗಳು ಇಲ್ಲಿವೆ. ಕೃಷಿಯಲ್ಲಿ ನಮ್ಮವರು ಅನುಸರಿಸಿದ್ದ ಪಾರಂಪರಿಕ ಕ್ರಮಗಳು, ಅವುಗಳ ಸೂಕ್ತತೆ, ಅಂತರ್ಜಲ ಹಾಗೂ ಭೂಸಾರ ರಕ್ಷಣೆಗೆ ಅನುಸರಿಸಿದ್ದ ಕ್ರಮಗಳು, ದೇಶೀ ತಳಿಗಳ ವೈವಿಧ್ಯ, ಕೃಷಿಗೆ ಸಂಬಂಧಿಸಿದ ವಿವಿಧ ನಂಬಿಕೆಗಳು, ಆಚರಣೆಗಳು, ಆಧುನಿಕತೆಯ ಅಳವಡಿಕೆಯಿಂದಾಗಿ ಉಂಟಾಗಿರುವ ಹಾನಿ, ವಿದೇಶೀ ಶಕ್ತಿಗಳ ಹುನ್ನಾರ, ಇಂಥ ಅನೇಕ ಸಂಗತಿಗಳು ಇಲ್ಲಿ ದಾಖಲಾಗಿವೆ. ಕೃಷಿಯ ವಿಚಾರದಲ್ಲಿ ನಮ್ಮ ದೇಶ ಪಾರಂಪರಿಕ ಕ್ರಮವನ್ನು ನಿರ್ಲಕ್ಷಿಸಿದ್ದು ಎಷ್ಟು ದೊಡ್ಡ ತಪ್ಪು

ಎಂಬುದನ್ನು ಈ ಪುಸ್ತಕ ನಮಗೆ ಮನವರಿಕೆ ಮಾಡಿಕೊಡುತ್ತದೆ. ಇಲ್ಲಿರುವ ಲೇಖನಗಳ ಪೈಕಿ ಲಕ್ಷ್ಮಪ್ಪಗೌಡ, ಚಂದ್ರು ಕಾಳೇನಹಳ್ಳಿ, ಸಿ.ಟಿ. ಗುರುಪ್ರಸಾದ್, ಹರಿಶ್ಚಂದ್ರ ದಿಗ್ಗಂಗಿಕರ್, ವೈ.ಸಿ. ಭಾನುಮತಿ ಇವರ ಲೇಖನಗಳು ಕೃಷಿ ಜಾನಪದಕ್ಕೆ ಸಂಬಂಧಿಸಿದ ವಿಪುಲ ಮಾಹಿತಿಗಳಿಂದ ತುಂಬಿವೆ. ಇಪ್ಪತ್ತೊಂದು ಸಾವಿರ ದೇಶೀ ಭತ್ತದ ತಳಿಗಳನ್ನು ಈ ದೇಶ ಹೊಂದಿತ್ತು ಎಂಬ ಮಾಹಿತಿಯೇ ರೋಮಾಂಚಕಾರಿ. ಈ ಬಹುತ್ವವನ್ನು ಮೂಲೆಗುಂಪು ಮಾಡಿ ಬಹುರಾಷ್ಟ್ರೀಯ ಕಂಪೆನಿಗಳ ಹುನ್ನಾರಕ್ಕೆ ಬಲಿಯಾಗಿ ಕೆಲವೇ ಬಗೆಯ ಧಾನ್ಯ ತಳಿಗಳನ್ನು ಬೆಳೆಯುತ್ತಿರುವುದರ, ಅದಕ್ಕಾಗಿ ರಸಗೊಬ್ಬರ ಬಳಸುತ್ತಿರುವ ಕೆಟ್ಟ ಫ್ಯಾಷನ್ನಿನ ಬಗ್ಗೆ ಈ ಪುಸ್ತಕ ನಮ್ಮಲ್ಲಿ ವಿಷಾದವನ್ನುಂಟು ಮಾಡುತ್ತದೆ.

ವಿಚಾರಸಂಕಿರಣದ ಪ್ರಬಂಧ/ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರ ತರುವುದರಲ್ಲಿ ಇರುವ ದೊಡ್ಡ ಕಷ್ಟವೆಂದರೆ ಅದರಲ್ಲಿ ಭಾಗವಹಿಸಿದವರು ತಮ್ಮ ಮಾತುಗಳನ್ನು ಬರೆದು ಕೊಡುವುದರಲ್ಲಿ ಆಲಸ್ಯ ತೋರುವುದು. ಇದನ್ನು ಅರಿತ ವಿಶ್ವವಿದ್ಯಾಲಯವು ಇಡೀ ಕಾರ್ಯಕ್ರಮವನ್ನೇ ಧ್ವನಿಮುದ್ರಣಗೊಳಿಸಿ, ಲಿಖಿತ ರೂಪದಲ್ಲಿ ನೀಡದವರ ಮಾತುಗಳನ್ನು ಲಿಪ್ಯಂತರಗೊಳಿಸಿ ಅಚ್ಚುಕಟ್ಟಾಗಿ ಸಂಪಾದಿಸಿ ಪುಸ್ತಕ ರೂಪದಲ್ಲಿ ನೀಡಿದ್ದಾರೆ. ಈ ಕಾರ್ಯದಲ್ಲಿ ಸ.ಚಿ. ರಮೇಶ್ ಅವರು ಸಂಪಾದಕರಾಗಿ ತೋರಿರುವ ಶ್ರದ್ಧೆ ಅಭಿನಂದನೀಯ.

ಎಸ್.ಪಿ. ಪದ್ಮಪ್ರಸಾದ್

ತುಳುನಾಡಿನ ಜಾನಪದಕ್ಕೆ ಸಂಬಂಧಿಸಿದ ಕೆಲವು ಒಳ್ಳೆಯ ಪ್ರಬಂಧಗಳು

* **ಬೆಳಕಿನಿಡೆಗೆ:** ಲೇ. ಲಕ್ಷ್ಮೀ ಜಿ. ಪ್ರಸಾದ್, ಪ್ರಮಾತೃ ಶ್ರೀ ಪ್ರಕಾಶನ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯ ರಸ್ತೆ, ಬೆಂಗಳೂರು-೫೬.

ಈ ಪುಸ್ತಕದಲ್ಲಿ ೨೧ ಪ್ರಬಂಧಗಳಿವೆ. ಪ್ರತಿ ಪ್ರಬಂಧವೂ ಸರಾಸರಿ ಮೂರ್‍ನಾಲ್ಕು ಪುಟಗಳಷ್ಟೇ ಇದೆ. ಆದರೂ ಸಮೃದ್ಧ ಮಾಹಿತಿ ಹಾಗೂ ಉಪಯುಕ್ತ ವಿಶ್ಲೇಷಣೆಗಳಿಂದ ಕೂಡಿವೆ. ಕ್ಷೇತ್ರಕಾರ್ಯ ಹಾಗೂ ಗಂಭೀರವಾದ ಚಿಂತನೆಗಳಿಂದ ಈ ಲೇಖನಗಳು ಒಡಮೂಡಿ ಬಂದಿರುವಂತೆನಿಸುತ್ತದೆ. ತುಳುನಾಡಿನ ಭೂತಗಳು, ದೈವಗಳು, ಕೋಲ, ನಾಗಾರಾಧನೆ-ಇಂಥವಕ್ಕೆ ಸಂಬಂಧಿಸಿದ ಪ್ರಬಂಧಗಳೇ ಹೆಚ್ಚು. ಆಸಕ್ತಿಕರವೆನಿಸುವಂತೆ ತುಳು-ಹವ್ಯಕರ ಕನ್ನಡ ಹಾಗೂ ಹವ್ಯಕ ಕನ್ನಡ ಮತ್ತು ಗೌಡರ ಕನ್ನಡದ ಭಾಷಾ ಸಾದೃಶ್ಯವನ್ನು ಕುರಿತ ಎರಡು ಲೇಖನಗಳಿವೆ. ಅದೇ ರೀತಿ ಕನ್ನಡದ ಒಂದೆರಡು ಜಾನಪದ ಕಥೆ ಗೀತೆಗಳನ್ನು ಸಮಾನ ವಸ್ತುವನ್ನು ಹೊಂದಿರುವ ತುಳು ಜಾನಪದ

ಗೀತೆಗಳೊಂದಿಗೆ ಹೋಲಿಸಿ ವಿಶ್ಲೇಷಿಸಿರುವ ಒಂದು ಲೇಖನ, ಕನ್ನಡ-ತುಳು ಜಾನಪದ ಕಾವ್ಯಗಳಲ್ಲಿ ಸಂಸ್ಕೃತಿಯ ವಿನಿಮಯವನ್ನು ವಿಶ್ಲೇಷಿಸಿರುವ ಮತ್ತೊಂದು ಲೇಖನ ಹಾಗೂ ಚೀನೀ -ಅರಬ್ ಭೂತಗಳನ್ನು ಕುರಿತ ಒಂದು ಲೇಖನ ಕೂಡಾ ಇಲ್ಲಿವೆ. ಈ ಸಂಶೋಧಕಿ ಹೇಳುವ ಕೆಲವು ನಿಷ್ಪತ್ತಿ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ತಾಳಲು ಸಾಧ್ಯ. ಆದರೆ ಒಟ್ಟಾರೆ ಶ್ರದ್ಧೆ ಹಾಗೂ ಅನುಸರಿಸುವ ಮಾರ್ಗ ಸಮರ್ಪಕವಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಕಾಡುಗೊಲ್ಲರ ಸಾಂಸ್ಕೃತಿಕ ವೀರರು

* **ಕಾಡುಗೊಲ್ಲರ ಸಾಂಸ್ಕೃತಿಕ ವೀರರು**– ಲೇ. ಎಸ್. ಶಿವಣ್ಣ, ಪ್ರ-ತುಮಕೂರು ವಿ.ವಿ. ತುಮಕೂರು. ಪುಟಗಳು ೧೬+೧೦೪, ಬೆಲೆ ರೂ. ೩೦/-

ಇದು ಎಸ್. ಶಿವಣ್ಣ ಅವರ ಕಾಡುಗೊಲ್ಲರ ಸಂಸ್ಕೃತಿ ಕುರಿತ ನಾಲ್ಕು ಲೇಖನಗಳ ಒಂದು ಪುಸ್ತಕ. ಒಂದು ನಿರ್ದಿಷ್ಟ ಸಂಸ್ಕೃತಿಯ ಸುತ್ತ ಚೆಲ್ಲಿಕೊಂಡಿರುವ ನಿಮಿತ್ತ 'ಕಾಡುಗೊಲ್ಲರ ಸಾಂಸ್ಕೃತಿಕ ವೀರರು' ಎಂಬ ಶೀರ್ಷಿಕೆಯನ್ನು ಲೇಖಕರು ನೀಡಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರರನ್ನು ಕುರಿತ ಒಂದು ಸುದೀರ್ಘ ಲೇಖನವೂ ಇಲ್ಲಿ ಸಂಚಯಗೊಂಡಿದೆ. ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯ ಮಾಲೆಯಲ್ಲಿ ಪ್ರಕಟವಾಗಿರುವ ಈ ಪುಸ್ತಕದಲ್ಲಿ ಒಂದು ನಿರ್ದಿಷ್ಟ ಬುಡಕಟ್ಟಿನ ಬಗ್ಗೆ ಬೆಳಕು ಚೆಲ್ಲಿದ್ದಾರೆ. 'ಕಾಡು ಗೊಲ್ಲರ ಅಧ್ಯಯನ ಈವರೆಗೆ ಮತ್ತು ಮುಂದೆ'– ಆರಂಭಿಕ ಲೇಖನ ಮೂರು ಪುಟದಲ್ಲಿ ಮುಕ್ತಾಯವಾಗುತ್ತದೆ. ತುಮಕೂರು, ಚಿತ್ರದುರ್ಗ, ಈ ಭೌಗೋಳಿಕ ವ್ಯಾಪ್ತಿಯೊಳಗೆ ಕಾಡುಗೊಲ್ಲರ ಪ್ರಾಬಲ್ಯವಿದೆ. ಬುಡಕಟ್ಟು ಸಂಸ್ಕೃತಿಯ ದಟ್ಟ ರೂಢಿಗೊಂಡಂತೆ, ತಮ್ಮ ಶೀಲ-ಶೌಚ ಗುಣಗಳಿಂದ ಮಾದರಿ ನಾಯಕರಾಗಿ ಬೆಳೆದ ವ್ಯಕ್ತಿಗಳೇ ಮರಣೋತ್ತರವಾಗಿ ದೈವವಾಗಿ ಬಿಡುವ, ಆಚರಣೆ, ನಂಬಿಕೆಯ ರೂಪವಾಗಿ ಐತಿಹ್ಯ ಧಾರ್ಮಿಕ ನೆಲೆಗಳಾಗಿ ಮಾತ್ರವಲ್ಲದೆ ಅಂಥ ವ್ಯಕ್ತಿಗಳ ಬಗೆಗೆ ಮೌಖಿಕ ಪರಂಪರೆಯಲ್ಲಿ ಅಪಾರ ವಾಙ್ಮಯವಿರುವುದು ಈ ಭಾಗದ ಕಾಡುಗೊಲ್ಲರ ವಿಶೇಷ. ಹಾಗಾಗಿ ಜಾಗತಿಕ ನೆಲೆಯಲ್ಲಿ ಕರ್ನಾಟಕದ, ವಿಶೇಷವಾಗಿ ದಕ್ಷಿಣ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ನಾಯಕನಾಗಿ ರೂಪುಗೊಂಡಿರುವ ಜುಂಜಪ್ಪ ಈ ಭಾಗದ ಪ್ರಮುಖ ಜನಪದ ದೈವ ಮಾತ್ರವಲ್ಲ, ಆತನ ಬಗೆಗೆ ಆರುನೂರು ಪುಟಗಳ ಕಾವ್ಯ ಸಂಗ್ರಹಗೊಂಡಿದೆ. ಗದ್ಯರೂಪದಲ್ಲೂ ಜುಂಜಪ್ಪನ ಬಗೆಗೆ ಸಾಹಿತ್ಯವಿದೆ. ಇದು ಈ ಸಂಸ್ಕೃತಿಯ ಹಿರಿಮೆಯಾದಂತೆ, ಗೊಲ್ಲ ಜನಾಂಗದ ಜೀವ ನಿರ್ವಹಣೆಯ ಎಲ್ಲ ಸಂಸ್ಕೃತಿಯೂ ಜುಂಜಪ್ಪನ ಮೂಲಕ ಪ್ರಕಟವಾಗಿರುವುದರಿಂದ ಜನಾಂಗಿಕ

ಸಂಸ್ಕೃತಿ ಅಧ್ಯಯನಕ್ಕೆ ಮತ್ತಷ್ಟು ಬನಿ ಬರುತ್ತದೆ. ಹಾಗಾಗಿ ಜುಂಜಪ್ಪ ಅಂದ ಕೂಡಲೇ ಕಾಡುಗೊಲ್ಲರು, ಕಾಡುಗೊಲ್ಲರು ಅಂದರೆ ಒಂದು ನಿರ್ದಿಷ್ಟ ನೆಲೆ ಎಂಬ ನಂಬಿಕೆ ಸಾಮಾನ್ಯವಾಗಿದೆ. ಹಾಗಾಗಿಯೇ ನಮ್ಮ ಸಂಸ್ಕೃತಿಯ ಅಧ್ಯಯನದ ಆರಂಭಿಕ ಹಂತದಿಂದ ಈ ದಿನದವರೆಗೂ ಜುಂಜಪ್ಪನ ಪ್ರಸ್ತಾಪ, ವ್ಯಾಖ್ಯಾನ ಸಾಮಾನ್ಯವಾಗಿದೆ. ಶಿವಣ್ಣನವರೂ ತಮ್ಮ ಪ್ರಬಂಧದಲ್ಲಿ ಜುಂಜಪ್ಪನನ್ನು ಕುರಿತ ಹದಿನೈದು ಪುಟಗಳ ಸುದೀರ್ಘ ಕಥನವನ್ನು ಪ್ರಕಟಿಸಿದ್ದಾರೆ. ಅದರ ಬಳಿಕ ಮೊದಲ ಲೇಖನ 'ಕಾಡುಗೊಲ್ಲರ ಅಧ್ಯಯನ ಈವರೆಗೆ ಮತ್ತು ಮುಂದೆ'– ಸಾಧಾರಣ ನೆಲೆಯಲ್ಲಿ ಆರಂಭವಾಗಿ ಅದೇ ನೆಲೆಯಲ್ಲಿ ನಿಲುಗಡೆ ಹೊಂದುತ್ತದೆ. ಏಕೆಂದರೆ ಕಾಡುಗೊಲ್ಲರ ಸಂಸ್ಕೃತಿ ಕುರಿತ ಅಧ್ಯಯನಕಾರರನ್ನು ಗುರುತಿಸುತ್ತಾ ತೀ.ನಂ. ಶಂಕರ ನಾರಾಯಣ, ಕಾಳೇಗೌಡ ನಾಗವಾರ, ಮೀರಾಸಾಬಿಹಳ್ಳಿ ಶಿವಣ್ಣ, ಗುರುಲಿಂಗಯ್ಯ, ಚಿಕ್ಕಣ್ಣ ಯಣ್ಣೆಕಟ್ಟೆ ಈ ಬಗೆಯವರನ್ನು ಮಾತ್ರ ಉಲ್ಲೇಖಿಸುತ್ತಾರೆ. ಆದರೆ ಕಾಡುಗೊಲ್ಲರ ಅಧ್ಯಯನಕ್ಕೆ ಕ್ಷೇತ್ರ ಕಾರ್ಯದ ಮೂಲಕ ಕಾರ್ಯಾರಂಭಿಸಿದ ಜೀಶಂಪ ಕರಾಕ್ಯ, ಅಂಬಳಿಕೆ ಹಿರಿಯಣ್ಣ, ಇಂಥವರ ಕಾರ್ಯವೂ ಮರೆಯಬಾರದ ಕೆಲಸ. ಜೊತೆಗೆ ಆಗಿರುವ ಕೆಲಸದ ಸಂಕ್ಷಿಪ್ತ ವಿವರಣೆಯೂ ಅಪೇಕ್ಷಣೀಯ. ಚಲುವರಾಜ್, ಸಿದ್ಧಗಂಗಯ್ಯ ಕಂಬಾಳು ಈ ತರದ ಕ್ಷೇತ್ರ ಕಾರ್ಯ ಸಂಪನ್ಮೂಲರನ್ನು ಮರೆಯಬಾರದು. ಕಾಡುಗೊಲ್ಲರ ಸಂಸ್ಕೃತಿ ಕುರಿತ ಎರಡನೆ ಲೇಖನ ಸೊಗಸಾಗಿದೆ. ಕಾಡುಗೊಲ್ಲರ ಪುರಾಣ, ಪ್ರಕೃತಿ ದೈವ, ನಂಬಿಕೆ, ನೆಲೆಗಳು, ಕಟ್ಟೆಮನೆ, ಶವ ಸಂಸ್ಕಾರ, ಮಡಿ–ಸೂತಕ– ಇವುಗಳನ್ನು ಪರಿಚಯಿಸಲು ಸಾಕಷ್ಟು ಪುರಾವೆಗಳನ್ನು ಒದಗಿಸುತ್ತಾರೆ. 'ಕಾಡುಗೊಲ್ಲರ ಸಾಂಸ್ಕೃತಿಕ ವೀರರ ಪರಿಕಲ್ಪನೆ'–ಲೇಖನ ಜನಪದಕಾವ್ಯ, ಮಹಾಕಾವ್ಯ, ವ್ಯಾಖ್ಯಾನ, ಕಾಡುಗೊಲ್ಲರು ಪಶುಪಾಲನೆಯ ದನಗಾಹಿಗಳು ದೇವರಾಗಿ ಒಂದು ಪರಂಪರೆಗೆ ಕಾರಣರಾಗಿ ಅವರ ಬಗೆಗೆ ಕಾವ್ಯ ರೂಪುಗೊಂಡ ಬಗೆಗೆ ಮಾಹಿತಿ ನೀಡುತ್ತಾರೆ. ಈ ಗ್ರಂಥದ ಕೊನೆಯ ಹಾಗೂ ನಾಲ್ಕನೆಯ ಲೇಖನ ಹೊಸಗನ್ನಡದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವೀರರ ಅವಲೋಕನ ಎಂಬ ಹೆಸರಲ್ಲಿ ತುಮಕೂರು ಜಿಲ್ಲೆಯ ಕಾಡುಗೊಲ್ಲ ಜನಾಂಗದ ಸಾಂಸ್ಕೃತಿಕ ವೀರರ ಸಂಕಥನಗಳನ್ನು ಜೋಡಿಸಲಾಗಿದೆ. ಜುಂಜಪ್ಪ, ಹೊನ್ನೇಮರದ ಈರಣ್ಣ, ಅಪ್ಪಣಗೌಡ, ಬೆಳವಾಡಿ ಅಜ್ಜಪ್ಪ, ಬಂದಕುಂಟೆ ಈರಚಿಕ್ಕಣ್ಣ, ಕುಂಬಾರಣ್ಣ, ಅಜ್ಜಪ್ಪ, ಮಹದೀರಣ್ಣ, ಪೂಜಾರಿ ಮರಿಯಣ್ಣ, ವೀರ ಮುದ್ದಣ್ಣ – ಈ ಸಾಂಸ್ಕೃತಿಕ ವೀರರ ಸಂಕಥನಗಳಿವೆ. ವಾಸ್ತವವಾಗಿ ಈ ಪುಸ್ತಕ ರೂಪುಗೊಳ್ಳಬೇಕಾದ ದಿಕ್ಕು, ಆಶಯ, ಇದೇ ನಾಯಕರ ವಿಸ್ತಾರ ಅಧ್ಯಯನವಾಗ ಬಹುದಿತ್ತು. ಪುಸ್ತಕವನ್ನು ಕೈಗೆತ್ತಿಕೊಂಡ ಆಸಕ್ತರ ನೆಲೆ ಮೂಡುವುದು ಈ ನಾಯಕರ ಚಾರಿತ್ರಿಕ ಬೆಳವಣಿಗೆಯ ಸುತ್ತ. ಇಲ್ಲಿ ಜುಂಜಪ್ಪನ ಬಗೆಗೆ, ತಿರುಮಲ ದೇವರ ಹಟ್ಟಿಯ ಎಂಬತ್ತರ ವಯಸ್ಸಿನ ಸಣ್ಣತಿಮ್ಮಯ್ಯ ಹೇಳಿದ ಜುಂಜಪ್ಪನ ಕಾವ್ಯ ಭಾಗದ ಕಥಾ

ರೂಪವನ್ನೂ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಚಿತ್ರದುರ್ಗ, ತುಮಕೂರು ಭಾಗಗಳಲ್ಲಿ ಜುಂಜಪ್ಪನ ಕಥೆ ಏಕಪ್ರಕಾರವಾಗಿ ಓಡುವುದಿಲ್ಲ. ಇಲ್ಲಿಯೂ ಹಾಗೆಯೇ ಆಗಿದ್ದು, ಹಲವು ವೈರುಧ್ಯಗಳಿವೆ. ಉದಾ: ಜುಂಜಪ್ಪ ಹಾಗೂ ಆತನ ತಮ್ಮಂದಿರಿಗೆ ವಿಷದ ಊಟ ಬಡಿಸಿದ ಸೋದರ ಮಾವಂದಿರು, ಸ್ಯಾವೆ ಹುಲ್ಲು ಬಣವೆಗೆ ಕೂಡಿ ಬೆಂಕಿ ಹಚ್ಚಿದರು ಎನ್ನುತ್ತಾರೆ. ಜೊತೆಗೆ ಈ ಭಾಗದಲ್ಲಿ ಬಂದಿರುವ ಸಾಂಸ್ಕೃತಿಕ ವೀರರಲ್ಲಿ ಅಪ್ಪಣ್ಣಗೌಡ, ಕುಂಬಾರಹಳ್ಳಿ ಅಜ್ಜಪ್ಪ, (ಜಡೆಗೊಂಡ) ವೀರಮುದ್ದಣ್ಣ ಈ ಬಗೆಯ ಸಾಂಸ್ಕೃತಿಕ ವೀರರ ಪರಿಚಯ ಮೀರಾಸಾಬಿಹಳ್ಳಿ ಶಿವಣ್ಣ ಅವರ 'ಕಾಡುಗೊಲ್ಲ ಬುಡಕಟ್ಟು ವೀರರು' ಕೃತಿಯಲ್ಲಿ ಪ್ರಕಟವಾಗಿದೆ. ಅಂಥದೇ ರೂಪಗಳು ಚರ್ವಿತ ಚರ್ವಣದಂತೆ ಪ್ರಕಟವಾಗುತ್ತವೆ. ಈ ಭಾಗದ ಒಳಹೊಕ್ಕಂತೆಲ್ಲಾ ಅದೇ ತೆನೆ, ಹೂ–ಹಣ್ಣುಗಳು ಲಭ್ಯವಾಗುತ್ತವೆ. ಹೊಸಗನ್ನಡದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವೀರರ ಅವಲೋಕನ – ಎಂದರೆ ಇಲ್ಲಿ ಸಹಜವಾಗಿಯೇ ಕಾಡು ಗೊಲ್ಲರಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತು ಹಳೆಗನ್ನಡ, ನಡುಗನ್ನಡದಲ್ಲೂ ವೀರ ನಾಯಕರು ಇದ್ದಾರೆಯೇ? ಹಾಗಾದರೆ ಅಂಥವರ್‍ಯಾರು– ಎಂಬ ಸಹಜ ಕುತೂಹಲ ಮೂಡುತ್ತದೆ. ಕಾಡುಗೊಲ್ಲರ ಸಂಸ್ಕೃತಿಗೆ ಹೊಂದಿಕೊಂಡ ಸಾಂಸ್ಕೃತಿಕ ಹಿನ್ನೆಲೆ ಸಾರುವ 'ಧರಣಿಮಂಡಲ ಮಧ್ಯದೊಳಗೆ' ಪುಣ್ಯಕೋಟಿಯ ಕಥನವೇ ಈವರೆಗಿನ ಉಪಲಬ್ಧ ಮಾಹಿತಿಯ ಪ್ರಕಾರ ಮೊದಲನೆಯದು. ಹಾಗಿರುವಾಗ – ಇತರೆ ಸಾಹಿತ್ಯ ಪ್ರಕಾರದಲ್ಲಿ ಕಾಣಸಿಗುವ ಸಾಂಸ್ಕೃತಿಕ ವೀರರು ಯಾರು ಯಾರು ಎಂಬ ಕುತೂಹಲ ಕೆರಳಿಸಿರುವ ಎಸ್. ಶಿವಣ್ಣನವರು ಮುಂದಿನ ಅಧ್ಯಯನಗಳಲ್ಲಿ ಸ್ಪಷ್ಟ ಪಡಿಸಬೇಕಾಗುತ್ತದೆ. ಜೊತೆಗೆ ಈ ಪುಸ್ತಕಕ್ಕೆ ಮಿತಿಯೂ ಇದೆ. ತುಮಕೂರು ಜಿಲ್ಲೆ ಅದರಲ್ಲೂ ವಿಶೇಷವಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಾಡುಗೊಲ್ಲರ ಅಧ್ಯಯನ ಇದಾಗಿದೆ. ಇವಲ್ಲದೆ ಕಾಡುಗೊಲ್ಲರ ಸಂಸ್ಕೃತಿಯು ಅನಾವರಣಗೊಳ್ಳುವ ಹದಿಮೂರು ಭಾವಚಿತ್ರಗಳು ಚೆನ್ನಾಗಿವೆ. ಜೊತೆಗೆ ಗ್ರಂಥ ಸೂಚಿಯಲ್ಲಿ ಮೂವತ್ತಕ್ಕೂ ಮಿಕ್ಕು ಲೇಖಕರ ಗ್ರಂಥ ಲೇಖನಗಳ ವಿವರಣೆ ನೀಡಿದ್ದರೂ ಇವರ ಬರಹಕ್ಕೆ ಈ ಎಲ್ಲವುಗಳಿಂದ ಉಪಯೋಗವಾದಂತಿಲ್ಲ. ಏಕೆಂದರೆ ಗ್ರಂಥದ ಒಳಗೆ ಈ ಪುಸ್ತಕಗಳನ್ನು ಓದಿದ ಅನುಭವ, ಚರ್ಚೆಗೆ ಬಳಸಿಕೊಂಡ ಸಂವಾದದ ಮಾದರಿ ಕಾಣುವುದಿಲ್ಲ. ಆದರೂ ಕಾಡುಗೊಲ್ಲರ ಸಂಸ್ಕೃತಿಗೆ ಏನೆಲ್ಲಾ ಕೊಡುಗೆ ಸಂದಿದೆ ಎಂಬುದು ಇದರಿಂದ ಅರಿವಾಗುತ್ತದೆ.

ಎಸ್. ಶಿವಣ್ಣ ಕಾಡುಗೊಲ್ಲರ ಸಂಸ್ಕೃತಿಯಿಂದ ಬಂದವರು. ಭಾಷಾ ವಿಜ್ಞಾನದ ವಿದ್ಯಾರ್ಥಿ. ತನ್ನ ಬುಡಕಟ್ಟಿನ ಸಂಸ್ಕೃತಿಯ ಅನನ್ಯ ಕಾಳಜಿ ಕಾಡುಗೊಲ್ಲರ ಸಂಸ್ಕೃತಿಗೆ ಕೊಡುಗೆಯಾಗಬೇಕು. ಬುಡಕಟ್ಟು ಸಂಸ್ಕೃತಿಯಲ್ಲೇ ಮುಂಚೂಣಿಯಲ್ಲಿ ನಿಲ್ಲುವ

ಕಾಡುಗೊಲ್ಲರ ಸಾಂಸ್ಕೃತಿಕ ಅಧ್ಯಯನದ ನೆಲೆ, ಹೊಸದನ್ನು ಶೋಧಿಸುವ ದಿಕ್ಕಿನತ್ತ ಹೊರಳಬೇಕು. ಸಂಗ್ರಹ, ಸಂಪಾದನೆ, ಸಂಶೋಧನೆಯ ಕ್ಷೇತ್ರ ಕಾರ್ಯಾಧಾರಿತ ಕೆಲಸ ಇವರನ್ನು ಸ್ವಾಗತಿಸುತ್ತಿದೆ. ಈ ಗ್ರಂಥ ಅಂಥ ಕೆಲಸಕ್ಕೆ ಮುನ್ನುಡಿ ಬರೆದಿದೆ.

ಚಿಕ್ಕಣ್ಣ ಯಣ್ಣೆಕಟ್ಟೆ

ಜನಪದ ಕಾವ್ಯದ ಸುಂದರ ಗದ್ಯಾನುವಾದ

* **ಪಿರಿಯಾಪಟ್ಟಣದ ಕಾಳಗ–ಕಥಾಧಾರೆ:** ಲೇ. ಪಿ.ಕೆ. ರಾಜಶೇಖರ,
ಪ್ರ: ಕೀರ್ತನ್ ಗ್ರಾಫಿಕ್ಸ್, ಮೈಸೂರು. ಪು. ೧೬೮, ಬೆಲೆ ರೂ. ೧೫೦/–

ನಮ್ಮ ಒಳ್ಳೆಯ ಜಾನಪದ ತಜ್ಞರಲ್ಲೊಬ್ಬರಾದ ಪಿ.ಕೆ. ರಾಜಶೇಖರ ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕ್ಕೆ 'ಮಲೆ ಮಾದೇಶ್ವರ' ದಂಥ ಮಹಾಕಾವ್ಯವನ್ನು 'ಪಿರಿಯಾಪಟ್ಟಣದ ಕಾಳಗ'ದಂತಹ ಶ್ರೇಷ್ಠ ವೀರಕಾವ್ಯವನ್ನೂ ಸಂಪಾದಿಸಿಕೊಟ್ಟವರು. ಇದಲ್ಲದೆ ಮಾರ್ಗದರ್ಶಕರಾಗಿ ಹಾಗೂ ಹಾಡುಗಾರರಾಗಿ ಅವರು ಸಲ್ಲಿಸಿರುವ ಜಾನಪದ ಸೇವೆಯೂ ಗಮನಾರ್ಹವಾದದ್ದೇ.

ಇದೀಗ ಅವರು ತಾವು ಹಿಂದೆ ಪ್ರಕಟಿಸಿದ್ದ 'ಪಿರಿಯಾಪಟ್ಟಣದ ಕಾಳಗ' ಎಂಬ ದೊಡ್ಡ ವೀರಕಾವ್ಯವನ್ನು ಗದ್ಯರೂಪದಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಇದೂ ಸಹ ಸುಲಭದಲ್ಲಿ ಆದ ಕೆಲಸವಲ್ಲವೆಂಬುದನ್ನು ಇದನ್ನು ಓದಿದಾಗ ತಿಳಿಯುತ್ತದೆ.

ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣವು ರಾಜಧಾನಿಯಾಗಿದ್ದು ಅವರ ಕೈಕೆಳಗಿನ ದಳವಾಯಿಯೊಬ್ಬರು ಮೈಸೂರನ್ನು ಆಳುತ್ತಿದ್ದ ಕಾಲದಲ್ಲಿ ಪಿರಿಯಾಪಟ್ಟಣವು ಮೈಸೂರಿಗಿಂತ ಪ್ರಬಲವಾದ ರಾಜ್ಯವಾಗಿದ್ದು ಅದರ ಅರಸನಾದ ವೀರರಾಜನು ತುಂಬ ಶೂರನಾದ ಹಾಗೂ ಅರಿಭಯಂಕರನಾಗಿದ್ದ ಪ್ರಭುವಾಗಿ ಅದನ್ನು ಆಳುತ್ತಿದ್ದನು. ಇವನ ತಂಗಿಯನ್ನು ಮೈಸೂರು ದಳವಾಯಿಗೆ ಮದುವೆ ಮಾಡಿಕೊಟ್ಟಿದ್ದು ಅವನ ತಂಗಿಯೇ ವೀರರಾಜನ ಪಟ್ಟ ಮಹಿಷಿಯಾಗಿದ್ದಳು. ಹೀಗೆ ಸಂಬಂಧವಿದ್ದರೂ ಮೈಸೂರು ರಾಜರ ಬಗ್ಗೆ ತಿರಸ್ಕಾರ ಭಾವನೆ ವೀರರಾಜನಿಗಿತ್ತು. ತನ್ನದು ಗಂಡುರಾಜ್ಯವೆಂದೂ ಮೈಸೂರು ಹೆಣ್ಣು ರಾಜ್ಯವೆಂದೂ ಭಾವನೆ ತಾಳಿದ್ದನು. ಇದಕ್ಕೆ ತಕ್ಕ ಹಾಗೆ ಮೈಸೂರು ಅರಮನೆಗೆ ಹೋದ ತನ್ನ ಪಟ್ಟದ ರಾಣಿಗೆ ಅಲ್ಲಿ ಸ್ವತಃ ತನ್ನ ತಂಗಿಯೇ 'ಬಂಜೆ' ಎಂದು ಅಪಮಾನಿಸಿ ಕಳಿಸಿದ್ದೂ ಆಯಿತು. ಮುಂದೆ ಚಾಮುಂಡಿಯ ವರದಿಂದ ಈ ಪಟ್ಟದ ರಾಣಿ ಹೆಣ್ಣು ಮಗುವನ್ನು ಹೆರುತ್ತಾಳೆ. ಆದರೆ ಆ ಮಗುವಿನಿಂದ ರಾಜ್ಯಕ್ಕೆ ಕೇಡು ಎಂದು ಜ್ಯೋತಿಷ್ಯರು ಹೇಳಿದ್ದರಿಂದ ಆ ಮಗುವನ್ನು ಕೊಲ್ಲುವಂತೆ ಹೇಳಿ ಕಳಿಸುತ್ತಾನೆ. ಆದರೆ ರಾಣಿ ಆ ಮಗು ಗುಪ್ತವಾಗಿ ದೂರದಲ್ಲಿ ಬೆಳೆಯುವಂತೆ ಮಾಡುತ್ತಾಳೆ. ಮುಂದೆ ಪ್ರಾಯಕ್ಕೆ ಬಂದ ಆ ಮಗುವನ್ನು ಹೊರಗಡೆ

ಕಂಡ ವೀರರಾಜ ಅವಳು ತನ್ನ ಮಗಳೇ ಎಂದರಿಯದೆ ಅವಳನ್ನು ಮದುವೆಯಾಗಲು ಮುಂದುವರೆಯುತ್ತಾನೆ. ಆಗ ರಾಣಿ ಪಟ್ಟದ ಮಲ್ಲಮ್ಮ ಮೈಸೂರಿನಲ್ಲಿನ ತನ್ನ ತಮ್ಮನನ್ನು ಗುಟ್ಟಾಗಿ ಕರೆಸಿ ಕೊಂಡು ರಾತ್ರೋರಾತ್ರಿ ಆತನಿಗೆ ಮಗಳನ್ನು ಕೊಟ್ಟು ಮದುವೆಮಾಡಿ ಕಳಿಸಿಬಿಡುತ್ತಾಳೆ.

ಇದೇ 'ಪಿರಿಯಾಪಟ್ಟಣದ ಕಾಳಗ'ಕ್ಕೆ ನಾಂದಿಯಾಗುತ್ತದೆ. ವೀರರಾಜ 'ಗಂಡುಸಾದರೆ ಯುದ್ಧಕ್ಕೆ ಬಾ' ಎಂದು ಓಲೆ ಕಳಿಸುವುದು, ಮೈಸೂರಿನ ದಳವಾಯಿ ಕೆರಳುವುದು, ಯುದ್ಧದ ಸಿದ್ಧತೆಗಳು, ಸೈನ್ಯದ ವಿವರಗಳು–ಆಯುಧ, ಆನೆ, ಕುದುರೆ, ಕಾಲಾಳು, ಧವಸ, ಧಾನ್ಯ– ಇತ್ಯಾದಿಗಳ ಸಂಗ್ರಹ, ದೊರೆ–ಸೈನಿಕ ಸಂವಾದ, ಹರಕೆ ಇತ್ಯಾದಿಗಳ ವಿವರಗಳು, ಚಾಮುಂಡಿ ಸಿಟ್ಟಾಗುವುದು ಮತ್ತು ಅನಂತರ ಒಲಿಯುವುದು, ದೇವತೆಗಳು ಕೂಡ ಪಕ್ಷ ಕಟ್ಟಿಕೊಂಡು ಸೋಲು ಗೆಲುವುಗಳನ್ನು ಉಂಟು ಮಾಡುವುದು, ಗ್ರಾಮಗಳ ನಾಶದ ವಿವರಗಳು–ರಾಜ ಸ್ವತಃ ತನ್ನ ರಾಣಿಯರನ್ನು ಕೊಂದು ಯುದ್ಧಕ್ಕೆ ಬರುವುದು–ಇಂಥ ಅನೇಕ ಹೃದಯಸ್ಪರ್ಶಿ ವಿವರಗಳು ಕಾವ್ಯದಲ್ಲಿದ್ದು ಅದನ್ನು ಈ ಗದ್ಯಾನುವಾದದಲ್ಲಿ ಪರಿಣಾಮಕಾರಿಯಾಗಿ ಅದೇ ಶಬ್ದಸಮುಚ್ಚಯಗಳನ್ನು ಉಳಿಸಿಕೊಂಡು, ಅಲ್ಲಲ್ಲಿ ಮೂಲಕಾವ್ಯದ ಸಾಲುಗಳನ್ನು ಉಲ್ಲೇಖಿಸುತ್ತಾ ನಿರೂಪಿಸಲಾಗಿದೆ. ಇದು ಸ್ವಲ್ಪ ಕಷ್ಟದ ಕೆಲಸವೇ. ಲೇಖಕರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ನಿರೂಪಣಾ ಧಾಟಿಯಲ್ಲಿ ಜನಪದ ಶೈಲಿಯನ್ನು ಉದ್ದೇಶಪೂರ್ವಕವಾಗಿ ಉಳಿಸಿಕೊಳ್ಳಲಾಗಿದೆ. ಆರಂಭದಲ್ಲಿ ಒಂದು ಪ್ರತ್ಯೇಕ ಅಧ್ಯಾಯವನ್ನು ಬರೆದು ಪಿರಿಯಾಪಟ್ಟಣದ ಬಗೆಗಿನ ಐತಿಹಾಸಿಕ, ಭೌಗೋಳಿಕ ವಿವರಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

ಪುಸ್ತಕದಲ್ಲಿ ಅನೇಕ ಚಿತ್ರಗಳನ್ನು ಬರೆಸಿ ಕತೆಗೆ ಪೋಷಕವಾಗುವಂತೆ ಹಾಕಲಾಗಿದೆ. ಒಂದು ದೊಡ್ಡ ಜಾನಪದ ಕಾವ್ಯದ ಗದ್ಯಾನುವಾದ ಹೇಗಿರಬೇಕೆಂಬುದಕ್ಕೆ ಮಾದರಿಯಾಗುವಂತಿದೆ ಈ ಕೃತಿ. ಮೂಲ ಕಾವ್ಯದ ವ್ಯಕ್ತಿಗಳ ಬಗ್ಗೆ ಒಂದು ಟಿಪ್ಪಣಿ ಕೊನೆಯಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಕೃತಿಗೆ ಇರಿಸಿರುವ ಬೆಲೆಯೂ ಹೆಚ್ಚೇ ಎನಿಸುತ್ತದೆ.

ಎಸ್.ಪಿ. ಪದ್ಮಪ್ರಸಾದ್

ಬ್ಯಾರಿಗಳ ಬಗೆಗೆ ವಿವರಪೂರ್ಣ ಅಧ್ಯಯನ

* **ತುಳುನಾಡಿನ ಬ್ಯಾರಿಗಳು:** ಇಂಗ್ಲೀಷ್ ಮೂಲ: ಪ್ರೊ. ಬಿ. ಎಂ. ಇಚ್ಲಂಗೋಡು. ಕನ್ನಡಕ್ಕೆ ತುಫೈಲ್ ಮಹಮ್ಮದ್. ಪ್ರ: ಕರ್ನಾಟಕ ಬ್ಯಾರಿ ಅಕಾಡೆಮಿ. ೧೨+೧೯೮. ಬೆಲೆ ರೂ. ೧೩೦–

ಇದೊಂದು ಜನಾಂಗಿಕ ಅಧ್ಯಯನ. ಜನಾಂಗಿಕ ಅಧ್ಯಯನದಿಂದಾಗಿ ಆಯಾಯ ಜನಾಂಗದ ಸಂಸ್ಕೃತಿ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ನಿರ್ವಹಣೆ ಮೊದಲಾದ ಸಾಂಸ್ಕೃತಿಕ

ಅಧ್ಯಯನ ಹಾಗೂ ಈ ಮುಖೇನ ಭಿನ್ನ ನೆಲೆಯ ಸಾಂಸ್ಕೃತಿಕ ಆಯಾಮಗಳ ಒಂದು ಚಿತ್ರ ಮೂಡಲೂ ಇದು ಸಹಕಾರಿಯಾಗುತ್ತದೆ. ಈ ದಿಸೆಯಲ್ಲಿ 'ತುಳುನಾಡಿನ ಬ್ಯಾರಿಗಳು' ತೀವ್ರ ಕುತೂಹಲಕಾರಿ ಅಧ್ಯಯನವಾಗಿದೆ. ಬಿ.ಎಂ. ಇಚ್ಲಂಗೋಡು ಅವರು ಪಿಎಚ್.ಡಿ. ಪದವಿಗಾಗಿ ಬರೆದ ಪ್ರಬಂಧ. ಇಂಗ್ಲೀಷಿನಲ್ಲಿ ರಚನೆಯಾಗಿದೆ. ಈ ಪ್ರಬಂಧವನ್ನು ಕನ್ನಡಕ್ಕೆ ತುಫೈಲ್ ಮುಹಮ್ಮದ್ ಅನುವಾದಿಸಿದ್ದಾರೆ. ಬ್ಯಾರಿ ಜನಾಂಗ ಮುಸ್ಲಿಂ ಜನಾಂಗದ ಒಂದು ವರ್ಗ ಅಥವಾ ಅರಬ್ ಜನಾಂಗವೇ ಕ್ರಿ.ಶ. ೭ನೇ ಶತಮಾನದ ಹೊತ್ತಿಗೆ ಬ್ಯಾರಿ ಜನಾಂಗವಾಗಿ ರೂಪಾಂತರಗೊಂಡರೆಂದು ಸಂಶೋಧಕರು ವಿವರಿಸುತ್ತಾರೆ. ವ್ಯಾಪಾರದ ಸಲುವಾಗಿ ಕರಾವಳಿ ಪ್ರದೇಶಗಳಾದ ತುಳುನಾಡು, ಮಲಬಾರ್ ಪ್ರದೇಶ, ಇಲ್ಲಿ ನೆಲಸಿದ ಅರಬರು ಸ್ಥಳೀಯ ಮಹಿಳೆಯರನ್ನು ವಿವಾಹವಾಗಿ, ಒಂದು ಬಗೆಯ ವರ್ಗ ಸಂಘರ್ಷ–ಸಂಕರ್ಷಣದಿಂದಾಗಿ ಬ್ಯಾರಿಗಳಾದರು ಎನ್ನುವುದನ್ನು ಲೇಖಕರು ಪ್ರಬಂಧದ ಆರಂಭದಲ್ಲಿ ಕುತೂಹಲಕರವಾಗಿ ವಿವರಿಸುತ್ತಾರೆ. ಬ್ಯಾರಿ ಎಂಬ ಪದದ ಬಗೆಗೂ ವಿವರಿಸುವ ಲೇಖಕರು ಬ್ಯಾರಿ ಎಂಬುದು 'ಬಹಾರಿ' ಎಂಬ ಅರಬಿಕ್ ಶಬ್ದದಿಂದ ಬಂದಿದೆ ಎನ್ನುತ್ತಾರೆ. ಸ್ಥಳೀಯ ವಿದ್ವಾಂಸರು ಹೇಳುವ ಬ್ಯಾರಿ ಪದ ತುಳುನಾಡಿನ ವ್ಯಾಪಾರಿ ಪದಕ್ಕೆ ಪರ್ಯಾಯವಾಗಿ ಬಳಸುವ ಪದ ಅಲ್ಲವೆಂದೂ ಇದಕ್ಕೆ ಪೂರಕವಾಗಿ ಬ್ಯಾರಿ ಭಾಷೆ, ತುಳು, ಮಲೆಯಾಳಿ ಭಾಷೆಗಿಂತ ಭಿನ್ನವಾದ, ಪ್ರತ್ಯೇಕವಾದ ಲಿಖಿತ ಭಾಷಾ ರೂಪವನ್ನು ಹೊಂದಿದ್ದು, 'ಬ್ಯಾರಿ'ಗಳು ಲಾಗಾಯ್ತಿನಿಂದ ಮಲೆಯಾಳಿ ಭಾಷೆಗಿಂತ ಬೇರೆಯಾದ 'ಬಟ್ಟೆಲಿಪಿ'ಯನ್ನು ಬಳಸುತ್ತಿದ್ದರೆಂದು, ಬ್ಯಾರಿಗಳು ಕೇರಳದ ಉಲಮಾರನ್ನು ಅವಲಂಬಿಸಿದ ಫಲವಾಗಿ ಇವರ ಮೇಲೆ ಮಾಪ್ಲಾ ಸಂಸ್ಕೃತಿಯ ಹಾಗೂ ಮಲೆಯಾಳಂ ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಕಾಣಿಸಿಕೊಂಡಿದೆ ಎಂದೂ ಲೇಖಕರು ಅಭಿಪ್ರಾಯ ಪಡುತ್ತಾರೆ.

ಒಟ್ಟು ಏಳು ಅಧ್ಯಾಯಗಳಲ್ಲಿ ವರ್ಗೀಕರಣಗೊಂಡಿರುವ ಬ್ಯಾರಿ ಜನಾಂಗಿಕ ಅಧ್ಯಯನ, ೧೮೩ ಪುಟಗಳಲ್ಲಿ ಬ್ಯಾರಿ ಜನಾಂಗದ ಸಮಗ್ರ ವಿವರಗಳನ್ನು ಲೇಖಕರು ಸೊಗಸಾಗಿ ನಿರೂಪಿಸುತ್ತಾರೆ. ಬ್ಯಾರಿ ಜನಾಂಗ ದಟ್ಟವಾಗಿ ನೆಲಸಿರುವ ಬಾರಕೂರು, ಮಂಗಳೂರು, ಕಾಸರಗೋಡು ಈ ಪ್ರದೇಶದ ಭೌಗೋಳಿಕ ಪರಿಸರ, ಮುಸ್ಲಿಮರ ಪ್ರಾಬಲ್ಯ, ಈ ಭಾಗದ ಆರ್ಥಿಕ, ಧಾರ್ಮಿಕ ಪರಿಸರ, ಈ ಹಿಂದೆ ಕ್ರೈಸ್ತರ ಪ್ರಾಬಲ್ಯ, 'ಸಂಗಮ್' ಕೃತಿಯ ದಾಖಲೆಗಳೊಂದಿಗೆ ವಿವರಿಸುವಾಗ ಸಾಕಷ್ಟು ಅಂಕಿ ಅಂಶಗಳನ್ನು ನೀಡಿರುವುದು ಇಲ್ಲಿನ ವಿಶೇಷವಾಗಿದೆ. ಮೊದಲಿಗೆ ಈ ಭಾಗ ಪೋರ್ಚುಗೀಸರ ಹಿಡಿತದಲ್ಲಿದ್ದು, ಅವರೇ ಈ ಭಾಗಗಳಿಗೆ 'ಕೆನರಾ' ಎಂದು ಕರೆದಿರುವ, ಈ ಹಿಂದೆ ತುಳುನಾಡು ಎಂದು ಕರೆದಿರುವ ಅಂಶಗಳನ್ನು ವಿವರಿಸುತ್ತಾರೆ. ವಿಶೇಷವಾಗಿ ಕೆಳ ವರ್ಗದ ಹಿಂದುಗಳು ಮೇಲ್ಜಾತಿಯವರ ಕಿರುಕುಳ, ಅಸ್ಪೃಶ್ಯತೆಯ ಕಾರಣದಿಂದಾ

ಗಿಯೇ ಗಣನೀಯವಾಗಿ ಮುಸ್ಲಿಂ ಮತಕ್ಕೆ ಪರಿವರ್ತನೆಯಾದರೆಂದು ಲೇಖಕರು ಹೇಳುತ್ತಾರೆ. ಬಹಿಷ್ಕೃತರಿಗೆ, ಇಸ್ಲಾಮ್ ಧರ್ಮವು ಕರಾವಳಿ ಭಾಗದಲ್ಲಿ ನಾಗರಿಕ ಸಮಾನತೆಯ ಬಹುದೊಡ್ಡ 'ಕೊಡಿಗೆಯನ್ನು ನೀಡಿ'ತೆಂದೂ ಈ ಮೂಲಕವೇ 'ಬ್ಯಾರಿ' ಜನಾಂಗ ಬೆಳೆಯಲು, ಜನಪ್ರಿಯವಾಗಿ ರೂಪುಗೊಳ್ಳಲು ಪ್ರೇರಣೆಯಾಯಿತೆಂದೂ ಲೇಖಕರು ಹೇಳುತ್ತಾರೆ. ಆದರೆ ಇದಕ್ಕೆ ಪೂರಕ ಸಮರ್ಥನೀಯ ದಾಖಲೆಗಳೇನನ್ನೂ ಒದಗಿಸದಿರುವುದರಿಂದ ಈ ಹೇಳಿಕೆಗೆ ವಿಶೇಷ ಮಹತ್ವವೇನೂ ಪ್ರಾಪ್ತವಾಗುವುದಿಲ್ಲ. ಈ ಜನಾಂಗದ ಬೆಳವಣಿಗೆಯಲ್ಲಿ ಸಹಕರಿಸಿದ ಅರಸೊತ್ತಿಗೆ, ಚೌಟರು, ಬಂಗರು, ಝುಮೋರಿಯನ್ನರು (ಕಲ್ಲಿಕೋಟೆ) ಮಿಷನರಿ, ಸೂಫಿಸಂತರು, ಬಿಜಾಪುರದ ಸುಲ್ತಾನರು, ಮುಸ್ಲಿಮ್ ವ್ಯಾಪಾರದ ಪ್ರಭಾವ – ಇವುಗಳನ್ನು ಗುರುತಿಸುತ್ತಾರೆ. ಜೊತೆಗೆ ತುಳುನಾಡಿನ ೨೩ ಮುಸ್ಲಿಂ – 'ಬ್ಯಾರಿ' ಜನಾಂಗದ ಪ್ರಬಲ ನೆಲೆ, ಜನಸಂಖ್ಯೆಯ ವಿವರಗಳನ್ನೂ ಖಚಿತವಾಗಿ ಒದಗಿಸಿದ್ದಾರೆ.

ಮೂರನೇ ಅಧ್ಯಾಯದಲ್ಲಿ ಮುಸ್ಲಿಮರ ಆರ್ಥಿಕ ಜೀವನದ ಬಗೆಗೆ ವಿಸ್ತೃತ ಮಾಹಿತಿ ಒದಗಿಸಿದ್ದಾರೆ. ಅಕ್ಕಿ, ಕೊಬ್ಬರಿ, ಮೀನು, ಬಟ್ಟೆ, ಚಿನ್ನ, ಖರ್ಜೂರ ಮುಂತಾದವುಗಳನ್ನು, ಮುಂಬೈ, ಅರೆಬಿಯಾ, ಸಿಲೋನ್, ಯೂರೋಪ್ ರಾಜ್ಯಗಳೊಂದಿಗೆ ವ್ಯಾಪಾರ ವ್ಯವಹಾರವನ್ನು ನಡೆಸಿರುವುದನ್ನು ವಿವರಿಸುತ್ತಾರೆ. ವಿಶೇಷವಾಗಿ ಇಲ್ಲಿ ಬ್ಯಾರಿ ಜನಾಂಗವನ್ನು ಪ್ರತ್ಯೇಕವಾಗಿ ನೋಡದೆ, ಮುಸ್ಲಿಮರ ಜೊತೆಗೆ ಗುರುತಿಸಿರುತ್ತಾರೆ. ನಂತರದ ಬೆಳವಣಿಗೆಯಲ್ಲಿ ಬ್ಯಾರಿಗಳ ನಂಬಿಕೆ, ಆಚರಣೆ, ಇಲ್ಲೆಲ್ಲಾ ಕರಾವಳಿ ಪ್ರದೇಶದ ಪ್ರಮುಖ ಮುಸ್ಲಿಮರ ಮಸೀದಿ, ಜನ ವಸತಿ ಪ್ರದೇಶಗಳ ವಿವರಣೆಯ ಅಂಕಿ ಅಂಶ ದೊರೆಯುತ್ತದೆ. ಜೊತೆಗೆ ಬಾಜಿ ಅಬ್ದುಲ್ಲಾ ಹಾಜಿ ಮೊದಲಾದ ಬ್ಯಾರಿ ಮೂಲ ಪುರುಷರು, ಮುಸ್ಲಿಮರ ಹಬ್ಬ, ಉರೂಸ್ ಮೊಹರ್ರಮ್, ಈದ್‌ಮಿಲಾದ್, ರಾತೀಬ್, ಝಿಕ್ರ್, ಬರಾಹತ್ ಇವುಗಳನ್ನು ವಿವರಿಸಿ, ಮುಸ್ಲಿಮರ ಸಂಪ್ರದಾಯ ಮತ್ತು ಮೂಢನಂಬಿಕೆಗಳನ್ನೂ ಲೇಖಕರು ನಿರೂಪಿಸುತ್ತಾರೆ. ಪುಟ್ಟದಾಗಿ ಬ್ಯಾರಿಗಳ ಸಂಸ್ಕೃತಿಯನ್ನು ವಿವರಿಸಿ ದಕ್ಷಿಣ ಕನ್ನಡದ ಮುಸ್ಲಿಮರಲ್ಲಿ ಶೇ. ೮೦ರಷ್ಟು ಬ್ಯಾರಿಗಳು ಎಂಬುದನ್ನು ಹೇಳಿ– ಮುಸ್ಲಿಮ್–ಬ್ಯಾರಿ ಸಂಸ್ಕೃತಿಯ ಸಮಾನತೆಯನ್ನು ಹಿಡಿಯಾಗಿ ಪರಿಚಯಿಸುತ್ತಾರೆ. ಬ್ಯಾರಿಗಳನ್ನು ಮಾತೃ ಮೂಲದ ಸಮಾಜ ಎಂದು ಕರೆದಿರುವ ಲೇಖಕರು, ಇದಕ್ಕೆ ಮಲೆಯಾಳಂ ಪ್ರಭಾವ, ಪ್ರೇರಣೆಯನ್ನು ಗುರುತಿಸುತ್ತಾರೆ.

ಕೊಡವರನ್ನು ಬ್ಯಾರಿಗಳೊಂದಿಗೆ ಹೋಲಿಸುತ್ತಾ, ಸಾಮುದಾಯಿಕ ಉಡುಗೆ, ತೊಡಿಗೆ, ಭಾಷಿಕವಾಗಿಯೂ ಸಾಮ್ಯವನ್ನು ಕಾಣುತ್ತಾರೆ. ಹೌದು, ಹೌದು, ಮದುವೆ ಮಂಜಾಲ್ಯ ಮಂಗಿಲ ಮೊದಲಾದ ಶಾಬ್ದಿಕ ನಿದರ್ಶನ, ಉಡುಗೆ ತೊಡಿಗೆಯಲ್ಲಿನ

ಸಮಾನ ಗುಣಗಳನ್ನು ಗುರುತಿಸುತ್ತಾರೆ. ಆರನೇ ಅಧ್ಯಾಯದಲ್ಲಿ ಬ್ಯಾರಿ ಭಾಷೆಯ ಸಾಹಿತ್ಯದ ಕುರಿತು ಚರ್ಚಿಸುತ್ತಾ ಲೇಖಕರು, ತುಳುನಾಡಿನಲ್ಲಿ ಒಂದು ನಾಡಭಾಷೆಯಾಗಿ ಇಂದಿಗೂ ಅಸ್ತಿತ್ವ ಉಳಿಸಿಕೊಂಡಿರುವ ಬ್ಯಾರಿ ಭಾಷೆ, ಮಲಬಾರಿನಲ್ಲಿ (ಕಾಸರಗೋಡು) ಮಾಪಿಳ್ಳೆ ಮಲೆಯಾಳದೊಂದಿಗೆ ಮಿಶ್ರಣಗೊಂಡಿದೆ ಎನ್ನುತ್ತಾರೆ. ಇಲ್ಲಿ ಬ್ಯಾರಿ ಭಾಷೆಯ ಸ್ವರೂಪ, ಗ್ರಾಂಥಿಕ ರೂಪ, ಅನ್ಯ ಭಾಷೆಗಳೊಂದಿಗೆ ಸಾಮ್ಯವನ್ನು ಗುರುತಿಸುವ ಲೇಖಕರು, ಬ್ಯಾರಿ ಭಾಷೆಯಲ್ಲಿ ಸಾಹಿತ್ಯ ಬೆಳೆಯಲು ಮಾಪಿಳ್ಳೆ ಗುರುಗಳು (ಮೌಲ್ವಿಗಳು) ಆಸಕ್ತಿ ತೋರಲಿಲ್ಲ ಎನ್ನುತ್ತಾರೆ. ಆದರೂ ಆಪಂಡಿರಾಜಾ, ಪೆಣ್ಣರಸಿಡೆರಾಯ, ಬಂಗಾರದ ಪೂಸಿ ಮೊದಲಾದ ಕಥಾ ಸಾಹಿತ್ಯವನ್ನು ಸುಶೀಲಾ ಉಪಾಧ್ಯಾಯ ಗುರುತಿಸಿರುವುದನ್ನು ಉಲ್ಲೇಖಿಸುತ್ತಾರೆ. ಬಿ.ಎ. ಇದಿನಬ್ಬ, ಇಬ್ರಾಹಿಂ ಮಂಜೇಶ್ವರ, ಟಿ.ಬಿ. ಮಹಮದ್ ಕುಂಞ, ಹುಸೇನ್ ಸಾಬ್, ಕಾಪು, ಉಬೇದ್ ಟಿ. ಕಾಸರಗೋಡು, ಸಿ.ಪಿ. ರಹ್ಮಾನ್ ಮಂಗಳೂರು ಮೊದಲಾದ ಮುಸ್ಲಿಮ್ ಬರಹಗಾರರನ್ನು ಗುರುತಿಸಿರುವ ಲೇಖಕರು, ಸಾರಾ ಅಬೂಬಕರ್ ಅವರಂತ ಪ್ರಭಾವಶಾಲಿ ಲೇಖಕಿಯನ್ನು ಗುರುತಿಸಿಲ್ಲದಿರುವುದು ಸರಿಯಲ್ಲ. ಶಿಕ್ಷಣ ಧಾರ್ಮಿಕ, ಸಾಮಾಜಿಕ ಸೇವಾ ಸಂಸ್ಥೆಗಳು, ಅದರ ಸ್ಥಾಪಕರು, ಸಂಘಟಕರು ಇವರುಗಳ ಪಟ್ಟಿ ಒದಗಿಸಿರುವ ಲೇಖಕರು. ಅಧ್ಯಯನ ಮುಂದುವರಿದಂತೆಲ್ಲಾ ಮುಸ್ಲಿಮ್ – ಬ್ಯಾರಿ ಎರಡೂ ಸಂಸ್ಕೃತಿ–ಸಂಘಟನೆಯ, ಚಟುವಟಿಕೆಯನ್ನು ಏಕನೆಲೆಯಲ್ಲಿ ಕಾಣುತ್ತ, ಗುರುತಿಸಿರುವುದು–ಒಮ್ಮೊಮ್ಮೆ ಮುಸ್ಲಿಮ್–ಬ್ಯಾರಿ ಜನಾಂಗಿಕ ಅಧ್ಯಯನದ ಒಟ್ಟು ನೋಟದಲ್ಲಿ ಖಚಿತತೆ ಪ್ರಾಪ್ತವಾಗದೆ, ಒಂದು ಬಗೆಯ ಗೊಂದಲವಂತೂ ಉಂಟಾಗುತ್ತದೆ.

ಒಟ್ಟಾರೆ, ಬ್ಯಾರಿ ಜನಾಂಗಿಕ ಅಧ್ಯಯನದ ಹೆಸರಿನಲ್ಲಿ ಸಮಗ್ರ ಕರಾವಳಿ, ಮಲಬಾರ್ ಭಾಗದ ಮುಸ್ಲಿಮ್ ಜನಾಂಗದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಂಘಟನಾತ್ಮಕ ವಿವರಗಳನ್ನು, ಸಂಶೋಧನೀಯ ನೆಲೆಯಲ್ಲಿ ಕ್ಷೇತ್ರಕಾರ್ಯದ ರೂಪದಲ್ಲಿ ಒದಗಿಸಿರುವುದು ಈ ಗ್ರಂಥದ ವಿಶೇಷವಾಗಿದೆ. ಕರ್ನಾಟಕದ ಮುಸ್ಲಿಮ್ –ಬ್ಯಾರಿ ಈ ಸಮುದಾಯದ ಪ್ರಮುಖ ಆಕರ ಗ್ರಂಥವಾಗಿಯೂ ಇದು ರೂಪಗೊಂಡಿದ್ದು, ವ್ಯಾಪಕ ಓದು, ತಿರುಗಾಟ, ವಿಪುಲ ಆಕರಗಳಿಂದ ಪುಸ್ತಕ ಅನ್ಯಜ್ಞಾನದ ಅರಿವಿಗೆ ಕೈದೀವಿಗೆಯಾಗಿದೆ.

ಚಿಕ್ಕಣ್ಣ ಯಣ್ಣೆಕಟ್ಟೆ

ಬ್ಯಾರಿ ಸಂಸ್ಕೃತಿ ಕುರಿತ ಉಪಯುಕ್ತ ಗ್ರಂಥ

* **ಪೆರಿಮೆ:** ಪ್ರ. ಸಂ: ಬಿ.ಎಂ. ಇಚ್ಲಂಗೋಡು; ಪ್ರ–ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು. ಪುಟಗಳು–೮+೧೮೨+೫೬; ಬೆಲೆ ರೂ. ೨೦೦/–

ಇದು ಬ್ಯಾರಿ ಮುಸ್ಲಿಮರ ಭಾಷೆ, ಸಂಸ್ಕೃತಿಗೆ ಸಂಬಂಧಿಸಿದ ಹದಿನೆಂಟು ಮಹತ್ವಪೂರ್ಣ ಲೇಖನಗಳಿರುವ ಗ್ರಂಥ. ಬ್ಯಾರಿ ಅಕಾಡೆಮಿಯಿಂದ ಸುಂದರವಾಗಿ ಪ್ರಕಟಿಸಲ್ಪಟ್ಟಿದೆ.

ಮಂಗಳೂರಿನ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ, ವ್ಯಾಪಾರವೇ ಪ್ರಧಾನ ವೃತ್ತಿಯಾಗುಳ್ಳ ಮುಸ್ಲಿಮರ ಒಂದು ಪಂಗಡವನ್ನು ಬ್ಯಾರಿ ಅಥವಾ ಮಾಪಿಳ್ಳೆಗಳು ಎಂದು ಕರೆಯಲಾಗುತ್ತದೆ. ಅವರ ಭಾಷೆ ಬಹಳಷ್ಟು ತುಳು ಮತ್ತು ಮಲೆಯಾಳೀ ಶಬ್ದಗಳನ್ನು ಒಳಗೊಂಡಿದೆ. ಇವರ ನಂಬಿಕೆ ಆಚರಣೆಗಳಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಒಂದು ಸಾವಿರಕ್ಕೂ ಹೆಚ್ಚು ಕಾಲದಿಂದ ಈ ಸಮುದಾಯ ನಮ್ಮ ಕರಾವಳಿಯಲ್ಲಿ ಬೆಳೆದು ಬಂದಿದೆ. ಇವರಿಗೆ ತಮ್ಮದೇ ಆದ ಭಾಷೆ, ಲಿಪಿ, ಸಾಹಿತ್ಯವೂ ಇತ್ತು ಎನ್ನಲಾಗುತ್ತದೆ. ಆದರೆ ಅದಕ್ಕೆ ಸೂಕ್ತ ಪೋಷಣೆ ಸಿಗಲಿಲ್ಲ. ಈಚೆಗೆ ಕರ್ನಾಟಕ ಸರ್ಕಾರ 'ಬ್ಯಾರಿ ಸಾಹಿತ್ಯ ಅಕಾಡೆಮಿ'ಯನ್ನು ಸ್ಥಾಪಿಸಿದ ಮೇಲೆ ಅದಕ್ಕಿಷ್ಟು ಇಂಬು ದೊರೆತಿದೆ. ಅದರ ಫಲವಾಗಿ ಈ ಅಕಾಡೆಮಿ ಪ್ರಕಟಿಸಿದ ಎರಡು ಮಹತ್ವದ ಕೃತಿಗಳ ಪೈಕಿ ಇದೊಂದು.

ಇಲ್ಲಿನ ಹದಿನೆಂಟು ಮಂದಿ ಪ್ರಬಂಧಕಾರರ ಪೈಕಿ ಹತ್ತುಮಂದಿ ಮಾತ್ರ ಮುಸ್ಲಿಮರಾಗಿದ್ದು ಉಳಿದಂತೆ ಬ್ಯಾರಿ ಭಾಷೆ ಹಾಗೂ ಸಂಸ್ಕೃತಿ ಬಗ್ಗೆ ಬರೆದಿರುವವರು ಹಿಂದೂ ವಿದ್ವಾಂಸರೇ. ಅಮೃತ ಸೋಮೇಶ್ವರ, ಯು.ಪಿ. ಉಪಾಧ್ಯಾಯ, ಲೋಕೇಶ್, ಕೆ.ಜಿ. ವಸಂತಮಾಧವ, ಮೊದಲಾದವರು ಬ್ಯಾರಿ ಭಾಷೆ, ಸಂಸ್ಕೃತಿ, ಅವರ ಪ್ರಗತಿ ಮೊದಲಾದವುಗಳ ಬಗ್ಗೆ ಒಳ್ಳೆಯ ಅಧ್ಯಯನ ಪೂರ್ಣ ಲೇಖನ ಬರೆದಿದ್ದಾರೆ. ಅದೇ ರೀತಿ ಗ್ರಂಥದ ಸಂಪಾದಕರಾದ ಇಚ್ಲಂಗೋಡು ಅವರು ಈ ಎಲ್ಲರ ಬಗ್ಗೆ ಒಳ್ಳೆಯ ಮಾತುಗಳನ್ನು ತಮ್ಮ ಸಂಪಾದಕೀಯದಲ್ಲಿ ಬರೆದಿದ್ದಾರೆ. ಸೌಹಾರ್ದತೆ ಎನ್ನುವುದು ಹೀಗೆ ಇದ್ದಾಗ ಆ ನಾಡು ನೆಮ್ಮದಿಯ ಬೀಡಾಗಿರುತ್ತದೆ.

ಬ್ಯಾರಿ ಭಾಷೆಯನ್ನು ಮೋಯ ಮಲೆಯಾಳ ಭಾಷೆ, ತುಳುಮಲೆಯಾಳ ಭಾಷೆ, ಕೊಡವ ಭಾಷೆಗಳೊಂದಿಗೆ ಹೋಲಿಸಿ ಬರೆದಿರುವ ಲೇಖನಗಳು ಇಲ್ಲಿವೆ. ಜೊತೆಗೆ– ಬ್ಯಾರಿಗಳಿಗೂ ತುಳುವ ಹಿಂದುಗಳಿಗೂ ಇದ್ದ ಸಂಬಂಧ, ಬ್ಯಾರಿಗಳಲ್ಲಿ ಕೆಲವರು ತುಳುನಾಡಿನಲ್ಲಿ ದೈವಗಳಾಗಿ ಪೂಜೆಗೊಳ್ಳುವ ಐತಿಹ್ಯ, ಬ್ಯಾರಿಗಳ ಬಗ್ಗೆ ಸಂಶೋಧನೆ ನಡೆಸಿದವರ ಮತ್ತು ಅವರ ಕೃತಿಗಳ ಪರಿಚಯ, ಕೆಲವು ಹಾಡುಗಳ ಉಲ್ಲೇಖ ಇವೆಲ್ಲ ಇವೆ. ಒಟ್ಟಿನಲ್ಲಿ ಈ ಕೃತಿ ಬ್ಯಾರಿ ಸಮುದಾಯ, ಅವರ ಭಾಷೆ ಹಾಗೂ ಸಂಸ್ಕೃತಿಯ ಕುರಿತಾದ ಸಾಕಷ್ಟು ವಿಸ್ತೃತ ಪರಿಚಯವನ್ನೂ ಮಾಡಿಕೊಡುತ್ತದೆ. ಈ ಕೃತಿಯನ್ನು ಓದಿದರೆ ಆ ಸಮುದಾಯದ ಭಾಷೆ, ಸಂಸ್ಕೃತಿಗಳನ್ನು ಉಳಿಸಿ ಅಭಿವೃದ್ಧಿಪಡಿಸಬೇಕು ಎನಿಸುತ್ತದೆ. ಉಪಾಧ್ಯಾಯ ದಂಪತಿಗಳಂತಹ ಅರ್ಪಣಾ ಮನೋಭಾವದ ವಿದ್ವಾಂಸರು

ಈ ಬಗ್ಗೆ ಬರೆದಿದ್ದಾರೆ ಎನ್ನುವುದೇ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಬ್ಯಾರಿಯವರ ಮಿಶ್ರಭಾಷೆಯಲ್ಲಿನ ರಾಮಾಯಣದ ಜಾನಪದ ಗೀತೆಯ ಸಾರಾಂಶವೂ ಬಿ.ಎಂ. ಇಚ್ಲಂಗೋಡು ಅವರ ಲೇಖನದಲ್ಲಿದೆ. ಇವೆಲ್ಲ ತುಂಬ ಕುತೂಹಲಕರ ಅಂಶಗಳು.

ಬ್ಯಾರಿ ಅಕಾಡೆಮಿ ಮುಂದಿನ ದಿನಗಳಲ್ಲಿ ಇನ್ನೂ ವಿಸ್ತಾರ ಮತ್ತು ಆಳವಾದ ಸಂಶೋಧನೆಗಳನ್ನು ಪ್ರಾಯೋಜಿಸಿ ವಸ್ತುನಿಷ್ಠ ಕೃತಿಗಳನ್ನು ಹೊರತರಲಿ ಎಂದು ಹಾರೈಸಬಹುದು.

ಎಸ್.ಪಿ. ಪದ್ಮಪ್ರಸಾದ್

ಅವ್ಯವಸ್ಥಿತ, ಅಸ್ಪಷ್ಟ 'ಅಧ್ಯಯನ'

* **ಸಂವಹನಾತ್ಮಕ ಅಧ್ಯಯನದಲ್ಲಿ ಜನಪದ ಕಲೆಗಳು:** ಲೇ: ಕಂಟಲಗೆರೆ ಸಣ್ಣಹೊನ್ನಯ್ಯ, ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು; ಪು. ೧೬+೨೦೮: ಬೆಲೆ ರೂ. ೮೦/-

ಗೊಂದಲಗಳಿಂದ, ದೃಷ್ಟಿಕೋನದ ಅಸ್ಪಷ್ಟತೆಯಿಂದ, ಅಧ್ಯಯನ ಕ್ರಮದ ತಿಳಿವಳಿಕೆಯ ಕೊರತೆಯಿಂದ ಒಂದು ಪುಸ್ತಕ ಬರೆದರೆ ಅದು ಹೇಗಿರುತ್ತದೆ ಎನ್ನುವುದಕ್ಕೆ ಉದಾಹರಣೆಯಂತಿದೆ ಈ ಕೃತಿ. ಇಂಥ ಒಂದು ಬರಹವು 'ತಜ್ಞರ ಸಮಿತಿ' 'ಸಂಪಾದಕರ ಸಮಿತಿ' ಇತ್ಯಾದಿಗಳೆಡೆಯಿಂದ ದಾಟಿಕೊಂಡು ಒಂದು ವಿಶ್ವವಿದ್ಯಾಲಯದ ಪ್ರಕಟಣ ವಿಭಾಗದಿಂದ ಹೇಗೆ ಪ್ರಕಟಗೊಳ್ಳುತ್ತದೆ ಎಂಬುದೇ ವಿಸ್ಮಯದ ವಿಷಯವಾಗಿದೆ.

ಈ ಅಧ್ಯಯನ (?) ದ ಪ್ರಯೋಜನವನ್ನು ಕುರಿತು ಲೇಖಕರು ಹೀಗೆ ಹೇಳುತ್ತಾರೆ

'ಪ್ರಸಕ್ತ ಅಧ್ಯಯನದಿಂದ ಅಭಿವೃದ್ಧಿ ಸಂದೇಶಗಳನ್ನು ಸಾರಲು ಈ ಜನಪದ ಮಾಧ್ಯಮಗಳನ್ನು ಬಳಸಿಕೊಳ್ಳುವ ಸಾಧ್ಯತೆ ಬಾಧ್ಯತೆಗಳ ತಿಳಿವಳಿಕೆ ಮೂಡುತ್ತದೆ. ತುಮಕೂರಿನ ವಿವಿಧ ಜನಪದ ಕಲೆಗಳನ್ನು ಪೋಷಿಸಿ ಬೆಳೆಸುವ ಚಿಂತನೆಯನ್ನು ಮೂಡಿಸುತ್ತದೆ' (ಪುಟ.೫೨, ಪ್ಯಾರಾ – ೧)

'ತುಮಕೂರು ಜಿಲ್ಲೆಯ ವಿವಿಧ ಗ್ರಾಮಗಳ ಕಲಾವೈಭವತೆಯನ್ನು ಈ ಅಧ್ಯಯನದ ಮೂಲಕ ಪ್ರತಿಬಿಂಬಿಸುವ ಅನೇಕ ಅವಕಾಶಗಳು ಪ್ರಸಕ್ತ ಅಧ್ಯಯನದಿಂದ ಸಾಧ್ಯವಾಗುತ್ತದೆ' (ಪುಟ ೫೨, ಪ್ಯಾರಾ–೨)

ಇದಕ್ಕೂ ಮೊದಲು ಹೀಗೆ ಹೇಳಿದ್ದಾರೆ ಲೇಖಕರು – 'ಪ್ರಸ್ತುತ ಅಧ್ಯಯನವು ಈ ಮೇಲೆ ತಿಳಿಯಪಡಿಸಿರುವ ರೀತಿಯಾಗಿ ಒಂದು ಗ್ರಾಮಕ್ಕೆ ಸಂಬಂಧಿಸಿದ ವಿವಿಧ ಜನಪದ ಕಲೆಗಳು ಸಂಸ್ಕೃತಿ ಹಾಗೂ ಮನರಂಜನೆಯನ್ನು ಪ್ರಸರಿಸುವ ನಿಟ್ಟಿನಲ್ಲಿ ಯಾವ ರೀತಿ ಪ್ರಯತ್ನ ಪಡುತ್ತಿವೆ ಎಂಬುದನ್ನು ನಿರ್ಧರಿಸಬಹುದಾಗಿದೆ' (ಪುಟ–೧೧, ಪ್ಯಾರಾ – ೩)

ಈ ಮೇಲಿನ ಮೂರನೆಯ ಹೇಳಿಕೆಯಲ್ಲಿನ ವಾಕ್ಯರಚನೆಯ ಅಸಂಬದ್ಧತೆ (ಅಂಥ ಅನೇಕ ಅಸಂಬದ್ಧ ವಾಕ್ಯಗಳು ಈ 'ಅಧ್ಯಯನ' ಕೃತಿಯಲ್ಲಿವೆ) ಒಂದೆಡೆಯಾದರೆ, ಇನ್ನೊಂದೆಡೆ – ಇದು ಒಂದು ಗ್ರಾಮಕ್ಕೆ ಸಂಬಂಧಿಸಿದ ಜನಪದ ಕಲೆಗಳು ಸಂಸ್ಕೃತಿ ಪ್ರಸರಣ ಹೇಗೆ ಮಾಡುತ್ತಿವೆ ಎಂಬುದರ ಅಧ್ಯಯನ ತನ್ನ ಗುರಿ ಎನ್ನುತ್ತದೆ. ಆದರೆ ಇದಕ್ಕೂ ಮುನ್ನಿನ ಎರಡು ಹೇಳಿಕೆಗಳು 'ಇಡೀ ಜಿಲ್ಲೆಗೆ ಸಂಬಂಧಿಸಿದ ಜನಪದ ಕಲೆಗಳ ಸಂವಹನಶೀಲತೆ ಹಾಗೂ ಕಲಾವೈಭವತೆಯ ಅಧ್ಯಯನ ಇದು' ಎನ್ನುತ್ತವೆ. ಆದರೆ ಪುಸ್ತಕದಲ್ಲಿ – ರೇಡಿಯೋ, ದೂರದರ್ಶನ, ಚಿತ್ರಕಲೆ, ರಾಷ್ಟ್ರಕೂಟರ ಶಿಲ್ಪಕಲೆ ಇತ್ಯಾದಿಗಳನ್ನು ಕುರಿತ ಲೇಖನಗಳು ಇರುವುದನ್ನು ನೋಡಿದಾಗ ಈ ಪುಸ್ತಕದ ವಿಷಯ ವ್ಯಾಪ್ತಿಯ ಕುರಿತಾದ ಸ್ಪಷ್ಟತೆಯೇ ಲೇಖಕರಿಗೆ ಇಲ್ಲದಿರುವುದು ಸ್ಪಷ್ಟವಾಗುತ್ತದೆ.

ಪುಸ್ತಕದ ಸ್ವರೂಪದ ಬಗ್ಗೆ ಈಗ ನೋಡೋಣ.

ಈ ಪುಸ್ತಕದಲ್ಲಿ ಒಟ್ಟು ಇಪ್ಪತ್ನಾಲ್ಕು ಅಧ್ಯಾಯಗಳಿವೆ. ಕೆಲವು ಅಧ್ಯಾಯಗಳು ನಾಲ್ಕೈದು ಪುಟಗಳಷ್ಟು ಮಾತ್ರವಿದ್ದರೆ ಉಳಿದವು ಪುಟಸಂಖ್ಯೆಯಲ್ಲಿ ಹೆಚ್ಚುತ್ತಾ ಹೋಗಿ ಅತಿ ದೊಡ್ಡ ಅಧ್ಯಾಯವು ಇಪ್ಪತ್ತು ಪುಟಗಳಿಷ್ಟಿದೆ. ಕೆಲವು ಅಧ್ಯಾಯಗಳ ಹೆಸರನ್ನು ನೋಡಿ (ಆ ಬಗ್ಗೆ ಈ ವಿಮರ್ಶಕನಿಗೆ ಅನ್ನಿಸಿದ್ದನ್ನು ಅಲ್ಲೇ ಕೆಳಗೆ ಕೊಡಲಾಗಿದೆ):

೧. 'ತುಮಕೂರು ಜಿಲ್ಲೆಯ ಗ್ರಾಮೀಣ ಸಂಸ್ಕೃತಿ ಮತ್ತು ಮನರಂಜನೆ ಜನಪದ ಕಲೆಗಳ ಪಾತ್ರ'

(ಇದಿಷ್ಟೂ ಕೂಡ ಒಂದೇ ಅಖಂಡ ಶೀರ್ಷಿಕೆ – ಯಾವ ಚಿಹ್ನೆಗಳೂ ಇಲ್ಲ)

೨. ತುಮಕೂರಿನ ಸುತ್ತಿನ ಜನಪದ ಕಲೆಗಳು

(ಪರಿವಿಡಿ ಹಾಗೂ ಅಧ್ಯಾಯದ ಪ್ರಾರಂಭ ಎರಡೂ ಕಡೆ ಇದೇ ರೀತಿ ಅಚ್ಚಾಗಿದೆ)

೩. ಗೊಲ್ಲ ಜನಾಂಗದ ಪಾರಂಪರಿಕ ಸಂವಹನ ರಚನೆಯ ಜುಂಜಪ್ಪನ ಕಾವ್ಯ

('ಪಾರಂಪರಿಕ ಸಂವಹನ ರಚನೆ'– ಎಂದರೇನು? ಜುಂಜಪ್ಪನ ಕಥೆಯನ್ನು ಆರೋಗ್ಯ/ಅಭಿವೃದ್ಧಿ/ಶಿಕ್ಷಣದಂಥ ವಿಚಾರಗಳ ಪ್ರಚಾರಕ್ಕೆ ಎಲ್ಲಾದರೂ ಬಳಸಿಕೊಳ್ಳಲಾಗುತ್ತಿದೆಯೇ? ಆ ಬಗ್ಗೆ ಈ ಅಧ್ಯಯನದಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ. ಹಾಗಿದ್ದರೆ ಈ ಅಧ್ಯಾಯ ಯಾಕೆ ಬೇಕು?)

೪. ಸಂವಹನಾತ್ಮಕ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಭೌಗೋಳಿಕ ನೋಟ

ಏನು? ಅಲ್ಲದೆ ಮೂರೂವರ ಪುಟಗಳ ಈ ಅಧ್ಯಾಯದಲ್ಲಿ ಈ ಅಧ್ಯಯನಕ್ಕೆ ಪ್ರಶ್ನಾವಳಿಗೆ ಉತ್ತರ ನೀಡಲು 'ಮಾದರಿ' ಜನರನ್ನು ಹೇಗೆ ಆಯ್ಕೆ ಮಾಡಿಕೊಂಡೆ, ಅಧ್ಯಯನದ ಉದ್ದೇಶವೇನು? ಎಂಬುದನ್ನು ಹೇಳಿದ್ದಾರೆಯೇ ವಿನಾ ಭೌಗೋಳಿಕತೆ ಹಾಗೂ ಜಾನಪದ ಸಂವಹನ – ಕ್ಕಿರುವ ಸಂಬಂಧವನ್ನು ಕುರಿತು ಒಂದು ವಾಕ್ಯಕೂಡ ಹೇಳಿಲ್ಲ. ಅಲ್ಲದೆ ತಾವು ಆರಿಸಿರುವ ವಕ್ತೃ ಮಾದರಿ (Sample) ಯ ಬಗ್ಗೆ ೧ನೇ ಪುಟದಲ್ಲಿ ನೀಡಿರುವ ವಿವರ ಒಂದು ಬಗೆಯಲ್ಲಿದ್ದರೆ, ೭ನೇ ಪುಟದಲ್ಲಿ ದಪ್ಪಕ್ಷರಗಳಲ್ಲಿ ಮುದ್ರಿಸಿರುವ ಕೋಷ್ಟಕದ ಅಂಕಿ ಸಂಖ್ಯೆಗಳೇ ಇನ್ನೊಂದು ವಿಧವಾಗಿವೆ. ಒಂದಕ್ಕೊಂದು ತಾಳೆಯಾಗುವುದಿಲ್ಲ. ಶೀರ್ಷಿಕೆಗೂ, ಅದರ ಕೆಳಗಿರುವ ವಿಷಯದ ಬಹುಪಾಲಿಗೂ ಸಂಬಂಧವೇ ಇಲ್ಲ.

೭. ಏಳನೇ ಅಧ್ಯಾಯದ ಶೀರ್ಷಿಕೆ 'ಸಂವಹನಾತ್ಮಕ ಅಧ್ಯಯನದಲ್ಲಿ ಕಲಾತ್ಮಕ ರಂಗದ ಭಿತ್ತಿ ಚಿತ್ರ ಕಲೆಗಳು' – ಎಂದಿದೆ

(ಹೀಗಂದರೇನು? ಕಲಾರಂಗ ಎಂದರೆ ಅರ್ಥವಾಗುತ್ತದೆ. ಕಲಾತ್ಮಕ ರಂಗ ಎಂದರೆ–ಒಂದೆಡೆಯ ರಂಗವೇದಿಕೆ ಕಲಾತ್ಮಕವಾಗಿದೆ ಎಂದು ಅರ್ಥಮಾಡಿಕೊಳ್ಳಬಹುದು. 'ಕಲಾತ್ಮಕ ಭಿತ್ತಿ ಚಿತ್ರಕಲೆ'– ಎಂದರೇನರ್ಥ?
ಇಲ್ಲಿರುವ ಮುದ್ರಣದೋಷದ ಮಾತು ಒತ್ತಟ್ಟಿಗಿರಲಿ. ತುಮಕೂರಿನ ಜನಪದ ಕಲೆಗಳ ಪ್ರದರ್ಶನದಲ್ಲಿ ಭಿತ್ತಿಚಿತ್ರಗಳ ಬಳಕೆ ಹೇಗಾಗುತ್ತಿದೆ ಎಂಬ ಬಗ್ಗೆ ಒಂದು ವಾಕ್ಯವೂ ಇಲ್ಲ. ಈ ಅಧ್ಯಾಯದಲ್ಲಿ ಪೋಸ್ಟರ್‌ಗಳ ರಚನೆ, ಅವುಗಳನ್ನು ರಚಿಸುವ ಹಡಪದ್, ಚಂದ್ರನಾಥ ಆಚಾರ್ಯ, ವಾಸುದೇವ ಮೊದಲಾದವರ ಹೆಸರನ್ನು ಪ್ರಸ್ತಾಪಿಸಲಾಗಿದೆ. ಕಲಾಕೃತಿಗಳಿಗೆ ಭಾರೀ ಮಾರುಕಟ್ಟೆ ಇರುವುದು, ಅಲ್ಲಿ ಹೇಗೆ ಹಣ ಹೂಡಿ ಲಾಭ ಗಳಿಸಬೇಕೆಂಬ ಬಗ್ಗೆ ಸಲಹೆಗಳಿವೆ.)

೮. ಎಂಟನೇ ಅಧ್ಯಾಯದ ಶೀರ್ಷಿಕೆ– 'ಸಂವಹನಾತ್ಮಕ ಅಧ್ಯಯನಕ್ಕೆ ಕಣ್ಮರೆಯಾಗುತ್ತಿರುವ ಭಿತ್ತಿ ಚಿತ್ರಕಲೆ ಅಂದು ಇಂದು'– ಎಂದು ಅಖಂಡವಾಗಿ, ಚಿಹ್ನೆರಹಿತವಾಗಿ ಮುದ್ರಿತವಾಗಿದೆ. ಇದರರ್ಥವೇನು? 'ಅಧ್ಯಯನಕ್ಕೆ ಸಿಗದೆ

ವಸಂತಮಹಲ್ ಎಂಬ ಮನೆ ಇದೆ. ಅದರಲ್ಲಿ ಇಂತಿಂಥ ಭಿತ್ತಿ ಚಿತ್ರಗಳಿವೆ' ಎಂಬ ಒಂದು ಪ್ಯಾರಾದಷ್ಟು ವಿವರವಿದೆ. (ಪು.೭೨) ಜಿಲ್ಲೆಯಲ್ಲಿ ಹಲವೆಡೆ ಇರುವ ಭಿತ್ತಿಚಿತ್ರಗಳ ಬಗ್ಗೆ ಮಾಹಿತಿ ಇದೆ. ಆದರೆ ಈ ಗ್ರಂಥರಚನೆಯ ಮೂಲ ಉದ್ದೇಶವಾದ 'ಸಂವಹನಾತ್ಮಕ ಅಧ್ಯಯನ'ಕ್ಕೂ ಇಲ್ಲಿ ಕೊಟ್ಟಿರುವ ಮಾಹಿತಿಗೂ ಸಂಬಂಧ ಹೇಗೆ ಕಲ್ಪಿಸುವುದೆಂಬುದೇ ಅರ್ಥವಾಗುವುದಿಲ್ಲ.

೭ ಇನ್ನು ಕೆಲವು ಅಧ್ಯಾಯಗಳ ಶೀರ್ಷಿಕೆಗಳು ಹೀಗಿವೆ – 'ಸಂವಹನಾತ್ಮಕ ಆಡಳಿತದಲ್ಲಿ ಕನ್ನಡ' (ಸಂವಹನವಾಗದಿದ್ದರೆ ಅದು ಹೇಗೆ ಆಡಳಿತವಾಗುತ್ತದೆ? ಕನ್ನಡವೆನ್ನುವುದು ಕಲೆಯೆ?); 'ಸಂವಹನಾತ್ಮಕ ಅಧ್ಯಯನದಲ್ಲಿ ರೇಡಿಯೋ/ ದೂರದರ್ಶನ' (ಈ ಅಧ್ಯಾಯಗಳಲ್ಲಿ ಆಯಾ ತಾಂತ್ರಿಕತೆ ಬೆಳೆದು ಪ್ರಸರಿಸಿದ್ದರ ವಿವರಗಳಿವೆಯೇ ಹೊರತು ಜಾನಪದ ಕಲೆಗಳನ್ನು ಇವು ಸಂವಹನದ ಮಾಧ್ಯಮವಾಗಿ ಬಳಸಿಕೊಳ್ಳುತ್ತಿರುವುದರ ಬಗ್ಗೆ ಒಂದು ಪ್ಯಾರಾ ಸಹ ಇಲ್ಲ. ಹಾಗಾದ ಮೇಲೆ ಈ ಅಧ್ಯಾಯಗಳನ್ನು ಬರೆಯುವ ಉದ್ದೇಶವಾದರೂ ಏನು?)

ಈ ಅಸಂಬದ್ಧತೆಗಳ ಸರಮಾಲೆ ಇಲ್ಲಿಗೇ ನಿಲ್ಲುವುದಿಲ್ಲ. ಅಧ್ಯಯನ, ಸಂಶೋಧನೆ – ಎಂಬ ಗಂಭೀರ ಹೆಸರಿನಲ್ಲಿ ಕಾಲೇಜು ಉಪನ್ಯಾಸಕರೊಬ್ಬರಿಂದ ರಚಿತವಾಗಿ ಹೊರಬಂದಿರುವ ಈ ಪುಸ್ತಕದಲ್ಲಿ ಉದ್ದಕ್ಕೂ ಅಪಶಬ್ದಗಳ ಮೆರವಣಿಗೆಯೇ ಸಾಗಿದೆ. ಅದು ಮುದ್ರಣದೋಷವೆಂದು ತಳ್ಳಿಹಾಕುವಂತಿಲ್ಲ (ಅದಕ್ಕೂ ಒಂದು ಮಿತಿ ಬೇಡವೇ?). ಏಕೆಂದರೆ – ವಿಶ್ವವಿದ್ಯಾನಿಲಯವು ಪ್ರೂಫ್ ನೋಡುವ ಜವಾಬ್ದಾರಿಯನ್ನು ಲೇಖಕರಿಗೇ ಬಿಟ್ಟಿತ್ತು. ಇಡೀ ಪುಸ್ತಕದುದ್ದಕ್ಕೂ 'ನಾಗರೀಕ' ಎಂಬ ಶಬ್ದವನ್ನೇ ಬಳಸಲಾಗಿದೆ. ಇನ್ನು ಕೆಲವು ದೋಷಪೂರ್ಣ ಶಬ್ದಗಳಿಗೆ ಉದಾ:

ಗ್ರಹೋಪಯೋಗಿ (ಪುಟ ೩), ಭಾವನೆಗಲ (ಪು.೭), ktlttr (ಪು.೭), ಜೀವನಲದಲಿ (ಪು.೧೦,೧೧,೧೨), lively tossil (ಪು. ೧೩– ಇದು living fossil ಎಂದಿರಬೇಕಿತ್ತು), ಸಾಮಾಗ್ರಿ (೧೪), ಮಾರ್ಘದರ್ಶನ (ಪು.೧೪), ತುಮಕೂರಿ, ಕುಣಿತರಗಳು, ಪುರನ್‌ಸೃಷ್ಟಿ (ಪು.೧೫), ಪಾರ್‍ಮರ್ (ಪು.೨೦, ನಿಜರೂಪ –ಪರಮಾರ್), ನಕ್ಸಲೇಯ (ಪು.೨೦), ಶ್ರೇಷ್ಟತೆ (೨೧), ಕಲಾವೈಭವತೆಯನ್ನು (ಪು.೫೨, ಕಲಾವೈಭವವನ್ನು–ಎಂದರೆ ಸಾಕು), ನಸಂಶೋಧನೆ (ಪು.೬೧), ಹೋಣೆ (ಪು.೧೦೪), ಅಭಿವ್ಯಕ್ತಿಸಿಸಿ (೧೦೮), ಅತರರಾಷ್ಟ್ರೀಯ ವಿದೇಗಳಲ್ಲೂ (ಪು.೨೦೧)– ಇತ್ಯಾದಿ ಇತ್ಯಾದಿ.

ಇಷ್ಟೇ ಅಲ್ಲದೆ – ಅನ್ಯರ ಅಭಿಪ್ರಾಯಗಳನ್ನು ತಪ್ಪಾಗಿ ಉಲ್ಲೇಖಿಸಿರುವುದೂ ಉಂಟು. ಎಚ್.ಎಂ. ಮಹೇಶ್ವರಯ್ಯನವರ ಪುಸ್ತಕದಿಂದ ಹೀಗೆ ಉದ್ಧರಿಸಿದ್ದಾರೆ– 'ಭಾಷೆ, ಸಂಸ್ಕೃತಿ, ಜಾನಪದಗಳ ಮೂಲಭೂತ ಸಂಬಂಧ ಮತ್ತು ಸಂವಹನದಲ್ಲಿ ಅವುಗಳ ಪಾತ್ರವನ್ನು ಗುರುತಿಸಬಹುದು. ಒಂದು ಸಮುದಾಯದ ಒಟ್ಟು ಸಂವಹನ ಪ್ರಕ್ರಿಯೆಯನ್ನರಿಯುವಲ್ಲಿ ಸಹಕಾರಿಯಾಗುತ್ತದೆ' (ಪು.೨). ಮಹೇಶ್ವರಯ್ಯನವರು ಹೀಗೆ ಸಂಬಂಧವಿಲ್ಲದ ವಾಕ್ಯಗಳನ್ನು ಬರೆಯುವುದಿಲ್ಲ. ಮತ್ತೊಂದು ಕಡೆ – 'ಆಹಾರ ಪದ್ಧತಿ, ವಸತಿ ವ್ಯವಸ್ಥೆಗಳಲ್ಲಿ– ಹೀಗೆ ಸಂವಹನದ ನಾನಾ ರೂಪಗಳಲ್ಲಿ ಜಾನಪದದ ಪ್ರಭಾವವನ್ನು ಸುಸ್ಪಷ್ಟವಾಗಿ ಕಂಡುಕೊಳ್ಳಬಹುದು'. (ಪು.೫). ಇದು ಈ 'ಸಂಶೋಧಕರ'ದೇ ಮಾತು. ಆಹಾರ ಪದ್ಧತಿ ಮತ್ತು ವಸತಿ ಕೂಡ ಸಂವಹನವೇ ಎಂದು ಭಾವಿಸುವ ಈ ಅಧ್ಯಾಯನಶೀಲ ಲೇಖಕರು ಸಂವಹನ ಶಾಸ್ತ್ರಕ್ಕೇ ಹೊಸ ವ್ಯಾಖ್ಯೆ ಕೊಡುತ್ತಿದ್ದಾರೇನೋ !

"ಡಿ.ವಿ.ಜಿ. ಅವರು ಹೇಳಿರುವುದೇನೆಂದರೆ–ಸಮ್ಯಖ್ ಮತ್ತು ಕೃತಿ ಕೂಡಿದರೆ ಸಂಸ್ಕೃತಿಯಾಗುತ್ತದೆ ಎಂದು." ಎಂದು ಒಂದೆಡೆ ಉಲ್ಲೇಖಿಸಲಾಗಿದೆ. (ಪು.೮). ಅದು ಸಮ್ಯಕ್+ಕೃತಿ ಎಂದು ಡಿ.ವಿ.ಜಿ. ವಿಶ್ಲೇಷಿಸಿದ್ದಾರೆ. ಆ ಪೂಜ್ಯರ ಆತ್ಮಕ್ಕೆ ಶಾಂತಿ ಇರಲಿ.

ಪುಸ್ತಕದಲ್ಲಿ ಉದ್ದಕ್ಕೂ 'ಉಲ್ಲೇಖ' ಎಂದು ಉಪಶೀರ್ಷಿಕೆ ಎಂಬಂತೆ ದಪ್ಪ ಅಕ್ಷರಗಳಲ್ಲಿ ಮುದ್ರಿಸಲಾಗಿದೆ. ಅದರ ಮೇಲಿರುವುದು ಉಲ್ಲೇಖಿತ ಭಾಗವೋ ಅಥವಾ ಕೆಳಗಿರುವುದೋ ಎಂಬುದನ್ನು ತಿಳಿಯಲಾಗುವುದಿಲ್ಲ. ಕೊನೆಯಲ್ಲಿ 'ಗ್ರಂಥಋಣ' ವಿದ್ದು (ಪು.೨೦೫) ಅದರಲ್ಲಿ ಎಂಟು ಆಧಾರಗ್ರಂಥಗಳು ಹಾಗೂ ಅವುಗಳ ಲೇಖಕರ ಹೆಸರುಗಳು ಮಾತ್ರ ಇವೆ. ಅವುಗಳ ಪ್ರಕಾಶಕರು, ಪ್ರಕಟಣಾ ವರ್ಷ ಇವ್ಯಾವುದೂ ಇಲ್ಲ. ಆಧಾರಗ್ರಂಥಗಳ ಪಟ್ಟಿ ಹೇಗೆ ಕೊಡಬೇಕೆಂಬ ಅರಿವಿಲ್ಲದವರು ಮಾತ್ರ ಹೀಗೆ ಬರೆಯಲು ಸಾಧ್ಯ. ಇನ್ನೂ ಒಂದು ವಿಚಿತ್ರವೆಂದರೆ – ಈ ಪಟ್ಟಿಯಲ್ಲಿ 'ಜಾನಪದ ಸಂವಹನ' ಎಂಬ ಎಚ್.ಎಂ. ಪರಮೇಶ್ವರಯ್ಯನವರು ಬರೆದ ಗ್ರಂಥದ ಹೆಸರಿದೆ. ಆದರೆ ಪುಸ್ತಕದೊಳಗೆ ಅದೇ ಹೆಸರಿನ ಎಚ್.ಎಂ. ಮಹೇಶ್ವರಯ್ಯನವರ ಗ್ರಂಥದ ಉಲ್ಲೇಖವಿದೆ. ಇದಾರಿದು ಈ ಪಟ್ಟಿಯಲ್ಲಿ ಥಟ್ಟನೆ ಬಂದು ಸೇರಿಕೊಂಡ, ನಾವು ಕೇಳಿಲ್ಲದ ವಿದ್ವಾಂಸರು?

'ತುಮಕೂರು ಬಯಲು ಪ್ರದೇಶವಾದ್ದರಿಂದ ಅನೇಕ ಅರಣ್ಯ ತಾಣಗಳನ್ನು ಹೊಂದಿದೆ' (ಪು.೨೩) ಎಂಬಂಥ ಅದ್ಭುತ ಒಳನೋಟಗಳನ್ನು ಈ ಗ್ರಂಥ ಕೊಡುತ್ತದೆ. 'ಸಂವಹನಾತ್ಮಕ ಬದಲಾವಣೆಯಲ್ಲಿ ಜನಪದ ಲಾವಣಿಗಳು' ಎಂಬ ಇನ್ನೊಂದು ಗೂಢಾರ್ಥದ ಶೀರ್ಷಿಕೆಯಡಿಯಲ್ಲಿ ಜಾನಪದ ಶೈಲಿಯ ಹನ್ನೊಂದು ಹಾಡುಗಳನ್ನು

ಕೊಡಲಾಗಿದೆ. (ಪು.೧೭೮–೧೮೮). ಈ ಹಾಡುಗಳಲ್ಲಿ ೯, ೧೧, ೧೬ ಸಾಲುಗಳುಳ್ಳ ಹಾಡುಗಳೂ ಇವೆ. ಇವನ್ನೆಲ್ಲ ಲಾವಣಿಗಳೆಂದು ಅದಾರು ಒಪ್ಪುತ್ತಾರೋ ಭಗವಂತ ಬಲ್ಲ! ಅಂತೂ, ಹಲವು ರೀತಿಗಳಲ್ಲಿ ಇದೊಂದು 'ಅಪೂರ್ವಗ್ರಂಥ' ವೆನ್ನಲಡ್ಡಿಯಿಲ್ಲ.

ಎಸ್.ಪಿ. ಪದ್ಮಪ್ರಸಾದ್

ಉಡುಪಿ ಜಿಲ್ಲೆಗೊಂದು ಸಣ್ಣ ಕೈಪಿಡಿ

* **ಜಾನಪದ ಉಡುಪಿ ಜಿಲ್ಲೆ:** ಲೇ. ಎಸ್.ಎ. ಕೃಷ್ಣಯ್ಯ. ಪ್ರ: ಜಿಲ್ಲಾ ಕ.ಸಾ.ಪ. ಉಡುಪಿ, ಪುಟಗಳು–೧೨೮. ಬೆಲೆ ರೂ. ೭೦/–

ಇದು ಉಡುಪಿ ಜಿಲ್ಲೆಯ ವಿವಿಧ ಜಾನಪದ ಕಲೆಗಳು, ಕಲಾವಿದರು, ಕೆಲವು ಐತಿಹ್ಯಗಳು, ಹಾಗೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನಡೆದಿರುವ ಜಾನಪದ ದಾಖಲೀಕರಣ ಹೀಗೆ ಹತ್ತಾರು ವಿಷಯಗಳನ್ನು ಒಂದೇ ಪೆಟ್ಟಿಗೆ ನೂರಿಪ್ಪತ್ತೆಂಟು ಪುಟಗಳ ಸಣ್ಣ ವ್ಯಾಪ್ತಿಯಲ್ಲಿ ಹೇಳಲು ಯತ್ನಿಸುತ್ತದೆ. ಇದರಲ್ಲಿನ ಅನೇಕ ವಿಷಯಗಳಿಗೆ (ಉದಾ–ಕಾಡ್ಯಾನಾಟ, ಭೂತಾರಾಧನೆ, ನಾಗಮಂಡಲ, ಢಕ್ಕೆಬಲಿ, ಭೂತದ ಕೋಲ ಇತ್ಯಾದಿಗಳು) ಸಂಂಧಿಸಿದಂತೆ ಬಹಳಷ್ಟು ಅಧ್ಯಯನ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಆ ಹಿನ್ನೆಲೆಯಲ್ಲಿ ಇದೊಂದು ಪುಟ್ಟ ಕೈಪಿಡಿಯಂತೆ ಕಾಣುತ್ತದೆ.

ಪುಟ್ಟ ಕೈಪಿಡಿಯಾದರೂ ಇದೊಂದು ಉಪಯುಕ್ತ ಕೈಪಿಡಿ. ವಿವಿಧ ವಿಷಯಗಳ ಬಗ್ಗೆ ಲೇಖಕರು ಸ್ವತಃ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿರುವ ಮಾಹಿತಿಗಳನ್ನೂ, ಆ ವಿಷಯದ ಬಗ್ಗೆ ಇತರರು ಈಗಾಗಲೇ ಮಾಡಿರುವ ಕೆಲಸಗಳ ಹಿನ್ನೆಲೆಯಲ್ಲಿ ಅವಲೋಕಿಸಿ ಸ್ವೋಪಜ್ಞ ವಿಶ್ಲೇಷಣೆ ನಡೆಸಿದ್ದಾರೆ. ಇದು ಇಲ್ಲಿನ ಗಮನಾರ್ಹ ಅಂಶ. ಭೂತಾರಾಧನೆ, ಯಕ್ಷಗಾನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇವರು ಹೇಳುವ ಎಷ್ಟೋ ವಿಷಯಗಳು ಅಧ್ಯಯನಕಾರರಿಗೆ ಹೊಸದೇನಲ್ಲ. ಆದರೆ ಕೆಲವು ಕಲಾವಿದರ ಬಗ್ಗೆ ಹೇಳುವ ವಿವರಗಳು, ದಾಖಲಿಸಿರುವ ಕೆಲವು ಐತಿಹ್ಯಗಳು, ಕೊರಗ ಸಮುದಾಯದ ಪರಿಚಯ ಲೇಖನ–ಇವೆಲ್ಲ ಉಪಯುಕ್ತ ವಾಗಿವೆ. ಉಡುಪಿ ಜಿಲ್ಲೆಯ ಜನಪದದ ಸ್ಥೂಲ ಪರಿಚಯ ಮಾಡಿಕೊಳ್ಳ ಬೇಕೆನ್ನುವವರಿಗೆ ಈ ಕೃತಿ ಸಾಕು.

ಎಸ್.ಪಿ. ಪದ್ಮಪ್ರಸಾದ್

ಕೊಡಗು ಜನಪದ ಸಂಸ್ಕೃತಿ

* **ಕೊಡಗು ಜನಪದ ಸಂಸ್ಕೃತಿ:** ಸಂ. ಬಿ.ಎ. ಷಂಶುದ್ದಿನ್, ಪ್ರ: ಕೊಡಗು ಜಿಲ್ಲಾ ಕ.ಸಾ.ಪ. ಮಡಿಕೇರಿ. ಪು: ೧೩೮; ಬೆಲೆ ರೂ. ೭೦/–

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಬಿ.ಎ. ಷಂಶುದ್ದಿನ್ ಸಂಪಾದಿಸಿರುವ ವಿವಿಧ ಬರಹಗಾರರು ಬರೆದಿರುವ ಲೇಖನಗಳ ಸಂಗ್ರಹ "ಕೊಡಗು ಜನಪದ ಸಂಸ್ಕೃತಿ" ಪುಸ್ತಕ ಕೊಡಗಿನ ವೈವಿಧ್ಯಮಯ ಜನಪದ ಐತಿಹ್ಯಗಳನ್ನು ಸಮರ್ಥವಾಗಿ ಹಿಡಿದಿಟ್ಟಿದೆ.

ಯಾವುದೇ ಸಮುದಾಯದ ಮೂಲವಾಗಿರುವ ಜಾನಪದ, ಕೊಡಗಿನಲ್ಲೂ ತನ್ನ ಸಂಸ್ಕೃತಿಯನ್ನು ಅನಾವರಣಗೊಳಿಸಿರುವುದು ಈ ಪುಸ್ತಕದಿಂದ ತಿಳಿದು ಬರುತ್ತದೆ.

ಇಲ್ಲಿನ ಪ್ರಾದೇಶಿಕ ಇತಿಹಾಸ ಪರಂಪರೆ, ಜನ ಜೀವನ, ಧರ್ಮ, ಜಾತಿ, ಆಚರಣೆಗಳು, ಉಡುಗೆ ತೊಡುಗೆ, ಹಬ್ಬ ಹರಿದಿನಗಳು, ಹಾಡು, ಹಸೆ, ನೃತ್ಯ ಮುಂತಾದವುಗಳು ಸಮುದಾಯದ ಸಂಸ್ಕೃತಿಯಾಗಿ ಜಾನಪದದ ಮೂಲಕವೇ ಅನಾವರಣಗೊಂಡು ಇಂದಿಗೂ ಜೀವಂತಿಕೆಯನ್ನು ಉಳಿಸಿಕೊಂಡಿರುವುದು ಇಲ್ಲಿನ ವಿವರಗಳಿಂದ ವೇದ್ಯವಾಗುತ್ತದೆ. ಕೊಡಗಿನ ವೈಶಿಷ್ಟ್ಯಪೂರ್ಣ ಭಾಷೆಯಿಂದ ಹಿಡಿದು, ಕೊಡಗಿನಲ್ಲಿ ಕಂಡುಬರುವ ಅನೇಕ ಆಚರಣೆಗಳು ಕರ್ನಾಟಕದ ಮತ್ಯಾವ ಜನಾಂಗದಲ್ಲೂ ಕಂಡುಬರುವುದಿಲ್ಲ. ಇದೇ ಕೊಡಗು ಜನಪದ ಸಂಸ್ಕೃತಿಯ ವೈಶಿಷ್ಟ್ಯ.

ಕೊಡಗಿನ ವೀರ ಇತಿಹಾಸ ಸಾರುವ ಕೈಮಡಗಳು, ವೈಶಿಷ್ಟ್ಯಪೂರ್ಣವಾದ, ಹುತ್ತರಿಹಬ್ಬ, ಕೊಡಗಿನ ಸಂಸ್ಕೃತಿಯನ್ನು ಬಿಂಬಿಸುವ "ಉಮ್ಮತ್ತಾಟ್" ನೃತ್ಯ, ಸತ್ತ ವ್ಯಕ್ತಿಯ ಶವಸಂಸ್ಕಾರಗಳು, ಕೊಡಗಿನ ಕಾವೇರಿಯ ತೀರ್ಥೋದ್ಭವ ಆಚರಣೆಯಾದ ತುಲಾಸಂಕ್ರಮಣದ ಆಚರಣೆ ಹೀಗೆ ಕೊಡಗು ಒಂದು ರೀತಿಯ ವೈಶಿಷ್ಟ್ಯಗಳ ಹಾಗೂ ವೈವಿಧ್ಯಗಳ ಸಂಸ್ಕೃತಿಯ ನಾಡಾಗಿದೆ. ಇದು ಒಂದು ಚಿಕ್ಕ ಭಾರತದಂತಹ, ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ಜಿಲ್ಲೆಯಾಗಿದೆ.

ಕ್ರಿ.ಶ. ೨ನೆಯ ಶತಮಾನದಿಂದ ಆರಂಭವಾಗುವ ಕೊಡಗಿನ ಇತಿಹಾಸದ ಮೂಲನಿವಾಸಿಗಳಾಗಿ, ಇಲ್ಲಿ ಗೌಡರು, ಲಿಂಗಾಯತರು, ಪಿರಿಗಳು, ಅಮ್ಮಕೊಡವರು, ಮರಾಠರು ಹಾಗೂ ಬುಡಕಟ್ಟುಗಳಾದ ಮೇದರು, ಕುಡಿಯರು, ಎರವರು, ಜೇನುಚಿಟ್ಟಿ ಮತ್ತು ಕಾಡುಕುರುಬರು, ಪಣಿಯರು ಮುಂತಾದವರು ಕೊಡಗಿನ ಜನಪದ ಸಂಸ್ಕೃತಿಯನ್ನು ತಮ್ಮದೇ ಆದ ಆಚರಣೆ, ಬದುಕಿನ ವೈವಿಧ್ಯತೆಗಳ ಮೂಲಕ ಕಟ್ಟಿ ಬೆಳೆಸಿರುವುದು ಇಲ್ಲಿನ ಜನಪದ ಹಾಡುಗಳ ಮೂಲಕ ತಿಳಿಯಲ್ಪಡುತ್ತವೆ.

ಈ ಪುಸ್ತಕದಲ್ಲಿ ಒಳಗೊಂಡಿರುವ ಕೊಡಗಿನ ಜನಪದ ಹಾಡುಗಳು, ಕೊಡಗಿನ ಜಾನಪದವಿಕಾಸ ಮತ್ತು ಕೈಮಡಗಳು, ಕೊಡಗಿನ ಊರ ಹಬ್ಬಗಳು, ದೈವಕೋಲಗಳು, ಕೊಡವ ಜನಪದ ಸಂಸ್ಕೃತಿ, ಬುಡಕಟ್ಟು ಜನರ ಸಾಂಸ್ಕೃತಿಕ ಬದುಕು, ಮುಂತಾದ

ಹತ್ತು ಲೇಖನಗಳನ್ನೂ ಬರೆದಿರುವ ವಿವಿಧ ಲೇಖಕರು ಕೊಡಗು ಸಂಸ್ಕೃತಿಯ (ಜಾನಪದ) ಅನಾವರಣವನ್ನು ಅತ್ಯಂತ ವಿವರ ಪೂರ್ಣವಾಗಿ ಮಾಡಿರುವುದರಿಂದ ಈ ಪುಸ್ತಕ ಒಂದು ಸಂಶೋಧನ ಗ್ರಂಥದ ಆಯಾಮವನ್ನೇ ಹೊಂದಿದೆ. ಈ ಪುಸ್ತಕ ಮುಂದಿನ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಆಕರ ಗ್ರಂಥವಾಗಿಯೇ ನಿಲ್ಲುತ್ತದೆ.

ಬಿ.ಸಿ. ಶೈಲಾ ನಾಗರಾಜ್

ಕೋಟೆ ಪ್ರದೇಶಗಳ ಸಾಂಸ್ಕೃತಿಕ ಅಧ್ಯಯನ

* **ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಅಧ್ಯಯನ:** ಲೇ. ಕೆ.ವಿ. ಮುದ್ದುವೀರಪ್ಪ, ಪ್ರ-ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಪು:೧೬+೪೦೨, ಬೆಲೆ ರೂ. ೨೨೫/-

ಇದು ಈ ಲೇಖಕರ ಪಿಎಚ್.ಡಿ. ನಿಬಂಧ. ತುಂಬ ಪರಿಶ್ರಮ ಪೂರ್ವಕವಾದ ಕ್ಷೇತ್ರಕಾರ್ಯ ಹಾಗೂ ಸಾಕಷ್ಟು ಪರಾಮರ್ಶನ ಗ್ರಂಥಗಳ ಅವಲೋಕನ ಮಾಡಿ ಈ ಕೃತಿ ರಚಿಸಿದ್ದಾರೆ. ಒಂದು ಹೊಸ ವಿಷಯವನ್ನು ಆರಿಸಿಕೊಂಡು ವಿಷಯವನ್ನು ಸರಿಯಾದ ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡುತ್ತಾ ಕೃತಿ ರಚಿಸಿದ್ದಾರೆ. ಪ್ರತಿ ಅಧ್ಯಾಯದ ಬರವಣಿಗೆಗೂ ಸಾಕಷ್ಟು ಗ್ರಂಥಾವಲೋಕನ, ತಿರುಗಾಟ, ಸ್ಥಳೀಯ ಜನರಿಂದ ಮಾಹಿತಿ ಸಂಗ್ರಹ ಇಲ್ಲದೆ ಇಲ್ಲಿನ ಯಾವ ಅಧ್ಯಾಯದ ಬರವಣಿಗೆಯೂ ಸಾಧ್ಯವಾಗುವುದಿಲ್ಲ. ಅಂಥ ಶ್ರಮವನ್ನು ಈ ಯುವ ಲೇಖಕರು ನಿಯತ್ತಿನಿಂದ ಸಹಿಸಿಕೊಂಡು ಸಂಶೋಧನೆ ನಡೆಸಿರುವುದಕ್ಕೆ ಸಂತೋಷಿಸಬೇಕು.

ನಾಲ್ಕುನೂರು ಪುಟಗಳ ಈ ನಿಬಂಧದಲ್ಲಿ ಹನ್ನೊಂದು ಅಧ್ಯಾಯಗಳಿದ್ದು ತುಮಕೂರು ಜಿಲ್ಲೆಯಲ್ಲಿನ ವಿವಿಧ ಕೋಟೆಗಳು/ಕೋಟೆ ಅವಶೇಷಗಳ ವಿವರಣೆಯುಳ್ಳ ಐದನೇ ಅಧ್ಯಾಯವೇ ತುಂಬ ದೊಡ್ಡದು.

ಮೊದಲನೆಯ ಅಧ್ಯಾಯವು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸುತ್ತದೆ. ಎರಡನೆಯದು ಲಿಖಿತ ಸಾಹಿತ್ಯದಲ್ಲಿ ಕೋಟೆಗಳ ಉಲ್ಲೇಖ ಹೇಗೆ ಬಂದಿದೆ ಎಂಬುದನ್ನು ವಿವರಿಸುತ್ತಾ ಪ್ರಪಂಚದ ವಿವಿಧೆಡೆ ಕೋಟೆ ನಿರ್ಮಾಣದ ಕಾಲ, ಮಾರ್ಗೀಯ ಸಾಹಿತ್ಯದಲ್ಲಿ ಆ ಬಗೆಗಿರುವ ಹಲವಂಶಗಳ ಉಲ್ಲೇಖ ಇವೆಲ್ಲ ಇವೆ. ಇದೇ ಅಧ್ಯಾಯದ ಇನ್ನೊಂದು ಭಾಗದಲ್ಲಿ 'ಮೌಖಿಕ ಸಾಹಿತ್ಯದಲ್ಲಿ ಕೋಟೆಗಳ ಉಲ್ಲೇಖ' ಹೇಗೆ ಬಂದಿದೆ ಎಂಬುದನ್ನು ವಿವರಿಸುತ್ತದೆ. ಇದು ಮುಖ್ಯವಾಗಿ ಕನ್ನಡ ಜನಪದ ಗೀತೆಗಳಲ್ಲಿ ಕರ್ನಾಟಕದ ವಿವಿಧೆಡೆಗಳಲ್ಲಿ, ಅಂದರೆ ಚಿತ್ರದುರ್ಗ, ಕಮ್ಮಟದುರ್ಗ, ಬೆಂಗಳೂರು, ಸಿರಾ ಮೊದಲಾದೆಡೆ ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇರುವ ಐತಿಹ್ಯ/ಗೀತೆಗಳನ್ನು ಅಗತ್ಯಾನುಸಾರ ಆಯ್ದು ಭಾಗಶಃ ಉಲ್ಲೇಖಿಸಿದ್ದಾರೆ.

ಮುಂದಿನ ಭಾಗ ಅಂದರೆ ಮೂರನೇ ಅಧ್ಯಾಯವು 'ಮೌಖಿಕ ಚರಿತ್ರೆಗಳ ಮಹತ್ವ'ವನ್ನು ವಿವರಿಸುತ್ತದೆ. ಇದು ಬಹುಶಃ ಅಗತ್ಯವಿರಲಿಲ್ಲ. ಏಕೆಂದರೆ ಮೌಖಿಕ ಚರಿತ್ರೆಗಳೂ ಮಹತ್ವಪೂರ್ಣವಾದವು ಎಂಬುದನ್ನು ಚರಿತ್ರಕಾರರು ಎಂದೋ ಒಪ್ಪಿಕೊಂಡಾಗಿದೆ. ಗ್ರಂಥಕ್ಕೊಂದು ಸಮಗ್ರತೆ ಇರಲಿ ಎಂಬ ಕಾರಣಕ್ಕೆ ಇಪ್ಪತ್ನಾಲ್ಕು ಪುಟಗಳ ಈ ಅಧ್ಯಾಯವನ್ನು ಇರಿಸಿಕೊಂಡಿರಬಹುದು. ಆದರೆ ಇಲ್ಲಿ ಮೌಖಿಕ ಚರಿತ್ರೆಯ ಮಹತ್ವನ್ನು ಎತ್ತಿಹಿಡಿಯುವ ಭರದಲ್ಲಿ ಲಿಖಿತ ಇತಿಹಾಸದ ಆಕರವನ್ನು ಹೀಗೆಳೆಯುವ ಧಾಟಿಯಲ್ಲಿ ಮಾತನಾಡಿದ್ದಾರೆ ಎನಿಸುತ್ತದೆ. 'ಇತಿಹಾಸವು ಯಾವುದೋ ಒಂದು ವರ್ಗದ ಹಿತಕ್ಕೆ ಹುಟ್ಟಿರುವಂತಹದು'– ಎಂದು ಸಾರಾಸಗಟಾಗಿ ಹೇಳುತ್ತಾರೆ. 'ಪ್ರವಾಸೀ ಬರಹಗಳನ್ನು ಬರೆಯುವವರು ಆಡಳಿತ ನಡೆಸುವವರ ಕೈಗೊಂಬೆಗಳಾಗಿದ್ದರು' ಎನ್ನುತ್ತಾರೆ (ಪುಟ.೪೮). ರಾಜರ ಆಸ್ಥಾನದಲ್ಲಿದ್ದು ಅಕಬರ್ ನಾಮಾ ಬಾಬರ್‌ನಾಮಾದಂತಹ ಬರಹಗಳನ್ನು ಬರೆದವರಿಗೆ ಆಳುವವರನ್ನು ಕೊಂಡಾಡುವ ಅಗತ್ಯವಿರುತ್ತದೆ. ಆದರೆ ರಾಜರ ಜೊತೆಗೆ ಪಡೆಯಲ್ಲಿ ಓಡಾಡುತ್ತಾ ತಾವು ಕಂಡದ್ದನ್ನು ತಮ್ಮ ಪಾಡಿಗೆ ದಾಖಲಿಸಿದವರಿದ್ದಾರೆ. ಅದೇ ರೀತಿ, ಫಾಹಿಯಾನ್, ಹ್ಯುಯನ್‌ತ್ಸಾಂಗ್, ಟಾಲೆಮಿ, ಸಿಂದಾಬಾದ್‌ನಂಥ ಪ್ರವಾಸಿಗರು, ನಿಕೋಲೋ ಕೊಂಟಿ, ಪಿಯಾಜ್‌ನಂಥವರು ಆಳುವವರ ಕೈಗೊಂಬೆಳಾಗಿದ್ದವರೆಂದು ಭಾವಿಸುವುದು ಸರಿಯೇ? ಇಂಥ ಸರಳೀಕೃತ ಮಾತುಗಳು ಬರಹದ ಮೌಲ್ಯವನ್ನು ತಗ್ಗಿಸುತ್ತವೆ.

ಅದೇ ರೀತಿಯ ಹೇಳಿಕೆಗಳು ಈ ಅಧ್ಯಾಯದಲ್ಲಿ ಮುಂದೆಯೂ ಅಲ್ಲಲ್ಲಿ ಕಂಡುಬರುತ್ತವೆ. 'ಜನ ಸಮುದಾಯಗಳನ್ನು ಪ್ರಭುತ್ವದಿಂದ ದೂರ ಇರಿಸಲಾಗಿತ್ತು. ಜನಸಮುದಾಯಗಳು ಹತ್ತಿರದಿಂದ ನೋಡಿದ ಘಟನೆಗಳು ವಿರಳವೆನ್ನಬಹುದು. ಆದ್ದರಿಂದ ಈ ಸಾಮ್ರಾಜ್ಯದ ರಾಜರುಗಳ ಬಗೆಗೆ ಕಥನ ಗೀತೆಗಳು ಕಂಡು ಬರುವುದಿಲ್ಲ' ಎಂದು ವಿಶ್ಲೇಷಿಸುತ್ತಾರೆ (ಪುಟ ೫೫). ಇದು ಜನಪದ ಗೀತೆಗಳು ಪಾಳೆಯಗಾರರ ಬಗೆಗೆ ಇವೆಯೇ ವಿನಃ ವಿಷ್ಣುವರ್ಧನ, ಪುಲಿಕೇಶಿ ಮೊದಲಾದವರ ಬಗೆಗೆ ಯಾಕೆ ಇಲ್ಲ ಎಂಬುದನ್ನು ಸಮರ್ಥಿಸಲು ಇವರು ನೀಡುವ ಕಾರಣ.

ಆದರೆ ಹೀಗೆ ತೀರ್ಮಾನಿಸುವಾಗ ನಾವು ಕೆಲವು ಅಂಶಗಳನ್ನು ನೆನಪಿಡಬೇಕು. ಒಬ್ಬ ರಾಜನ ರಾಜ್ಯದ ವ್ಯಾಪ್ತಿ ಹೆಚ್ಚಿದಷ್ಟು ಅವನಿಗೆ ಶತ್ರುಗಳೂ ಹೆಚ್ಚುತ್ತಾರೆ. ಆದ್ದರಿಂದ ಅವನಿಗೆ ಹೆಚ್ಚು ರಕ್ಷಕ ಭಟರ ಕಾವಲು ಅಗತ್ಯವಾಗಿ ಜನ ಸಾಮಾನ್ಯರೊಡನೆ ಹೆಚ್ಚು ಬೆರೆಯಲಾಗುವುದಿಲ್ಲ. ಇದನ್ನು ಸರಿದೂಗಿಸಲೆಂದೇ ಅವರು ಆಗಾಗ ಮಾರುವೇಷದಲ್ಲಿ ಆಪ್ತ ಸಂಗಾತಿಗಳೊಡನೆ ನಗರದಲ್ಲಿ ಸುತ್ತಾಡಿ ಸಾಮಾನ್ಯ ಜನರಿಂದ ಮಾಹಿತಿ ಪಡೆಯುತ್ತಾರೆ. ಅಲ್ಲದೆ ಸಾಮಾನ್ಯ ಜನರೂ ಬಂದು ರಾಜನೊಡನೆ ತಮ್ಮ ಗೋಳನ್ನು

ತೋಡಿಕೊಂಡ ಘಟನೆಗಳನ್ನು ನಾವು ಕೇಳುತ್ತೇವೆ. ಇವನ್ನೆಲ್ಲ ಹೇಳುವಂಥ ಅನೇಕ ಕತೆಗಳು ಜನಪದದಿಂದಲೇ ಸೃಷ್ಟಿಯಾಗಿವೆ. ಆದ್ದರಿಂದ ದೊಡ್ಡರಾಜರು ಸಾಮಾನ್ಯ ಜನರನ್ನು ದೂರ ಇಟ್ಟಿದ್ದರು ಎಂಬಂತಹ ಮಾತುಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕು. ಪುಲಕೇಶಿಯಂಥವರ ಕಾಲದಲ್ಲಿ ಅವರ ಬಗೆಗೆ ಹುಟ್ಟಿದ ಐತಿಹ್ಯ/ ಜನಪದ ಗೀತೆಗಳೇ ಕಾಲಾಂತರದಲ್ಲಿ ಬೇರೆ ಬೇರೆ ಕತೆಗಳಲ್ಲಿ, ಕಾವ್ಯಗಳಲ್ಲಿ ಸೇರಿಹೋಗಿರುವ ಸಾಧ್ಯತೆ ಇಲ್ಲದಿಲ್ಲ. ಜನಪದ ಕತೆ/ಗೀತೆಗಳ ದಾಟಿಬರುವಿಕೆಯಲ್ಲಿ ಆಶಯ ಮತ್ತು ವರ್ಗಗಳು ಮುಖ್ಯವಾಗಿ ಉಳಿದುಕೊಳ್ಳುತ್ತವೆಯೇ ವಿನಾ ಅಂಕಿತನಾಮಗಳು ಅಲ್ಲಿ ಮುಖ್ಯವಾಗುವುದಿಲ್ಲ.

ನಾಲ್ಕನೇ ಅಧ್ಯಾಯದ ಶೀರ್ಷಿಕೆ 'ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕತೆ' ಎಂದಿದೆ. ಆದರೆ ಈ ಅಧ್ಯಾಯದಲ್ಲಿ ಜಿಲ್ಲೆಯ ವಿವಿಧ ಕೋಟೆಗಳ ರಚನೆ, ಅದರ ಇತಿಹಾಸ, ಅವುಗಳ ಈಗಿನ ಸ್ವರೂಪ, ಅದರಲ್ಲಿರುವ ದೇವಾಲಯಗಳು– ಇಂಥ ವಿಚಾರಗಳಿವೆಯೇ ವಿನಾ ಸಾಂಸ್ಕೃತಿಕ ಅಂಶಗಳು ಕಾಣುವುದಿಲ್ಲ. (ಅವು ಮುಂದಿನ ಅಧ್ಯಾಯಗಳಲ್ಲಿ ತೃಪ್ತಿಕರವಾಗಿವೆ). ಇಷ್ಟಕ್ಕೂ – 'ಕೋಟೆಗಳ ಸಾಂಸ್ಕೃತಿಕತೆ' ಎಂದರೆ ಅರ್ಥವಾದರೂ ಏನು? ಕೋಟೆಗೆ ಒಂದು ವಾಸ್ತು, ಇತಿಹಾಸ ಇರುತ್ತದೆ. ನಮ್ಮ ಸಂಸ್ಕೃತಿಯ ಒಂದು ಅಂಶ ಕೋಟೆಕ್ಷೇತ್ರಗಳೇ ವಿನಃ ನಿರ್ಜೀವ ಕೋಟೆಯೇ ಸಾಂಸ್ಕೃತಿಕತೆಯನ್ನು ಹೊಂದಿರುವುದೆಂದು ಹೇಳಲಾಗದು. 'ಕೋಟೆ ಪ್ರದೇಶಗಳ ಸಾಂಸ್ಕೃತಿಕತೆ' ಎಂದಾದರೂ ಹೇಳಬಹುದಿತ್ತು. ಅದು ಹೇಗೇ ಇದ್ದರೂ ಈ ಅಧ್ಯಾಯದಲ್ಲಿ ವಿವರಿಸುವುದು ತುಮಕೂರು ಜಿಲ್ಲೆಯಲ್ಲಿನ ಹದಿಮೂರು ಕೋಟೆ ಹಾಗೂ ಅದರ ಅವಶೇಷಗಳ ಸರಿಯಾದ ವಿವರಣೆ. ಈ ಎಲ್ಲ ಪ್ರದೇಶಗಳನ್ನು ಲೇಖಕರು ಹಲವಾರು ಬಾರಿ ಸಂದರ್ಶಿಸಿರುವುದು ಸ್ಪಷ್ಟ. ಇದು ಸಾಕಷ್ಟು ಶ್ರಮದ ಕೆಲಸ.

ಮುಂದಿನ ಅಧ್ಯಾಯಗಳಲ್ಲಿ 'ಕೋಟೆಗಳಿರುವ ಪ್ರದೇಶದ ಸ್ಥಳನಾಮಗಳು', 'ಕೋಟೆಗಳ ನಿರ್ಮಾಣದ ಮೌಖಿಕ ಕಥನಗಳು' 'ಸಂಸ್ಥಾನಗಳು ಹುಟ್ಟುವಾಗಿನ ಮೌಖಿಕ ಕಥನಗಳು', 'ಕೋಟೆಗಳ ಬಲಿ ಆಚರಣೆಗಳು', 'ತುಮಕೂರು ಜಿಲ್ಲೆಯಲ್ಲಿನ ಕೋಟೆಯಲ್ಲಿನ ಐತಿಹ್ಯಗಳು'– ಇವುಗಳನ್ನು ವಿವರವಾಗಿ ಸಂಗ್ರಹಿಸಿ ಸಾದರಪಡಿಸಲಾಗಿದೆ. ಇಲ್ಲಿ ಸಾಕಷ್ಟು ಮೂಲಸಾಮಗ್ರಿಯಿದೆ. ಇವುಗಳ ಜೋಡಣೆ ಪರಸ್ಪರ ಪೂರಕ ರೀತಿಯಲ್ಲಿದೆ. ವಿಶ್ಲೇಷಣೆಯಲ್ಲಿ ಅಲ್ಲಲ್ಲಿ ತುಸು ಆತುರ ಕಾಣುತ್ತದೆ. ಉದಾಹರಣೆಗೆ – ಕೋಟೆ ಕಟ್ಟುವಾಗಿನ ಕುರಿತಾದ ಐತಿಹ್ಯಗಳ ಪೈಕಿ ಕೆಲವಲ್ಲಿ 'ಸ್ತ್ರೀಯ ಗುಪ್ತಾಂಗವನ್ನು ನೋಡಿ ಗಂಡು ವೀರ್ಯ ಸ್ಖಲಿಸಿ ಶಕ್ತಿಹೀನನಾಗುವುದನ್ನು' ಕುರಿತ ಹೇಳಿಕೆ ಇರುವುದನ್ನು ವಿವೇಚಿಸುತ್ತಾ 'ಸ್ತ್ರೀಯನ್ನು ಯಾಕೆ ಈ ಕಥನಗಳಲ್ಲಿ ಇಷ್ಟೊಂದು ಕೀಳಾಗಿ ಕಾಣಲಾಗಿದೆ? ಎನ್ನುತ್ತಾ

'ಹದಿನಾರನೇ ಶತಮಾನದಲ್ಲಿ ಶರಣ ಚಳುವಳಿಗೆ ಸಾಂಸ್ಥಿಕ ರೂಪ ಕೊಡುವ ಪ್ರಯತ್ನ ನಡೆದದ್ದೇ ಕಾರಣ' ಎನ್ನುವ ಅನುಮಾನ ತಾಳುತ್ತಾರೆ. ಆದರೆ ವಾಸ್ತವವಾಗಿ ಅವರ ಮೂಲ ಪ್ರಶ್ನೆಯೇ ಸರಿಯಿಲ್ಲ. ಸ್ತ್ರೀಯನ್ನು ನೋಡಿ ಒಬ್ಬಾತನಿಗೆ ಸ್ಖಲನವಾದರೆ ಅದು ಅವನ ದೌರ್ಬಲ್ಯದ ಸಂಕೇತವೇ ವಿನಃ ಅಂಥ ಹೇಳಿಕೆ ಸ್ತ್ರೀಯನ್ನು ಕೀಳಾಗಿ ನೋಡಿದ್ದಕ್ಕೆ ಸಾಕ್ಷ್ಯವಾಗುವುದಾದರೂ ಹೇಗೆ ? (ಪುಟ – ೨೭೨–೭೩).

ಪುಸ್ತಕದ ಕೊನೆಯಲ್ಲಿ ಕೆಲವು ಉಪಯುಕ್ತ ಚಿತ್ರಗಳು, ಅನುಬಂಧದಲ್ಲಿ ಕ್ರಮಬದ್ಧವಾದ ಗ್ರಂಥಸೂಚಿ ಹಾಗೂ ಮಾಹಿತಿ ನೀಡಿದ ವಕ್ತೃಗಳ ವಿವರಗಳಿವೆ. ಇಂಥ ಅಂಶಗಳಲ್ಲೆಲ್ಲ ಲೇಖಕರು ಸಂಶೋಧನ ಬರಹದ ಶಿಸ್ತನ್ನು ಅರ್ಥಮಾಡಿ ಕೊಂಡಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ, ಒಂದು ಹೊಸ ವಿಷಯವನ್ನು ಆರಿಸಿಕೊಂಡು ಈ ಲೇಖಕರು ಇಂಥ ವಿಷಯವನ್ನು ಹೇಗೆ ಅಧ್ಯಯನ ಮಾಡಬಹುದೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಇತರ ಜಿಲ್ಲೆಗಳಲ್ಲಿ ಇಂಥ ಅಧ್ಯಯನ ನಡೆಸಲು ಇದೊಂದು ಮಾದರಿಯಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಹರಳಯ್ಯನನ್ನು ಕುರಿತು ಜಾನಪದೀಯ ಅಧ್ಯಯನ

* **ಕಗ್ಗುಂಡಿ ಪಂಚಜ್ಯೋತಿ ಹರಳಯಸ್ವಾಮಿ:** ಸಂ. ಪಿ.ಕೆ. ರಾಜಶೇಖರ. ಪ್ರಕಾಶಕರು: ದಾಸ್ತಿ ಪ್ರಕಾಶನ, #೧೦೩೧, ಸಿಎಜಿ ಕಾಂಪ್ಲೆಕ್ಸ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು – ೧೨+೧೦೦. ಬೆಲೆ ರೂ. ೧೦೦/–

ಕನ್ನಡ ಸಾಹಿತ್ಯದಲ್ಲಿ ವಚನ ಚಳುವಳಿ ಪ್ರಧಾನವಾದುದು. ಭಕ್ತಿಪಂಥ ಭಕ್ತಿಗಷ್ಟೇ ಮೀಸಲಾಗಿರದೆ ಧಾರ್ಮಿಕ, ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಪ್ರಯತ್ನಿಸಿದೆ.

ನಮ್ಮ ಶ್ರೇಷ್ಠ ಜಾನಪದ ವಿದ್ವಾಂಸರಲ್ಲೊಬ್ಬರಾದ ಪಿ.ಕೆ. ರಾಜಶೇಖರ್ ರವರು ಸಂಪಾದಿಸಿ, ಹೊರತಂದಿರುವ 'ಕಗ್ಗುಂಡಿ ಪರಂಜ್ಯೋತಿ ಹರಳಯ್ಯ ಸ್ವಾಮಿ' ಕೃತಿಯು ಸಾಮಾಜಿಕ ಮತ್ತು ಧಾರ್ಮಿಕ ಪರಿವರ್ತನೆಗೆ ಕಾರಣರಾದ ಒಬ್ಬ ಶಿವಶರಣನ ವಿಚಾರಗಳನ್ನು ಪರಿಚಯಿಸುತ್ತದೆ. ಅಲ್ಲದೆ ಜನಪದರಲ್ಲಿ ಬೆಳೆದ ನಂಬಿಕೆಯು ಹರಳಯ್ಯನನ್ನು ಚೈತನ್ಯ ರೂಪವಾಗಿ ನಿರಂತರ ಚಲನ ಶಕ್ತಿಯಾಗಿ ಜನಮಾನಸದಲ್ಲಿ ಉಳಿಯುವಂತೆ ಮಾಡಿರುವ ಕಥನಗಳು ಸಾಕ್ಷಿ ಎಂಬಂತೆ ಕಂಡು ಬರುತ್ತವೆ.

ಈ ಕೃತಿಯಲ್ಲಿರುವ ದೇ. ಜವರೇಗೌಡರ "ಹರಳಯ್ಯ ಸ್ವಾಮಿಗೆ ನಮಸ್ಕಾರ" ಬರಹವೂ ಕೂಡ ಕೃತಿಗೆ ಮೆರುಗನ್ನು ನೀಡಿದೆ.

ಈ ಕೃತಿಯ ಮೊದಲ ಭಾಗದಲ್ಲಿ ಮಹಾಪ್ರಯಾಣ, ಅಡಿಗೆ ಪವಾಡ, ಆಂಜನೇಯನಿಗೆ ಲಿಂಗ ದೀಕ್ಷೆ ನೀಡಿದ ಪವಾಡ, ಆಂಜನೇಯ ಕಬ್ಬಿನರಸ ಹಿಳಿದ ಪವಾಡ, ಹುಲಿಗಳೊಡನೆ ಸರಸವಾಡಿದ ಪವಾಡ, ಬಂಡೆ ಸಿಡಿಸಿ ಬಸವನನ್ನು ಸೃಷ್ಟಿಸಿದ ಪವಾಡ, ಅಕ್ಷಯ ಪ್ರಸಾದ ಪವಾಡ, ಇಮ್ಮಡಿ ಹರಳಯ್ಯ ಸ್ವಾಮಿಗಳಿಗೆ ಕೋಡಿಹಳ್ಳಿ ಮಠದ ಪಟ್ಟಾಧಿಕಾರ, ಮಹಾಸಂಗಮ, ಗುಂಡ ಬ್ರಹ್ಮಯ್ಯಗಳ ಬಿರುದಾವಳಿಗಳು ಹರಳಯ್ಯನವರಿಗೆ, ಶರಣರ ಸ್ವತ್ತು ಶರಣರಿಗೇ ಸಲ್ಲಬೇಕು. ಸವಾಲಿಗೆ ಉತ್ತರ ಪಂಥವಾದಿಗಳು ತತ್ತರ, ಪ್ರಪಂಚದ ಮಹಿಳಾ ಜಗದ್ಗುರು ಜಡೆಯಮ್ಮ, ಕಾಶ್ಮೀರದಿಂದ ಬಂದವರಿಗೆ ಆಶ್ರಯ ಯಾರು ಲೋಕ ಕಲ್ಯಾಣಕಾರರು? ಚಂದ್ರಪ್ರಭ ತೀರ್ಥಂಕರ ಅಲ್ಲ, ಚಂದ್ರಮೌಳೇಶ್ವರ, ಪುಣ್ಯಭೂಮಿ ಕಗ್ಗುಂಡಿ, ಪರಂಜ್ಯೋತಿ ಕಗ್ಗುಂಡಿ ಪರಂಜ್ಯೋತಿ ಹರಳಯ್ಯಗುರು, ಕಗ್ಗುಂಡಿಯಲ್ಲಿ ಹರಳಯ್ಯನವರ ವಂಶಿಕರು ಹೀಗೆ ಒಟ್ಟು ೧೯ ಅಧ್ಯಾಯಗಳಿವೆ.

೨ನೇ ಭಾಗದಲ್ಲಿ ೧೯೮೨ರಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಬುರುಡೇ ಘಟ್ಟದ ಕರಪಾಲ ತಿಮ್ಮಯ್ಯನವರು ಹಾಡಿದ "ಕರಪಾಲ ಹರಳಯ್ಯನಕಥೆ" ಯನ್ನು ಯಥಾರೀತಿ ನೀಡಲಾಗಿದೆ.

೩ನೇ ಭಾಗದಲ್ಲಿ ೧೯೮೪ರಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೋಕಿನ ಕಂಪಲಾಪುರದ ನೀಲಗಾರ ರಾಚಯ್ಯ ಅಥವಾ ಗುರುಕಾರಯ್ಯ ಎಂಬುವವರು ಹಾಡಿದ "ಕಗ್ಗುಂಡಿ ಪರಂಜ್ಯೋತಿ ಹರಳಯ್ಯ" ನವರ ಹಾಡನ್ನು ಕಾಣುತ್ತೇವೆ.

ಈ ಮೂರೂ ಭಾಗದಲ್ಲಿ ಮುಖ್ಯವಾಗಿ ಗಮನ ಸೆಳೆಯುವ ದಾಖಲಾತಿ ಯನ್ನು ಒದಗಿಸುವ ಅಂಶವೆಂದರೆ ವಿವಿಧ ಸ್ಥಳದ ಭಾವಚಿತ್ರಗಳು ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣ ತಾಲ್ಲೂಕಿನ ಕಗ್ಗುಂಡಿಯಲ್ಲಿ ಕಂಡು ಬರುವ ಸ್ಥಳ ಚಿತ್ರಗಳಾದ ಶ್ರೀ ಗುರು ಹರಳಯ್ಯನವರ ಗದ್ದುಗೆ, ಜಗದ್ಗುರು ಹರಳಯ್ಯನವರ ಮಠ, ಹಾಸನ ಜಿಲ್ಲೆಯ ಕೋರಮಂಗಲದಲ್ಲಿ ಬರುವ ರೇಣುಕೆ ಎಲ್ಲಮ್ಮದೇವಿ ಗುಡಿ, ಎಲ್ಲಮ್ಮದೇವಿ ಮತ್ತು ಮಾತಂಗಿ. ಬಿದುರುಕೋಟೆಯ ಜಡೆಯಮ್ಮನ ವರ ಗದ್ದುಗೆ, ಕಗ್ಗುಂಡಿ ಗ್ರಾಮದ ಶ್ರೀ ಹರಳಯ್ಯನವರು, ಬೃಹನ್ಮಠದ ಶ್ರೀ ರುದ್ರಸ್ವಾಮಿ, ಚಿಕ್ಕನಂದಿಯ ಜಗದ್ಗುರು ಶ್ರೀ ಹರಳಯ್ಯನವರ ವಾಸ್ತವ್ಯ ಕುರಿತ ಭಾವಚಿತ್ರಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಕೃತಿಯಲ್ಲಿ ಬಳಸಿಕೊಂಡಿರುವುದು ಒಂದು ವಿಶೇಷ.

'ಕಗ್ಗುಂಡಿ ಪರಂಜ್ಯೋತಿ ಹರಳಯ್ಯ ಸ್ವಾಮಿ' ಭಾಗದಲ್ಲಿ ಬ್ರಾಹ್ಮಣ ಮಧುವರಸನ ಮಗಳನ್ನು ಮಾದಾರ ಹರಳಯ್ಯನ ಮಗನಿಗೆ ಕೊಟ್ಟು ಮದುವೆ ಮಾಡಿದ ಪ್ರಸಂಗ, ವಿವೇಕ ಶೂನ್ಯನಾಗಿದ್ದ ಬಿಜ್ಜಳನು ಎಳೆಹೂಟೆ ಶಿಕ್ಷೆಗೆ ಗುರಿಪಡಿಸಿದ ವಿಚಾರ, ಶರಣರಾದ

ಹರಳಯ್ಯ ತಮಗೆ ಸರಿಯೆನಿಸಿದ ಕಡೆಗೆ ಪ್ರಯಾಣ ಬೆಳೆಸಿದ ಕಡೆಯಲ್ಲೆಲ್ಲ ಪವಾಡಗಳನ್ನು ಮಾಡಿ ಆಕರ್ಷಿಸಿದ ರೀತಿ, ಅದರಲ್ಲೂ ಹುಲಿಗಳೊಡನೆ ಸರಸವಾಡಿದ ಪವಾಡವಂತೂ ಹೆಚ್ಚು ಓದುಗರನ್ನು ಆಕರ್ಷಿಸುವುದು.

ಗುಂಡ ಬ್ರಹ್ಮಯ್ಯಗಳ ಬಿರುದಾವಳಿಗಳನ್ನು ಹರಳಯ್ಯನಿಗೆ ನೀಡುವುದು ವಿಶೇಷವೆನಿಸುವುದು ಮತ್ತು ಮುಂದಿನ ಭಾಗದಲ್ಲಿ ಪ್ರಪಂಚದ ಪ್ರಪ್ರಥಮ ಮಹಿಳಾ ಜಗದ್ಗುರುವಾಗಿ ಜಡೆಯಮ್ಮನನ್ನು ಬಿದರೆಕೆರೆ ಮಠದ ಶೂನ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ, ಜಡೆಯಮ್ಮನು ಸಮಾಜ ಸೇವೆ ಮಾಡುತ್ತಾ ಧರ್ಮ ಪ್ರಸಾರದಲ್ಲಿ ತೊಡಗಿದ ವಿಚಾರವನ್ನು ಕೇಳಿದಾಗ ಮಹಿಳೆಗೆ ಭೇದವಿಲ್ಲದೆ ಸಮಾನ ಅವಕಾಶ ನೀಡಿದ್ದು ಮುಖ್ಯವೆನಿಸುತ್ತದೆ.

ಕಗ್ಗುಂಡಿ ಗ್ರಾಮದ ಹೆಸರು ಹೇಗೆ ಬಂದಿತೆಂಬ ಬಗ್ಗೆ ಬಸವನ ಗುಡಿಯ ಬಳಿಯಿರುವ ಶಿಲಾಶಾಸನದ ವಿವರಗಳು, ಹರಳಯ್ಯನ ವಂಶಿಕರ ವಿಚಾರವು ಒಳಗೊಂಡು ಸಮಗ್ರ ಮತ್ತು ಗದ್ಯದ ರೂಪದಲ್ಲಿ ನೀಡಲಾದ ಮಾಹಿತಿಯ ಓದುಗರಿಗೆ ಸುಲಭವಾಗಿ ದಕ್ಕುತ್ತದೆ.

ಇನ್ನು ಎರಡನೇ ಭಾಗದಲ್ಲಿರುವ ಕರಪಾಲ ಹರಳಯ್ಯನವರ ಕಥೆಯು ಶಿಷ್ಯ ಮತ್ತು ನಿರೂಪಕನ ನಡುವೆ ನಡೆಯುವ ಸಂಭಾಷಣೆ ರೂಪದಲ್ಲಿದೆ. ಶಿಷ್ಯನ ಪ್ರಶ್ನೆಗೆ ತಕ್ಕಂತೆ ಉತ್ತರವನ್ನು ನಿರೂಪಕ ನೀಡುವುದು ಸಮಂಜಸವೆನ್ನಿಸುತ್ತದೆ. ನಿರೂಪಕನು ವಿಚಾರಗಳನ್ನು ಹೇಳುವಾಗ ಮೂರು ಸಾಲಿನ ಪದ್ಯವನ್ನು ಬಳಸುತ್ತಾನೆ. ಇದು ಹರಿಕತೆಯ ಮಾದರಿಯಲ್ಲಿ ನಿರೂಪಕನು ಕತೆಯನ್ನು ನಿರೂಪಿಸುತ್ತಾ ಸಾಗಿದರೆ ಶಿಷ್ಯನ ಪ್ರಶ್ನೆಗಳು ಕತೆಯನ್ನು ವಿಸ್ತರಿಸಲು ನೆರವಾಗಿವೆ. ಹರಿಕತೆಯಂತೆಯೇ ಇಲ್ಲಿ ವಿವಿಧ ಮಟ್ಟುಗಳ ಹಾಡುಗಳಿವೆ. ಸರ್ವಜ್ಞ ತ್ರಿಪದಿಯ ಬಳಕೆಯೂ ಇಲ್ಲಿದೆ.

ಈ ಭಾಗದಲ್ಲಿ ಬಸವಣ್ಣ, ಜೇಡರದಾಸಿಮಯ್ಯನ ವಚನಗಳ ಬಳಕೆ, ಮಾದರಸ ಹರಳಯ್ಯ ಸಂಭಾಷಣೆ, ಪಾದುಕೆಗಳನ್ನು ಮಾದರಸ ಧರಿಸುತ್ತಿದ್ದಂತೆ ಆಗುವ ಅನುಭವ, ಮಧುವರಸ ಮತ್ತು ಅವನ ತಾಯಿಯ ಸಂಭಾಷಣೆ, ಶತಕಗಳ ಬಳಕೆ ವಿಶಿಷ್ಟರೂಪದಲ್ಲಿ ಹರಳಯ್ಯನ ವಿಚಾರವನ್ನು ಮನಮುಟ್ಟುವಂತೆ ಹೇಳುವ ರೀತಿ ಸೊಗಸಾಗಿದೆ.

'ಕಗ್ಗುಂಡಿ ಪರಂಜ್ಯೋತಿ ಹರಳಯ್ಯ' ಎಂಬ ಮೂರನೆಯ ಭಾಗದಲ್ಲಿ ನೀಲಗಾರ ರಾಚಯ್ಯನು ಹಾಡಿದ ಸಂಗ್ರಹವು ದ್ವಿಪದಿರೂಪದಲ್ಲಿದ್ದು ಒಟ್ಟು ೩೩೭ ಸಾಲುಗಳಲ್ಲಿ ಮೂಡಿ ಬಂದಿದೆ. ನೇರವಾದ ನಡಿಗೆಯೊಂದಿಗೆ ಸಾಗುವ ಪದ್ಯವು ಸಾಮಾನ್ಯರೂ ಸರಾಗವಾಗಿ ಓದಿ ಸುಲಭವಾಗಿ ಅರ್ಥಯಿಸಿಕೊಳ್ಳಬಹುದಾಗಿದೆ.

ಒಟ್ಟಾರೆ ಈ ಕೃತಿಯು ಹರಳಯ್ಯ ಸ್ವಾಮಿ ಶರಣನು ನಡೆಸಿದ ಅಂತರ್ಜಾತಿ ವಿವಾಹದ ವಿವರಗಳು, ಬಿಜ್ಜಳನಿಂದ ಬೇಸತ್ತ ಶರಣರು ಪ್ರಯಾಣ ಬೆಳೆಸಿದ ಕಡೆಯಲ್ಲಿ

ನಡೆಸಿದ ಪವಾಡಗಳು ಜನರ ಮನಸ್ಸಿನಲ್ಲಿ ಪರಿಣಾಮ ಉಂಟು ಮಾಡಿ ಆಕರ್ಷಿಸುವ ವಿವರಗಳು, ಸ್ಥಳ ಐತಿಹ್ಯದ ಶಾಸನ ನೀಡುವ ವಿವರಗಳು– ಹೀಗೆ ಎಲ್ಲವನ್ನು ವಿವರವಾಗಿ ತೆರೆದಿಡುತ್ತದೆ.

ಒಟ್ಟಿನಲ್ಲಿ ಇದು ಹರಳಯ್ಯನೆಂಬ ಅಸ್ಪೃಶ್ಯಕುಲದ ಶರಣನೊಬ್ಬ ಮಹಿಮಾವಂತನಾಗಿ ಬೆಳೆದು ಪವಾಡಗಳನ್ನು ಮೆರೆದ ಕಥೆ. ಜನಪದ ಮಾನಸದಲ್ಲಿ ಬಸವಣ್ಣ ನಡೆಸಿದ ಅಂತರ್ಜಾತೀಯ ವಿವಾಹವು ನೆಲೆನಿಂತು ಅದು ಬಸವಣ್ಣ, ಹರಳಯ್ಯ, ಮಧುವರಸರ ಶರಣತ್ವದ ಶಕ್ತಿಯನ್ನು ಮೆರೆಸಿತೆಂಬ ನಂಬುಗೆ, ಆ ನೆಲೆಯಲ್ಲಿ ಸೃಷ್ಟಿಯಾದ ಜನಪದ ಕಾವ್ಯ, ಐತಿಹ್ಯ ಎಲ್ಲ ಇಲ್ಲಿ ಶಾಸ್ತ್ರೀಯವಾದ ರೀತಿಯಲ್ಲಿ ಸಂಗ್ರಹಿಸಲ್ಪಟ್ಟಿವೆ. ರಾಜಶೇಖರ ಅವರು ಈ ಕೃತಿಯ ಮೂಲಕ ಮತ್ತೊಂದು ಒಳ್ಳೆಯ ದಾಖಲಾತಿಯ ಕೆಲಸವನ್ನು ಮಾಡಿದ್ದಾರೆ.

ಆರ್. ಶಾಂತ, ಕಂಪಾರಹಳ್ಳಿ

ಅಧ್ಯಾಯ ೫

ವೈದ್ಯಕೀಯ

ಸುಲಭ ಸಂಜೀವಿನಿ, ಮನೆ ಮದ್ದಿನ ಕೈಪಿಡಿ

* **ಸುಲಭ ಸಂಜೀವಿನಿ** – ಮನೆ ಮದ್ದಿನ ಕೈಪಿಡಿ– ಲೇ॥ ಪಿ. ಸತ್ಯನಾರಾಯಣಭಟ್, ಪ್ರ: ಪ್ರಸಾರಾಂಗ ಕನ್ನಡ ವಿ.ವಿ.– ಹಂಪಿ: ಪು–೫+೧೩೪; ಬೆಲೆ ರೂ. ೮೦/–

"ನಿಸರ್ಗದತ್ತ ಸಸ್ಯವೈಭವವನ್ನು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಒಂದು ಪುಟ್ಟ ಹೆಜ್ಜೆ ಇಲ್ಲಿದೆ. ಕನ್ನಡ ನಾಡಿನ ಅಪರಿಮಿತ ಸಸ್ಯ ಸಂಪತ್ತು ಬಳಸುವ ಜನಪದರ ಕಲೆ ಮತ್ತು ವಿಜ್ಞಾನ ಇಂದು ಅವಸಾನದಂಚಿನಲ್ಲಿದೆ. ಅವನ್ನು ಪುನರ್ಮನನಗೊಳಿಸುವ ತನ್ನ ಪ್ರಯತ್ನಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ನೆರವಿಗೆ ನಿಂತದ್ದು ಸಂತಸದ ಸಂಗತಿ. ೧೯೨೨ರ ಸುಮಾರಿಗೆ ಮಂಗಳೂರಿನ ಬಾಸೆಲ್ ಮಿಷನ್ ಪ್ರಕಟಿಸಿದ 'ಸಹಸ್ರಾರ್ಧ ವೃಕ್ಷಾದಿ ವರ್ಣನಂ' ಎಂಬ ಕನ್ನಡ ಕೃತಿಗೆ ಸರಿಗಟ್ಟುವ ಕೆಲಸ ಮುಂದಿನ ಒಂದು ಶತಮಾನದಲ್ಲಿ ನಡೆಯಲೇ ಇಲ್ಲ. ಅಂತಹ ಕೃತಿ ಸಿದ್ಧಪಡಿಸಿದ ಜರ್ಮನಿಯ ಪಿ. ಸ್ಟೋಲ್ಸ್ ಮತ್ತು ಜಿ. ಪ್ಲಿಬ್ಸ್ಟ್ ಮಹಾಶಯರು ಸಾರ್ವಕಾಲಿಕ ಮನ್ನಣೆಗೆ ಅರ್ಹರು. ಅವರ ಸ್ಫೂರ್ತಿಯಿಂದ ಇಂತಹ ಹಸಿರು ವೈದ್ಯದ ಪುಟ್ಟ ಹೊತ್ತಿಗೆ ಹೊರಬಂದಿದೆ' ಎಂದಿದ್ದಾರೆ.

ಆಯುರ್ವೇದ ಮಹಾವಿದ್ಯಾಲಯದಲ್ಲಿ ಆಯುರ್ವೇದವನ್ನು ಶಾಸ್ತ್ರಬದ್ಧವಾಗಿ ಮತ್ತು ನಿಖರವಾಗಿ ಅಧ್ಯಯನ ಮಾಡಿರುವ ಡಾ॥ ಸತ್ಯನಾರಾಯಣ ಭಟ್‌ರವರು ತಮ್ಮ ಪುಸ್ತಕದಲ್ಲಿ ಗಿಡಮೂಲಿಕೆ ಮೇಲೆ ಜನಪದರ ನಂಬಿಕೆಗಳನ್ನು ಈ ಕೃತಿಯಲ್ಲಿ ದಾಖಲು ಮಾಡುತ್ತಾ ಹೋಗಿದ್ದಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿಯೇ ಕಲ್ಲಚ್ಚಿನಲ್ಲಿ ಕೆಲವು ಆಯುರ್ವೇದ ಗ್ರಂಥಗಳು ಅಚ್ಚಾಗಿದ್ದವು. ಆಮೇಲೆ ಬಂದ ಮಿಶನರಿಗಳು ಕೆಲವು ಉಪಯುಕ್ತ ಸುಲಭಚಿಕಿತ್ಸೆ ಗ್ರಂಥಗಳನ್ನು ಪ್ರಕಟಿಸಿದರು. ಆನಂತರ ಪುಸ್ತಕದ ಪ್ರಕಟಣೆಯನ್ನು ಒಂದು ಉದ್ಯಮವನ್ನಾಗಿ ಮಾಡಿಕೊಂಡ ಪ್ರಕಾಶಕರು ಹಲವು ಆಯುರ್ವೇದ ಗ್ರಂಥಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಬಾಲವೈದ್ಯ ಸಂಜೀವಿನಿ, ವೈದ್ಯಕಲಾನಿಧಿ, ಆರೋಗ್ಯದರ್ಪಣ, ಸುಲಭ ಚಿಕಿತ್ಸೆ ಹೀಗೆ ಹತ್ತಾರು ಅಮೂಲ್ಯ ಗ್ರಂಥಗಳು ಪ್ರಕಟವಾಗಿವೆ. ಈ ಹಿಂದೆ ನಾನು ಗಮನಿಸಿದ ಒಂದು ಗ್ರಂಥದಲ್ಲಿ ಉಪಯುಕ್ತ ಗಿಡಮೂಲಿಕೆ ಮೂಲಚಿತ್ರ,

ಹಣ್ಣು, ಕಾಯಿ, ಹೂ, ಕಾಂಡ, ಬೇರು ಇವುಗಳ ಚಿತ್ರವಿರುವ ಪುಸ್ತಕ ಪ್ರಕಟವಾಗಿದೆ. ಅಂತಹ ನಾಲ್ಕಾರು ಗ್ರಂಥಗಳು ಪ್ರಕಟವಾಗಿವೆ.

ಪ್ರಸ್ತುತ ಗ್ರಂಥದಲ್ಲಿ ೧೧೦೭ ಗಿಡಮೂಲಿಕೆಗಳ ವಿವರವನ್ನು ಲೇಖಕರು ನೀಡಿದ್ದಾರೆ. ಈ ಹಿಂದೆ ಪ್ರಚಲಿತದಲ್ಲಿ ಇದ್ದ ಏಕ ಮೂಲಿಕಾ ಪ್ರಯೋಗದಂತೆ ಒಂದೇ ಗಿಡಮೂಲಿಕೆಯಿಂದ ಏನೆಲ್ಲಾ ಉಪಯೋಗ ಪಡೆಯಬಹುದು ಅನ್ನುವ ವಿವರವನ್ನು ನೀಡಿದ್ದಾರೆ. ಪ್ರತಿಯೊಂದು ಗಿಡಮೂಲಿಕೆಯ ಹೆಸರು ಮತ್ತು ಅದರ Botonical termಗಳನ್ನು ಗಿಡಮೂಲಿಕೆ ಮೂಲಭಾಗ ಕೊಟ್ಟಿರುವುದು ಬಹಳ ಉಪಯುಕ್ತವಾದದ್ದು. ಗಿಡಮೂಲಿಕೆಯಲ್ಲಿ ಇರುವ ರಸಾಯನಿಕ ವಸ್ತುಗಳ ಅವುಗಳ ಉಪಯುಕ್ತತೆಗಳ ಬಗ್ಗೆಯೂ ವಿವರ ನೀಡಿರುವುದರಿಂದ ಹೊಸದಾಗಿ ಔಷಧಿ ಶಾಸ್ತ್ರವನ್ನು ಕಲಿತ ವಿದ್ಯಾರ್ಥಿಗಳಿಗೂ ರಸಾಯನಶಾಸ್ತ್ರವನ್ನು ಅಧ್ಯಯನ ಮಾಡಿರುವ ವಿದ್ಯಾರ್ಥಿಗಳಿಗೂ ಆ ಬಗ್ಗೆ ಸಂಶೋಧನೆ ಮಾಡುತ್ತಾ ಇರುವ ವಿದ್ಯಾರ್ಥಿಗಳಿಗೂ ಬಹಳ ಉಪಯುಕ್ತವಾದದ್ದು. ಪ್ರತಿಯೊಂದು ಗಿಡಮೂಲಿಕೆಯ ಪರ್ಯಾಯ ಪದಗಳನ್ನು ಕೊಟ್ಟಿರುವುದರಿಂದ ಒಂದೇ ಗಿಡಕ್ಕೆ ಹಲವು ಪ್ರದೇಶದಲ್ಲಿ ಕರೆಯುವ ವಿವಿಧ ಹೆಸರುಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ.

ಲೇಖಕರು ಸ್ವತಃ ವೈದ್ಯರೇ ಆಗಿರುವುದರಿಂದ ತಮ್ಮ ದಿನನಿತ್ಯ ರೋಗಿಗಳಿಗೆ ಹಲವು ಔಷಧ ಪ್ರಯೋಗಗಳನ್ನು ಮಾಡಿ ಅವುಗಳ ಉಪಯುಕ್ತತೆಯನ್ನು ಕಂಡಿರುವುದರಿಂದ ತಮ್ಮ ಬರಹದಲ್ಲಿ ಔಷಧಿ ದ್ರವ್ಯಗಳ ಗುಣ ಉಪಯೋಗದ ಬಗ್ಗೆ ವಿವರವಾಗಿ ದಾಖಲಿಸಲು ಅವಕಾಶವಾಯಿತು. ಜನಸಾಮಾನ್ಯರಿಗೆ ತಮ್ಮ ಸುತ್ತ ಮುತ್ತ ಲಭ್ಯವಿರುವ ಗಿಡಮೂಲಿಕೆಯ ವಿವರವನ್ನೇ ಲೇಖಕರು ನೀಡಿರುವುದರಿಂದ ಔಷಧಿ ಸಂಗ್ರಹಕ್ಕೆ ಸಾಮಾನ್ಯರು ಕಷ್ಟ ಪಡಬೇಕಾಗಿಲ್ಲ.

ಗೃಹಿಣಿಯರು, ಶಾಲಾ ವಿದ್ಯಾರ್ಥಿಗಳು ಆಯುರ್ವೇದವನ್ನು ಕಾಲೇಜಿನಲ್ಲಿ ಕಲಿಯುತ್ತಾ ಇರುವ ವಿದ್ಯಾರ್ಥಿಗಳಿಗೂ, ಔಷಧಿ ಕಂಪನಿಗಳ Representative ಗಳು ಮುಂತಾದವರು ಈ ಪುಸ್ತಕದ ಉಪಯೋಗವನ್ನು ಪಡೆದುಕೊಳ್ಳಬಹುದು. ಮೇಲಿಂದ ಮೇಲೆ ಸದಾ ಅಧ್ಯಯನಕ್ಕೆ ಒಳಪಡುವಂತಹ ಅಪರೂಪದ ಇಂತಹ ಮಹತ್ತ್ವದ ಗ್ರಂಥವನ್ನೂ ಪ್ರಕಟಿಸಿದ ಕೀರ್ತಿ ಕನ್ನಡ ವಿಶ್ವವಿದ್ಯಾಲಯದ್ದು.

ಬಿ. ನಂಜುಂಡಸ್ವಾಮಿ

ಹೂವಿನಿಂದ ಆರೋಗ್ಯಭಾಗ್ಯ

* **ಹೂವು ಮತ್ತು ಆರೋಗ್ಯ** – ವಸುಂಧರಾ ಭೂಪತಿ, ಪ್ರ: ಕಾಮಧೇನು, ನಂ ೫/೧ ನಾಗಪ್ಪ ರಸ್ತೆ, ಶೇಷಾದ್ರಿಪುರಂ, ಬೆಂಗಳೂರೂ–೫೬೦ ೦೨೦, ಪು. ೧೮+೧೯೦; ಬೆಲೆ ರೂ.೧೬೦-

ಬೆಂಗಳೂರು ನಗರದ ಕಾಮಧೇನು ಪ್ರಕಾಶನದಿಂದ ೨೦೧೧ರಲ್ಲಿ ಪ್ರಕಟಗೊಂಡ ಈ ಪುಸ್ತಕಕ್ಕೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಕವಿಗಳು ವಿಮರ್ಶಕರು ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಆದ ಎಸ್.ಜಿ. ಸಿದ್ಧರಾಮಯ್ಯನವರು ಮುನ್ನುಡಿ ಬರೆದಿದ್ದಾರೆ. ಲೇಖಕಿ ತಮ್ಮ ಮಾತಿನಲ್ಲಿ ಪುಷ್ಪಾಯುರ್ವೇದದ ಬಗ್ಗೆ ಪೀಠಿಕೆಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. "ಪುಷ್ಪಾಯುರ್ವೇದದ ವಿವರಣೆಯನ್ನು 'ಸಿರಿಭೂವಲಯ'ದಲ್ಲಿ ಕುಮುದೇಂದು ಮುನಿಯು ನೀಡಿದ್ದಾನೆ. ಜೈನಮತದ ಆದಿ ತೀರ್ಥಂಕರ ವೃಷಭನಾಥನು ರಚಿಸಿದ ಸಿರಿಭೂವಲಯವನ್ನು ಕನ್ನಡ ನಾಡಿನ ಕುಮುದೇಂದು ತಾನು ಜನಪ್ರಿಯಗೊಳಿಸಿದೆನೆಂದು ಹೇಳಿದ್ದಾನೆ. ರಾಷ್ಟ್ರಕೂಟ ರಾಜ ಅಮೋಘವರ್ಷನ ಧರ್ಮಗುರುವಾಗಿದ್ದ ಕುಮದೇಂದು ಮುನಿಯು ಪುಷ್ಪ ವೈದ್ಯದ ಜನಕ ಎಂದು ಹೆಸರಾಗಿದ್ದಾನೆ. ಉದುರಿದ ಹೂಗಳಿಂದ ರಸವಿದ್ಯೆಯನ್ನು ಬೆಳಗಿಸಿದ ಕೀರ್ತಿ ಈತನದು. ಸ್ವತಃ ವೈದ್ಯರೂ ಆಗಿರುವ ಲೇಖಕಿ ನಲವತ್ತೂರು ಹೂಗಳ ಬಗ್ಗೆ ವಿವರ ನೀಡಿದ್ದಾರೆ. ಪ್ರತಿಯೊಂದು ಹೂವಿನ ಅರ್ಥಾತ್ ಗಿಡದ ಬಗ್ಗೆ ಅನ್ಯ ಭಾಷೆಗಳಲ್ಲಿ ಅವುಗಳ ಹೆಸರು ಮತ್ತು ಆಯುರ್ವೇದ ವೈದ್ಯರಿಗೆ ಮುಖ್ಯವಾಗಿ ಬೇಕಾಗಿರುವ ಸಂಸ್ಕೃತ ಭಾಷೆಯ ಹೆಸರು ಮತ್ತು ವೈಜ್ಞಾನಿಕ ಹೆಸರುಗಳನ್ನು, ಅವುಗಳ ಚಿತ್ರವನ್ನು, ಅವುಗಳಲ್ಲಿ ಇರುವ ರಾಸಾಯನಿಕ ಅಂಶಗಳನ್ನು ನೀಡಿರುವುದರಿಂದ ಅವುಗಳ ಸ್ವರೂಪ ಸ್ಪಷ್ಟವಾಗುತ್ತದೆ. ಲೇಖಕಿ ಔಷಧೀಯ ಗುಣಗಳನ್ನು ವಿವರವಾಗಿ ಒಂದರ ನಂತರ ಒಂದನ್ನು ಬರೆದಿರುವುದರಿಂದ ಜನಸಾಮಾನ್ಯರಿಗೆ ವಿವರವಾದ ಮಾಹಿತಿ ಲಭ್ಯವಾಗುತ್ತದೆ.

ಈ ಗ್ರಂಥದಲ್ಲಿ ನಮ್ಮ ದೇಶದ್ದಲ್ಲದೆ ಅನ್ಯ ದೇಶದ ಹೂಗಳ ಬಗ್ಗೆಯೂ ವಿವರಣೆ ನೀಡಿದ್ದಾರೆ. ಈ ಪುಸ್ತಕವನ್ನು ಅಧ್ಯಯನ ಮಾಡಿದ ಗೃಹಿಣಿಯರು, ಯುವ ವಿದ್ವಾಂಸರು ಈ ನಿಟ್ಟಿನಲ್ಲಿ ಇದೇ ತರಹ ಇನ್ನಷ್ಟು ಮಾಹಿತಿಯನ್ನು ಮತ್ತು ಕೆಲವೇ ಕಾಲದಲ್ಲಿ ನೋಡಲು ಲಭ್ಯವಾಗುವ ಅಪರೂಪದ ಹೂಗಳ ಚಿತ್ರವನ್ನು ಸಂಗ್ರಹಿಸಲು ಪ್ರಯತ್ನಿಸಬೇಕು. ಈ ಅಧ್ಯಯನಕ್ಕೆ ಈ ನೆಲಮೂಲದ ವಿದ್ವಾಂಸರ ಸಹಕಾರ ಬಹಳ ಮುಖ್ಯ. ಕೃತಿಯ ಕಡೆಯಲ್ಲಿ ಸುಗಂಧ ಚಿಕಿತ್ಸೆ (ಅರೊಮಾ ಥೆರಪಿ) ಬಗ್ಗೆ ಒಂದು ಅಧ್ಯಾಯವನ್ನು ಬರೆಯಲಾಗಿದೆ. ಈ ಅಧ್ಯಾಯದಲ್ಲಿ ಸುಗಂಧ ಚಿಕಿತ್ಸೆ ಬೆಳೆದು ಬಂದ

ದಾರಿಯ ಬಗ್ಗೆ ವಿವರವಾಗಿ ಬರೆಯಲಾಗಿದೆ. ಈ ವಿಭಾಗದಲ್ಲಿ ಕೆಲವು ಉಪಯುಕ್ತ ಚಿಕಿತ್ಸೆ ಬಗ್ಗೆಯು ಮಾಹಿತಿ ಇದೆ.

ಪ್ರಾಚೀನ ಆಯುರ್ವೇದ ಗ್ರಂಥಗಳಲ್ಲಿ ಈ ಬಗ್ಗೆ ಅಧಿಕವಾದ ಮಾಹಿತಿ ಇದ್ದು ಆ ಬಗ್ಗೆ ಯುವ ವಿದ್ವಾಂಸರು ಹೆಚ್ಚಿನ ಅಧ್ಯಯನ ಮಾಡಿ ವಿವರ ವಿವರವಾಗಿ ದಾಖಲಿಸಬೇಕಾಗಿದೆ. 'ಕದಂಬ ಪುಷ್ಪ ನ್ಯಾಯ'ದ ಉದಾಹರಣೆ ಬಹಳ ಮುಖ್ಯವಾದದ್ದು. ಕದಂಬ ಪುಷ್ಪ ನೀರಿಗೆ ಹಾಕಿದರೆ ನೀರಿನ ಬಣ್ಣ ಕೆಂಪಾಗುತ್ತದೆ. ಪುಷ್ಪ ಮಾತ್ರ ಯಥಾರೀತಿ ಇರುತ್ತದೆ. ಹಾಗೆ ಬಸ್ತಿ ಚಿಕಿತ್ಸೆಯಲ್ಲಿ ಔಷಧದ ಗುಣಾಂಶಗಳಲ್ಲಿ ದೇಹ ತನಗೆ ಬೇಕಾದದ್ದನ್ನು ಗ್ರಹಿಸುತ್ತದೆ ಎಂದು ತಿಳಿಯಲು ಈ ಪುಷ್ಪದ ನ್ಯಾಯವನ್ನು ಹೇಳಲಾಗಿದೆ. ಭಾರತೀಯರು ಬಣ್ಣಗಳನ್ನು ತಯಾರಿಸಿಕೊಳ್ಳಲು ಪುಷ್ಪಗಳನ್ನು ಬಳಸಿಕೊಳ್ಳುತ್ತಾ ಇದ್ದದ್ದು ತಿಳಿದ ವಿಷಯ. ಬಾಳೆ ಹೂವನ್ನು ಬಣ್ಣ ನಿರ್ಮಾಣಕ್ಕೆ ವಿಶೇಷವಾಗಿ ಬಳಸಿಕೊಳ್ಳಲಾಗುತ್ತಿತ್ತು. ಮಾಧ್ವರ ಅಂಗಾರ ಮಾಡುವುದು ಬಾಳೆ ಹೂವಿನಿಂದಲೇ.

ಬಿ. ನಂಜುಂಡಸ್ವಾಮಿ

ಸಾಮಾನ್ಯ ಸಸ್ಯಗಳ ಪ್ರಯೋಜನ ವಿವರಣೆ

* **ವೈದ್ಯ ಜಾನಪದ:** ಲೇ. ಸೋಮನಾಥ ಯಾಳವಾರ, ಮತ್ತು ಡಾ. ಕಾವ್ಯಶ್ರೀ ಪ್ರದೀಪ ಕೊಟ್ಟಗಿ. ಪ್ರ: ಅಖಿಲಭಾರತ ಜಾನಪದ ಸಮ್ಮೇಳನ ಸ್ವಾಗತ ಸಮಿತಿ. ಬೀದರ. ಪು. ೯೬. ಬೆಲೆ ರೂ. ೭೦/–

ಎಪ್ಪತ್ನಾಲ್ಕು ಪರಿಚಿತ ಸಸ್ಯಗಳ ಔಷಧೀಯ ಪ್ರಯೋಜನವನ್ನು ತಿಳಿಸುವುದು ಈ ಕೃತಿಯ ಉದ್ದೇಶ. ಭಾರತೀಯ ಪರಂಪರೆಯಿಂದ ತಿಳಿದು ಬಂದಿರುವ ಆಯುರ್ವೇದದ ಶಾಸ್ತ್ರದ ಪ್ರಚಾರ ಸಾಮಾನ್ಯ ಜನರಲ್ಲಿ ಕೂಡ ಬೆಳೆದು ವಿಶೇಷ ವಿಸ್ತಾರವಾಗಿ ಜನರನ್ನು ತಲುಪಿದೆ. ಇಲ್ಲಿ ಉಲ್ಲೇಖಗೊಂಡಿರುವ ವನಸ್ಪತಿಗಳ ಬಗ್ಗೆ ಎಲ್ಲರಿಗೂ ತಿಳಿದೇ ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಜನಸಾಮಾನ್ಯರು ಉಪಯೋಗಿಸುವ ನೂರಾರು ಮೂಲಿಕೆಯ ಪರಿಚಯ ಇಲ್ಲಿ ಇದೆ. ಈರುಳ್ಳಿ, ಸೌತೆಕಾಯಿ, ಪೇರಲ (ಸೀಬೆ) ಮುಂತಾದವು ಎಲ್ಲರಿಗೂ ಗೊತ್ತಿರುವ ಗಿಡಗಳ ಔಷಧೀಯ ಉಪಯೋಗ ಇಲ್ಲಿದೆ.

ವಿಷಜನ್ಯ ಗಿಡಮೂಲಿಕೆಗಳು ಉಪಯೋಗದ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು. ಇವುಗಳ ಶೋಧನೆ ಮಾಡದೆ ಔಷಧಿಯಲ್ಲಿ ಬಳಸಬಾರದು. ನೇರವಾಗಿ ಉಪಯೋಗಿಸುವ ತೈಲವನ್ನು ತಯಾರಿಸುವಾಗ ಸಹ ಬಹಳ ಎಚ್ಚರದಿಂದ ಇರಬೇಕು.

ಗಿಡಮೂಲಿಕೆ ಹೆಸರುಗಳನ್ನು ತಿಳಿಸುವಾಗ ಕನ್ನಡದ ಜೊತೆಗೆ ಸಂಸ್ಕೃತ ಹೆಸರುಗಳನ್ನು ತಿಳಿಸಿದರೆ ಪ್ರಾದೇಶಿಕ ಗೊಂದಲಗಳು ಕಡಿಮೆಯಾಗುತ್ತವೆ. ಪುಸ್ತಕದ ಕಡೆಯಲ್ಲಿ ಬಹಳ ಸುಂದರವಾದ ಗಿಡಮೂಲಿಕೆಗಳ ಚಿತ್ರವನ್ನು ಕೊಟ್ಟಿರುವುದು ಬಹಳ ಉಪಯುಕ್ತವಾದದ್ದು.

ಬಿ. ನಂಜುಂಡಸ್ವಾಮಿ

ಅಧ್ಯಾಯ ೬

ಸಂಕೀರ್ಣ

ದಕ್ಷಿಣ ಭಾರತದ ಜಾನಪದ ಅಧ್ಯಯನಕ್ಕೊಂದು ಪ್ರವೇಶಿಕೆ

* **ದಕ್ಷಿಣ ಭಾರತೀಯ ಜಾನಪದ ಕೋಶ** (ಸಂಪುಟ ೧ ಮತ್ತು ೨) ಸ.ಚಿ.ರಮೇಶ್, ಕಾರ್ಯನಿರ್ವಾಹಕ, ಸಂವಾದ ಆರ್.ವಿ.ಎಸ್.ಸುಂದರಂ, ಸಂಪಾದಕರು: ಡಾ. ಎ. ಮುರಿಗೆಪ್ಪ: ಪ್ರಕಾಶಕರು – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟಗಳು: ೫೨೮+೫೦೮; ಬೆಲೆ ರೂ. ೮೦೦/–

ಇದು ಕನ್ನಡ ವಿಶ್ವವಿದ್ಯಾನಿಲಯವು ಕುಪ್ಪಂನ ದ್ರಾವಿಡ ವಿಶ್ವವಿದ್ಯಾನಿಲಯದ ಜೊತೆಗೂಡಿ ಸಿದ್ಧಪಡಿಸಿ ಪ್ರಕಟಿಸಿರುವ ವಿಶ್ವಕೋಶ. ಇದರಲ್ಲಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ (ಗೋವಾವನ್ನು ಇಲ್ಲಿ ಸೇರಿಸಿಕೊಂಡಿಲ್ಲ) ಜಾನಪದರ ಮುಖ್ಯ ಅಂಶಗಳ ಬಗ್ಗೆ ಲೇಖನಗಳು/ಟಿಪ್ಪಣಿಗಳು ಇವೆ. ಈ ಯೋಜನೆಯನ್ನು ನಿರ್ವಹಿಸಿರುವ ರೀತಿಯೂ ವಿಶೇಷವಾದುದು. ಈ ನಾಲ್ಕು ಭಾಷೆಗಳ ಜಾನಪದ ವಿದ್ವಾಂಸರನ್ನು ಸೇರಿಸಿಕೊಂಡು ಚರ್ಚಿಸಿ, ವಿಷಯಗಳ ಪಟ್ಟಿ ತಯಾರಿಸಿ ಆಯಾ ಭಾಷೆಗಳಲ್ಲೇ ಅವರಿಂದ ಲೇಖನ ತಯಾರಿಸಿಕೊಂಡು ಅನಂತರ ಆಯಾ ಭಾಷೆಯನ್ನು ಬಲ್ಲ ಕನ್ನಡ ವಿದ್ವಾಂಸರಿಂದ ಅದನ್ನು ಕನ್ನಡಕ್ಕೆ ಅನುವಾದಿಸಿ ಕೊಳ್ಳಲಾಗಿದೆ. ಇದೊಂದು ಒಳ್ಳೆಯ ಉಪಕ್ರಮವೆಂದೇ ಹೇಳಬೇಕು. ತಮಿಳು, ತೆಲುಗು, ಮಲೆಯಾಳಂನಿಂದ ಲೇಖನಗಳು ಕನ್ನಡಕ್ಕೆ ಬರುವಾಗ ಇಂಗ್ಲೀಷಿನ ಮೂಲಕ ಬಂದಿಲ್ಲವೆನ್ನುವುದೇ ಸಮಾಧನದ ವಿಷಯ.

ಲೇಖನಗಳನ್ನು ಅಕಾರಾದಿಯಾಗಿ ಸಾದರಪಡಿಸಲಾಗಿದೆ (ಉದಾ– ಅಂಕಮ್ಮ, ಅಂಕಿಯಾಟ, ಅಂಗಾಳಮ್ಮನ್, ಅಂಜುವೀಟ್ಟು ಕೋಯಿಲ್– ಹೀಗೆ) ಆದರೆ ಪ್ರತಿ ಸಂಪುಟದ ಆರಂಭದಲ್ಲಿ ಅನುಕ್ರಮಣಿಕೆಯನ್ನು ಕೊಡುವಾಗ ಭಾಷಾವಾರು ಹಾಗೂ ವಿಷಯವಾರಾಗಿ ವಿಂಗಡಿಸಿದ ಪಟ್ಟಿಯನ್ನು ಕೊಟ್ಟು ಪ್ರತಿಯೊಂದು ವಿಷಯದ ಕೆಳಗೆ ಅದಕ್ಕೆ ಸಂಬಂಧಿಸಿದಂತೆ ಇರುವ ಲೇಖನಗಳು ಹಾಗೂ ಅವು ಇರುವ ಪುಟಸಂಖ್ಯೆಯನ್ನು ಕೊಡಲಾಗಿದೆ. ಇದರಿಂದ ಲೇಖನ ಸಂಪುಟದಲ್ಲಿ ಎಲ್ಲೇ ಇದ್ದರೂ ಹುಡುಕುವುದು ತುಂಬಾ ಸುಲಭವಾಗಿದೆ. ಇಷ್ಟೇ ಅಲ್ಲದೆ ಈ ಸೂಚಿಯಾದ ಮೇಲೆ ಒಂದು ತೌಲನಿಕ ಸೂಚಿಯನ್ನು ಕೊಟ್ಟಿದ್ದು ಕನ್ನಡದಲ್ಲಿನ ಒಂದು ವಿಷಯಕ್ಕೆ ಬೇರೆ ಭಾಷೆಯಲ್ಲಿ

ಸಂವಾದಿಯಾಗಿರುವ ಹೆಸರನ್ನು ಕೊಡಲಾಗಿದೆ. ಎರಡನೇ ಸಂಪುಟದ ಕೊನೆಯಲ್ಲಿ ಲೇಖಕರ ಹೆಸರುಗಳು, ಅನುವಾದಕರ ಹೆಸರು ಹಾಗೂ ಶಬ್ದಗಳ ಅಕಾರಾದಿ ಪಟ್ಟಿಯನ್ನು ಪುಟಸಂಖ್ಯೆ ಸಮೇತ ನೀಡಲಾಗಿದೆ. ಚಿತ್ರಗಳು ತುಂಬ ಕಡಿಮೆ ಎನ್ನುವುದನ್ನು ಬಿಟ್ಟರೆ ಈ ವಿಶ್ವಕೋಶವನ್ನು ಸಂಪಾದಿಸುವಲ್ಲಿ ಅಂತಾರಾಷ್ಟ್ರೀಯ ಮಟ್ಟದ ಎಲ್ಲ ವೈಧಾನಿಕ ಎಚ್ಚರಿಕೆಗಳನ್ನೂ ಅನುಸರಿಸಲಾಗಿದೆ ಎನ್ನುವುದು ಮೆಚ್ಚಬೇಕಾದ ಅಂಶ.

ವಿಶ್ವಕೋಶದ ಲೇಖನವೊಂದರಲ್ಲಿ ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ನಿರೀಕ್ಷಿಸುವುದು ಸಾಧ್ಯವಿಲ್ಲ. ಯಾಕೆಂದರೆ ಅಲ್ಲಿನ ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕ ಪುಸ್ತಕಗಳೇ ಬೇಕಾಗುತ್ತವೆ ಹಾಗೂ ಅಂಥ ಗ್ರಂಥಗಳು ಇರುತ್ತವೆ. ಒಂದು ವಿಷಯದ ಕುರಿತಾಗಿ ಎಲ್ಲ ಮುಖ್ಯ ಮಾಹಿತಿಗಳನ್ನೂ ಅಡಕವಾಗಿ ಪ್ರಾಥಮಿಕ ಪರಿಚಯಕ್ಕಾಗಿ ನೀಡುವುದು ಇಲ್ಲಿನ ಲೇಖನಗಳ ಗುರಿಯಾಗಿರುತ್ತದೆ. ಇಲ್ಲಿನ ಲೇಖನಗಳು ಆ ಕೆಲಸವನ್ನು ಬಹುಮಟ್ಟಿಗೆ ಸಮರ್ಪಕವಾಗಿಯೇ ಮಾಡಿವೆ. ಒಂದು ಮುಖ್ಯ ಕೊರತೆ ಎಂದರೆ ಆಯಾ ಲೇಖನಗಳ ಕೆಳಗೆ ನಾಲ್ಕಾರು ಮುಖ್ಯ ಆಕರ ಗ್ರಂಥಗಳನ್ನು ಸೂಚಿಸದಿರುವುದು (ಬ್ರಿಟಾನಿಕಾದಲ್ಲಿರುವಂತೆ). ಆಕರ ಗ್ರಂಥಗಳ ಸೂಚಿ ಮುಂದಿನ ಓದಿಗೆ ಅಗತ್ಯವಾಗಿ ಬೇಕಾಗಿತ್ತು.

ಪ್ರತಿಯೊಂದು ಭಾಷೆಗೆ ಸಂಬಂಧಿಸಿದಂತೆ – ಸಮೀಕ್ಷಾ ಲೇಖನಗಳು, ಮೌಖಿಕ ಜಾನಪದ, ಆಚಾರ–ಸಂಪ್ರದಾಯ, ಜನಸಮುದಾಯ, ವಸ್ತು ಸಂಸ್ಕತಿ ಮತ್ತು ಕಲೆಗಳು – ಎಂಬ ವಿಷಯವಾರು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಈ ಪ್ರತಿ ವಿಭಾಗದಲ್ಲೂ ಅನೇಕ ಲೇಖನಗಳಿವೆ. ಇದೆಲ್ಲ ಸೂಕ್ತವಾದ ಕ್ರಮವೇ ಆಗಿದೆ.

ಪ್ರತಿಯೊಂದು ಭಾಷೆಗೂ ಸಂಬಂಧಿಸಿದಂತೆ ಎಲ್ಲ ಜಾನಪದ ಅಂಶಗಳಿಗೂ ಸಂಬಂಧಿಸಿದಂತೆ ಲೇಖನಗಳು ಇಲ್ಲಿಲ್ಲ. ಸಂಪಾದಕ ಮಂಡಳಿಗೆ ಅದರ ಅರಿವು ಸ್ಪಷ್ಟವಾಗಿಯೇ ಇದೆ. ಆದರೆ ಅಪರೂಪದ ವಿಷಯಗಳಿಗೆ ಸಂಬಂಧಿಸಿದ (ಉದಾ– ಯಾನಾದಿಗಳು, ಸಿಂದ್‌ಮಾದಿಗರು, ಕೊಂಬಾಟ್, ರುಂಜಕಥ, ಪಿಟ್ಟಿಲದೊರ ಇತ್ಯಾದಿ) ಮಾಹಿತಿಗಳು ಇಲ್ಲಿ ದೊರೆಯುತ್ತವೆ. ಇದೇನೂ ಸಣ್ಣ ಸಾಧನೆಯಲ್ಲ. ಇಂಥ ಕೆಲಸವನ್ನು ಸಾಕ್ಷಾತ್ಕರಿಸಿಕೊಟ್ಟ ಸಂಪಾದಕ ಮಂಡಳಿಯನ್ನೂ ವಿಶ್ವವಿದ್ಯಾಲಯ ವನ್ನೂ ಮೆಚ್ಚದಿರಲು ಸಾಧ್ಯವಿಲ್ಲ. ಒಂದೆರಡು ಕೊರತೆಗಳಿದ್ದರೂ ಇದೊಂದು ಅಭಿನಂದನೀಯ ಕಾರ್ಯ. ಮರುಮುದ್ರಣದಲ್ಲಿ ಇನ್ನಷ್ಟು ಚಿತ್ರಗಳು ಹಾಗೂ ಆಕರಗ್ರಂಥಗಳ ಪಟ್ಟಿ ಕಾಣಿಸಿಕೊಂಡರೆ ಉತ್ತಮ.

ಎಸ್.ಪಿ. ಪದ್ಮಪ್ರಸಾದ್

ಚಿಕ್ಕಬಳ್ಳಾಪುರದ ಬಗೆಗೆ.........

* **ಜಾನಪದ ಸಿರಿ:** ಸಂಪಾದಕರು–ಗೋಪಾಲಗೌಡ, ಕಲ್ವಮಂಗಲಿ. ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಬಳ್ಳಾಪುರ. ಪುಟಗಳು: ೬+೭೮. ಬೆಲೆ ರೂ. ೪೦–

'ಜಾನಪದ ಸಿರಿ' ಚಿಕ್ಕಬಳ್ಳಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಜಿಲ್ಲಾ ಕ.ಸಾ.ಪ. ಪ್ರಕಟಿಸಿದ ಒಂದು ಕಥಾ/ಲೇಖನ ಸಂಚಯ. ಕೇವಲ ೮೪ ಪುಟಗಳ ಈ ಪುಟ್ಟ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ 'ಸಾಧ್ವಿ ವೀರ ತಿಮ್ಮಮ್ಮ' (ಲೇ– ಗೋಪಾಲಗೌಡ, ಕಲ್ವಮಂಗಲಿ) ಎಂಬ ಐತಿಹ್ಯಕತೆ ಹಾಗೂ 'ತಾರಾತಿಗಣಿ' ಎಂಬ ಇನ್ನೊಂದು ಜನಪದ ಕತೆಗಳಿವೆ. ಮೊದಲಿನದು ಆ ಜಿಲ್ಲೆಯ ಮಹಾಸತಿಯೊಬ್ಬಳಿಗೆ ಸಂಬಂಧಿಸಿದ್ದು.

ಈ ಎರಡೂ ಕತೆಗಳೂ ಓದಲಿಕ್ಕೇನೋ ಚೆನ್ನಾಗಿವೆ. ಆದರೆ ಇದನ್ನು ಎಲ್ಲಿಂದ ಸಂಗ್ರಹಿಸಿದ್ದು ಎಂಬ ಬಗ್ಗೆ ವಕ್ತೃವಿವರ ಏನೇನೂ ಇಲ್ಲ. ಇವು ನೇರವಾಗಿ ವಕ್ತೃವಿನ ಭಾಷೆಯಲ್ಲಿ ನಿರೂಪಿತವಾಗಿಯೂ ಇಲ್ಲ. ಕೇಳಿದವರು ಅದನ್ನು ತಮ್ಮ ಭಾಷೆಯಲ್ಲಿ ನಿರೂಪಿಸಿದ ಹಾಗೆ ಇದೆ. ಇದು ಶಾಸ್ತ್ರೀಯ ರೀತಿಯ ಸಂಗ್ರಹಣೆ ಅಲ್ಲ ಎಂದೇ ಹೇಳಬೇಕಾಗಿದೆ.

ಎರಡನೇ ಭಾಗದಲ್ಲಿ ಕೆಲವು ಲೇಖನಗಳಿವೆ. ಈ ಪುಸ್ತಕಕ್ಕೆ ಒಂದು ಪರಿವಿಡಿಯೂ ಇಲ್ಲದಿರುವುದರಿಂದ ಲೇಖನಗಳ ಸಂಖ್ಯೆಯನ್ನು ಲೆಕ್ಕ ಮಾಡಿಯೇ ಹೇಳಬೇಕು. ಹಾಗೆ ಒಂಭತ್ತು ಲೇಖನಗಳಿವೆ. ಜಿ.ಆರ್. ತಿಪ್ಪೇಸ್ವಾಮಿಯವರ ಲೇಖನ 'ಕರಪಾಲಮೇಳ: ಸಾಧ್ಯತೆಗಳು' ಒಂದು ಒಳ್ಳೆಯ ಲೇಖನ. ಅದೇ ರೀತಿ ಸ.ರಘುನಾಥ ಅವರು ಕೋಲಾರ ಜಿಲ್ಲೆಯ ಜನಪದ ಗೀತೆಗಳಲ್ಲಿ ಸೀತೆ, ದೇವಕಿಯರು ಹೇಗೆ ಚಿತ್ರಿತರಾಗಿದ್ದಾರೆಂಬುದನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಅದೂ ಸಹ ತೃಪ್ತಿಕರ ವಿಶ್ಲೇಷಣೆಯ ಲೇಖನ. ಎನ್. ಜಗನ್ನಾಥ ಪ್ರಕಾಶರ 'ಜಾನಪದ ಕಲೆ: ಆರಾಧನೆ–ಮನರಂಜನೆ' ಜಿಲ್ಲೆಯ ಕೆಲವು ಜಾನಪದ ಕಲೆಗಳನ್ನು (ಕರಡಿ ಆಟ/ಕೋಲೆ ಬಸವ/ದೊಂಬರು/ಕೀಲುಕುದರೆ ಕುಣಿತ–ಇತ್ಯಾದಿ) ನಾಲ್ಕು ಪುಟಗಳಲ್ಲಿ ಪರಿಚಯಿಸಿದ್ದಾರೆ. ತತ್ತೂರು ಲೋಕೇಶಪ್ಪ ಅವರ 'ನಮ್ಮ ಜಾನಪದ' ಎಂಬ ಎರಡು ಪುಟದ ಲೇಖನದಲ್ಲಿ ಹೇಳಿಕೊಳ್ಳುವಂಥದ್ದೇನೂ ಇಲ್ಲ. ರಾಧಾ ಪ್ರಕಾಶ್ ಅವರ 'ಜಾನಪದ ಸಾಹಿತ್ಯದ ಮುದ......' ಎಂಬ ಲೇಖನವೂ ಸಹ ಜನಪದ ಗೀತೆಗಳ ಸೊಗಸನ್ನು ಹೊಗಳುವ ಒಂದು ಸಾಮಾನ್ಯ ಲೇಖನ.

'ಮುಖವೀಣೆ ಆಂಜನಪ್ಪ' ನವರನ್ನು ಕುರಿತ ಪರಿಚಯ ಲೇಖನ (ಗೋಪಾಲಗೌಡ, ಕಲ್ವಮಂಗಲಿ ಅವರದು) ಅಪರೂಪದ ಕಲಾವಿದನೊಬ್ಬನನ್ನು ಹೃದಯಸ್ಪರ್ಶಿಯಾಗಿ

ಪರಿಚಯಿಸುತ್ತದೆ. ಈ ಜಿಲ್ಲೆಯ ಮತ್ತೊಬ್ಬ ಕಲಾವಿದ ಮುನಿವೆಂಕಟಪ್ಪನವರ ಬಗೆಗಿನ ಲೇಖನವನ್ನೂ ಇದೇ ಲೇಖಕರು ಬರೆದಿದ್ದು ಅದೂ ತನ್ನ ಉದ್ದೇಶದಲ್ಲಿ ಯಶಸ್ವಿಯಾಗಿದೆ. ಗಾರುಡಿಗೊಂಬೆ ಕಲಾವಿದ ಕೆ.ಎನ್. ನಾರಾಯಣಸ್ವಾಮಿ ಅವರ ಬಗ್ಗೆ ರೂಪಸಿ ರಮೇಶ್ ಅವರು ಒಂದು ಟಿಪ್ಪಣಿ ಬರೆದು ಅಗತ್ಯ ಮಾಹಿತಿ ನೀಡಿದ್ದಾರೆ.

ಹೀಗೆ, ಕೆಲವು ಉಪಯುಕ್ತ ವಿಷಯಗಳಿದ್ದರೂ ತೀರಾ ಅವಸರದಲ್ಲಿ ಸಿದ್ಧವಾದಂತಿರುವ ಈ ಪುಸ್ತಕವನ್ನು ಎಚ್ಚರ ವಹಿಸಿದ್ದರೆ ಸಾಕಷ್ಟು ಚೆನ್ನಾಗಿ, ಹೆಚ್ಚು ಪ್ರಯೋಜನಕಾರಿಯಾಗುವಂತೆ ಹೊರತರಬಹುದಿತ್ತು. ಸಂಪಾದಕ ಕಲ್ಲಮಂಗಲಿ ಗೋಪಾಲಗೌಡರು ತಮ್ಮ ಮುಂದಿನ ಪ್ರಯತ್ನಗಳಲ್ಲಿ ಹೆಚ್ಚಿನ ಶಿಸ್ತನ್ನು ತೋರುವುದು ಸಾಧ್ಯವಾಗಲಿ ಎಂದು ಆಶಿಸಬಹುದು.

ಎಸ್.ಪಿ. ಪದ್ಮಪ್ರಸಾದ್

ಅರವತ್ತೊಂದು ಲೇಖನಗಳ ಸಮೃದ್ಧ ಸಿರಿ

* **ಜಾನಪದ ಸಿರಿ**–ಪ್ರ.ಸಂ. ಜಗನ್ನಾಥ ಹೆಬ್ಬಾಳೆ. ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್. ಪುಟಗಳು ೪೭೦. ರೂ. ೩೫೦/–

ಜಾನಪದ ಸಿರಿ– ೨೦೧೧ರ ಏಪ್ರಿಲ್‌ನಲ್ಲಿ ಬೀದರ್‌ಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಜಾನಪದ ಸಮ್ಮೇಳನದ ಸ್ಮರಣ ಸಂಚಿಕೆ. ಆ ಸಮ್ಮೇಳನವು ಗೊ.ರು.ಚ. ಅವರ ಕನಸಿನ ಕಾರ್ಯಕ್ರಮವಾಗಿತ್ತು. ಹಗಲೆಲ್ಲ ವಿಚಾರಗೋಷ್ಠಿಗಳು ಸಂಜೆಯಿಂದ ನಡುರಾತ್ರಿ ದಾಟುವವರೆಗೂ ಜಾನಪದ ಕಲಾ ಪ್ರದರ್ಶನಗಳಿಂದ ಕೂಡಿ ಅದ್ಭುತವಾಗಿ ನಡೆದ ಆ ಉತ್ಸವದಲ್ಲಿ ಭಾರತದ ಎಲ್ಲ ರಾಜ್ಯಗಳ ಜಾನಪದ ಕಲೆಗಳನ್ನು ಒಂದೆಡೆ ನೋಡುವ ಅವಕಾಶ ಜನರಿಗೆ ದೊರೆತಿತ್ತು.

ಆ ಅಖಿಲ ಭಾರತ ಮಟ್ಟದ ಕಾರ್ಯಕ್ರಮದ ಅಂಗವಾಗಿ ಬಂದ ಈ ಸ್ಮರಣ ಸಂಚಿಕೆಯಲ್ಲಿ ಕನ್ನಡದ ೫೩, ಹಿಂದಿಯ ೬ ಹಾಗೂ ಇಂಗ್ಲೀಷಿನ ಐದು – ಹೀಗೆ ಒಟ್ಟು ೬೪ ಲೇಖನಗಳಿವೆ. ಹಿಂದಿ ಲೇಖನಗಳು – ಕನ್ನಡ, ಮಾಳವ ರಾಜಸ್ಥಾನ, ಭೋಜಪುರಿ ಹಾಗೂ ಅವಧ್ ಪ್ರದೇಶಗಳ ಜಾನಪದವನ್ನು ಪರಿಚಯಿಸುತ್ತವೆ. ಇಂಗ್ಲೀಷಿನ ಲೇಖನಗಳು ಐದೂ ಸಹ ಕನ್ನಡ ಲೇಖಕರದ್ದೇ ಆಗಿದ್ದು ಇವು ವಿಶೇಷವಾಗಿ ಕನ್ನಡ ನೆಲದ ಜಾನಪದವನ್ನೇ ವಿವರಿಸುತ್ತವೆ. ಅಂಬಳಿಕೆ ಹಿರಿಯಣ್ಣನವರು ಜಾನಪದ ವಿಶ್ವವಿದ್ಯಾಲಯದ ಗುರಿ ಮತ್ತು ರೂಪುರೇಷೆಗಳನ್ನು ವಿವರಿಸಿದ್ದಾರೆ. ಗಾಯಿತ್ರಿ ನಾವಡರು ಜಾನಪದ ಮತ್ತು ಭಾರತೀಯ ಸ್ತ್ರೀವಾದವನ್ನು ಕುರಿತು ಚರ್ಚಿಸುತ್ತಾ ಹೆಚ್ಚಾಗಿ ಕನ್ನಡ ಜಾನಪದವನ್ನೇ ಅಲ್ಲಿ ಉದಾಹರಿಸಿದ್ದಾರೆ. ಸಿಂಪಿ ಲಿಂಗಣ್ಣನವರ ಎರಡು ಲೇಖನಗಳನ್ನು

ವೀರೇಂದ್ರ ಸಿಂಪಿಯವರು ಅನುವಾದಿಸಿದ್ದು ಒಂದು ಗಾದೆಗಳಲ್ಲಿನ ವೈಜ್ಞಾನಿಕ ಸತ್ಯವನ್ನು ವಿವರಿಸಿದ್ದರೆ ಮತ್ತೊಂದರಲ್ಲಿ ಪ್ರಾಣಿ ಜಾನಪದ ಕತೆಗಳನ್ನು ಕುರಿತು ವಿವರಿಸಿದ್ದಾರೆ. ತೀ.ನಂ. ಶಂಕರನಾರಾಯಣ ಅವರ ಲೇಖನವು ಜುಂಜಪ್ಪನ ಕಾವ್ಯದಲ್ಲಿ ನಾಯಕನನ್ನು ಕುರಿತ ಒಳ್ಳೆಯ ವಿಶ್ಲೇಷಣೆಯಾಗಿದೆ.

ಕನ್ನಡ ವಿಭಾಗದಲ್ಲಿನ ಐವತ್ತಮೂರು ಲೇಖನಗಳಲ್ಲಿ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅನೇಕ ಹಿರಿಯ ಕಿರಿಯ ಲೇಖಕರ ಲೇಖನಗಳಿವೆ. ಕೆಲವು ಕೇವಲ ಸಮೀಕ್ಷಾ ಸ್ವರೂಪದವಾಗಿದ್ದರೆ ಇನ್ನು ಕೆಲವು ನಿಜವಾಗಿಯೂ ಗಂಭೀರ ಸ್ವರೂಪದ ಹೊಸ ಚಿಂತನೆಯ ಹೊಳಹುಗಳನ್ನುಳ್ಳ ಲೇಖನಗಳಾಗಿವೆ. 'ಒಕ್ಕುಂದ ನಾಡಿನ ನುಡಿಸೊಗಡು' (ಸಿ.ಕೆ. ನಾವಲಗಿ), ಜಾನಪದ ಪರಂಪರೆ ಮತ್ತು ಚಲನಶೀಲತೆ (ಬಸವರಾಜ ನೆಲ್ಲಿಸರ), ಜಾನಪದದಲ್ಲಿ ಪೋತುರಾಜ (ಸೂಗಯ್ಯ ಹಿರೇಮಠ), ಲಕುಮಿ ದ್ಯಾವರ (ಎಸ್. ವೆಂಕಟೇಶಪ್ಪ), ತಂಬೂರಿ ಸಂಸ್ಕೃತಿಯೂ ಮಾತೃಮೂಲ ಸಂಸ್ಕೃತಿ ಸಂಚಯನವೂ (ಶಿವರಾಮಯ್ಯ), ಮುಂತಾದ ಒಳ್ಳೆಯ ಲೇಖನಗಳು ಇಲ್ಲಿವೆ. ಒಟ್ಟಾರೆ ಇದೊಂದು ಉಪಯುಕ್ತ, ಸಂಗ್ರಹಾರ್ಹ ಲೇಖನ ಸಂಚಯವಾಗಿ ಚೆನ್ನಾಗಿ ಮೂಡಿಬಂದಿದೆ.

ಎಸ್.ಪಿ. ಪದ್ಮಪ್ರಸಾದ್

ಅಭಿಪ್ರಾಯ ಸಂಗ್ರಹ

* **ಜಾನಪದ ತೇರು**–ಸಂ: ಬಂಡ್ಲಹಳ್ಳಿ ವಿಜಯಕುಮಾರ್, ಪ್ರ: ಮೇವಿ ಪಬ್ಲಿಕೇಷನ್ಸ್, ನ.೫೬೫, ೧ನೇ ಮಹಡಿ, ೩ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, ಮಂಜುನಾಥನಗರ, ಬೆಂಗಳೂರು – ೫೬೦ ೦೧೦. ಪುಟಗಳು ೨೦+೧೪೦; ಬೆಲೆ ರೂ. ೧೦೦/-

ಜಾನಪದ ತೇರು ಬಂಡ್ಲಹಳ್ಳಿ ವಿಜಯಕುಮಾರ್ ಅವರು ಸಂಪಾದಿಸಿರುವ ಅಭಿಪ್ರಾಯಗಳ ಸಂಗ್ರಹದ ಒಂದು ಕೃತಿ. ಗಾಯಕರಾದ ಶ್ರೀಯುತರಿಗೆ ಜಾನಪದ ಗೀತೆಗಳನ್ನು ಹಾಡುವುದರಲ್ಲಿ, ಎಳೆಯರಿಗೆ ತರಬೇತಿ ನೀಡಿ ಅವರಿಂದ ಹಾಡಿಸುವ ಕಾರ್ಯಕ್ರಮ ಮಾಡಿಸುವುದರಲ್ಲಿ ತುಂಬ ಆಸಕ್ತಿ ಹಾಗೂ ಅನುಭವಗಳಿವೆ. ಇದಕ್ಕಾಗಿಯೇ ಅವರು 'ರಂಗಸಂಸ್ಥಾನ' ಎಂಬ ಗಾಯನ ತರಬೇತಿ ಸಂಸ್ಥೆಯೊಂದನ್ನು ಬೆಂಗಳೂರಿನಲ್ಲಿ ಹುಟ್ಟುಹಾಕಿ ಆಸಕ್ತ ವಿದ್ಯಾರ್ಥಿಗಳಿಗೆ, ಯುವಜನರಿಗೆ ತರಬೇತಿ ಕೊಡುವ ಕಾರ್ಯಕ್ರಮವನ್ನು ೨೦೦೧ ರಿಂದಲೂ ನಡೆಸಿಕೊಂಡು ಬಂದಿದ್ದಾರೆ. ಇದೊಂದು ಮೆಚ್ಚಬೇಕಾದ ಕೆಲಸ. ಇದರಲ್ಲಿ ಶ್ರಮ ಮತ್ತು ರಿಸ್ಕು ಎರಡೂ ಇರುತ್ತವೆ.

ಈ ಸಂಸ್ಥೆಯ ದಶಮಾನೋತ್ಸವಕ್ಕಾಗಿ ಅದ್ಭುತ ರೀತಿಯ ಕಾರ್ಯಕ್ರಮವೊಂದನ್ನು ಶ್ರೀ ವಿಜಯಕುಮಾರ್ ಅವರು ೨೦೧೨ರ ಫೆಬ್ರವರಿಯಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ ಬಯಲು ರಂಗಮಂದಿರಲ್ಲಿ ಆಯೋಜಿಸಿದ್ದರು. ವಿವಿಧ ವಯಸ್ಸಿನ, ವಿವಿಧ ಸ್ಥಳಗಳಿಂದ ಬಂದಿದ್ದ ಒಂದು ಸಾವಿರ ಹಾಡುಗಾರರು ಜನಪದ ಗೀತೆಗಳನ್ನು ಗಂಟೆಗಳ ಕಾಲ ಹಾಡಿದರು. ಪತ್ರಿಕೆಗಳಲ್ಲಿ ಆ ಬಗ್ಗೆ ತುಂಬ ಮೆಚ್ಚುಗೆಯ ವರದಿಗಳು ಪ್ರಕಟವಾದವು.

ಅದಕ್ಕೆ ಪೂರ್ವಭಾವಿಯಾಗಿ ನಡೆದ ಹಲವು ತರಬೇತಿ ಶಿಬಿರಗಳಲ್ಲಿ ಭಾಗವಹಿಸಿದವರು ತಾವು ಪಡೆದ ತರಬೇತಿಯ ಬಗ್ಗೆ, ಜಾನಪದ ಹಾಡುಗಾರಿಕೆ ತಮ್ಮ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ ಬರೆದುಕೊಟ್ಟ ಅಭಿಪ್ರಾಯ ಗಳನ್ನು ಶ್ರೀ ವಿಜಯಕುಮಾರ್ ಸಂಕಲಿಸಿ ಈ ಪುಸ್ತಕದ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಅಭಿಪ್ರಾಯಗಳನ್ನು ಬರೆದವರಲ್ಲಿ ಪ್ರೌಢಶಾಲಾ ವಿದ್ಯಾರ್ಥಿಳಿಂದ ಹಿಡಿದು ಕಾಲೇಜು ಪ್ರಿನ್ಸಿಪಾಲರು, ಸುಗಮ ಸಂಗೀತದ ಹಾಡುಗಾರರು – ಹೀಗೆ ವಿವಿಧ ವೃತ್ತಿ, ವಯೋಮಾನದವರಿದ್ದಾರೆ. ಪ್ರಾರಂಭದಲ್ಲಿ ಶ್ರೀ ವಿಜಯಕುಮಾರ್ ಇಂಥ ಕಾರ್ಯಕ್ರಮಗಳ ಏರ್ಪಾಟನ್ನೂ ಜನ ಹೇಗೆ ಟೀಕಿಸಿದ್ದರೆಂಬುದನ್ನು ನೋವಿನಿಂದ ಬರೆದುಕೊಂಡಿದ್ದಾರೆ. 'ಇದೆಲ್ಲ ಇದ್ದದ್ದೇ. ಇದನ್ನು ಗಮನಿಸಬೇಡಿ' ಎಂದು ಅವರಿಗೆ ಹೇಳಬಹುದಷ್ಟೇ.

ಎಸ್.ಪಿ. ಪದ್ಮಪ್ರಸಾದ್

ಮತ್ತೊಂದು 'ಶ್ರೀ ಕೃಷ್ಣ ಪಾರಿಜಾತ'

* **ಶ್ರೀ ಕೃಷ್ಣಪಾರಿಜಾತ**– ಸಂ: ಶಂಕರ ಶಿ. ಕುಂಬಾರ; ಪ್ರ: ವಿಜೇತ್ ಪ್ರಕಾಶನ, ಗದಗ, ಪುಟಗಳು – ೩೨+೩೨೦: ಬೆಲೆ ರೂ. ೧೦೦/–

ಬಯಲು ನಾಡಿನಲ್ಲಿ ಸಣ್ಣಾಟಗಳ ಮುಕುಟಮಣಿ ಎಂದೇ ಪ್ರಸಿದ್ಧವಾಗಿರುವ 'ಶ್ರೀಕೃಷ್ಣಪಾರಿಜಾತ'ವು ಬಯಲಾಟದ ರೂಪ ತಳೆದು ಸುಮಾರು ೧೫೦ ವರ್ಷವಾಯಿತು. ಅಪರಾಳ ತಮ್ಮಣ್ಣನ 'ಶ್ರೀಕೃಷ್ಣ ಪಾರಿಜಾತ'ವು ೧೮೦೦ರ ಹೊತ್ತಿಗೇ ಜನಪ್ರಿಯವಾಗಿತ್ತಾದರೂ ಅದರ ರಂಗರೂಪದ ಕೃತಿ ತಯಾರಾದದ್ದು ೧೮೬೦ರ ಹೊತ್ತಿಗೆ ಎಂದು ಬಹುಜನ ವಿದ್ವಾಂಸರ ಅಭಿಪ್ರಾಯ. ಅಲ್ಲಿಂದೀಚೆಗೆ ಅದನ್ನು ಅನುಸರಿಸಿ 'ಶಿವಪಾರಿಜಾತ' 'ವಿಷ್ಣುಪಾರಿಜಾತ'– ದಂಥ ಕೃತಿಗಳು ಬಂದವು. ಆದರೆ ಅವು ಯಾವುವೂ ಜನಮನವನ್ನು ಶ್ರೀಕೃಷ್ಣ ಪಾರಿಜಾತದಂತೆ ಸೆರೆ ಹಿಡಿಯಲಿಲ್ಲ. ಇಂದಿಗೂ ಉತ್ತರ ಕರ್ನಾಟಕದಲ್ಲಿ ಅದೇ ತುಂಬ ಜನಪ್ರಿಯ.

ಶ್ರೀ ಕೃಷ್ಣಪಾರಿಜಾತವನ್ನು ಆಧರಿಸಿ ಈಗ ಇನ್ನೊಂದು 'ಶ್ರೀ ಕೃಷ್ಣ ಪಾರಿಜಾತ' ಜನಿಸಿದೆ. ಇದನ್ನು ರಚಿಸಿರುವ ಶಂಕರ ಶಿ. ಕುಂಬಾರ ಅವರು ಮುಖಪುಟದಲ್ಲಿ ಇದನ್ನೊಂದು 'ಗೀತಕಾವ್ಯ' ಎಂದೇ ಕರೆದಿದ್ದರೂ ಒಳಗಡೆ ಗೊಲ್ಲತಿ, ದೂತೆ ಇತ್ಯಾದಿ ಪಾತ್ರಗಳ ಸಂಭಾಷಣೆ ಎಲ್ಲಾ ಇದ್ದು ಪಾರಿಜಾತ ಬಯಲಾಟದ ಕೃತಿಯಂತೆಯೇ ಇದೆ. ಅಷ್ಟೇ ಅಲ್ಲ, ಶ್ರೀ ಶಂಕರ ಶಿ. ಕುಂಬಾರ ಅವರು ತಮ್ಮ 'ಸಂಪಾದಕರ ಮಾತು'ನಲ್ಲಿ ಹೇಳುತ್ತಾರೆ – '.......ನಾನು ಸುಂಕಾಪೂರರವರು ಸಂಪಾದಿಸಿರುವ ಶ್ರೀ ಕೃಷ್ಣ ಪಾರಿಜಾತವನ್ನು ಸಂಕಲನ ಮಾಡಿ ಅದರಲ್ಲಿ ಸಂದರ್ಭಕ್ಕನುಸರಿಸಿ ಕೆಲವು ಪುರಾಣಗಳಲ್ಲಿಯ ವಿಷಯವನ್ನು ಆಯಾ ಸನ್ನಿವೇಶಗಳಲ್ಲಿ ಪಾರಿಜಾತಕ್ಕೆ ಹೊಂದಿಕೊಳ್ಳುವಂತೆ ಅಳವಡಿಸಿದ್ದೇನೆ'– ಎಂದು. ಅಲ್ಲಿಗೆ ಇದು ಅಪರಾಳ ತಮ್ಮಣ್ಣನ ಕೃತಿಯ ಪರಿವರ್ಧಿತ ರೂಪ ಎಂದಾಯಿತು. ಹೀಗೆ ಮಾಡುವುದು ಸರಿಯೇ ತಪ್ಪೇ ಎಂದು ಕೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ಯಾಕೆಂದರೆ ಶ್ರೀ ಶಂಕರ ಕುಂಬಾರರಿಗೆ ಅಂಥ ಯಾವುದೇ ಚಿಂತೆ/ಚಿಂತನೆ/ ಗ್ರಂಥ ಸಂಪಾದನೆಯ ನಿಯಮಗಳು ಕಾಡಿಯೇ ಇಲ್ಲ. ಸಾಮಾನ್ಯ ವಿದ್ಯಾವಂತರಾದ ಇವರಿಗೆ ಬಯಲಾಟದ ಕಲಾವಿದರಿಗೆ ಒಂದು ಒಳ್ಳೆಯ ಪಾರಿಜಾತ ಕೃತಿ ಆಡಲು ಸಿಕ್ಕಬೇಕೆಂಬುದಷ್ಟೇ ಗೊತ್ತು. ಆ ದೃಷ್ಟಿಯಿಂದಷ್ಟೇ ಇವರು ಈ ಕೆಲಸ ಮಾಡಿದ್ದಾರೆ. ಬರವಣಿಗೆಯಲ್ಲಿ ಯಥೇಷ್ಟವಾದ ಕಾಗುಣಿತದ ತಪ್ಪುಗಳಿವೆ. ಇವರ ಮುಗ್ಧತೆ ಎಷ್ಟು ಎಂದರೆ – ಶ್ರೀ ಕೃಷ್ಣಪಾರಿಜಾತದ ಬಗ್ಗೆ ಹಲವರು ಹೇಳಿರುವುದನ್ನು / ಬರೆದಿರುವುದನ್ನು ಆರಂಭದಲ್ಲಿ ಮುದ್ರಿಸಿದ್ದಾರೆ. ಆದರೆ ಅದರ ಆಕರ ಯಾವುದು ಎಂಬುದನ್ನೂ ಸಹ ಎಲ್ಲಿಯೂ ಹೇಳಿಲ್ಲ. ಹಾಡುಗಳನ್ನು ಮುದ್ರಿಸುವಾಗ ಅನೇಕ ಕಡೆ ಶಬ್ದಗಳನ್ನು ತಪ್ಪು ತಪ್ಪಾಗಿ ಒಡೆಯಲಾಗಿದೆ. ಹಾಡುಗಳ ಸಾಹಿತ್ಯಿಕ ಗುಣವೇನೋ ಅನೇಕ ಕಡೆ ಉತ್ತಮವಾಗಿದೆ. ಆದರೆ ಅದರಲ್ಲಿ ಕುಂಬಾರರ ರಚನೆ ಯಾವುದು ಎಂದು ತಿಳಿದು ಮೆಚ್ಚಬೇಕಾದರೆ ಅಪರಾಳ ತಮ್ಮಣ್ಣನ ರಚನೆಯನ್ನು ಪಕ್ಕದಲ್ಲಿಟ್ಟು ಕೊಂಡೇ ನೋಡಬೇಕು. ಯಾಕೆಂದರೆ ತಾವು ಸೇರಿಸಿರುವ ಪೌರಾಣಿಕ ಪ್ರಸಂಗಗಳನ್ನು ಕೇವಲ ಗದ್ಯರೂಪದಲ್ಲಿ ಮಾತ್ರ ಹೇಳಿದ್ದಾರೆಯೋ, ಹಾಡುಗಳನ್ನು ರಚಿಸಿದ್ದಾರೆಯೋ ಎಂಬುದು ಸಂಪಾದಕರ ಮಾತಿನಲ್ಲಾಗಲೀ ಪಠ್ಯದಲ್ಲಾಗಲೀ ಎಲ್ಲೂ ಸ್ಪಷ್ಟವಿಲ್ಲ. ಈ ಕೃತಿ ರಚನೆಗೆ ೩೭ ಆಧಾರ ಗ್ರಂಥಗಳನ್ನು ಬಳಸಿರುವುದಾಗಿ ಒಂದು ಪಟ್ಟಿಯನ್ನು ಕಡೆಯಲ್ಲಿ ಕೊಟ್ಟಿದ್ದಾರೆ. ಅಷ್ಟೆಲ್ಲಾ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲವರಿಗೆ ಸರಿಯಾದ ಶೀರ್ಷಿಕೆ ಕೊಡಲು, ಉಲ್ಲೇಖಿತ ಅಭಿಪ್ರಾಯಗಳನ್ನು ಎಲ್ಲಿಂದ ತೆಗೆದು ಕೊಂಡಿದ್ದೇವೆಂದು ಹೇಳಲು, ಶಬ್ದರೂಪಗಳನ್ನು ಕಾಪಾಡಿಕೊಳ್ಳಲು ಬರುವುದಿಲ್ಲವೇ ಎಂದು ಆಶ್ಚರ್ಯವಾಗುತ್ತದೆ. ಒಟ್ಟಾರೆ – ಪಾರಿಜಾತ ಆಟವನ್ನಾಡುವ ಕಲಾವಿದರಿಗೆ ಉಪಯೋಗವಾಗಲಿ ಎಂದು ಇವರು ಮಾಡಿರುವ ಈ ರಚನೆ ಸಾರ್ಥಕವಾಗಲಿ ಎಂದು ಹಾರೈಸಬೇಕಷ್ಟೆ.

ಎಸ್.ಪಿ. ಪದ್ಮಪ್ರಸಾದ್

ಸುಂದರವಾದ ತ್ರಿಪದಿ ಒಗಟುಗಳು

* **ಬಸವರಸನ ಒಗಟುಗಳು**– ಸಂಗಮೇಶ ಹೊಳೇಚಿ. ಪ್ರ: ಬಸಪ್ಪ ಹೊಳೇಚಿ. ಪ್ರಕಾಶನ, ಸೂಲದೇವನಹಳ್ಳಿ, ಹೆಸರಘಟ್ಟ ರಸ್ತೆ, ಬೆಂಗಳೂರು – ೫೬೦ ೦೯೦; ಪುಟಗಳು ೫೨೪+೧೬, ಬೆಲೆ ರೂ. ೩೫೦/–

'ಬಸವರಸನ ಒಗಟುಗಳು' – ಇದು ಶ್ರೀ ಸಂಗಮೇಶ ಹೊಳೇಚಿ ಅವರು 'ಬಸವರಸ' ಎಂಬ ಕಾವ್ಯನಾಮದಲ್ಲಿ ಸ್ವತಃ ರಚಿಸಿರುವ ಒಗಟುಗಳ ಸಂಗ್ರಹ. ಇಲ್ಲಿ ೨೩೬೮ ತ್ರಿಪದಿ ರೂಪದ ಒಗಟುಗಳಿವೆ. ಈ ಸಂಖ್ಯೆಯೇ ಬೆರಗು ಮೂಡಿಸುವಂಥದು. ಇದನ್ನು ೧೯೯೩ರಲ್ಲಿ ರಚಿಸಿದ್ದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಪಾರಂಪರಿಕವಾಗಿ ಬಂದ ಒಗಟುಗಳಲ್ಲ ಇವು. ಆದರೆ ಜಾನಪದವು ನಿರಂತರವಾಗಿ ಸೃಷ್ಟಿಯಾಗುತ್ತಿರುತ್ತದೆ ಎಂಬುದಕ್ಕೊಂದು ಸಾಕ್ಷಿಯಂತಿವೆ ಈ ಒಗಟುಗಳು. ಅನೇಕ ಸಮಕಾಲೀನ ಗ್ರಾಮೀಣರು ಹಾಡುಗಳನ್ನು ಕಟ್ಟಿ ಹರಿಬಿಟ್ಟಿರುವುದನ್ನು ನಾವು ಕಂಡಿದ್ದೇವೆ. ತತ್ತ್ವಪದಕಾರರ ಅನೇಕ ರಚನೆಗಳು ಲಿಖಿತವಾಗಿದ್ದೂ ನಿಜ, ಬಾಯ್ದೆರೆಯಾಗಿ ಹರಿದು ಬಂದದ್ದೂ ನಿಜ. ಅಂಥ ಜಾನಪದ ಧಾಟಿಗೆ ಮನಸೋತ ಸಂಗಮೇಶ ಹೊಳೇಚಿ ಅವರು ತ್ರಿಪದಿ ಧಾಟಿಯಲ್ಲಿ ಇಷ್ಟೊಂದು ಸಂಖ್ಯೆಯ ಒಗಟುಗಳನ್ನು ಧಾರಾಕಾರವಾಗಿ ರಚಿಸಿ ಸುಂದರವಾಗಿ ಮುದ್ರಿಸಿದ್ದಾರೆ.

ಇವು ಪರಂಪರೆಯಾಗಿ ಹರಿಯುವುದು ಅನುಮಾನ. ಆದರೆ ಇವುಗಳಲ್ಲಿ ಸಾಹಿತ್ಯಿಕ ಸೊಗಸು ಸಾಕಷ್ಟು ಪ್ರಮಾಣದಲ್ಲಿದೆ. ಕೆಲವು ಉದಾಹರಣೆಗಳನ್ನು ನೋಡಿ–

ಹಿಡಿವವರು ಯಾರುಂಟು? ತಡೆವವರು ಯಾರುಂಟು ?
ದುಡದುಡನೆ ಹರಿದು ಓಡುತಿಹ । ಬೆಳ್ಳಿಯನು
ಹಿಡಿದು ತರುವೆಯಾ? ಬಸವರಸ।

(ಸಂಖ್ಯೆ ೬೩೨/ಪಾದರಸ)

ಬಾಲರವಿ ಬೆಳಗಿರಲು ಬಾಲೆ ತಾ ಮುತ್ತೈದೆ ।
ಸಾಲಿರಲಿ ದುಃಖವೆಷ್ಟಿರಲಿ । ಮುತ್ತೈದೆಗೆ ।
ಬಲವುಂಟು ಜಗದಿ ಬಸವರಸ ॥

(ಸಂಖ್ಯೆ ೬೨೮/ ಕುಂಕುಮ)

– ಹೀಗೆ ಇಲ್ಲಿನ ಅನೇಕ ತ್ರಿಪದಿ ಒಗಟುಗಳು ಸಾಹಿತ್ಯಿಕವಾಗಿ ಉತ್ತಮವೇ ಆಗಿವೆ.

ಹೀಗೆ ಜಾನಪದವನ್ನು ಅನುಕರಿಸಿದ ಅನೇಕ ರಚನೆಗಳು ಸಮಕಾಲೀನ ಕವಿಗಳಿಂದ ರಚನೆಯಾಗಿ ಪ್ರಕಟವಾಗುವುದು ಹೊಸ ಸಂಗತಿಯೇನೂ ಅಲ್ಲ. ಹಿಂದೆ ಎಸ್.ವಿ. ಪರಮೇಶ್ವರ ಭಟ್ಟರೇ ಏಳುನೂರು ಗಾದೆಗಳನ್ನು ರಚಿಸಿ ಒಂದು ಸಂಕಲನವಾಗಿ ಪ್ರಕಟಿಸಿದ್ದುಂಟು. ಆದರೆ ಇಂಥ ಪ್ರಯತ್ನಗಳು ತಲೆಮಾರಿನಿಂದ ತಲೆಮಾರಿಗೆ ಗ್ರಾಮೀಣದಲ್ಲಿ ಮೌಖಿಕ ಪರಂಪರೆಯಲ್ಲಿ ಹರಿದು ಬರಲಿಲ್ಲ. ಒಂದು ರಚನೆಯ ಜಾನಪದ ಮೌಲ್ಯ ಅದರ ಜಾನಪದೀಯ ಉಗಮ ಮತ್ತು ಬಳಕೆ ಎರಡರಿಂದಲೂ ನಿರ್ಧಾರವಾಗುತ್ತವೆ. ಹೀಗಾಗಿ ಇಂಥ ಜಾನಪದ ಮಾದರಿಯ ರಚನೆಗಳು ಗ್ರಂಥಾಲಯಕ್ಕಷ್ಟೇ ಸೀಮಿತಗೊಳ್ಳುವ ಸಂಭವವೇ ಹೆಚ್ಚು.

ಈ ಅಂಶವೊಂದನ್ನು ಬಿಟ್ಟರೆ ಉಳಿದಂತೆ ಈ ಸಂಕಲನವನ್ನು ಸಾಕಷ್ಟು ಶ್ರದ್ಧೆಯಿಂದ ಸಿದ್ಧಪಡಿಸಲಾಗಿದೆ. ೨೮ ಪುಟಗಳ ಒಂದು ಪ್ರಸ್ತಾವನೆಯು ಆರಂಭದಲ್ಲಿದ್ದು ಅದರಲ್ಲಿ ಒಗಟಿನ ವಿನ್ಯಾಸ, ವಿಕಾಸ, ಚರಿತ್ರೆಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ವಿಶೇಷ ವಿಷಯವೇನೂ ಇಲ್ಲ. ಕೆಲವೆಡೆ ಒಪ್ಪಲು ಕಷ್ಟವೆನಿಸುವಂಥ ಅಭಿಪ್ರಾಯಗಳನ್ನೂ ಲೇಖಕರು ಹೇಳಿದ್ದಾರೆ. ಉದಾಹರಣೆಗೆ – ಪುಟ ೩೮ರಲ್ಲಿ ಹೀಗೆ ಹೇಳುತ್ತಾರೆ– 'ಒಗಟನ್ನು ಒಡೆಯುವಲ್ಲಿ ತಮ್ಮನ್ನು 'ತಮ್ಮ ಆಸ್ತಿಪಾಸ್ತಿಯನ್ನು ಹೆಂಡತಿ ಮಕ್ಕಳನ್ನು ಪಣಕ್ಕಿಟ್ಟು ಅವುಗಳೆಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾದದ್ದನ್ನೂ ಅಷ್ಟೇ ಏಕೆ, ರಾಜ ಮಹಾರಾಜರುಗಳೂ ಕೂಡ, ಈ ಒಗಟೆಂಬ ಜೂಜಿನಲ್ಲಿ ತಮ್ಮ ರಾಜ್ಯ ಹಾಗೂ ಸಾಮ್ರಾಜ್ಯವನ್ನೇ ಪಣಕ್ಕಿಟ್ಟು ಕಳೆದುಕೊಂಡು ಅಡವಿ ಪಾಲಾದ ಎಷ್ಟೋ ಉದಾಹರಣೆಗಳು ನಮ್ಮ ಪ್ರಾಚೀನ ರಾಜಮನೆತನಗಳ ಇತಿಹಾಸದಿಂದ ತಿಳಿದುಬರುತ್ತದೆ.'

– ಎಲ್ಲಿದೆ ಅಂಥ ಉದಾಹರಣೆಗಳು? ಎಷ್ಟಿವೆ ? ಪಾಂಡವರು ರಾಜ್ಯ ಸೋತದ್ದು ಪಗಡೆಯಾಟದಲ್ಲೇ ವಿನಃ ಒಗಟು ಬಿಡಿಸುವುದರಲ್ಲಿ ಅಲ್ಲ. ಕೆಲವು ಜಾನಪದ ಕತೆಗಳಲ್ಲಿ ಒಗಟು ಬಿಡಿಸಲು ಸೋತದ್ದರ ವಿಷಯ ಬರುತ್ತದೆಯೇ ವಿನಾ 'ಪ್ರಾಚೀನ ರಾಜಮನೆತನಗಳ ಇತಿಹಾಸ' ದಲ್ಲಿ ಅಲ್ಲ. ಇದೇ ರೀತಿ 'ಒಗಟು ಜನರ ಅಂತರಂಗದ ಆಳದಿಂದ ನಿರಂತರವಾಗಿ ಹರಿದು ಬಂದಿರುವ ಕ್ರಿಯೆಯಾಗಿರುತ್ತದೆ' (ಪ.೩೭) ಎಂಬ ಮಾತೂ ಸಹ. ಹಾಗೆ ಬಂದಿದ್ದು ಕಥೆ/ಗೀತೆ/ ಗಾದೆಗಳೇ ವಿನಃ ಒಗಟುಗಳಲ್ಲ. ಅವುಗಳ ಬಾಹುಳ್ಯವಿರುವಷ್ಟು ಒಗಟುಗಳದ್ದು ಇಲ್ಲ. ಆದ್ದರಿಂದ ಇಂಥವೆಲ್ಲ ಕೇವಲ ಅಭಿಮಾನದ ಮಾತಾಗುತ್ತದೆ.

ಕೊನೆಯಲ್ಲಿ ಒಗಟುಗಳ ಉತ್ತರಗಳನ್ನು ಕೊಡಲಾಗಿದೆ. ಅನಂತರ ಇಲ್ಲಿನ ಒಗಟುಗಳ ವರ್ಗೀಕರಣವನ್ನು ಮಾಡಲಾಗಿದೆ– ಶರೀರದ ಅಂಗಗಳು, ರೋಗ ಮತ್ತು ಔಷಧಿಗಳು, ಭಾವನೆ/ಸ್ವಭಾವ, ವೃತ್ತಿಗಳು – ಹೀಗೆ ವಿವಿಧ ವಿಷಯಗಳಿಗೆ

ಸಂಬಂಧಿಸಿದಂತೆ ಇಲ್ಲಿನ ಒಗಟುಗಳಿವೆ. ಅನಂತರ ಒಗಟುಗಳ ಆಕಾರಾದಿ ಪಟ್ಟಿಯನ್ನೂ ಕೊಟ್ಟಿದ್ದಾರೆ. ಇಲ್ಲೆಲ್ಲ ಕವಿಯ ಶ್ರದ್ಧೆಯನ್ನು ಗಮನಿಸಬಹುದಾಗಿದೆ.

ಒಟ್ಟಿನಲ್ಲಿ ಇದೊಂದು ಓದಿ ಸಂತೋಷಿಸಬಹುದಾದ, ಇತರರಿಗೆ ಒಗಟು ಹಾಕಿ ವಿನೋದಿಸಿಸಬಹುದಾದ ಪುಸ್ತಕ.

ಎಸ್.ಪಿ. ಪದ್ಮಪ್ರಸಾದ್

ಸ್ಥೂಲ ಲೇಖನಗಳು

* **ಪುನರವಲೋಕನ:** ಸಂ.ನಾಡೋಜ ಹಂಪ ನಾಗರಾಜಯ್ಯ; ಪ್ರ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು – ೨; ಪು.೫೪೦, ಬೆಲೆ– ರೂ. ೩೦೦/–

ಬೆಳಗಾವಿಯಲ್ಲಿ ಮಾರ್ಚ್ ೨೦೧೧ರಲ್ಲಿ ನಡೆದ ಎರಡನೆಯ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಪ್ರಕಟವಾದ ಸ್ಮರಣ ಸಂಚಿಕೆ **ಪುನರಾವಲೋಕನ**. ಇದರಲ್ಲಿ ಹದಿನಾಲ್ಕು ವಿವಿಧ ವಿಭಾಗಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿದ್ದು ಪ್ರತಿ ವಿಭಾಗದಲ್ಲಿ ಲೇಖನಗಳ ನಂತರ 'ಮಂಥನ' ವೆಂಬ ಮತ್ತೊಂದು ಅನುಬಂಧದಂಥ ವಿಭಾಗವಿದ್ದು ಅಲ್ಲಿ ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನುಭವಿಗಳ ಟಿಪ್ಪಣಿಗಳಿವೆ. ಹೀಗೆಯೇ **'ಜಾನಪದ ಸಿರಿ'** ಎಂಬೊಂದು ವಿಭಾಗವೂ ಅದಕ್ಕೆ ಹೊಂದಿಕೊಂಡಂತೆ ಮಂಥನವೂ ಇದೆ. ನಮಗೆ ಪ್ರಸ್ತುತವಾಗುವುದು ಈ ವಿಭಾಗ ಮಾತ್ರ.

'ಜಾನಪದ ಸಿರಿ' ವಿಭಾಗದಲ್ಲಿ ಆರು ಲೇಖನಗಳಿವೆ. ಜೀವಮಾನವೆಲ್ಲ ಜಾನಪದ ಕ್ಷೇತ್ರದಲ್ಲೇ ತೊಡಗಿಸಿಕೊಂಡಿದ್ದು ಗಂಭೀರ ಅಧ್ಯಯನ, ಕ್ಷೇತ್ರಕಾರ್ಯಗಳಲ್ಲಿ ನುರಿತವರಿಂದಲೇ ಇವನ್ನು ಬರೆಸಲಾಗಿದೆ. ಇವರಿಗೆ ಈ ಲೇಖನಗಳನ್ನೂ ಬರೆಯಲು ಬೇಕಾದ ತಜ್ಞತೆ ಇರುವುದೇನೋ ನಿಜ. ಆದರೆ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗು ವಂತೆ ಆರೇಳು ಪುಟಗಳ ಮಿತಿಯಲ್ಲಿ – ಜನಪದ ರಂಗಭೂಮಿ, ಅಡುಗೆ, ಸಂಗ್ರಹಾಲಯಗಳು, ಯಕ್ಷಗಾನ – ಇಂಥವುಗಳ ಬರೆಯಿರಿ ಎಂದರೆ ಅವರಾದರೂ ಹೇಗೆ ವಿಷಯಕ್ಕೆ ನ್ಯಾಯ ಒದಗಿಸಿಯಾರು ? ಇತ್ತ ಸಂಪಾದಕರಿಗೂ ಅಂಥದೇ ಕಷ್ಟ. ಸಮಗ್ರ ಕರ್ನಾಟಕ/ಕನ್ನಡಕ್ಕೆ ಅನ್ವಯಿಸಿದಂತೆಯೇ ಅವರು ಲೇಖನಗಳನ್ನು ಬರೆಸಬೇಕಾಗಿದೆ. ಹೀಗಾಗಿ ಇಲ್ಲಿನ ಲೇಖನಗಳಿಗೆ ಸಹಜವಾಗಿಯೇ ಸ್ಥೂಲತ್ವ ಪ್ರಾಪ್ತವಾಗಿದೆ. ಕೇವಲ ಪರಿಚಯಾತ್ಮಕ ಮಟ್ಟದಲ್ಲಿಯೇ ಇವು ಉಳಿದಿವೆ. ಅಂಥಾದ್ದರಲ್ಲೂ ಕೆಲವು ಹೊಸ ಚಿಂತನೆಗಳನ್ನೂ ಇಲ್ಲಿ ದಾಖಲಿಸಲು ಆಯಾ ಲೇಖಕರು ಯತ್ನಿಸಿದ್ದಾರೆಂಬುದೇ ಸಮಾಧಾನಕರ ಅಂಶ.

'ಜಾನಪದ ಕರ್ನಾಟಕ' ದ ಬಗ್ಗೆ ಬರೆದಿರುವ ಹೀ.ಚಿ. ಬೋರಲಿಂಗಯ್ಯ ನವರು ಪರಿಚಯದ ಹಾದಿ ಬಿಟ್ಟು ವಿಶ್ಲೇಷಣೆಯ ಕಡೆ ಗಮನ ಹರಿಸಿದ್ದಾರೆ. ಇದು ಒಳ್ಳೆಯದೇ. ಜನಪದ ಕಲೆಗಳು ಹುಟ್ಟಿಕೊಂಡ ವಿವಿಧ ಕಾಲಘಟ್ಟಗಳು, ಅನಿವಾರ್ಯತೆಗಳು, ವಸಾಹತು ಶಾಹಿಯ ಪರಿಣಾಮ, ಜನಪದ ಮಹಾಕಾವ್ಯಗಳು ಕನ್ನಡ ಸಂಸ್ಕೃತಿಯನ್ನು ವಿಭಿನ್ನ ರೀತಿಯಲ್ಲಿ ಕಂಡು ಅರ್ಥೈಸಿರುವುದು, ಇವೆಲ್ಲ ಇವರ ಚಿಂತನೆಯಲ್ಲಿ ಕಾಣಿಸಿಕೊಂಡಿವೆ. ಇವರ ಕೆಲವು ಚಿಂತನೆಗಳನ್ನು ನಾವು ಒಪ್ಪದಿರಬಹುದು (ಉದಾಹರಣೆಗೆ – 'ಕನ್ನಡ ಸಂಸ್ಕೃತಿ ಇಲಾಖೆ ರಾಜಕೀಯ ನಾಯಕರನ್ನು ಮೆಚ್ಚಿಸುವುದಕ್ಕೆ ಮೀಸಲಾಗಿದೆ'– ಎನ್ನುತ್ತಾರೆ ಇವರು.) ಆದರೆ ಇದು ಗಂಭೀರ ಚರ್ಚೆಯನ್ನು ಒತ್ತಾಯಿಸುವ ಲೇಖನ.

ಶ್ರೀಮತಿ ಶಾಂತಿನಾಯಕ ಅವರು 'ಜನಪದ ಅಡುಗೆ' ಯನ್ನು ವಿವರಿಸುವಾಗ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ – ಎಂದು ವಿಭಾಗಿಸಿಕೊಂಡು ಪ್ರಧಾನ ಧಾನ್ಯಗಳ ಬಳಕೆಯನ್ನು ಆಧಾರವಾಗಿಟ್ಟುಕೊಂಡು ವಿಷಯವನ್ನು ಮಂಡಿಸಿರುವುದು ತೃಪ್ತಿಕರವಾಗಿದೆ. ಈ ಲೇಖನದ ಮಿತಿಯಲ್ಲಿ ಅವರು ಇನ್ನೇನೂ ಮಾಡುವುದು ಸಾಧ್ಯವಿರಲಿಲ್ಲ.

ಚಕ್ಕೆರೆ ಶಿವಶಂಕರ ಅವರು ಜನಪದ ಪ್ರದರ್ಶಕ ಕಲೆಗಳನ್ನು ಕುರಿತು ಬರೆದಿದ್ದಾರೆ. ಇವುಗಳನ್ನು ಒಂದೆಡೆ– ಗೀತಪ್ರಧಾನ, ವಾಕ್ಯ ಪ್ರಧಾನ, ನೃತ್ಯ ಪ್ರಧಾನ, ಆರಾಧನಾ ಪ್ರಧಾನ ಮತ್ತು ಮನರಂಜನಾ ಪ್ರಧಾನ ಎಂದು ವಿಂಗಡಿಸಿಕೊಂಡಿದ್ದಾರೆ. ಇದೇನೋ ಸರಿಯಾದದ್ದು ಹಾಗೂ ಮೇಲ್ನೋಟಕ್ಕೇ ಅರ್ಥವಾಗುವಂಥಾದ್ದು. ಇಲ್ಲಿಂದ ಸ್ವಲ್ಪ ಮುಂದೆ ಅವರು – 'ಜನಪದ ಕಲೆಗಣನ್ನು ಅಟ್ಟರಹಿತ ಕಲೆಗಳು, ಗಾಯನ ಮೂಲಕಲೆಗಳು, ಅಟ್ಟದ ಕಲೆಗಳು, ಸೋಗುಗಳು, ರಚನಾ ಕಲೆಗಳು ಎಂದು ಐದು ವಿಭಾಗಗಳಾಗಿ ಮಾಡಬಹುದು' ಎನ್ನುತ್ತಾರೆ. ಇಲ್ಲಿ 'ಅಟ್ಟ' ಎನ್ನುವುದು ಬಹುಶಃ ಮುದ್ರಣದೋಷದಿಂದ 'ಅಟ್ಯ' ಆಗಿರಬಹುದು. (ಈ ಲೇಖನದಲ್ಲಿ ಅನೇಕ ಮುದ್ರಣ ದೋಷಗಳಿವೆ.) ಆದರೂ ಈ ಪ್ರತಿಯೊಂದು ವಿಭಾಗದ ಬಗ್ಗೆ ಒಂದೊಂದು ಸಾಲಿನಲ್ಲಾದರೂ ವ್ಯಾಖ್ಯೆ ನೀಡಬೇಕಿತ್ತು ಹಾಗೂ ಹಿಂದಿನ ವರ್ಗೀಕರಣಕ್ಕಿಂತ ಇದಕ್ಕೆ ಇಟ್ಟುಕೊಂಡಿರುವ ಭಿನ್ನ ಆಧಾರ ಯಾವುದು ಎಂದು ಹೇಳಬೇಕಿತ್ತು. ಕರ್ನಾಟಕದಲ್ಲಿನ ಅನೇಕ ಜನಪದ ಕಲೆಗಳನ್ನಿಲ್ಲಿ ಉಲ್ಲೇಖಿಸಿದ್ದಾರೆ. ಬಸವರಾಜ ನೆಲ್ಲಿಸರ ಅವರು 'ಜಾನಪದ ಸಂಗ್ರಹಾಲಯಗಳು' ಲೇಖನದಲ್ಲಿ ಕರ್ನಾಟಕದಲ್ಲಿನ ಪ್ರಮುಖ ಜಾನಪದ ವಸ್ತುಸಂಗ್ರಹಾಲಯಗಳ ಬಗ್ಗೆ ಚೆನ್ನಾಗಿಯೇ ಬರೆದಿದ್ದಾರೆ. ಆದರೆ ಸ್ವತಃ ಅವರೇ ದುಡಿದಿರುವ ಕುವೆಂಪು ವಿ.ವಿ.ಯ ಜಾನಪದ ಸಂಗ್ರಹಾಲಯದ ಬಗ್ಗೆ ಉಲ್ಲೇಖಿಸುವುದೊಂದು ಬಿಟ್ಟು ಮತ್ತೇನೂ ಮಾಡಿಲ್ಲ. ಅದೂ ಸಾಕಷ್ಟು ವಿಸ್ತಾರವಾದ

ಸಂಗ್ರಹವೇ. ಅದೇ ರೀತಿ ಮಂಗಳೂರು ವಿ.ವಿ.ಯ ಸಂಗ್ರಹಾಲಯದ ಬಗ್ಗೆಯೂ ಕೆಲವು ಮಾತು ಹೇಳಬೇಕಿತ್ತು. ಆದರೂ ಇದೊಂದು ತೃಪ್ತಿಕರವಾದ ಲೇಖನ.

ಎಚ್.ಟಿ. ಪೋತೆಯವರು ಬರೆದಿರುವ 'ಜಾನಪದ ಜ್ಞಾನ-ವಿಜ್ಞಾನ' ಲೇಖನದಲ್ಲಿ ವಿಶೇಷ ಚಿಂತನೆ ಏನೂ ಕಾಣುವುದಿಲ್ಲ. ಅಷ್ಟೇ ಅಲ್ಲ – 'ಇವತ್ತಿನ ಆಲೋಪಥಿಕ ನಮ್ಮ ಆಯುರ್ವೇದ ಪದ್ಧತಿಯ ಮೇಲೆ ನಿಂತಿದೆ'– ಎಂಬಂಥ ಬೆರಗು ಹುಟ್ಟಿಸುವ ಮಾತೂ ಇದೆ.

ಆನಂದರಾಮ ಉಪಾಧ್ಯರು 'ಯಕ್ಷಗಾನ ರಂಗಭೂಮಿ' ಕುರಿತು ಬರೆದಿದ್ದು ಅದು ಸಾಕಷ್ಟು ವಿಸ್ತಾರವೂ ಸ್ಪಷ್ಟವೂ ಮಾಹಿತಿ ಪೂರ್ಣವೂ ಆಗಿದೆ. ಯಕ್ಷಗಾನದ ವಿವಿಧ ಸಂಪ್ರದಾಯಗಳು, ಬದಲಾವಣೆಗಳು, ವಿವಿಧ ಅಂಗಗಳನ್ನು ಕುರಿತು ಲೇಖನದ ಮಿತಿಯಲ್ಲಿ ಚೆನ್ನಾಗಿಯೇ ಬರೆದಿದ್ದಾರೆ. ಅದೇ ರೀತಿ ಭೈರಮಂಗಲ ರಾಮೇಗೌಡರ 'ಜನಪದ ಆಟಗಳು' ಕೂಡಾ ಒಳ್ಳೆಯ ಲೇಖನ. 'ಮಂಥನ' ವಿಭಾಗದಲ್ಲಿ – ವ.ನಂ. ಶಿವರಾಮು, ತೀ.ನಂ. ಶಂಕರನಾರಾಯಣ, ಟಿ. ಗೋವಿಂದರಾಜು, ಇಮ್ರಾಪೂರ ಮೊದಲಾದವರು 'ಜಾನಪದ ತೆರೆಮರೆಗೆ ಸರಿಯುತ್ತಿದೆಯೇ' ಎಂಬ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

ಎಸ್.ಪಿ. ಪದ್ಮಪ್ರಸಾದ್

ಆಕರ್ಷಕ ಜಾನಪದ ಕತೆಗಳು

* **ಜನಪದ ಸಿರಿ:** ಸಂಗ್ರಾಹಕರು: ಚಂದ್ರಪ್ಪ, ಪ್ರ.ಚಿ.ಮಾ. ಸುಧಾಕರ, ಅಧ್ಯಕ್ಷರು, ಬೆಂ. ಗ್ರಾಮಾಂತರ ಜಿಲ್ಲಾ ಕ.ಸಾ.ಪ. ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು – ೧೮. ಪುಟಗಳು ೮+೬೦, ಬೆಲೆ ರೂ. ೫೦/–

ಚಂದ್ರಪ್ಪನವರು ಸಂಗ್ರಹಿಸಿರುವ ಹನ್ನೆರಡು ಜನಪದ ಕಥೆಗಳುಳ್ಳ "ಜಾನಪದ ಸಿರಿ"ಯು ದೊಡ್ಡಬಳ್ಳಾಪುರ ತಾಲ್ಲೂಕಿನ ಸುತ್ತ ಮುತ್ತಲ ಸಮುದಾಯದಲ್ಲಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಮೂಲ ಕಥೆಗಳ ಸಂಗ್ರಹವಾಗಿದೆ.

ನಾಗರಿಕತೆಯ ಸೆಳೆತಕ್ಕೆ ಸಿಕ್ಕಿ ಮರೆಯಾಗುತ್ತಿರುವ ಅಪರೂಪದ ಜಾನಪದ ಗ್ರಾಮ್ಯ ಪದಗಳು ಜನಪದ ಕಥೆಗಳಿಂದ ಎಂದೆಂದಿಗೂ ಉಳಿಯುತ್ತವೆಂಬುದು ಇಲ್ಲಿನ ಕಥೆಗಳ ಭಾಷೆಯಿಂದ ತಿಳಿಯುತ್ತದೆ.

ಉದಾಹರಣೆಗೆ: ನನಕರವಷ್ಟು (ನನಗಿಷ್ಟು), ಗೌಣ್ಣ (ಗೌಡ), ಗಣಗಲೂವ (ಕಣಗಲೆ ಹೂ), ಏಟಿ (ಹೊಳೆ) ಮುಂತಾದ ಪದಗಳು ಕರ್ನಾಟಕದ ಬೇರೆ ಪ್ರದೇಶಗಳಲ್ಲಿ

ಕಂಡುಬರುವುದಿಲ್ಲ. ಇಲ್ಲಿನ ಹನ್ನೆರಡೂ ಕಥೆಗಳು ಬೇರೆ ಬೇರೆ ಭಾಗಗಳಲ್ಲೂ ಸಿಗಬಹುದಾದ ವಿವರಗಳನ್ನು ನಿರೂಪಣೆಯನ್ನು ಹೊಂದಿವೆ ಎನ್ನಿಸಿದರೂ ಭಾಷಾ ದೃಷ್ಟಿಯಿಂದ ವಿಭಿನ್ನತೆಯನ್ನು ಹೊಂದಿವೆ.

"ತಂಬಿಟ್ಟು ದಾಸಯ್ಯನ ಮೋಹದ ಕಥೆ" ಬೇರೆ ಯಾವುದೇ ಜಾನಪದದ ಕಥೆಯ ಅನುಕರಣೆ ಎನಿಸದಷ್ಟು ಹೊಸದಾಗಿದೆ. "ಇಲಿ ಒಲೆಯನ್ನು ಹೊತ್ತು ಕೊಂಡು ಹೋದ ಕಥೆ" ಹಾಗೂ "ಬಂಡಿ ಮಾಂಕಾಳಮ್ಮನ ಕಥೆ" ಮುಂತಾದವು ಜಾನಪದ ಸೊಗಡಿನಿಂದ ಆಧುನಿಕತೆಗೆ ಸಾಗುತ್ತಿರುವುದನ್ನು ಕಾಣಬಹುದು.

ಇಲ್ಲಿರುವ ಅನೇಕ ಕಥೆಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲೂ ರೂಪಾಂತರಗಳಾಗಿ ನಿರೂಪಣಾ ಶೈಲಿಯಲ್ಲಿ ವಿಭಿನ್ನತೆಯನ್ನು ಒಳಗೊಂಡು ಕೇಳಲ್ಪಡುತ್ತಿರುವುಗಳಾಗಿವೆ. "ಬಂಡಿ ಮಾಕಾಳಮ್ಮನ ಕಥೆ" ಹೊಸ ಕಾಲದ ಭಾಷೆಯಲ್ಲಿದ್ದರೂ ಹಳೆಯ ಆಶಯಗಳೊಂದಿಗೆ, ಲಘು ಹಾಸ್ಯದೊಂದಿಗೆ ಓದುಗರನ್ನು ಸೆಳೆಯುತ್ತದೆ.

ಇನ್ನುಳಿದ ಕಥೆಗಳಾದ "ಕುರುಡನ ಹೆಂಡ್ತಿ ಕಜ್ಜಾಯದ ಕಥೆ" "ಒಂದ್ಕಣ್ಣು ಕುಲ್ಡಿ ಕುತಂತ್ರ", ಎಡವಟ್ಟರಾಯನ ಕಥೆ "ಈರದಿಮ್ಮಮ್ಮನ ಕಥೆ" ಮುಂತಾದವುಗಳೂ ವಸ್ತುವಿನ ದೃಷ್ಟಿಯಿಂದ ಆಕರ್ಷಕವಾಗಿದ್ದು ಓದಿಸಿಕೊಂಡು ಹೋಗುತ್ತವೆ.

ಇಲ್ಲಿರುವ ಹನ್ನೆರಡೂ ಕಥೆಗಳು ತಂತ್ರಗಾರಿಕೆಯಿಂದ ಗಮನ ಸೆಳೆಯುತ್ತವೆ. ಕತೆಗಳ ಸಂಗ್ರಾಹಕರಾದ ಚಂದ್ರಪ್ಪನವರು ದೊಡ್ಡಬಳ್ಳಾಪುರ ತಾಲ್ಲೂಕಿನ ಗ್ರಾಮೀಣರಿಂದ ಇವರನ್ನು ಸಂಗ್ರಹಿಸಿರುವುದಾಗಿ ಹೇಳಿದ್ದರೂ, ವಕ್ತೃ ವಿವರ ಎಲ್ಲಿಯೂ ಕೊಟ್ಟಿಲ್ಲ. ಅಲ್ಲದೆ ತಮ್ಮನ್ನು ಕೃತಿಯ ಲೇಖಕರೆಂದು ಹೇಳಿ ಕೊಂಡಿರುವುದೇಕೋ ಅರ್ಥವಾಗದು. ಪುಸ್ತಕದ ಕೊನೆಯಲ್ಲಿ ಅರ್ಥಕೋಶ ಆಶಯ ಸೂಚಿ ಇದ್ದಿದ್ದರೆ ಚೆನ್ನಾಗಿತ್ತು.

ಬಿ.ಸಿ. ಶೈಲಾ ನಾಗರಾಜ್

ತ್ರೈಮಾಸಿಕದ ಸಾಮಾನ್ಯ ಪ್ರಬಂಧಗಳು

* **ಜಾನಪದ ಗಂಗೋತ್ರಿ:** ಸಂ.೯, ಸಂ.೭ (ಏಪ್ರಿಲ್-ಜೂನ್-೨೦೧೦) ಪುಟಗಳು ೧೦+೯೪
* **ಜಾನಪದ ಗಂಗೋತ್ರಿ**-ಸಂ.೯, ಸಂ.೮. (ಜುಲೈ-ಸೆಪ್ಟೆಂಬರ್-೨೦೧೦) ೧೨+೧೦೮=೧೨೦
* **ಜಾನಪದ ಗಂಗೋತ್ರಿ**-ಸಂ.೯. ಸಂ.೦. (ಅಕ್ಟೋಬರ್-ಡಿಸೆಂಬರ್-೨೦೧೦) ಪುಟಗಳು ೧೨+೯೬=೧೦೮

ಈ ಮೂರೂ ಸಂಚಿಕೆಗಳ ಸಂಪಾದಕರು - ಬಸವರಾಜ ಪೋಲೀಸ ಪಾಟೀಲ, ಜಗನ್ನಾಥ ಹೆಬ್ಬಾಳೆ: ಪ್ರ-ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೨. ಬೆಲೆ ತಲಾ ರೂ. ೨೫/-

ಕರ್ನಾಟಕ ಜಾನಪದ ಅಕಾಡೆಮಿ ಹೊರತರುತ್ತಿರುವ ಜಾನಪದ ಗಂಗೋತ್ರಿಯ ಈ ಮೂರೂ ಸಂಚಿಕೆಗಳು ಬೀದರದಲ್ಲಿ ೨೦೧೧ರ ಫೆಬ್ರವರಿಯಲ್ಲಿ ನಡೆದ ಅಖಿಲ ಭಾರತ ಜಾನಪದ ಸಮ್ಮೇಳನ ಸಂದರ್ಭದಲ್ಲಿ ಬಿಡುಗಡೆಯಾಗಿವೆ.

ಸಾಮಾನ್ಯವಾಗಿ ಇಂಥ ಪತ್ರಿಕೆಗಳನ್ನು ವಿದ್ವತ್ ಪತ್ರಿಕೆಗಳೆಂದು ಗುರುತಿಸಿ ಉನ್ನತ ವಿದ್ವತ್ತಿನ ಲೇಖನಗಳನ್ನು ಅಲ್ಲಿ ನಿರೀಕ್ಷಿಸಲಾಗುತ್ತದೆ. ಎಲ್ಲ ಲೇಖನಗಳೂ ವಿದ್ವತ್ಪೂರ್ಣ ವಿಶ್ಲೇಷಣೆಯ ಲೇಖನಗಳೇ ಆಗಬೇಕಿಲ್ಲವಾದರೂ ಕೊನೇ ಪಕ್ಷ ಹೊಸ ವಿಷಯವೊಂದನ್ನು ಪರಿಚಯಿಸುವ ಲೇಖನಗಳಾದರೂ ಅಲ್ಲಿರಬೇಕು.

ಈ ಮೂರು ಸಂಚಿಕೆಗಳ ಪೈಕಿ ಮೊದಲನದರಲ್ಲಿ ೧೨, ಎರಡನೆಯದರಲ್ಲಿ ೧೪, ಮೂರನೆಯದರಲ್ಲಿಯೂ ಸಹ ೧೪ ಕಂತೆ ಒಟ್ಟು ೪೦ ಲೇಖನಗಳು ಅಚ್ಚಾಗಿವೆ. ಎಂ.ಜಿ. ಬಿರಾದಾರ, ಜಗನ್ನಾಥ ಹೆಬ್ಬಾಳೆ, ವಿಜಯಶ್ರೀ ಸಬರದ, ಬಿ.ಆರ್. ಪೋಲೀಸ ಪಾಟೀಲ, ಶ್ರೀಶೈಲನಾಗರಾಳ, ಅಂಬಳಿಕೆ ಹಿರಿಯಣ್ಣ, ಕೆ.ಆರ್. ದುರ್ಗಾದಾಸ್, ಸಿ.ಕೆ. ನಾವಲಗಿ, ಬಸವರಾಜ ಮಲಶೆಟ್ಟಿ ಮೊದಲಾದ ಅನುಭವಿ ಬರಹಗಾರರು ಇಲ್ಲಿದ್ದಾರೆ.

ಈ ಲೇಖನಗಳ ಪೈಕಿ ೯ನೇ ಸಂಚಿಕೆಯಲ್ಲಿನ ವಿಜ್ಞಾನ ಮತ್ತು ಜಾನಪದ ತಂತ್ರಜ್ಞಾನ (ಎಂ.ಜಿ. ಬಿರಾದಾರ), ದೇಶೀ ಕಲೆಗಳು– ಒಂದು ಚಿಂತನೆ (ಹೆಬ್ಬಾಳೆ), ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಜನಪದೀಯ ಅಂಶಗಳು (ಕೃಷ್ಣವೇಣಿ), ಅಳಿಯುತ್ತಿರುವ ಬುಡಕಟ್ಟು ಸಂಸ್ಕೃತಿ (ಅಂಬಳಿಕೆ) ಇವು ಒಂದಿಷ್ಟು ಹೊಸ ವಿಷಯಗಳನ್ನು ತಿಳಿಸುವ ಗಂಭೀರ ಲೇಖನಗಳು. ವಿಜಯಶ್ರೀ ಸಬರದ ಅವರ 'ಆಧ್ಯಾತ್ಮ ಜಾನಪದ' ಲೇಖನದಲ್ಲಿ ಜನಪದ ಗೀತೆಗಳಲ್ಲಿ ಆಧ್ಯಾತ್ಮ ಹೇಗೆ ಪ್ರಕಟವಾಗಿದೆ ಎಂಬುದನ್ನು ನಮಗೆ ಸುಪರಿಚಿತವಾಗಿರುವ ಜನಪದ ತ್ರಿಪದಿಗಳ ಮೂಲಕ (ಉದಾ:ಏಳುತ್ತಾಲೆ ಎದ್ದು ಯಾರ್‍ಯಾರ ನೆನೆಯಾಲಿ, ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ, ಇತ್ಯಾದಿ) ಸರಿಯಾಗಿಯೇ ತಿಳಿಸಿದ್ದಾರಾದರೂ ತತ್ವಪದಗಳನ್ನು ಇಲ್ಲಿ ಉದಾಹರಣೆಗೆ ಎತ್ತಿಕೊಂಡಿದ್ದರೆ ಸೂಕ್ತವಿತ್ತು ಎನಿಸುತ್ತದೆ. ಅಲ್ಲದೆ ನಂಬಿಕೆ/ಆಚರಣೆಗಳೂ ಶುದ್ಧ ಆಧ್ಯಾತ್ಮವೂ ಅಭಿನ್ನವೆ ಎಂಬುದನ್ನೂ ಯೋಚಿಸಬೇಕು. ನಾಗರಾಳರ 'ಅಕ್ಕಮಹಾದೇವಿಯ ವಚನಗಳಲ್ಲಿ ಜಾನಪದೀಯ ಅಂಶಗಳು' ಲೇಖನದಲ್ಲಿ ದೂರಾನ್ವಯ ದೋಷ ಎದ್ದು ಕಾಣುತ್ತದೆ. 'ವನವೆಲ್ಲ ನೀನೆ', 'ಅಳಿ ಸಂಕುಳವೆ, ಮಾಮರವೆ...' 'ಈಳೆ ನಿಂಬೆ ಮಾದಲಕೆ ಹುಳಿ ನೀರೆರೆದವರ್‍ಯಾರಯ್ಯ....' ಇಂಥ ವಚನಗಳನ್ನು ಉದಾಹರಿಸಿ ಇಲ್ಲೆಲ್ಲ ಜಾನಪದ ಅಂಶಗಳಿವೆ ಎಂದರೆ ಅಲ್ಲಿ ಹುಡುಕುವುದಾದರೂ ಏನನ್ನು? ಬಿ.ಆರ್. ಪೋಲೀಸಪಾಟೀಲರ 'ಜಾನಪದದ ಪ್ರಸ್ತುತತೆ' ಲೇಖನದಲ್ಲಿ ತಾವು ಜಾನಪದ ಶೈಲಿಯಲ್ಲಿ ರಚಿಸಿದ ಕೆಲವು ಪದ್ಯಗಳನ್ನೂ ಉದಾಹರಿಸಿದ್ದಾರೆ.

ಒಂಭತ್ತನೇ ಸಂಪುಟದ ಎಂಟನೇ ಸಂಚಿಕೆಯ ಲೇಖನಗಳ ಪೈಕಿ "ಭಕ್ತಿ ಚಳುವಳಿ–ತತ್ವಪದದ ಅರಿವಿನ ಜಾಡು ಹಿಡಿದು (ಸಿ.ಬಿ. ಚಿಲಕರಾಗಿ), ಶೋಕಗೀತೆಗಳು–ಒಂದು ವಿವೇಚನೆ (ಹೆಬ್ಬಾಳೆ), ಜಾನಪದ ಒಂದು ಮರು ಚಿಂತನೆ (ಸಿ.ಕೆ. ನಾವಲಗಿ), ಹೈದ್ರಾಬಾದ್ ಕರ್ನಾಟಕದ ಜಾನಪದ ಸಾಧಕರು (ಸುರೇಂದ್ರನಾಥ ಕೆರಿಮನಿ), ಹೈದ್ರಾಬಾದ್ ಕರ್ನಾಟಕದ ಜನಪದ ಕಲೆಗಳು (ಚಂದ್ರಕಲಾ ಬಿದರಿ), ಸಣ್ಣಾಟದಲ್ಲಿ ಶರಣರ ಚರಿತ್ರೆ (ಬಸವರಾಜ ಮಲಶೆಟ್ಟಿ), ಜನಪದದಲ್ಲಿ ಮಡಿವಾಳ ಮಾಚಿದೇವ (ಮಾಯಾದೇವಿ ಮಾಲಿಪಾಟೀಲ), ಜನಪದ ಹಾಡು ಮತ್ತು ಐತಿಹ್ಯಗಳಲ್ಲಿ ಗಜೇಶ ಮಸಣಯ್ಯ (ಶ್ರೀಶೈಲ ನಾಗರಾಳ)'–ಇವು ಗಮನಾರ್ಹ ಉಪಯುಕ್ತ ಲೇಖನಗಳು.

ಏಳನೇ ಸಂಪುಟ (ಏಪ್ರಿಲ್–ಜೂನ್ ೨೦೧೦)ದಲ್ಲಿನ ಬಹುತೇಕ ಲೇಖನಗಳು ಜಾನಪದ ಕುಶಲ ಕಲೆಗಳ ಬಗ್ಗೆಯೇ ಇವೆ. ಈ ಕಲೆಗಳ ಹಲವು ವಿಧಗಳು, ಪುನರುಜ್ಜೀವನ, ಗೃಹೋಪಯೋಗಿ ಕಲೆಗಳು, ಕುಂಬಾರಿಕೆ, ಇವುಗಳ ಮೇಲೆ ತಂತ್ರಜ್ಞಾನದ ಪ್ರಭಾವ–ಹೀಗೆ. ಈ ಎಲ್ಲ ಲೇಖನಗಳೂ ತಕ್ಕಮಟ್ಟಿಗೆ ಗಂಭೀರ ಲೇಖನಗಳೇ. 'ಹದ ನೋಡಿ ಹರಗು, ಬೆದೆ ನೋಡಿ ಬಿತ್ತು' ಎಂಬ ಗಾದೆಯನ್ನು ಕುರಿತು ಬಿ.ಆರ್. ಪೋಲೀಸ್ ಪಾಟೀಲರ ಲೇಖನ ಆ ಗಾದೆಯ ಅರ್ಥ ವಿಸ್ತಾರವನ್ನು ವಿಶ್ಲೇಷಿಸುತ್ತದೆ.

ಹೀಗೆ ಈ ಮೂರು ಸಂಚಿಕೆಗಳಲ್ಲಿ ಹಲವು ಉಪಯುಕ್ತ ಲೇಖನಗಳಿವೆ. ಇವುಗಳ ಮುದ್ರಣ ಕೂಡ ತುಂಬ ಸುಂದರವಾಗಿ ಮೂಡಿಬಂದಿರುವುದು ಸಂತೋಷಕರವಾದ ಅಂಶ.

ಎಸ್.ಪಿ. ಪದ್ಮಪ್ರಸಾದ್

ಅನುಬಂಧ – ೧
೨೦೧೧ರಲ್ಲಿ ಪ್ರಕಟವಾದ ಜಾನಪದ ಕೃತಿಗಳು

I. ಜೀವನ ಚರಿತ್ರೆಗಳು

೧. **ಸುಕ್ರಿ ಬೊಮ್ಮಗೌಡ:** ಲೇ. ಶಾಂತಿನಾಯಕ, ಪು.೪೦, ಬೆಲೆ ರೂ. ೧೫/–

೨ **ಪ್ರೊ. ಡಿ.ಕೆ. ರಾಜೇಂದ್ರ:** ಲೇ. ಎಂ.ಬಿ. ಸುರೇಶ್, ಪು.೪೦, ಬೆಲೆ ರೂ. ೧೫/–

೩ **ಜನಪದ ವ್ಯಾಸ ಬೆಟ್ಟದ ಬೀಡು ಸಿದ್ಧಶೆಟ್ಟರು** ಲೇ. ಪಿ.ಕೆ. ರಾಜಶೇಖರ, ಪು.೪೦, ಬೆಲೆ ರೂ. ೧೫/–

೪ **ಮಿಸ್ಟರ್ ಫೋಕ್‌ಲೋರ್, ಡಾ. ಪಿ.ಕೆ. ರಾಜಶೇಖರ್** ಲೇ. ಪ್ರೊ. ಮೈಸೂರು ಕೃಷ್ಣಮೂರ್ತಿ, ಪು. ೪೦, ಬೆಲೆ ರೂ. ೨೦/–

೫ **ಜಾನಪದ ತಜ್ಞರು:–** ಲೇ॥ ವೃಷಭಕುಮಾರ್, ಪ್ರ–ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬, ಪುಟಗಳು – ೨೪+೨೪೩, ಬೆಲೆ ರೂ. ೧೦೦/–

೬ **ಯಕ್ಷ ಗಂಧರ್ವ ಹಾರಾಡಿ ರಾಮ ಗಾಣಿಗ:** ಪ್ರ. ಕನ್ನಡ ಸಂಘ, ಕಾಂತಾವರ, ಪುಟಗಳು 56, ಬೆಲೆ ರೂ. 33/–

೭ **ಕಡಲ ತಡಿಯ ಭಾರ್ಗವ ಕೋಟ ಶಿವರಾಮ ಕಾರಂತ–** ಲೇ॥ ಕೋಣೆ ಶಿವಾನಂದ ಕಾರಂತ, ಪ್ರ. ಕನ್ನಡ ಸಂಘ, ಕಾಂತಾವರ, ಕಾರ್ಕಳ ತಾ॥, ಉಡುಪಿ ಜಿಲ್ಲೆ; ಪು. ೫೬; ಬೆಲೆ ರೂ. ೩೩/–

೮ **ಕೆರೆಮನೆ ಮಹಾಬಲ ಹೆಗಡೆ:** ಲೇ॥ ಎಲ್.ಎಸ್. ಶಾಸ್ತ್ರಿ, ಪ್ರಕಾಶಕರು– ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿ.ವಿ., ಪುಟಗಳು ೧೫–೫೬. ರೂ. ೪೨/–

೯ **ಗೋಡೆ ಚಿತ್ತಾರ** (ಗೋಡೆ ನಾರಾಯಣ ಹೆಗಡೆ ಬದುಕು, ಬಣ್ಣದ ಕಥನ) ಲೇ. ಎಂ.ಕೆ. ಭಾಸ್ಕರರಾವ್, ಪ್ರ: ಪ್ರೇಮ ಪ್ರಕಾಶನ, ೧೮೬/೮ ಅಭಿಷೇಕ ಕಾಂಪ್ಲೆಕ್ಸ್, ನಟರಾಜ ಥಿಯೇಟರ್ ಹಿಂಭಾಗ, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–೨೦. ಪುಟಗಳು ೧೨+೧೩೬, ಬೆಲೆ ರೂ. ೧೫೦/–

II. ಗದ್ಯ/ಗೀತ ಸಂಗ್ರಹಗಳು

೧೦ **ಗುಡೇಲ ಮತ್ತು ಕಲ್ಲಪ್ಪ ಅವರ ಗೀಗೀ ಪದಗಳು**– ಸಂಗ್ರಹ ಎಂ.ಜಿ. ಬಿರಾದಾರ, ಬಿ.ಎಸ್. ಕೋಟ್ಯಾಳ. ಪ್ರ: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು – 6. ಪುಟಗಳು – 20+372; ಬೆಲೆ ರೂ. 172/–

೧೧ **ವೀರಬೊಮ್ಮನಹಳ್ಳಿ ದಿಬ್ಬದ ವೀರಬೊಮ್ಮಣ್ಣನ ಕಾವ್ಯ**– ಸಂಗ್ರಹ – ಜಂಗಮರಹಳ್ಳಿ ಮುದ್ದವೀರಪ್ಪ, ಪ್ರ. ಸಾಹಿತ್ಯ ಪ್ರಕಾಶನ, ರಂಗನಾಥ ನಿಲಯ, ೭ನೇ ಕ್ರಾಸ್, ಚಂದ್ರಮೌಳೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು – ೪. ಪುಟಗಳು ೧೮+೬೪; ಬೆಲೆ ರೂ. ೭೦/–

೧೨ **ಗಿಳಿ ಹಾಡು ಮತ್ತು ಜೋಗಿ ಹಾಡು :** ಪ್ರಧಾನ ಸಂಪಾದಕರು ಕೆ.ಎನ್. ಗಂಗಾನಾಯಕ್, ಸಂಪಾದಕರು– ಬಿ.ಎಂ. ಗೀತಾ. ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.; ಮಾನಸಗಂಗೋತ್ರಿ, ಮೈಸೂರು–೬. ಪುಟಗಳು – ೨೪+೧೨೪; ಬೆಲೆ ರೂ. ೫೦/–

೧೩ **ಸಾವಿರದ ಜನಪದ ದೇವರ ಪದಗಳು;** ಬಿ.ಎಸ್. ಸ್ವಾಮಿ ಪ್ರ: ಸಿ.ಪಿ. ಇನೋವೇಷನ್ಸ್, ನಂ.೧೫. ೧೭ನೇ ಅಡ್ಡರಸ್ತೆ, ಕಬ್ಬನ್‌ಪೇಟೆ, ಬೆಂಗಳೂರು – ೦೨. ಪುಟಗಳು– ೧ ೧ ೦ ೪ , ಬೆಲೆ ರೂ. ೭೩೦/–

೧೪ **ಸಾಂಸ್ಕೃತಿಕ ವೀರರು ಮತ್ತು ಮಹಾಸತಿಯ ಲಾವಣಿಗಳು:** ಸಂ. ಕೆಂಕೆರೆ ಹನುಮಂತೇಗೌಡ, ಪ್ರ–ತುಮಕೂರು ವಿ.ವಿ. ಪು. ೧೬+೪೬೪. ಬಲೆ ರೂ. ೨೨೫

೧೫ **ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು:** ಲೇ: ಕಂಟಲಗೆರೆ ಸಣ್ಣಹೊನ್ನಯ್ಯ: ಪ್ರ–ತುಮಕೂರು ವಿಶ್ವವಿದ್ಯಾಲಯ, ಪು. ೧೬+೯೦; ಬೆಲೆ ರೂ. ೪೦/–

೧೬ **ಮಹಾಸತಿ ಬರಗೂರು ವೀರಮ್ಮನ ಕಾವ್ಯ;** ಸಂ.– ಜಂಗಮರಹಳ್ಳಿ ಮುದ್ದವೀರಪ್ಪ; ಪ್ರ–ಸಾಹಿತ್ಯ ಪ್ರಕಾಶನ, ರಂಗನಾಥ ನಿಲಯ, ೭ನೇ ಕ್ರಾಸ್, ಚಂದ್ರಮೌಳೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು – ೪; ಪುಟಗಳು ೧೭+೬೮. ಬೆಲೆ ರೂ. ೭೫/–

೧೭ **ಜಾನಪದ ಮಕರಂದ;** ಸಂಗ್ರಹ, ಸಂಪಾದನೆ; ಬಂಡ್ಲಹಳ್ಳಿ ವಿಜಯಕುಮಾರ್, ಪ್ರ: ಮೇವಿ ಪಬ್ಲಿಕೇಷನ್ಸ್, ನಂ. 565, 1ನೇ ಮಹಡಿ, 3ನೇ ಹಂತ, ಪಶ್ಚಿಮಕಾರ್ಡ್ ರಸ್ತೆ, ಮಂಜುನಾಥ ನಗರ, ಬೆಂಗಳೂರು – 560 010, ಪುಟಗಳು 16+160; ಬೆಲೆ ರೂ. 150/–

೧೮ **ಸಾಂಸ್ಕೃತಿಕ ವೀರರು ಮತ್ತು ಮಹಾಸತಿಯ ಲಾವಣಿಗಳು:** ಸಂ. ಕೆಂಕೆರೆ ಹನುಮಂತೇಗೌಡ, ಪ್ರ–ತುಮಕೂರು ವಿ.ವಿ. ಪು. ೧೬+೪೬೪. ಬಲೆ ರೂ. ೨೨/–

೧೯ **ಪಿರಿಯಾಪಟ್ಟಣದ ಕಾಳಗ–ಕಥಾಧಾರೆ:** ಲೇ. ಪಿ.ಕೆ. ರಾಜಶೇಖರ, ಪ್ರ: ಕೀರ್ತನ್ ಗ್ರಾಫಿಕ್ಸ್, ಮೈಸೂರು. ಪು. ೧೬೮, ಬೆಲೆ ರೂ. ೧೫೦/–

III. ವಿಚಾರ, ವಿಮರ್ಶೆ, ಸಂಶೋಧನೆ

೨೦ ಚಂದಬಾರಿ ರಾಧೆ ಗೋಪಾಲ ಮತ್ತು ಇತರ ಪಾಡ್ದನಗಳು: ಸಂ: ಲಕ್ಷ್ಮೀ ಜಿ. ಪ್ರಸಾದ. ಪ್ರ: ಮಾತೃಶ್ರೀ ಪ್ರಕಾಶನ, ಬೆಂ–೫೬. ಪುಟಗಳು: ೨೦+೧೨೪. ಬೆಲೆ ರೂ. ೧೨೫/–

೨೧ ತುಂಗೆಯ ಮಡಿಲ ಜಾನಪದ: ಲೇ. ಬಿ.ವಿ. ಗೀತಾ, ಪ್ರ: ಸಿರಿವರ ಪ್ರಕಾಶನ, ನಂ. ಎಂ. ೩೭/ಬಿ, ೮ನೇ ಕ್ರಾಸ್, ಲಕ್ಷ್ಮೀನಾರಾಯಣ ಪುರ, ಬೆಂಗಳೂರು – ೫೬೦ ೦೨೧, ಪು. ೧೬+೩೮೪. ಬೆಲೆ ರೂ. ೨೫೦/–

೨೨ಕರ್ನಾಟಕದ ಜಾನಪದ ವೃತ್ತಿಗಾಯಕರು: ಲೇ. ಪಿ.ಕೆ. ರಾಜಶೇಖರ, ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು –೫೭೦ ೦೦೬. ಪುಟಗಳು–೨೪+೧೦೪+೪, ಬೆಲೆ ರೂ.೬೦/–

೨೩ ಗ್ರಾಮಾಂತರ: ಲೇ॥ ಎಚ್.ಆರ್. ಚೇತನ. ಪ್ರ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮಾನಸ ಗಂಗೋತ್ರಿ, ಮೈಸೂರು – ೫೭೦ ೦೦೬. ಪುಟಗಳು–೨೪+೧೧೦, ಬೆಲೆ ರೂ. ೭೦/–

೨೪ ಸ್ಥಳನಾಮ ವ್ಯಾಸಂಗ– ಲೇ. ದೇಜಗೌ. ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬. ಪುಟಗಳು: ೨೪+೧೨೪+೪=೧೫೨, ಬೆಲೆ ರೂ.

೨೫ ನಂಬಿಕೆಗಳು ಮತ್ತು ನಿಷೇಧಗಳು : ಲೇ. ಎನ್.ಆರ್. ನಾಯಕ, ಪ್ರ–ಜಾನಪದ ಪ್ರಕಾಶನ, ಹೊನ್ನಾವರ (ಉ.ಕ.); ಪುಟಗಳು ೪೨. ಬೆಲೆ ರೂ.೪೦/–

೨೬ ಕಂಬಳ ಕೋರಿ ನೇಮ– ಲಕ್ಷ್ಮಿ ಜಿ. ಪ್ರಸಾದ್, ಮಾತೃಶ್ರೀ ಪ್ರಕಾಶನ, ನಂ.೫, 'ನಂದನ ತೋಟ'ಮನೆ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯರಸ್ತೆ, ಬೆಂಗಳೂರು – ೫೬; ಪು.೧೦+೧೧೨: ಬೆಲೆ ರೂ. ೧೧೦/–

೨೭ ತುಮಕೂರು ಜಿಲ್ಲೆಯಲ್ಲಿ ಕರಪಾಲ ಮೇಳ– ಲೇ: ಕಂಟಲಗೆರೆ ಸಣ್ಣ ಹೊನ್ನಯ್ಯ; ಪು: ೧೬+೧೮೦; ಬೆಲೆ ರೂ. ೭೦/– ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೨೮ ತುಮಕೂರು ಜಿಲ್ಲೆಯ ಸ್ಥಳ ನಾಮಗಳು – ಲೇ॥ ಶ್ರೀಪಾದಭಟ್, ಎಲ್.ಪುಟ್ಟ ರಾಜು, ಪು.೧೬+೧೭೦. ಬೆ. ರೂ. ೭೦; ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೨೯ ತುಮಕೂರು ಜಿಲ್ಲೆಯ ಪ್ರದರ್ಶನ ಜನಪದ ಕಲೆಗಳು–ಲೇ: ಕಂಟಲಗೆರೆ ಸಣ್ಣಹೊನ್ನಯ್ಯ; ಪು: ೧೬+೨೫೭; ಬೆ: ರೂ. ೧೦೦; ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೩೦ **ಕಾಡುಗೊಲ್ಲರು:** ಲೇ॥ ಪಿ.ಎಂ. ಗಂಗಾಧರಯ್ಯ, ಪ್ರ: ತುಮಕೂರು ವಿಶ್ವವಿದ್ಯಾಲಯ, ತುಮಕೂರು – ೧೬+೧೯೪; ಬೆಲೆ ರೂ. ೧೦೦/–

೩೧ **ತುಮಕೂರು ಜಿಲ್ಲೆಯ ಶಕ್ತಿ ದೇವತೆಗಳು:** ಲೇ: ಕಂಟಲಗೆರೆ ಸಣ್ಣ ಹೊನ್ನಯ್ಯ, ಪ್ರ: ತುಮಕೂರು ವಿ.ವಿ. ಪು. ೧೬+೨೦೦; ಬೆಲೆ ರೂ. ೮೦/–

೩೨ **ತುಮಕೂರು ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಸ್ಕೃತಿ:** ಲೇ. ಕಂಟಲಗೆರೆ ಸಣ್ಣಹೊನ್ನಯ್ಯ: ಪ್ರ: ತುಮಕೂರು ವಿ.ವಿ. ಬೆಲೆ ರೂ. ೮೦/– ೧೬+೨೨೧.

೩೩ **ತುಳುನಾಡಿನ ಅಪೂರ್ವ ಭೂತಗಳು:** ಲೇ. ಲಕ್ಷ್ಮೀ ಜಿ. ಪ್ರಸಾದ್, ಪ್ರ: ಮಾತೃಶ್ರೀ ಪ್ರಕಾಶನ, ನಂ.೫, 'ನಂದನತೋಟ' ಮನೆ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲು ಮುಖ್ಯರಸ್ತೆ, ಬೆಂಗಳೂರು–೫೬.

೩೪ **ಮುಲ್ಕಿಯ ಸಾವಂತ ಅರಸರು– ಐತಿಹಾಸಿಕ, ಸಾಂಸ್ಕೃತಿಕ ನೋಟ:** ಲೇ. ಮುದ್ದು ಮೂಡುಬೆಳ್ಳೆ: ಪ್ರ–ಮೂಲ್ಕಿ ಸೀಮೆ ಅರಮನೆ ಅಭಿವೃದ್ಧಿ ಸಮಿತಿ, ಪಡುಪಣಂಬೂರು – ೫೭೪ ೧೪೬. ಪುಟಗಳು: ೯೦+೧೦+೬. ಬೆಲೆ ರೂ. ೭೫/–

೩೫ **ತುಮಕೂರು ಜಿಲ್ಲೆಯ ಜನಪದ ಕಲೆಗಳು ಮತ್ತು ಕಲಾವಿದರ ಪರಿಚಯ.** ಲೇ. ಕಂಟಲಗೆರೆ ಸಣ್ಣಹೊನ್ನಯ್ಯ, ಪ್ರ–ತುಮಕೂರು ವಿಶ್ವವಿದ್ಯಾಲಯ, ಪುಟಗಳು – ೫೮೧, ಬೆಲೆ ರೂ. ೨೨೫/–

೩೬ **ಜನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು:** ಲೇ: ಕುರುವ ಬಸವರಾಜ್, ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್, ೧೩೪, ೮ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಗೋವಿಂದರಾಜ ನಗರ, ಬೆಂಗಳೂರು – ೪೦, ಪುಟಗಳು ೧೯೦+೧೬.

೩೭ **ಬಲೀಂದ್ರ:** ಲೇ॥ ಡಾ. ಸ.ಚಿ. ರಮೇಶ್, ಪ್ರ: ಕನ್ನಡ ವಿ.ವಿ. ಹಂಪಿ. ಪು.೪+೩೬, ಬೆಲೆ ರೂ.೨೦/–

೩೮ **ಗೆದರೆ ಬೆಟ್ಟ ಮತ್ತು ಗುರುಮಕ್ಕಳು:** ಒಂದು ತೌಲನಿಕ ಜಾನಪದ ಅಧ್ಯಯನ: ಲೇ. ಮ.ನಾ. ಕೃಷ್ಣಮೂರ್ತಿ; ಪ್ರ: ಕನ್ನಡ ವಿ.ವಿ. ಹಂಪಿ, ಪು. ೪+೨೮, ಬೆಲೆ ರೂ. ೨೦/–

೩೯ **ಪಾಂಚಾಳರ ಬದುಕು ಮತ್ತು ಸಂಸ್ಕೃತಿ:** ಲೇ॥ ಶೇಖರಾಚಾರಿ ಕೆ. ಪ್ರ: ಕನ್ನಡ ವಿ.ವಿ ಹಂಪಿ. ಪು. ೪+೪೨; ಬೆಲೆ ರೂ. ೨೦/–

೪೦ **ಮೂರು ಜಾವಿ ದೇವರ ಪರಂಪರೆ:** ಲೇ॥ ಮನೋಹರ ಎಸ್. ದೊಡ್ಡಮನಿ. ಪ್ರ: ಕನ್ನಡ ವಿ.ವಿ. ಹಂಪಿ, ಪು.೪+೩೨; ಬೆಲೆ ರೂ. ೨೦/–

೪೧ **ಮರೇಗುದ್ದಿ ಅಡವಿ ಸಿದ್ದೇಶ್ವರ ಮಠದ ಪರಂಪರೆ:** ಲೇ॥ ಅಶೋಕ ನೆರೋಡೆ. ಪ್ರ: ಕನ್ನಡ ವಿ.ವಿ. ಹಂಪಿ, ಪು.೪+೩೨; ಬೆಲೆ ರೂ. ೨೦/–

೪೨ **ಕನ್ನಡದಲ್ಲಿ ಐತಿಹಾಸಿಕ ಜನಪದ ಲಾವಣಿಗಳು:** ಲೇ. ಜಯಲಕ್ಷ್ಮೀ ಸೀತಾಪುರ: ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು–೧೮; ಪುಟಗಳು: ೮+೨೭೮; ಬೆಲೆ ರೂ. ೧೧೫.

೪೩. **ಡಣಾಯಕನ ಕೆರೆ:** ಎಂ. ಸೋಮೇಶ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸೆ, ಬೆಂಗಳೂರು–೧೮.

೪೪ **ಕುರುಬರ ಕುರುಹುಗಳು:** ಲೇ. ಹೆಚ್. ಚಂದ್ರಪ್ಪ, ಅಜ್ಜಂಪುರ, ಪ್ರ: ವಿದ್ಯಾನಿಧಿ ಪ್ರಕಾಶನ, ಗದಗ; ಪು–೩೪೬: ಬೆಲೆ ರೂ. ೧೫೦/–ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮. ಪುಟಗಳು: ೧೭೪+೮, ಬೆಲೆ ರೂ. ೭೦/–

೪೫ **ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ತತ್ವಪದಕಾರರು :** ಲೇ. ನಟರಾಜ್ ಬೂದಾಳ್, ಪ್ರ– ತುಮಕೂರು ವಿಶ್ವವಿದ್ಯಾಲಯ, ಪು. ೧೬+೩೪೨; ಬೆಲೆ ರೂ. ೧೩೦/–

೪೬ **ತುಮಕೂರು ಜಿಲ್ಲಾ ಜಾನಪದೀಯ ನೆಲೆಗಳು**– ಲೇ. ಚಿಕ್ಕಣ್ಣ ಎಣ್ಣೆಕಟ್ಟೆ, ಪ್ರ: ತುಮಕೂರು ವಿಶ್ವವಿದ್ಯಾಲಯ, ತುಮಕೂರು. ಪುಟಗಳು ೧೬+೪೧೨. ಬೆಲೆ ರೂ. ೧೬೦/–

೪೭ **ದಳವಾಯಿ**– ಲೇ. ಡಾ. ಲಿಂಗದಹಳ್ಳಿ ಹಾಲಪ್ಪ ಪ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೧೫+೧೪೪; ರೂ. ೧೦೦/–

೪೮ **ಲೋಕ ಸಂಸ್ಕೃತಿ:**– ಲೇ. ಡಾ. ಬಸವರಾಜ ಪೋಲೀಸಪಾಟೀಲ, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್, ಪು–೧೪+೧೦೬; ಬೆಲೆ ರೂ. ೭೦/–

೪೯ **ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು:**ಲೇ.ಕೆ.ವಿ. ಮುದ್ದುವೀರಪ್ಪ, ಪ್ರ: ತುಮಕೂರು ವಿ.ವಿ., ಪುಟಗಳು ೪.೨, ಬೆಲೆ ರೂ.೨೨೫–

೫೦ **ಜಾನಪದ ಸಡಗರ**–ಲೇ. ಡಾ. ಸಿ.ಕೆ. ನಾವಲಗಿ, ಪು: ೨೪೦/– ಬೆಲೆ ರೂ. ೧೨೦/೯ ಪ್ರ: ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯರಸ್ತೆ, ೮೦ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ, ೨ನೇ ಹಂತ, ಬೆಂಗಳೂರು – ೫೬೦ ೦೭೨

೫೧ **'ಕನ್ನಡ ಜಾನಪದ ಸಾಹಿತ್ಯ'**– ಲೇ. ಬಿ.ಎಸ್. ಸ್ವಾಮಿ, ಪು: ೮+೨೭೨ ಬೆಲೆ ರೂ. ೧೫೦/– ಪ್ರ. ಚೇತನ ಬುಕ್ ಹೌಸ್, 'ಅಂಜನಾದ್ರಿ', ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮೀಟಾಕೀಸ್ ಹಿಂಭಾಗ, ಮೈಸೂರು – ೫೭೦ ೦೨೪.

೫೨ **ದಾವಣಗೆರೆ ಜಿಲ್ಲಾ ಜಾನಪದ:** ಪ್ರಧಾನ ಸಂಪಾದಕರು ಆರ್.ಕೆ. ನಲ್ಲೂರುಪ್ರಸಾದ್, ಸಂಪಾದಕರು–ಬಿ.ಎಂ. ಸದಾಶಿವಪ್ಪ ಶ್ಯಾಗಲೆ, ಎಸ್.ಟಿ. ಶಾಂತಗಂಗಾಧರ, ಪ್ರ:ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ. ಪುಟಗಳು೧೮+೧೦೨: ಬೆಲೆ ರೂ.೫೨/–

೫೩ **ಜಾನಪದ ಸೆಲೆ:** ಸಂ. ಸ.ಚಿ. ರಮೇಶ, ಪ್ರ: ಅಖಿಲ ಭಾರತ ಜಾನಪದ ಸಮ್ಮೇಳನ ಸ್ವಾಗತ ಸಮಿತಿ, ಕರ್ನಾಟಕ ಸಂಘದ ಕಟ್ಟಡ, ಡಾ॥ ಅಂಬೇಡ್ಕರ್ ವೃತ್ತ, ಬೀದರ್. ೧೬+೧೦೮=೧೨೪: ಬೆಲೆ ರೂ. ೭೦/–

೫೪ **ಧರಿ ಜಾನಪದ :** ಜಗನ್ನಾಥ ಹೆಬ್ಬಾಳೆ; ಪು–ಸ್ವಾಗತ ಸಮಿತಿ, ಅಖಿಲಭಾರತ ಜಾನಪದ ಸಮ್ಮೇಳನ, ಬೀದರ್, ಪು:೧೨+೧೦೦; ಬೆಲೆ ರೂ. ೭೦/–

೫೫ **ಜಾನಪದ ದರ್ಪಣ:** ಲೇ. ವೃಷಭಕುಮಾರ್, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್. ಪುಟಗಳು – ೧೪+೩೬; ಬೆಲೆ ರೂ.೭೦/–

೫೬ **ಬೀದರ್ ಜಿಲ್ಲೆಯ ದೇವರ ಉತ್ಸವಗಳು:** ಲೇ. ಮಹಾದೇವಿಮುಲಗೆ; ಪ್ರ–ಸ್ವಾಗತ ಸಮಿತಿ, ಅ.ಭಾ. ಜಾನಪದ ಸಮ್ಮೇಳನ, ಬೀದರ್. ಪರ. ೧೨+೭೬; ಬೆಲೆ ರೂ. ೭೦/–

೫೭ **ಜನಪದ ಸಾಹಿತ್ಯ ಚಿಂತನೆ:** ಲೇ. ಲಿಂಗಪ್ಪ ಗೋನಾಲ, ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಕರ್ನಾಟಕ ಸಂಘದ ಕಟ್ಟಡ, ಡಾ॥ ಅಂಬೇಡ್ಕರ್ ವೃತ್ತ, ಬೀದರ್, ಪು.೧೪+೧೧೪. ಬೆಲೆ ರೂ. ೭೦/–

೫೮ **ಜಾನಪದ ಸುಗ್ಗಿ:** ಸಂ.ಎಂ. ಬೆಳ್ಳಾರಪ್ಪ, ನರಸಿಂಹೇಗೌಡ ನಾರಣಾಪುರ; ಪ್ರ: ಜಿಲ್ಲಾ ಕ.ಸಾ.ಪ ಕೋಲಾರ. ಪುಟಗಳು: ೮+೧೨೬, ಬೆಲೆ ರೂ. ೮೦/–

೫೯ **ಕೃಷಿ: ಪಾರಂಪರಿಕ ಜ್ಞಾನ–** ಸಂ. ಸ.ಚಿ. ರಮೇಶ್, ಪ್ರ–ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ಪು.೧೦+೨೦೦. ಬೆಲೆ ರೂ. ೧೨೦/–

೬೦ **ಬೆಳಕಿನೆಡೆಗೆ:** ಲೇ. ಡಾ. ಲಕ್ಷ್ಮೀ ಜಿ. ಪ್ರಸಾದ್, ಪ್ರ ಮಾತೃಶ್ರೀ ಪ್ರಕಾಶನ, ಮಾಗಾನಹಳ್ಳಿ ಕ್ರಾಸ್, ಉಳ್ಳಾಲ ಮುಖ್ಯ ರಸ್ತೆ, ಬೆಂಗಳೂರು–೫೬. ಪು. ೧೦೪, ಬೆಲೆ ರೂ. ೧೦೦/–

೬೧ **ಕಾಡುಗೊಲ್ಲರ ಸಾಂಸ್ಕೃತಿಕ ವೀರರು–** ಲೇ. . ಎಸ್. ಶಿವಣ್ಣ, ಪ್ರ–ತುಮಕೂರು ವಿ.ವಿ. ತುಮಕೂರು. ಪುಟಗಳು ೧೬+೧೦೪, ಬೆಲೆ ರೂ. ೩೦/–

೬೨ **ತುಳುನಾಡಿನ ಬ್ಯಾರಿಗಳು:** ಇಂಗ್ಲೀಷ್ ಮೂಲ: ಪ್ರೊ. ಬಿ.ಎಂ. ಇಂಚ್ಲಂಗೋಡು, ಕನ್ನಡಕ್ಕೆ: ತುಫೈಲ್ ಮಹಮದ್. ಪ್ರ: ಕರ್ನಾಟಕ ಬ್ಯಾರಿ ಅಕಾಡೆಮಿ, ಮಂಗಳೂರು. ಪುಟಗಳು: ೧೨+೧೯೮. ಬೆಲೆ. ರೂ. ೧೩೦/–

೬೩ **ಪೆರಿಮೆ (ಬ್ಯಾರಿ ಭಾಷೆ, ಸಂಸ್ಕೃತಿ ಸಂಶೋಧನೆ)** ಪ್ರ. ಸಂ: ಪ್ರೊ. ಬಿ.ಎಂ. ಇಚ್ಲಂಗೋಡು. ಪ್ರ: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು. ಪು. ೨೩೮. ಬೆಲೆ ರೂ.೨೦೦/–

೬೪ **ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು:** ಲೇ. ಮುದ್ದುವೀರಪ್ಪ, ಪ್ರ: ತುಮಕೂರು ವಿ.ವಿ.. ಪುಟಗಳು ೧೬+೪೦೨. ಬೆಲೆ ರೂ. ೨೨೫/–

IV. ವೈದ್ಯ

೬೫ **ಸುಲಭ ಸಂಜೀವಿನಿ** – ಮನೆ ಮದ್ದಿನ ಕೈಪಿಡಿ– ಲೇ. ಪಿ. ಸತ್ಯನಾರಾಯಣಭಟ್, ಪ್ರ: ಪ್ರಸಾರಾಂಗ ಕನ್ನಡ ವಿ.ವಿ.– ಹಂಪಿ: ಪು–೫+೧೩೪; ಬೆಲೆ ರೂ. ೮೦/–

೬೬ **ಹೂವು ಮತ್ತು ಆರೋಗ್ಯ** – ವಸುಂಧರಾ ಭೂಪತಿ, ಪ್ರ: ಕಾಮಧೇನು, ನಂ ೫/೧ ನಾಗಪ್ಪ ರಸ್ತೆ, ಶೇಷಾದ್ರಿಪುರಂ, ಬೆಂಗಳೂರೂ–೫೬೦ ೦೨೦, ಪು. ೧೮+೧೯೦; ಬೆಲೆ ರೂ.೧೬೦/–

೬೭ **ವೈದ್ಯ ಜಾನಪದ:** ಲೇ. ಸೋಮನಾಥ ಯಾಳವಾರ, ಡಾ. ಕಾವ್ಯಶ್ರೀ ಪ್ರದೀಪ ಕೊಟ್ಟಗಿ. ಪ್ರ: ಅಖಿಲಭಾರತ ಜಾನಪದ ಸಮ್ಮೇಳನ ಸ್ವಾಗತ ಸಮಿತಿ. ಬೀದರ. ಪು. ೯೬. ಬೆಲೆ ರೂ. ೭೦/–

೬೮ **ದಕ್ಷಿಣ ಭಾರತೀಯ ಜಾನಪದ ಕೋಶ** (ಸಂಪುಟ ೧ ಮತ್ತು ೨) ಪ್ರಧಾನ ಸಂಪಾದಕರು: ಎ. ಮುರಿಗೆಪ್ಪ: ಪ್ರಕಾಶಕರು – ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ಪುಟಗಳು: ೫೨೮+೫೦೮; ಬೆಲೆ ರೂ. ೮೦೦/– (ಎರಡು ಸಂಪುಟಗಳಿಗೆ)

೬೯ **ಜಾನಪದ ಸಿರಿ:** ಪ್ರ.ಸಂ. ನಲ್ಲೂರು ಪ್ರಸಾದ ಆರ್.ಕೆ.: ಸಂಪಾದಕರು–ಗೋಪಾಲಗೌಡ, ಕಲ್ಲುಮಂಗಲಿ. ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಬಳ್ಳಾಪುರ. ಪುಟಗಳು: ೬+೭೮. ಬೆಲೆ ರೂ. ೪೦/–

೭೦ **ಜಾನಪದ ಸಿರಿ**–ಪ್ರ.ಸಂ. ಜಗನ್ನಾಥ ಹೆಬ್ಬಾಳೆ. ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ್. ಪುಟಗಳು ೪೭೦. ರೂ. ೩೫೦/–

೭೧ **ಜಾನಪದ ತೇರು**–ಸಂ: ಬಂಡ್ಲಹಳ್ಳಿ ವಿಜಯಕುಮಾರ್, ಪ್ರ: ಮೇವಿ ಪಬ್ಲಿಕೇಷನ್ಸ್, ನ.೫೬೫, ೧ನೇ ಮಹಡಿ, ೩ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, ಮಂಜುನಾಥನಗರ, ಬೆಂಗಳೂರು – ೫೬೦ ೦೧೦. ಪುಟಗಳು ೨೦+೧೪೦; ಬೆಲೆ ರೂ. ೧೦೦/–

೭೨ **ಶ್ರೀ ಕೃಷ್ಣಪಾರಿಜಾತ**– ಸಂ: ಶಂಕರ ಶಿ. ಕುಂಬಾರ; ಪ್ರ: ವಿಜೇತ್ ಪ್ರಕಾಶನ, ಗದಗ, ಪುಟಗಳು – ೩೨+೩೨೦: ಬೆಲೆ ರೂ. ೧೦೦/–

V. ಸಂಕೀರ್ಣ

೨೩. **ಪುನರಾವಲೋಕನ:** ಸಂ.ನಾಡೋಜ ಹಂಪ ನಾಗರಾಜಯ್ಯ; ಪ್ರ- ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು - ೨; ಪು.೫೪೦, ಬೆಲೆ- ರೂ. ೩೦೦/-

೨೪ **ಜನಪದ ಸಿರಿ:** ಸಂಗ್ರಾಹಕರು: ಪ್ರೊ, ಚಂದ್ರಪ್ಪ, ಪ್ರ.ಚಿ.ಮಾ. ಸುಧಾಕರ, ಅಧ್ಯಕ್ಷರು, ಬೆಂ. ಗ್ರಾಮಾಂತರ ಜಿಲ್ಲಾ ಕ.ಸಾ.ಪ. ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು - ೧೮. ಪುಟಗಳು ೮+೬೦, ಬೆಲೆ ರೂ. ೫೦/-

೨೫ **ಜಾನಪದ ಗಂಗೋತ್ರಿ:** ಸಂ.೯, ಸಂ.೭. (ಏಪ್ರಿಲ್-ಜೂನ್-೨೦೧೦) ಪುಟಗಳು ೧೦+೯೪

೨೬ **ಜಾನಪದ ಗಂಗೋತ್ರಿ**-ಸಂ.೯, ಸಂ.೮. (ಜುಲೈ-ಸೆಪ್ಟೆಂಬರ್-೨೦೧೦) ೧೨+೧೦೮=೧೨೦

೨೭ **ಜಾನಪದ ಗಂಗೋತ್ರಿ**-ಸಂ.೯. ಸಂ.೦೯. (ಅಕ್ಟೋಬರ್-ಡಿಸೆಂಬರ್-೨೦೧೦) ಪುಟಗಳು ೧೨+೯೬=೧೦೮

೨೮ **ಹರಟೇಶಿ-ನಾಗೇಶಿ-ಕಲೆ ಮತ್ತು ಕಲಾವಿದರು:** (ಲಿಂಗಸಂಬಂಧಿ ಅಧ್ಯಯನ). ಲೇ. ಡಾ. ಶೈಲಜಾ ಹಿರೇಮಠ: ಪ್ರ: ಕನ್ನಡ ವಿ.ವಿ. ಹಂಪಿ. ಪುಟಗಳು-೩೨೨, ಬೆಲೆ ರೂ.೨೦೦/-

೨೦೧೧ರಲ್ಲಿ ಪ್ರಕಟವಾಗಿದ್ದು ಸಮೀಕ್ಷೆಗೆ ದೊರೆಯದ ಕೃತಿಗಳು

೧. ಜನಪದ ಗದ್ಯ ಸಂಗ್ರಹಗಳು

೧. ಅರ್ಥ ಹೇಳ್ತೀನಂದಾಳ – ಸಂ. ಸಿದ್ಧಣ್ಣ ಎಫ್. ಜಕಬಾಳ
೨. ಮಾಳವ ಜಾಣರು – ಸಂ.ಎಂ. ನಂಜುಂಡಸ್ವಾಮಿ, ಐ.ಪಿ.ಎಸ್.
೩. ಹಳ್ಳಿಯ ಮುತ್ತಿನ ನತ್ತುಗಳು – ಸಂ. ಸಿದ್ಧರಾಮ ಪೋಲೀಸ್ ಪಾಟೀಲ್
೪. ಚೋರನೂ ಜಾರನೂ – ಸಂ. ಚಿಕ್ಕರಾಮಯ್ಯ
೫. ನನ್ನೂರು ನನ್ನವ್ವ – ಸಂ. ಭತಮುರ್ಗೆ ಚಂದ್ರಪ್ಪ, ಬೀದರ್.

೨. ಜನಪದ ಪದ್ಯ ಸಂಗ್ರಹಗಳು

೬ ಲೆಕ್ಕವಿಲ್ಲದ ಗೆಜ್ಜೆ ಕುಣಿದಾವ – ಸಂ. ಶ್ರೀಮತಿ ಪ್ರಮೀಳಾ ಜಾನಪ್ಪಗೌಡ, ಚಿಂಚೋಳಿ
೭ ಮಾಡು ಗುರುಭಕ್ತಿ – ಸಂ. ಯಕ್ಕೇರಪ್ಪ ನಡುವಿನಮನಿ
೮. ನನ್ನೂರಿನ ಹಾಡು – ಸಂ. ಉದಯ ಮಡಿವಾಳ
೯. ಹೊಲೆಯರ ಹೊನ್ನಯ್ಯ – ಸಂ. ಹೊನ್ನಶೆಟ್ಟಿಹಳ್ಳಿ ಗಿರಿರಾಜ್
೧೦. ಹಾಲುಮತ ಹಾಡುಗಳು – ಸಂ. ಬೀರಪ್ಪ ಲ. ಹಳಮನಿ
೧೧. ಜಾನಪದ ತೋರಣ – ಸಂ. ರಾಮಣ್ಣ ಕೊಣ್ಣೂರ
೧೨. ಗ್ರಾಮ ಗಂಧರ್ವರು – ಸಂ. ಅಪ್ಪಗೆರೆ ತಿಮ್ಮರಾಜು
೧೩. ಹತ್ತು ಮಂದ್ಯಾಗ ಹಾಡೇನ – ವಿವಿಧ ಲೇಖಕರು

೩. ವಿಚಾರ ವಿಮರ್ಶೆ, ಸಂಶೋಧನೆ

೧೪. ಜಾನಪದ ಸಂವಹನ – ಸೂಗಯ್ಯ ಹಿರೇಮಠ
೧೫. ಕೋಲಾರಜಿಲ್ಲೆಯ ಜನಪದ ವೈದ್ಯ – ನಾ. ಮುನಿರಾಜು
೧೬. ಲಕ್ಕಸಕೊಪ್ಪ–ಜನಪದ ಸಂಸ್ಕೃತಿ – ಪಿ.ಡಿ. ವಾಲೀಕಾರ
೧೭. ಭಂಟನೂರಿನ ಬ್ರಹ್ಮಜೆಟ್ಟಿ ಜಾನಪದ ಅಧ್ಯಯನ – ಶಿವಪ್ಪ ನ. ನೀರಲಗಿ
೧೮. ಒಗ್ಗುಕಥೆ–ಅಭಿನಯ ಸಮನ್ವಯ (ಅನುವಾದಿತ) – ಅನು: ಗುರುಮೂರ್ತಿ ಪೆಂಡಕೂರು
೧೯. ಶಿವಗಂಗಾ ದರ್ಶನ – ತೋಟನಹಳ್ಳಿ ಜಿ. ಚೌಡಯ್ಯ

೨೦. ಅನ್ನದಾತನ ಅಂಗಳದಲ್ಲಿ – ಈರಯ್ಯ ಕಿಲ್ಲೇದಾರ

೨೧. ಜನಪದ ಕ್ರೀಡೆಗಳು – ತುರುವನೂರು ಮಂಜುನಾಥ

೨೨. ಜನಪದ ಸಾಹಿತ್ಯದಲ್ಲಿ ಕಿತ್ತೂರ ಸಂಸ್ಥಾನಿಕರು – ಶಿವಾನಂದ ಗುಬ್ಬಣ್ಣವರ್

೨೩. ಐತಿಹಾಸಿಕ ತುಳುನಾಡು – ದಿನಕರ ಪಿ. ಬಂಗೇರ

೨೪. ರಾಮನಗರ ಜಿಲ್ಲೆಯ ಜನಪದ ಆಟಗಳು – ಅಂಕನಹಳ್ಳಿ ಪಾರ್ಥ

೨೫ ಜಾನಪದ ವೈವಿಧ್ಯ – ಬಿದ್ರಿ ಚಂದ್ರಕಲಾ

೨೬. ಬುಡ್ಗ ಜಂಗಮರು – ಅರ್ಜುನ

೨೭. ಜನಪದ ಜೀವಾಳ – ರಾಜಶೇಖರ ಇಚ್ಚಂಗಿ

೨೮. ಬಹುಸಂಸ್ಕೃತಿ ಮತ್ತು ಜಾತ್ರೆಗಳ ಮಹಾಸಮನ್ವಯ – ಹೆಬ್ಬಾಲೆ ಕೆ. ನಾಗೇಶ್

೨೯. ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ – ತೈಲೂರು ವೆಂಕಟಕೃಷ್ಣ

೩೦. ಜಾನಪದ ಹಕ್ಕಿ ಕೊಪ್ಪದ ಮಕ್ಕಿ – ಸುರೇಶ್ ಜಿ. ನಾಯ್ಕ

೩೧. ಜಾನಪದ ಸ್ವರೂಪ ಮತ್ತು ವ್ಯಾಖ್ಯೆ – ಎ.ವಿ. ನಾವಡ

೩೨. ಹೊನ್ನಾಡಿನ ಜಾನಪದ – ಜಿನಹಳ್ಳಿ ಸಿದ್ಧಲಿಂಗಪ್ಪ

೩೩. ಸೊಲ್ಲಾಪುರ ಕನ್ನಡ ಸಂಶೋಧನೆ – ಬಸವರಾಜ ಸಿ. ಮಸೂತಿ

೩೪. ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ – ಪಳನಿಸ್ವಾಮಿ

೩೫. ಬುರ್ರಕಥಾ ಈರಮ್ಮ – ಸಾರಿಕಾದೇವಿ ಎಲ್. ಕಾಟಗಿ

೩೬. ನೆಲಮಂಗಲ ದರ್ಶನ– ಜಾನಪದ ನೋಟ – ತೋಟನಹಳ್ಳಿ ಜಿ. ಚೌಡಯ್ಯ

೩೭. ಜಾನಪದ ಮತ್ತು ಜಾಗತೀಕರಣ – ತಿಪ್ಪೇಸ್ವಾಮಿ

೩೮. ನಿಷೇಧಗಳು ಮತ್ತು
ಲಿಂಗವ್ಯವಸ್ಥೆ – ಸುನಂದಾ ಎಂ.

೩೯. ತುಳುವರ ಯುಗಯಾತ್ರೆ – ರವಿ.ರಾ.ಅಂಚನ್

೪. ಸಂಕೀರ್ಣ

೩೯. ಗಾದೆಗಳು – ಸಂ. ಆರ್. ರಾಮಕೃಷ್ಣ

೪೦. ಹೊನ್ನಾಡಿನ ಗಾದೆಗಳು – ಸಂ. ಜೀನಹಳ್ಳಿ ಸಿದ್ಧಲಿಂಗಪ್ಪ

೪೧. ಬಲೆ ಕಿಮರ – ಪ್ರಮೀಳಾ ದೇರ್ಪ ಪೆರ್ಮುದೆ

೪೨. ಹಳಬರ ಜೋಳಿಗೆ – ಶ್ರೀಮತಿ ಚೆಟ್ಟಿಮಾಡ

೪೩. ಹೈದ್ರಾಬಾದ್ ಕರ್ನಾಟಕ:
ಸಾಂಸ್ಕೃತಿಕ ವಿಷಯ ಕೋಶ
–ಜಾನಪದ ಸಂಪುಟ – ಪಿ.ಕೆ. ಖಂಡೋಬ

ಅನುಬಂಧ – ೩

'ತುಳುವರ ಯುಗಯಾತ್ರೆ'– ಎಂಬ ಉತ್ತಮ ಕೃತಿ

('ತುಳವರ ಯುಗಯಾತ್ರೆ'– ಎಂಬ ಕೃತಿಯೊಂದು ಬಹುಶಃ ೨೦೧೧ರಲ್ಲಿ ಪ್ರಕಟವಾಗಿದ್ದು, ೨೦೧೨ರಲ್ಲಿ 'ವಿಜಯ ಕರ್ನಾಟಕ'ದ ಭಾನುವಾರದ ಪುರವಣಿಯಲ್ಲಿ ಅದರ ವಿಮರ್ಶೆಯೊಂದು ಪ್ರಕಟವಾಗಿತ್ತು. ಅದರ ವಿವರಗಳನ್ನು ಗಮನಿಸಿ ಅದೊಂದು ಉತ್ತಮ ಕೃತಿ ಎಂದು ಭಾವಿಸಿ ಆಸಕ್ತರ ಗಮನಕ್ಕಾಗಿ ವಿಮರ್ಶಕ **ಎಸ್.ಬಿ. ಲಕ್ಷ್ಮೀಕಾಂತ್** ಅವರು ಅಲ್ಲಿ ಬರೆದಿದ್ದ ವಿಮರ್ಶೆಯನ್ನು ಕೃತಜ್ಞತಾ ಪೂರ್ವಕವಾಗಿ ಇಲ್ಲಿ ಪುನರ್ಮುದ್ರಿಸುತ್ತಿದ್ದೇವೆ. – ಸಂ.)

ರವಿ ರಾ. ಅಂಚನ್‌ರವರ 'ತುಳುವರ ಯುಗಯಾತ್ರೆ' ಒಂದು ಮೌಲಿಕ ಕೃತಿಯಾಗಿದೆ. ತುಳುನಾಡಿನ ಸಂಸ್ಕೃತಿ, ನಂಬಿಕೆಗಳನ್ನು ಭಿನ್ನ ರೀತಿಯಲ್ಲಿ ವೈಚಾರಿಕವಾಗಿ ಅರ್ಥೈಸುವ ಈ ಕೃತಿ ತುಳು ಸಂಸ್ಕೃತಿಯನ್ನು ಕುರಿತು ಹೊಸ ಆಲೋಚನೆಗಳನ್ನು ಹುಟ್ಟುಹಾಕುತ್ತದೆ. ತುಳುವರ ಬದುಕಿನ ಸೂಕ್ಷ್ಮ ವಿಚಾರಗಳನ್ನು ಮತ್ತು ಸಂಸ್ಕೃತಿ ಚಿಂತನೆಯಲ್ಲಿ ಜತೆಜತೆಯಲ್ಲಿ ಹಿಡಿದಿಡುವ ಕೃತಿಯಾಗಿ ಜೀವ ತಳೆದಿದೆ. ಊಳಿಗಮಾನ್ಯ ವ್ಯವಸ್ಥೆಯ ಹುನ್ನಾರವಾಗಿಯೇ ಉಳಿದುಕೊಂಡಿರುವ ತುಳು ಸಂಸ್ಕೃತಿಯ ಮೂಲಬೇರುಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿರುವ ಲೇಖಕರ ಆಲೋಚನೆಗಳು ಹೊಸತನದಿಂದ ಕೂಡಿದ್ದು ಅದರ ತುಳುವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಗಳಿಂದ ಹೆಚ್ಚು ಸತ್ವಯುತವಾಗಿ ಮೂಡಿಬಂದಿದೆ. ಅಧ್ಯಯನಶೀಲತೆಯ ಪರಿಣಾಮವಾಗಿ ಕುಶಲಗಾರಿಕೆಯಿಂದ ಕೂಡಿದ ವೈಚಾರಿಕ ಬರಹಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ತುಳುವರ ಅರ್ಥಿಕ ವ್ಯವಸ್ಥೆಯ ರೂಪೀಕರಣ ಹಾಗೂ ಅವರ ಅಲೆಮಾರಿ ಬದುಕಿನಿಂದ ಸ್ಥಿರ ಬದುಕಿನ ನೆಲೆಯನ್ನು ಭಿನ್ನವಾಗಿ ಅರಸಿಕೊಂಡ ರೂಪಾಂತರದ ಸ್ಥಿತಿಯ ಹಿಂದಿನ ಮನೋಸ್ಥಿತ್ಯಂತರವನ್ನು ಲೇಖಕರು ಇಲ್ಲಿ ಕಾಣಿಸಲು ಪ್ರಯತ್ನಿಸಿದ್ದಾರೆ. ಪ್ರಾಣಿ–ಪಕ್ಷಿ ಸಂಕುಲ, ಗದ್ದೆ–ತೋಟ, ಮರ–ಗಿಡ, ಹರಿಯುವ ಹೊಳೆ ಮುಂತಾದ ಪರಿಸರಕ್ಕೆ ಸಂಬಂಧಿಸಿದಂತಹ ತುಳುವರ ಅವಲಂಬಿತ ನಂಬಿಕೆಗಳ ಹಿಂದಿನ ಸೂಕ್ಷ್ಮ ವಿಚಾರಗಳನ್ನು ಇದರಲ್ಲಿ ವಿಶ್ಲೇಷಿಸಲಾಗಿದೆ.

ತುಳುನಾಡಿನಲ್ಲಿರುವ ಭೂತಗಳ ಹುಟ್ಟು ಮತ್ತು ಅವುಗಳು ಸೃಷ್ಟಿಸಿದ ಭಯ, ಭ್ರಮೆ, ಆತಂಕಗಳ ಕಾರಣಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ತುಳುವರ ಆರಾಧನಾ ನೆಲೆಯ ಪಲ್ಲಟದ ಚರಿತ್ರೆಯನ್ನು ಮಂಡಿಸುವ ಕೃತಿಯ ಒಂದು ಭಾಗ ಬಹಳ ಮುಖ್ಯವೆನಿಸುತ್ತದೆ. ಯಾಜಮಾನ್ಯ ಸಂಸ್ಕೃತಿ ಮತ್ತು ಬಹುತ್ವದ ಶ್ರಮಿಕ ಸಂಸ್ಕೃತಿಯ ನಡುವಿನ ಸಂಘರ್ಷವನ್ನು ಹಾಗೂ ಯಾಜಮಾನ್ಯ ಸಂಸ್ಕೃತಿಯ ದಬ್ಬಾಳಿಕೆಯಿಂದ ಶ್ರಮಿಕರ ಬಹುತ್ವದ ಸಂಸ್ಕೃತಿ ನಾಶವಾಗುತ್ತಿರುವುದನ್ನು 'ನಾಮಾಂತರ ಹಲ್ಲೆ' ಎಂಬ ಭಾಗದಲ್ಲಿ ಪ್ರಧಾನವಾಗಿ ಚರ್ಚೆ ನಡೆಸಿದ್ದಾರೆ. ತುಳು ಜನಪದದ ಮೂಲ ಚರಿತ್ರೆಯನ್ನು ಪಲ್ಲಟಿಸಿ ನವ ಆಧುನಿಕ ಚರಿತ್ರೆಯೊಂದನ್ನು ನಿರ್ಮಿಸಲಾಗಿದೆ ಎಂಬ ಆತಂಕ ಇಲ್ಲಿ ವ್ಯಕ್ತವಾಗಿದೆ. ತುಳುನಾಡಿನ ಶೋಷಕರು ಶ್ರಮಿಕ ಸಮುದಾಯಗಳ ಬದುಕು ಮತ್ತು ಸಾಂಸ್ಕೃತಿಕ ಆಚರಣೆಗಳ ಮೇಲೆ ಎಸಗುತ್ತಿರುವ ಶೋಷಣೆಯು ಶ್ರಮಿಕರನ್ನು ಅಸಹಾಯಕ ಸ್ಥಿತಿಗೆ ತಲುಪಿಸಿದೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. 'ಶ್ರೇಷ್ಠತೆಯಿಂದ ಬರುವ ಅಹಂಕಾರ ಮತ್ತು ಕನಿಷ್ಠತೆಯಿಂದ ಬರುವ ಕೀಳರಿಮೆ ಎರಡೂ ಸಂಸ್ಕೃತಿಯ ವಿಧ್ವಂಸಕ ನೆಲೆಗಳು' ಎಂಬ ವಾಸ್ತವಿಕ ಸತ್ಯವನ್ನು ಲೇಖಕರು ತಮ್ಮ ವಿಶ್ಲೇಷಣೆಯಲ್ಲಿ ಮನಗಂಡಿದ್ದಾರೆ. ಆ ನೆಲೆಯಲ್ಲಿ ತುಳುವರ ವಿಶಿಷ್ಟವಾದ ಬಹು ಸಂಸ್ಕೃತಿಯನ್ನು ಕುರಿತು ಚಿಂತಿಸಿದ್ದಾರೆ. ಅಷ್ಟೇ ಅಲ್ಲದೆ ತುಳುವರ ಮೌಖಿಕ ಪರಂಪರೆಯಲ್ಲಿ ಸತ್ವಯುತವಾದ ಅಂಶಗಳಿವೆ. ಅವುಗಳನ್ನು ನಾವು ಗೌರವಿಸಬೇಕಾಗಿದೆ ಎಂಬ ತುಳು ಜನಪದದ ಬಗೆಗಿನ ಕಾಳಜಿಯನ್ನು ಈ ಕೃತಿಯುದ್ದಕ್ಕೂ ಲೇಖಕರು ತೋರಿಸಿಕೊಟ್ಟಿದ್ದಾರೆ.

ಅನುಬಂಧ – ೪

ಮಗ್ಗುಲು ಮಗುಚುವ ಪ್ರಕ್ರಿಯೆ

* ಜಾನಪದ ಸ್ವರೂಪ ಮತ್ತು ವ್ಯಾಖ್ಯೆ

ಲೇ. ಎ.ವಿ. ನಾವಡ, ಪ್ರ: ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು: ೨೦೧೧: ಬೆಲೆ ರೂ. ೧೦೪/–

"ಜಾನಪದ ಸ್ವರೂಪ ಮತ್ತು ವ್ಯಾಖ್ಯೆ" ಸಂಕಲನದ ಕರ್ತೃ ಎ.ವಿ. ನಾವಡ ಅವರು ಜಾನಪದವನ್ನು 'ಅನ್ಯಾನ್ಯ ಜ್ಞಾನಗಳ ಜತೆಗೆ ಮುಖಾಮುಖಿಯಾಗಿಸಿ ನೋಡುವಲ್ಲಿ' ಕ್ರಿಯಾಶೀಲರಾದವರು. ಮಾಹಿತಿದಾರರನ್ನೂ ಅಷ್ಟಕ್ಕೇ ಇಡದೇ ಸಹ ಸಂಶೋಧಕನ ನೆಲೆಯಲ್ಲಿ ಮನ್ನಿಸಿ ಒಳಗೊಳಿಸಿಕೊಳ್ಳುತ್ತಿರುವವರಲ್ಲಿ ಮುಖ್ಯರಾದವರು. ಈ ರೀತಿ 'ಮಗ್ಗಲು ಮಗುಚುವಿಕೆ'ಯ ಕಾರಣವಾಗಿ ಕಳೆದ ಹತ್ತು ವರ್ಷಗಳಲ್ಲಿ ಎ.ವಿ. ನಾವಡರಿಂದ ಏನೆಲ್ಲ ಮೆಯ್ಗೊಂಡಿವೆ, ಅವೆಲ್ಲವೂ ಪ್ರಕೃತ ಸಂಕಲನದಲ್ಲಿವೆ.

ಇಲ್ಲಿನ ಒಟ್ಟೂ ಹದಿನಾರು ಸಂಪ್ರಬಂಧಗಳಲ್ಲಿ ಎ.ವಿ. ನಾವಡರು ಜಾನಪದ ಅಧ್ಯಯನಕ್ಕೆ ಹೊಸ ಶಿಸ್ತು, ದಾರಿ ಹಾಕಿಕೊಟ್ಟದ್ದು ಹೊಡೆದು ಕಾಣುತ್ತದೆ. 'ಜಾನಪದವನ್ನು ಎಷ್ಟೊಂದು ಮಗ್ಗುಲುಗಳಲ್ಲಿ, ಸಿದ್ಧಾಂತಗಳಲ್ಲಿ ಓದಬಹುದು ಮತ್ತು ಓದಿಸಬಹುದು?'– ಈ ಸಂಕಲನವನ್ನು ಅನುಭವಿಸಿದರೆ ಅದು ಮನೋಗತವಾಗುತ್ತದೆ.

ಮೊದಲ ಪ್ರಬಂಧ "ಜಾನಪದ : ಸ್ವರೂಪ ಮತ್ತು ವ್ಯಾಖ್ಯೆ" ಎಂಬುದು ಸುದೀರ್ಘವಾಗಿದೆ. ಜಾನಪದವನ್ನು ಸಮಗ್ರವಾಗಿ ಆದರೆ ಇಡಿಕಿರಿದಾಗಿ ಕಟ್ಟಿಕೊಡುವುದಕ್ಕೆ ಒಡ್ಡಿಕೊಂಡದ್ದಾಗಿದೆ. Folk ಮತ್ತು Lore ಗೆ ಸಂಬಂಧಿಸಿದ ನಿರ್ವಚನ ಗಮನ ಸೆಳೆಯುತ್ತದೆ. ರಿಚರ್ಡ್ ಎಂ. ಡಾರ್ಸನ್ ಅವರು "ಜಾನಪದ ಮತ್ತು ಜನಪದ ಜೀವನ ಅಧ್ಯಯನ"ವನ್ನು ಮೌಖಿಕ ಸಾಹಿತ್ಯ, ಭೌತಿಕ, ಸಂಸ್ಕೃತಿ, ಸಾಮಾಜಿಕ ಜನಪದ ಸಂಪ್ರದಾಯಗಳು ಹಾಗೂ ಪ್ರದರ್ಶಕ ಜನಪದ ಕಲೆಗಳು ಹೀಗೆ ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದನ್ನು ಪ್ರೊ. ನಾವಡ ಸ್ವೀಕರಿಸುತ್ತಾರೆ ಮತ್ತು ಅವುಗಳನ್ನು ಒಂದೊಂದಾಗಿ ಅಷ್ಟೇ ಜವಾಬ್ದಾರಿಯುತವಾಗಿ, ಪ್ರಾಮಾಣಿಕವಾಗಿ ವಿಶ್ಲೇಷಿಸುತ್ತಾರೆ. ಇಲ್ಲಿಯೇ 'ಕೆಲವು ಆಲೋಚನೆಗಳನ್ನೂ ಮುಂದಿಟ್ಟಿದ್ದು ಒಂದೊಂದೂ ಹೊಸ ಬೆಳಕಾಗಿದೆ; ಮನನೀಯವಾಗಿದೆ. ಒಂದೆರಡು ಉದಾ: 'ಜಾನಪದ ಅಧ್ಯಯನದಲ್ಲಿ ಎಲ್ಲ ಪಠ್ಯಗಳೂ ಅಧಿಕೃತ ಹಾಗೂ ಮುಖ್ಯವಾಗುತ್ತವೆ'. 'ಕಲಾವಿದನು ಪರಂಪರೆಯಿಂದ ದತ್ತವಾದ ತನ್ನ ಅನುಭವ ಬಲದಿಂದ ಕಾವ್ಯವನ್ನು। ಕತೆಯನ್ನು ಪುನರ್ ಸೃಷ್ಟಿಗೆ ಒಳಪಡಿಸುತ್ತಾನೆ'. 'ಕಲಾವಿದನ ಸೃಜನಶೀಲ ಅಭಿವ್ಯಕ್ತಿಯಲ್ಲಿ ಪ್ರೇಕ್ಷಕನ ಪಾತ್ರವೂ ಇದೆ.'.

"ಕರಾವಳಿಯ ಕನ್ನಡ ದೈವಾರಾಧನೆ : ಪಾಣಾರಾಟ" ಎಂಬುದು ಕ್ಷೇತ್ರಕಾರ್ಯ ಹಾಗೂ ಸಂಶೋಧನೆಗಳಿಂದ ಸಂಪನ್ನಗೊಂಡ ಪ್ರಬಂಧ. ಭೂತಮಾಧ್ಯಮ ಜನಾಂಗಗಳಲ್ಲಿ ಒಂದಾದ ಪಾಣರ ಮೂಲಕವಾಗಿ ನಡೆಯಿಸಲಾಗುವ ಆರಾಧನಾ ಪ್ರಕ್ರಿಯೆಯೊಂದನ್ನು ನಾವಡರು ಅಧ್ಯಯನಕ್ಕೊಳಪಡಿಸಿ ಪ್ರಸ್ತುತಪಡಿಸಿರುವ ರೀತಿ ಸಶಕ್ತವಾಗಿದೆ. ಪಾಣರ ಢಕ್ಕೆ ಬಲಿಯ ಜೊತೆ ಜೊತೆಗೇ ವೈದ್ಯರು ಎಂಬ ಬ್ರಾಹ್ಮಣ ವರ್ಗದವರು ನಡೆಸಿಕೊಡುವ ಢಕ್ಕೆ ಬಲಿಯನ್ನು ಹಿಡಿದುಕೊಟ್ಟಿರುವುದು ಉಪಕಾರವಾಗಿದೆ; ಈ ನಿಟ್ಟಿನಲ್ಲಿ ಇನ್ನಷ್ಟು ವಿಸ್ತೃತವಾಗಿ ತೊಡಗಿಸಿಕೊಳ್ಳುವವರಿಗೆ ಬಾಗಿಲು ತೆರೆದುಕೊಟ್ಟಂತಿದೆ.

"ಜಾಗತೀಕರಣ ಮತ್ತು ಜಾನಪದ" ಪ್ರಬಂಧದಲ್ಲಿ ಅಪೂರ್ವವಾದ ಒಳನೋಟಗಳಿವೆ. ಜಾಗತೀಕರಣದ ಸಂದರ್ಭದಲ್ಲಿ 'ನಡೆಯುವುದು ಒಂದು ಬಗೆಯಲ್ಲಿ ಸಾಂಸ್ಕೃತಿಕ ವಿಸ್ಮೃತಿ ಮಾತ್ರ. 'ಅನುಗಾಲದಿಂದ ಬೆಳೆದು ಬಂದ ಜೀವ ಚೈತನ್ಯದ ಹುಟ್ಟು ಅಷ್ಟು ಸುಲಭದಲ್ಲಿ ಅಡಗದು' ಎನ್ನುವ ನಾವಡರು ಅದನ್ನು ಜನಪದ ಕಥೆಯೊಂದರ ಮೇಲಿಂದ ಪ್ರತಿಪಾದಿಸಿರುವುದು ಸರ್ವಸಮ್ಮತವಾಗುವಂತಿದೆ. ನಾವಡರು ನಿಸ್ಸಂದಿಗ್ಧವಾಗಿ ಹೀಗೆನ್ನುತ್ತಾರೆ. 'ನಮ್ಮ ಸಾಂಸ್ಕೃತಿಕ ಎಚ್ಚರವನ್ನು ಮರುಸಂಶೋಧನೆಗೆ ಗುರಿಪಡಿಸಬೇಕೇ ಹೊರತು ಜಾಗತೀಕರಣವನ್ನು ವಿರೋಧಿಸುತ್ತಾ ದೂರುತ್ತಾ ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲ'.

ನಾಲ್ಕನೆಯದು "ಕನ್ನಡ ಜನಪದ ಕತೆ : ಇಟ್ಟ ಹೆಜ್ಜೆ, ತೊಟ್ಟ ವೇಷ". ಕನ್ನಡದಲ್ಲಿ ಬಂದ ಜನಪದ ಕಥೆಗಳ ಸಂಕಲನಗಳನ್ನು ಸಮಸ್ತರ ಅವಗಾಹನೆಗೆ ತರುವ ಉದ್ದೇಶ ಇದರದ್ದು. ಇಲ್ಲಿ ಗಮನಾರ್ಹ ಸಂಕಲನಗಳನ್ನು ಎತ್ತಿಕೊಂಡು ಅವುಗಳ ವಿಶೇಷತೆ, ವಿಶಿಷ್ಟತೆಗಳನ್ನು ದಾಖಲಿಸುತ್ತ ಹೋಗಲಾಗಿದೆ. ಹಾಗೆಯೇ ಮಿತಿಗಳತ್ತಲೂ ಬೆಟ್ಟು ಮಾಡಲಾಗಿದೆ. ಹೊರತಾಗಿ, ಕಥೆಗಳ ಅಧ್ಯಯನ ನಡೆದು ಬಂದ ದಾರಿ ಮತ್ತು ಮಾದರಿಗಳ ಹಿನ್ನೆಲೆಯಲ್ಲಿ ರಾಚನಿಕ ಅಧ್ಯಯನ; ರಾಮಾನುಜನ್: ಸಂಸ್ಕೃತಿ ಕೇಂದ್ರಿತ ಅಧ್ಯಯನ; ಸ್ತ್ರೀವಾದಿ ದೃಷ್ಟಿಕೋನ; ಇನ್ನಿತರ ಸೈದ್ಧಾಂತಿಕ ನೆಲೆಗಳು – ಇವುಗಳ ಬಗ್ಗೆಯೂ ಮಹತ್ವದ ಮಾತುಗಳನ್ನಾಡಿದೆ.

ಮತ್ತದೊಂದು – "ಸಿರಿಕಾವ್ಯ ಸಂಪಾದನದ ತಾತ್ವಿಕತೆ" ಎಂಬುದು. ಬಹುಮುಖ್ಯವಾಗಿ ಇದು 'ಸಿರಿಕಾವ್ಯ: ಬಹುಮುಖಿ ದಾಖಲಾತಿಯ ಸ್ವರೂಪ, ಸಿರಿ ಮಹಾಕಾವ್ಯ, ಸಿರಿ ಪರಂಪರೆಯ ಉತ್ಪನ್ನ – ಇವುಗಳನ್ನು ಅರ್ಥೈಸುವಲ್ಲಿ ನಿಷ್ಠೆ ತೋರಿಸುತ್ತದೆ. ಮುಂದುವರಿದು, 'ಪ್ರೊ. ಎ.ವಿ. ನಾವಡರು ಸಂಪಾದಿಸಿದ ರಾಮಕ್ಕ

ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ'ದ ಸಂಗ್ರಹದ ಸಂದರ್ಭ ದಕ್ಕಿಸಿಕೊಂಡ 'ಮೌಖಿಕ ಅನನ್ಯತೆ'ಯ ಬಗ್ಗೆ ಟಿಪ್ಪಣಿ ಒದಗಿಸುತ್ತದೆ.

"ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ (ಅಸೋಡು)ವೊಂದರ ಆರಾಧನಾ ಸಂಕೀರ್ಣ – ನಂದಿ, ನಂದಿಕೇಶ್ವರ ಆರಾಧನೆ – ಅರಸು ಆರಾಧನಾ ಪದ್ಧತಿಯ ಪಳೆಯುಳಿಕೆ ?" ಎಂಬುದು 'ಮನೆಯೊಂದು ಗ್ರಾಮದ ಉಪಾಸನಾ ಸಂಪ್ರದಾಯಗಳನ್ನು ಹೇಗೆ ನಿಯಂತ್ರಿಸುತ್ತದೆ?' ಎನ್ನುವುದನ್ನು ತಲಾಶಿಸಿದ್ದೇ ಆಗಿದೆ. ಇಂಥಲ್ಲಿ ಅತ್ಯಗತ್ಯವಾಗುವುದು – ಎಡೆಬಿಡದ ಕ್ಷೇತ್ರಕಾರ್ಯ ಹಾಗೂ ಸಂಶೋಧನಾಸಕ್ತಿ. ಜೊತೆಗೆ ವಸ್ತುನಿಷ್ಠತೆ, ನಿರ್ಲಿಪ್ತತೆ, ತಾಳ್ಮೆ ಮತ್ತು ತನ್ಮಯತೆ ಜೊತೆಗೂಡಬೇಕು! ಹಾಗಾಗದೇ ಹೋದರೆ ಇನ್ನೆಷ್ಟೋ ಸಂಗತಿಗಳು ಕೈ ಹಿಡಿಯದೇ ಹೋಗುತ್ತವೆ. ಇಲ್ಲಿ ಇವೆಲ್ಲವೂ ಸಮ ಪ್ರಮಾಣದಲ್ಲಿ ದುಡಿದುಕೊಂಡಿರುವುದರಿಂದಲೇ ಯಶಸ್ಸು ಸಾಧ್ಯವಾಗಿದೆ.

"ಬುಡಕಟ್ಟು ಅಧ್ಯಯನ: ತೀ.ನಂ. ಶಂಕರನಾರಾಯಣರ ಅಧ್ಯಯನದ ಹಿನ್ನೆಲೆಯಲ್ಲಿ" ಎಂಬ ಲೇಖನ ತೀನಂಶಂ ಅವರ 'ಅಧ್ಯಯನದ ಮಾಸದ ಚರಣ ಚಿಹ್ನೆಗಳನ್ನು' ಆಳವಾದ ಅಧ್ಯಯನದ ನೆಲೆಯಲ್ಲಿ ಸಮರ್ಪಕವಾಗಿಯೇ ಗುರುತಿಸಿದೆ ಮತ್ತು ಗೌರವಿಸಿದೆ.

"ಕ್ರಿಯಾತ್ಮಕ ಜಾನಪದ" ಸಂಪ್ರಬಂಧವು ಜಾನಪದದ ಕ್ರಿಯಾತ್ಮಕತೆಯನ್ನು ಸಂಸ್ಕೃತಿ, ಚರಿತ್ರೆ, ರಾಷ್ಟ್ರ ಹಾಗೂ ಸಂಕಥನ – ಇವುಗಳನ್ನು ಕಟ್ಟುವ ಜಾನಪದ ಸಂವಿಧಾನದೊಂದಿಗೆ 'ವಿಸ್ತರಿಸುವ' ನಿಟ್ಟಿನಲ್ಲೂ ವಹಿಸಿರುವ ಆಸಕ್ತಿಗೆ ನಿದರ್ಶನವಾಗಿದೆ.

"ನಾಗಮಂಡಲ: ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ" ಎಂಬೀ ಪ್ರಬಂಧವಂತೂ ಅದ್ವಿತೀಯವೇ ಆಗಿದೆ. ಇದು ಉಡುಪಿ ತಾಲ್ಲೂಕಿನ ಸಾಸ್ತಾನದಲ್ಲಿ ಜರುಗಿದ 'ಸಂಪೂರ್ಣ ನಾಗಮಂಡಲ ಮಹೋತ್ಸವವನ್ನು ಒಂದು ಪ್ರದರ್ಶನ ಘಟನೆ ಎಂಬುದಾಗಿ ಪರಿಗಣಿಸಿದೆ'. ಅಷ್ಟಲ್ಲದೇ, ಇದು ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ ನಾಗಮಂಡಲದ ಕುರಿತು ಸಮಸ್ತ ವಿವರಗಳನ್ನು ಹಾಗೂ ಗ್ರಹಿಕೆಗಳನ್ನು ಕಲೆ ಹಾಕುತ್ತದೆ. ಹಾಗೆ ಮಾಡುತ್ತಲೇ ಅನೇಕ ಆಚರಣೆಗಳ ಒಳಹೊಕ್ಕು ಸಾಧ್ಯತೆಗಳನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತದೆ ಮತ್ತು ಸಫಲತೆಯನ್ನೂ ಕಾಣುತ್ತದೆ. ಇದಿಲ್ಲಿಯೇ ಒದಗಿಸಿಕೊಂಡಿರುವ 'ನಾಗಮಂಡಲದ ಶಾಬ್ದಿಕ ಪಠ್ಯದ ಒಂದು ಮಾದರಿ' ಯೊಳಗಿನ ನಾಗನ ಕತೆ ಎಂಬ ಹಾಡಿನ ಮೂಲಕವೂ ಪ್ರಬಂಧ ಮತ್ತಷ್ಟು ಸತ್ತ್ವ ಪ್ರಾಪ್ತಿಸಿಕೊಳ್ಳುತ್ತದೆ!

"ಪ್ರದರ್ಶನ ಸಿದ್ಧಾಂತ ಹಿನ್ನೆಲೆಯಲ್ಲಿ ಜನಪದ ಕತೆಯೊಂದರ ಅಧ್ಯಯನ" ಬರಹವೂ ಅಪುರೂಪದ್ದೇ ಆಗಿದೆ, ಮಾದರಿಯೇ ಆಗಿದೆ. ಇದರಲ್ಲಿ ಕುಂದಾಪುರದ ಉಳ್ಳೂರು ಗ್ರಾಮದ ಮೂಕಜ್ಜಿ ಸುಮಾರು ಆರು ವರ್ಷಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ನಾಲ್ಕು ಬಾರಿ ಹೇಳಿದ ಒಂದೇ ಕತೆಯನ್ನು ಆಗಾಗಲೇ ಸಂಗ್ರಹಿಸಿ, ಲಿಪ್ಯಂತರಗೊಳಿಸಿ ತೌಲನಿಕವಾದ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಇಲ್ಲಿಯ ಪಾಠಾಂತರ ಹಾಗೂ

ಅದಕ್ಕೆ ಕಾರಣರಾದ ಶ್ರೋತೃಗಳ ಮೇಲಿಂದ ಪ್ರಬಂಧ ಕಂಡುಕೊಂಡ ವಾಸ್ತವಾಂಶ ಏನೆಂದರೆ 'ಕತೆ ಹೆಚ್ಚು ಸೃಜನಶೀಲವಾಗಬೇಕಾದರೆ, ಶ್ರೋತೃಗಳ ಪಾತ್ರ ಮಹತ್ವದ್ದು ಎನ್ನುವುದು."

"ಕ್ರಿಯಾತ್ಮಕ ಸಿದ್ಧಾಂತ" ಲೇಖನದಲ್ಲಿ ಅದರ ಪಾತ್ರದ ಬಗ್ಗೆ, ಔಚಿತ್ಯದ ಬಗ್ಗೆ ಹೊಣೆಗಾರಿಕೆಯಿಂದ ಚರ್ಚಿಸಲಾಗಿದೆ. 'ಬದಲಾದ ಸಂದರ್ಭದಲ್ಲಿ ಅಧ್ಯಯನ ಮಾಡುವುದು ಕುತೂಹಲದಾಯಕವಾದುದು ಎಂಬುದು ಚಿಂತನೀಯವಾಗಿದೆ.

"ಸಾಂದರ್ಭಿಕ ಸಿದ್ಧಾಂತ" ದಲ್ಲಿ ಸಾಂದರ್ಭಿಕ ಸಿದ್ಧಾಂತದ ಅಗತ್ಯತೆ ಬಗ್ಗೆ ಪ್ರತಿಪಾದಿಸಲಾಗಿದೆ. 'ಪಠ್ಯಕೇಂದ್ರಿತ ಸಿದ್ಧಾಂತಗಳ ಬಿಗಿ ಹಿಡಿತದಿಂದ ಹೊರಬಂದು ಅಧ್ಯಯನದ ಹೊಸ ಸಾಧ್ಯತೆಗಳತ್ತ ಹೊರಳುವುದಕ್ಕೆ ಈ ಸಿದ್ಧಾಂತ ಕಾರಣವಾಗಿದೆ' ಎಂದು ಸರಿಯಾಗಿಯೇ ಹೇಳಲಾಗಿದೆ.

ಅನಂತರದ "ಪ್ರದರ್ಶನ ಸಿದ್ಧಾಂತ" ಪ್ರಬಂಧ ತನ್ನ ಮೇಲಿನ ಹೊಣೆಗಾರಿಕೆಯನ್ನು ಸಾದರಪಡಿಸುತ್ತದೆ. ಪ್ರಕೃತ ಸಿದ್ಧಾಂತ 'ಅಧ್ಯಯನದ ದಿಗಂತವನ್ನು ವಿಸ್ತರಿಸುವಲ್ಲಿ ಯಶಸ್ವಿಯಾಯಿತು' ಎಂದು ಮೆಚ್ಚಿಕೊಳ್ಳುತ್ತದೆ; ಅದೇ ಹೊತ್ತಿಗೆ ಈ ಸಿದ್ಧಾಂತ 'ಅರ್ಥ ಹಾಗೂ ಕಾರ್ಯವನ್ನು ವಿವರಿಸುವುದಿಲ್ಲ' ಎಂದೂ ಆರೋಪಿಸಿಬಿಡುತ್ತದೆ.

"ಮೌಖಿಕ ಸೂತ್ರಾತ್ಮಕ ಸಿದ್ಧಾಂತ" ಲೇಖನವು ಇನ್ನೂ ಹೆಚ್ಚು ಪರಿಶ್ರಮದೊಂದಿಗೆ ಅಭಿವ್ಯಕ್ತಗೊಂಡಿದೆ, ಬಲಿಷ್ಠವಾಗಿದೆ. 'ಪಠ್ಯವೊಂದರ ಸಂಯೋಜನೆಯಲ್ಲಿ ಸಂದರ್ಭವು ಮಹತ್ವದ ಪಾತ್ರ ವಹಿಸುತ್ತದೆ ಎನ್ನುವ ಜನಪದೀಯ ತಿಳಿವಳಿಕೆಯನ್ನು ನೀಡಿದುದು ಸೂತ್ರಾತ್ಮಕ ಸಿದ್ಧಾಂತದ ದೊಡ್ಡ ಕೊಡುಗೆ' ಎಂಬುದು ಈ ಸಿದ್ಧಾಂತವನ್ನು ಅತ್ಯಂತ ಸೂಕ್ತವಾಗಿ ಬಹುಮಾನಿಸಿದ್ದೇ ಆಗಿದೆ.

ಮುಂದಿನ "ಮೌಖಿಕ ಕಾವ್ಯ ಮತ್ತು ಸೃಜನಶೀಲತೆ" ಎಂಬುದು ನಾವಡರ 'ಮೌಖಿಕ ಕಾವ್ಯ ಬಾಯಿಪಾಠ ಅಲ್ಲ. ಅದೊಂದು ಸೃಷ್ಟಿಕಾರ್ಯ' ಎಂಬ ಪೂರ್ವ ಪ್ರಮೇಯವನ್ನು ಇನ್ನಷ್ಟು ಆಧಾರಗಳಿಂದ ಸಮರ್ಥಿಸಿಕೊಂಡದ್ದೇ ಆಗಿದೆ. ಕೊನೆಯ ಪ್ರಬಂಧ 'ಜಾನಪದ ದಶಕದ ಅಂತಃಚೈತನ್ಯದ ರೂಪಕ' – ಇದು ಜಾನಪದದ ಮುಂದಿನ ಸಾಧ್ಯತೆಗಳ ಬಗ್ಗೆ ಅದರೊಂದಿಗಿನ ಸತತ ಸಂಪರ್ಕದ ಕಾರಣವಾಗಿ ಅನುಮೇಯಿಸಿದ್ದೇ ಆಗಿದೆ.

ವಿ. ಗ. ನಾಯಕ
"ಸುವರ್ಣಗಿರಿ"
ಅಬ್ಬಕ್ಕ ನಗರ ಬಡಾವಣೆ,
ಕೊಟ್ಟಾರ, ಮಂಗಳೂರು ಜಿಲ್ಲೆ.

ವಿಮರ್ಶಕರ ವಿಳಾಸಗಳು

೧. **ಡಾ. ಎಸ್.ಪಿ. ಪದ್ಮಪ್ರಸಾದ್**
'ತೃಪ್ತಿ'– ೨ನೇ ಕ್ರಾಸ್, ಕನಕಾಂಬರ ರಸ್ತೆ
ಗೋಕುಲ ಬಡಾವಣೆ, ತುಮಕೂರು – ೫೭೨ ೧೦೪.

೨. **ಪ್ರೊ. ಮ.ಲ.ನ. ಮೂರ್ತಿ**
'ಇಂಚರ'– ವೆಂಕಟಸ್ವಾಮಿ ಬಡಾವಣೆ
ಗೌರಿಬಿದನೂರು ರಸ್ತೆ, ಅಂಚೆ: ಮಧುಗಿರಿ, ತುಮಕೂರು ಜಿಲ್ಲೆ.

೩. **ಶ್ರೀಮತಿ ಪದ್ಮಾಕೃಷ್ಣಮೂರ್ತಿ**
ಅಂಚೆ ಇಲಾಖೆ, ಹನುಮಂತನಗರ, ತುಮಕೂರು.

೪. **ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**, ಕನ್ನಡ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಂಚೆ: ಶಿರಾ (ತುಮಕೂರು ಜಿಲ್ಲೆ)

೫. **ಶ್ರೀಮತಿ ಶೈಲಾ ನಾಗರಾಜ್**
'ಶೈನಾ'– ೫ನೇ ಮುಖ್ಯರಸ್ತೆ
ವಿಜಯನಗರ, ತುಮಕೂರು.

೬. **ಶ್ರೀಮತಿ ಆರ್. ಶಾಂತಾ ಕಂಪಾರಹಳ್ಳಿ**
ನಂ. ೫೨೩೬/೨, ೨ನೇ ಮುಖ್ಯರಸ್ತೆ
ಸದಾಶಿವನಗರ, ತುಮಕೂರು–೫೭೨ ೧೦೧.

೭. **ಡಾ. ಕೆ.ವಿ. ಮುದ್ದುವೀರಪ್ಪ**
ಒಂದನೇ ಮುಖ್ಯರಸ್ತೆ, ಕುವೆಂಪುನಗರ
ತುಮಕೂರು– ೫೭೨ ೧೦೩.

೮. **ಡಾ. ಬಿ. ನಂಜುಂಡಸ್ವಾಮಿ**
ತಾರಾನಾಥ ಔಷಧಾಲಯ, ತುಮಕೂರು ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ, ತುಮಕೂರು – ೧

೯. **ಡಾ. ಜಿ.ಡಿ. ರಮೇಶ್**, ಕನ್ನಡ ಪ್ರಾಧ್ಯಾಪಕರು
ಕಮಲಾನೆಹರು ಮಹಿಳಾ ಕಾಲೇಜು, ಶಿವಮೊಗ್ಗ– ೫೭೭ ೨೦೧

ಜಾನಪದ ಒಂದು ಕಲಿಕೆಯ ವಿಷಯವಾಗಿ ಪರಿಗಣನೆಗೊಳ್ಳುವ ಪೂರ್ವದಲ್ಲಿ ಹಾಗೂ ಅನಂತರ ಅದು ಒಂದು ಅಧ್ಯಯನ ಶಿಸ್ತಾಗಿ ರೂಪುಗೊಂಡ ಮೇಲೂ ಕನ್ನಡದಲ್ಲಿ ಜಾನಪದ ಸಂಬಂಧೀ ಕೃತಿಗಳು ದೊಡ್ಡ ಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಾ ಬಂದಿವೆ. ಆರಂಭಿಕ ದಶಕಗಳಿಗಿಂತ ಈಗ ಗ್ರಂಥಗಳ ಪ್ರಕಟಣೆ ವಾರ್ಷಿಕ ಲೆಕ್ಕದಲ್ಲಿ ಮೂರು ಪಟ್ಟು ಹೆಚ್ಚಾಗಿರುವುದು ಗಮನಾರ್ಹ. ಹೀಗೆ ಆರಂಭದಿಂದ ಜಾನಪದ ವಿಷಯವಾಗಿ ಪ್ರಕಟಗೊಳ್ಳುತ್ತ ಬಂದಿರುವ ಕೃತಿಗಳ ಶೀರ್ಷಿಕೆ ಹಾಗೂ ಅದನ್ನು ಕುರಿತಿರುವ ವಸ್ತು ವಿಷಯದ ಸ್ಥೂಲ ಪರಿಚಯದ ಅಗತ್ಯ ಆಸಕ್ತರಿಗಂತೂ ಇದ್ದೇ ಇದೆ. ಅಂಥ ಪ್ರಯತ್ನಗಳನ್ನು ಅನೇಕ ವ್ಯಕ್ತಿಗಳು ಹಾಗೂ ವಿಶ್ವವಿದ್ಯಾಲಯಗಳು ಈವರೆಗೆ ಮಾಡುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ನೂತನ ಜಾನಪದ ವಿಶ್ವವಿದ್ಯಾಲಯ ಈ ಕಾರ್ಯದ ಮಹತ್ವವನ್ನು ಮನಗಂಡು ಪ್ರಕೃತ ಯೋಜನೆಗೆ ಮರುಜೀವ ಕೊಡುವ ಯತ್ನವಾಗಿ 'ಜಾನಪದ ವರ್ಷ ೨೦೧೧' ಕೃತಿಯನ್ನು ಹೊರತರಲು ನಿರ್ಧರಿಸಿ ಡಾ. ಎಸ್.ಪಿ. ಪದ್ಮಪ್ರಸಾದ್ ಅವರ ಸಂಪಾದಕತ್ವದಲ್ಲಿ ಅದನ್ನು ಸಿದ್ಧಪಡಿಸಿದೆ. ಜಾನಪದಕ್ಕೆ ಸಂಬಂಧಿಸಿದಂತೆ ಒಂದು ವರ್ಷದ ಅವಧಿಯಲ್ಲಿ ಪ್ರಕಟಗೊಂಡಿರುವ ಕೃತಿಗಳನ್ನು ಒಂದು ಕಡೆ ಪರಿಚಯಿಸುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾಸಕ್ತರಿಗೆ ಪ್ರಯೋಜನ ವಾಗುವುದರಲ್ಲಿ ಸಂದೇಹವಿಲ್ಲ.

ಪ್ರೊ ಅಂಬಳಿಕೆ ಹಿರಿಯಣ್ಣ
ಕುಲಪತಿ

₹ ೧೦೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೨೦೫, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ